ಶುಕ್ರವಾರ, ಜೂನ್ 16, 2023 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಯಾರಿ...
ಭುವನೇಶ್ವರದಲ್ಲಿ ರಥಯಾತ್ರೆಯ ಪ್ರಯುಕ್ತ ಜಗನ್ನಾಥನ ವಿಗ್ರಹಕ್ಕೆ ಕುಶಲಕರ್ಮಿಯೊಬ್ಬರು ಅಂತಿಮ ಸ್ಪರ್ಶ ನೀಡಿದರು





Infinity Learn BY SRI CHAITANYA

Sri Chaitanya PU & CBSE (+2) COLLEGE

Sri Chaitanya Educational Committee INDIA

38 Years of Excellence 1986-2023

SRI CHAITANYA TECHNO SCHOOLS & COACHING CENTRES' SOLID FOUNDATION TURNS STUDENTS INTO TOP RANKERS

ALL-INDIA ALL CATEGORY RANKS BELOW 10

Rank	Name	HT.NO.
1	MUDE JYOTHILAL CHAVAN	1205180238 (ST)
2	KANI YASASRI	1205120175 (SC)
3	LAVUDI MADHU BALAJI	4208050123 (ST)
5	TELLA VARUN REDDY	4219010366
7	K. PRITHAM SIDDHARTH	4201290286 (SC)
9	VARUN S	4102030633
10	SHASHANK KUMAR	3903160532 (DLP)

ALL-INDIA OPEN CATEGORY BELOW 1000 RANKS

Rank	Name	HT.No.
37	SOUMYADEEP	3903260232
38	V HARSHIL SAI	1205190286
40	KANI YASASRI	1205070271
41	SINHA VAIBHAV (DLP)	4404010677
45	K PRANATHI REDDY	1205100411
49	B JAGRUTHI	4201250072
57	P ASHISH	1205150312
65	PRACHI GILADA	4201050641
68	D GURUSASIDHAR	4201170133
73	B RAGHUVEER	1205030808
75	V V V SIMHA REDDY	4201290286
89	S KUMAR RAI (DLP)	1528040248
102	ROSHAN ANTO	4101090087
105	T VARUN REDDY	4219010366
112	SINGARI ABHIRAM	1205110434
115	GANTA VYSHNAVI	1205050775
119	M JYOTHILAL CHAVAN	1205180238
121	KAVIYARASU	4109060326
124	LVNMK AKASH	2712310380
128	YASHVI GARG (DLP)	3903530393
129	P PAVAN SIDDARTHA	1205230190
135	M SAYALI SUNIL (DLP)	390526037
150	PRANJAL SINGH (DLP)	3903160585
162	J SUDHEEKSHA	4201500008
165	SESHA SAI AJAY	2712290339
168	VEMURI SUHIT	4201240025
197	ARMAN MITTAL (DLP)	2001670447
215	PYDI VENU GOPAL	1205110313
216	S ANISH	1206020124
218	P NIKHIL KUMAR	1205230025
227	R.C RITHWIK CHOWDARY	4201060784
228	G RUTHVIK CHARAN	4201290326
231	YASH AGARWAL (DLP)	3903220528
236	B NIHARIKA (DLP)	3906040274
237	D KARTHIKEYA REDDY	1205070130
240	S. SRI VYSHANVI	1205270250
241	VELAGA SOUMYA	4115010201
246	K RAJESHWARI	4201300221
251	G CHAKRAVARTHI	1205250196
252	S M N SAKTHIDHAR	1205240241
260	C P VEERAIYAH	4114050315
274	YABAJI JAHNAVI	1205070557
288	DEV SINGHAI (DLP)	3001060096
293	R TARUN KUMAR	1206050552
298	M G R SREE HARSHA	120070124
299	K PRITHAM SIDHARTH	4201290286
318	G JAYA VARDHAN	1205210238
322	P SAPHAL LAKSHMI	4208070167
323	G KEERTHI	1205080498
332	SATYA SHUDDHI	4109010866
349	K V ANIL SRINIVAS	1205190196
357	B G SATHVIK REDDY	1205010679
358	A MEYYEPPAN	4101220069
366	T SMRUTHILAYA	4208070082
386	D HIMAVANTH SAI	1205090325
410	D SAI CHIDVILAS REDDY	1205060243
413	B YASHWANTH	1205190203
418	G AMITHA	4201030582
424	M NAGA SRI ADITYA	1201050182
432	G ABHIVEER	1205140387
435	S THRIVEDHI	1205100131
445	L MADHU BALAJI	4208050123
446	CH SHREYA	1205240008
475	P KAADAMBARI	120510187
491	Y ANISH RAJU	4219050272
510	D ABHIJITH SAI	1205070529
511	N VENKAT TEJA	1205140192
523	K ABHINAV REDDY	4201130014
547	CHINTAM SRIJA	4204040120
568	AKHIL GUDLADONA	4201140001
570	CH V SAI PAVAN KUMAR	1205220329
581	SUCHARITA DAS (DLP)	3905030623
586	N S PRUTHVI	4111020044
592	V SANTOSHINI	1206010324
600	KEERTHI GANESH	4201420309
618	N DEVARA AMULYA	1206010337
649	K SRI ABHINAV	1201070319
650	S SHASHI KIRAN	4208080229
682	S VISHWADHA	4219090056
683	G NISHITHAANJALI	1206020560
692	CHEEKATI SRIJA	4203030252
698	DASARI SHREYAN SAI	4201330036
700	M NIKSHEP	1205090188
701	M CHETANA	4219080093
707	K RAJ KUMAR	1205010214
709	T S V YASWANTH NAIDU	1206010337
723	KRITI	1601030081
728	CH VARSHITHA	1205220325
738	K K HEMANTH KUMAR	1205100174
752	J SREEVATHSA REDDY	1205010631
768	G AKSHAYA	4201290346
770	K SRIDHAR	1205080047
772	SYKAM RITEEKA	1205080006
793	ARNAV SINGH (DLP)	4408020087
807	S ABHINAV (DLP)	3905010759
809	M DIVYA	4201060628
844	DHANUSH H S	2712160374
862	P YESWANTH	1201070227
873	S ABBUBAKAR SIDDIQ	1205010802
879	K VIDYA BODHITA	1205170471
921	M SAI ABHIRAM	1205030567
962	G ANURAG	1206100043
976	ARYAN GARG (DLP)	3802010365
982	B VISHLESH REDDY	1206070060

Congratulations to the Students. You Make us Proud.

BELOW 100 ALL INDIA OPEN CATEGORY RANKS » 16 RANKS

BELOW 1000 ALL INDIA OPEN CATEGORY RANKS » 110 RANKS

BELOW 100 ALL CATEGORY RANKS COUNT » 80 RANKS

BELOW 1000 ALL CATEGORY RANKS COUNT » 439 RANKS

*T & C apply | Note: Any inadvertent error published in this advertisement could be brought to our notice | Note: The information is as per students feedback

SRI CHAITANYA VAIDYAH - 2024

NEET REPEATERS » ADMISSIONS OPEN

GET UPTO 90% SCHOLARSHIP*

Scan QR Code for NEET REPEATERS Offers

Extraordinary Performance from Longterm Students in 2023

Student Name	Marks in 2022	Marks in 2023	Increse in Marks in NEET- 2023
SIDDI LAKSHMI SRINIVAS	251	630	379
G.A. KRISHNA REDDY	262	633	371
C MANOHAR	389	677	288
DIVIKESAVA KUMAR	356	642	286
MANDAVASAGAR	380	651	271
GADDAMHIMA SIDDHARTH	344	607	263
BALIDEEXITH SAI	364	620	256
KAKI LIKHITHA	364	619	255
EGUTURIKARTHIK REDDY	364	614	250
SK. MD. ZAHEERUDDIN	355	602	247
PARINITA PANDIARAJAN	369	611	242
VIJAY VARDHAN NAIDU	379	613	234
ULLIRAMULAMANOJ RAO	392	625	233
CHENNA NITYA SRI	424	646	222
NARISETTY SAI PRANAV	420	638	218
MATCHAKRANTI KIRAN	407	625	218
B K NITHISH B K	451	665	214
GAJU VAISHNAVI	415	621	206
SAMBANGILIKHITHA	402	606	204
VADLA SAIKUMAR	421	621	200
GOWTHAM S	413	611	198

Note: Many more students have increased their marks

*T&C APPLY

Knowledge Hub

NEET | IIT JEE | FOUNDATION

COACHING CENTRES

www.srichaitanyaknowledgehub.com

BASAVESHWARNAGAR : 7207914069 | JAYANAGAR : 9177867198
KALYAN NAGAR : 9177867027 | BELAGAVI : 7207914070

MORE DETAILS & REGISTRATION FOR NEET : 040 660 60606 | WWW.SRICHAITANYA.NET

ಶುಕ್ರವಾರ, ಜೂನ್ 16, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 166 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಗರಡಿಯಲ್ಲಿ 'ಹೊಡಿರೆಲೆ ಹಲಗಿ' ಎಂದ ನಿಶ್ವಿಕಾ!



ಆಳ-ಅಗಲ
ಕೇಂದ್ರದ ಅಕ್ಕಿ ರಾಜ್ಯಗಳಿಗಿಲ್ಲ: ಖಾಸಗಿಯವರಿಗೆ ಮಾತ್ರ

ಸೌರಾಷ್ಟ್ರ, ಕಛ್‌ಗೆ ಬಿಪೊರ್‌ಜಾಯ್ ಪ್ರವೇಶ 11

ಇಂಫಾಲ್: ಹಲವು ಮನೆಗಳಿಗೆ ಬೆಂಕಿ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,917 ▼	18,688 ▼	₹61,230 (ಬೆಂಗಳೂರು) ▲	₹74,600 (ಬೆಂಗಳೂರು) ▲	82.25 ▼

ಬ್ರಿಜ್‌ಭೂಷಣ್ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ನವದೆಹಲಿ: ಲೈಂಗಿಕ ಕಿರುಕುಳ ಮತ್ತು ತಮ್ಮನ್ನು ಹಿಂಬಾಲಿಸುತ್ತಿದ್ದ ಕುರಿತು ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಆರು ಮಹಿಳಾ ಕುಸ್ತಿಪಟುಗಳು ಮಾಡಿದ್ದ ಆರೋಪಗಳಿಗೆ ಸಂಬಂಧಿಸಿ ತನಿಖೆ ನಡೆಸಿದ್ದ ದೆಹಲಿ ಪೊಲೀಸರು ಇಲ್ಲಿನ ನ್ಯಾಯಾಲಯಕ್ಕೆ ಗುರುವಾರ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. 7

'ಪಠ್ಯಪುಸ್ತಕಗಳಿಂದ ನಮ್ಮ ಹೆಸರು ಕೈಬಿಡಿ'

ನವದೆಹಲಿ: 'ಸಮಷ್ಟಿಯಾಗಿ ಸೃಜನಶೀಲತೆಯಿಂದ ರೂಪಿಸಿದ್ದ ಪಠ್ಯಪುಸ್ತಗಳ ಸ್ವರೂಪವೇ ಬದಲಾಗಿದೆ. ಹೀಗಾಗಿ, ನಮ್ಮ ಹೆಸರುಗಳನ್ನು ಪಠ್ಯಪುಸ್ತಕಗಳಿಂದ ಕೈಬಿಡಬೇಕು' ಎಂದು 33 ಮಂದಿ ಶಿಕ್ಷಣ ತಜ್ಞರು ಗುರುವಾರ ಎನ್‌ಸಿಇಆರ್‌ಟಿಗೆ ಪತ್ರ ಬರೆದಿದ್ದಾರೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಜೆಪಿ ತಂದಿದ್ದ ಮತಾಂತರ, ಎಪಿಎಂಸಿ ಕಾಯ್ದೆ ವಾಪಸ್

ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತರಲಾಗಿದ್ದ ವಿವಾದಿತ ಮತಾಂತರ ನಿಷೇಧ ಹಾಗೂ ಎಪಿಎಂಸಿ ತಿದ್ದುಪಡಿ ಕಾಯ್ದೆಗಳು ಹಾಗೂ ಕೇಸರೀಕರಣದ ಆಪಾದನೆಗೆ ಗುರಿಯಾಗಿದ್ದ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಕೈಬಿಡಲು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತೀರ್ಮಾನಿಸಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ

ಅಧಿವೇಶನದಲ್ಲಿ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಾಂತರವನ್ನು ನಿಷೇಧಿಸುವ ಮತ್ತು ಮತಾಂತರ ಮಾಡುವವರನ್ನು ಗರಿಷ್ಠ 10 ವರ್ಷ ಜೈಲು ಶಿಕ್ಷೆಗೆ ಗುರಿಪಡಿಸಲು ಅವಕಾಶವಿದ್ದ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ 2021'(ಮತಾಂತರ ನಿಷೇಧ) ಅನ್ನು ರದ್ದು ಪಡಿಸಲು ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಎಚ್‌. ಕೆ. ಪಾಟೀಲ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಅವರು, ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಈ ಸಂಬಂಧ ಮಸೂದೆ ಮಂಡಿಸಲಾಗುವುದು ಎಂದರು.

2021 ರಲ್ಲೇ ಈ ಸಂಬಂಧ ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿದ್ದರೂ ವಿಧಾನಪರಿಷತ್ತಿನಲ್ಲಿ ಅಂಗೀಕಾರ ಸಿಕ್ಕಿರಲಿಲ್ಲ. ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಬಹುಮತ ಪಡೆದ ಬಳಿಕ ಈ ಮಸೂದೆಗೆ ಅಂಗೀಕಾರ ಪಡೆದುಕೊಂಡಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಈ ಮಸೂದೆಯನ್ನು ವಿರೋಧಿಸಿದ್ದವು.

ಆಮಿಷ, ಪ್ರಲೋಭನೆ, ಉದ್ಯೋಗ, ಉಚಿತ ಶಿಕ್ಷಣ, ನಗದು, ಮದುವೆ ಆಗುವುದಾಗಿ ವಾಗ್ದಾನ, ಉತ್ತಮ ಜೀವನ ಶೈಲಿಯ ಭರವಸೆ, ದೈವಿಕ ಸಂತೋಷ, ಒತ್ತಾಯ, ವಂಚನೆ ಮೂಲಕ ಮತಾಂತರ ಮಾಡುವುದನ್ನು ನಿಷೇಧಿಸುವ ಅಂಶಗಳನ್ನು ಕಾಯ್ದೆ ಒಳಗೊಂಡಿತ್ತು.

7ನೇ ಪುಟ ನೋಡಿ

'ಹೆಡಗೇವಾರ್, ಸಾವರ್ಕರ್ ಪಾಠಕ್ಕೆ ಕೊಕ್'

ಬಿಜೆಪಿ ಸರ್ಕಾರದ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ನಡೆಸಿದ್ದ ಪಠ್ಯಪುಸ್ತಕ ಪರಿಷ್ಕರಣೆಯನ್ನು ಕೈ ಬಿಟ್ಟು, ಅದಕ್ಕೂ ಹಿಂದೆ ಇದ್ದಂತಹ ಪಠ್ಯಗಳನ್ನು ಮುಂದುವರಿಸಲು ತೀರ್ಮಾನಿಸಲಾಗಿದೆ. ಕೇಶವಬಲಿರಾಂ ಹೆಡಗೇವಾರ್, ಸಾವರ್ಕರ್ ಕುರಿತ ಪಾಠಗಳು, ಚಕ್ರವರ್ತಿ ಸೂಲಿಬೆಲೆ ಬರೆದ ಪಾಠಗಳನ್ನು ಕೈಬಿಡಲು ತೀರ್ಮಾನಿಸಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಪಠ್ಯದಲ್ಲಿ ಇದ್ದ ಸಾವಿತ್ರಿಬಾಯಿ ಫುಲೆ, ಡಾ. ಅಂಬೇಡ್ಕರ್ ಕುರಿತ ಕವನ ಹಾಗೂ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರು ಅವರು 'ಮಗಳಿಗೆ ಬರೆದ ಪತ್ರ'ದ ಪಾಠ ಸೇರಿದಂತೆ ಹಲವನ್ನು ಮತ್ತೆ ಸೇರಿಸಲಾಗುವುದು ಎಂದೂ ಹೇಳಿದರು.

ಈ ಮೂರು ವಿಷಯಗಳು ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು. ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವಿವಾದಾತ್ಮಕವಾಗಿರುವ ಕಾಯ್ದೆಗಳನ್ನು ಮತ್ತು ಪಠ್ಯಪುಸ್ತಕ ಪರಿಷ್ಕರಣೆಯನ್ನು ಕೈ ಬಿಡುವುದಾಗಿ ಭರವಸೆ ನೀಡಿತ್ತು ಎಂದರು. 'ಸುಮಾರು 45 ಬದಲಾವಣೆಗಳನ್ನು ಮಾಡಿದ್ದು, ಅದಕ್ಕೆ ಸಂಬಂಧಿಸಿದಂತೆ 15 ಪುಟಗಳ ಪೂರಕ ಪಠ್ಯವನ್ನು (ಸಪ್ಲಿಮೆಂಟರಿ) ರೂಪಿಸಿ ಶಾಲೆಗಳಿಗೆ ಕಳುಹಿಸಲು ತೀರ್ಮಾನಿಸಲಾಗಿದೆ' ಎಂದರು. 'ಯಾವುದನ್ನು ಬೋಧಿಸಬೇಕು, ಯಾವುದನ್ನು ಬೋಧಿಸಬಾರದು ಎಂಬುದನ್ನು ಶಿಕ್ಷಕರಿಗೆ ತಿಳಿಸಲಾಗುವುದು. ಸೇತುಬಂಧ ಕಾರ್ಯಕ್ರಮ ಮುಗಿಯುವುದರೊಳಗೆ ಪೂರಕ ಪಠ್ಯದ ಭಾಗವನ್ನು ಕಳುಹಿಸಲಾಗುವುದು' ಎಂದು ಹೇಳಿದರು.

7ನೇ ಪುಟ ನೋಡಿ

ಗೃಹಲಕ್ಷ್ಮಿ ಅರ್ಜಿ ಸ್ವೀಕಾರ ಮುಂದಕ್ಕೆ

ಮನೆಯ ಯಜಮಾನಿಗೆ ತಿಂಗಳಿಗೆ ತಲಾ ₹2,000 ನೀಡುವ 'ಗೃಹಲಕ್ಷ್ಮಿ' ಯೋಜನೆಯ ಅರ್ಜಿ ಬಿಡುಗಡೆ ಕಾರ್ಯಕ್ರಮವನ್ನು 4–5 ದಿನ ಮುಂದಕ್ಕೆ ಹಾಕಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ತಿಳಿಸಿದರು.

ಕೆಲ ತಾಂತ್ರಿಕ ಸಮಸ್ಯೆ ಇರುವುದರಿಂದ ಮತ್ತು ಇದಕ್ಕೆ ಪೂರಕ ಆ್ಯಪ್ ಅಭಿವೃದ್ಧಿಪಡಿಸುವ ಕಾರ್ಯಪೂರ್ಣಗೊಂಡಿಲ್ಲ. ಆದ್ದರಿಂದ ಅರ್ಜಿ ನೀಡಿಕೆಯನ್ನು ಮುಂದಕ್ಕೆ ಹಾಕಲಾಗಿದೆ. ಬಾಪೂಜಿ ಕೇಂದ್ರ, ನಾಡ ಕಚೇರಿಗಳಲ್ಲಿ ಕೂಡ ಅರ್ಜಿ ಸ್ವೀಕಾರಕ್ಕೆ ಅವಕಾಶವಿದೆ ಎಂದರು.

ಸಂವಿಧಾನ ಪ್ರಸ್ತಾವನೆ ವಾಚನ ಕಡ್ಡಾಯ


'ರಾಜ್ಯದ ಖಾಸಗಿ, ಅನುದಾನಿತವೂ ಸೇರಿ ಎಲ್ಲ ಶಾಲಾ- ಕಾಲೇಜುಗಳಲ್ಲಿ ಬೆಳಿಗ್ಗೆ ಪ್ರಾರ್ಥನೆ ವೇಳೆ ಸಂವಿಧಾನ ಪ್ರಸ್ತಾವನೆ ಓದುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ತಿಳಿಸಿದರು. ಇದೊಂದು ಐತಿಹಾಸಿಕ ತೀರ್ಮಾನ. ಇದರಿಂದ ಯುವ ಜನರಲ್ಲಿ ಪರಸ್ಪರ ಸಾಮರಸ್ಯ ಮೂಡಲು ಸಾಧ್ಯ. ಅಲ್ಲದೇ, ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಲ್ಲಿ ಪ್ರಸ್ತಾವನೆಯ ಚಿತ್ರಗಳನ್ನು ಹಾಕಬೇಕು ಎಂದೂ ಹೇಳಿದರು.

ಸಿಇಟಿ: ಬಾಲಕಿಯರ ಸಾಧನೆ

ಲಭ್ಯ ಸೀಟುಗಳಿಗಿಂತ ಎರಡು ಪಟ್ಟು ಹೆಚ್ಚು ಅರ್ಹತೆ

ಪ್ರಜಾವಾಣಿ ವಾರ್ತೆ


ಪ್ರತೀಕ್ಷಾ ಆರ್


ಮಾಳವಿಕಾ


ವಿಘ್ನೇಶ್


ಭೈರೇಶ್

ಬೆಂಗಳೂರು: 2023-24ನೇ ಸಾಲಿನಲ್ಲಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಎಲ್ಲ ವಿಭಾಗಗಳಲ್ಲೂ ಬೆಂಗಳೂರಿನವರು ಹಾಗೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ.

ಕಳೆದ ಮೇ 20,21ರಂದು 592 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆಸಲಾಗಿತ್ತು. ಪರೀಕ್ಷೆಗೆ 2,44,345 ವಿದ್ಯಾರ್ಥಿಗಳು ಹಾಜರಾಗಿದ್ದರು. ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುಸಂಗೋಪನೆ, ಯೋಗ ಮತ್ತು ನ್ಯಾಚುರೋಪಥಿ, ಬಿ ಫಾರ್ಮಾ, ಫಾರ್ಮಾ ಡಿ ಹಾಗೂ ನರ್ಸಿಂಗ್ ಸೇರಿದಂತೆ ಎಲ್ಲ 7 ಕೋರ್ಸ್‌ಗಳಲ್ಲೂ ಬಾಲಕಿಯರೇ ಅಧಿಕ ಸಂಖ್ಯೆಯಲ್ಲಿ ಅರ್ಹತೆ ಪಡೆದಿದ್ದಾರೆ. ಈ ಬಾರಿ ರಾಜ್ಯದಲ್ಲಿ ಲಭ್ಯವಿರುವ ಎಂಜಿನಿಯರಿಂಗ್ ಸೀಟುಗಳಿಗಿಂತ ಎರಡು ಪಟ್ಟು ಅಧಿಕ ವಿದ್ಯಾರ್ಥಿಗಳು ರ‍್ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಕಳೆದ ಬಾರಿ 1.66 ಲಕ್ಷ ವಿದ್ಯಾರ್ಥಿಗಳು ಅರ್ಹರಾಗಿದ್ದರು. ಈ ಬಾರಿ ಅರ್ಹರ ಸಂಖ್ಯೆ 2 ಲಕ್ಷ ದಾಟಿದೆ.

ಎಂಜಿನಿಯರಿಂಗ್‌ನಲ್ಲಿ ಬೆಂಗಳೂರಿನ ಉತ್ತರಹಳ್ಳಿಯ ಕುಮಾರನ್ ಚಿಲ್ಡ್ರನ್ಸ್ ಹೋಂನ ವಿಘ್ನೇಶ್ ನಟರಾಜ್ ಕುಮಾರ್ (ಶೇ 96.111), ಯೋಗ ಮತ್ತು ನ್ಯಾಚುರೋಪಥಿ, ಬಿ ಫಾರ್ಮಾ ಹಾಗೂ ಫಾರ್ಮಾ ಡಿ ದಲ್ಲಿ ಪದ್ಮನಾಭನಗರದ ಕುಮಾರನ್ ಚಿಲ್ಡ್ರನ್ಸ್ ಹೋಂನ ಪ್ರತೀಕ್ಷಾ ಆರ್ (97.222), ಪಶು ವೈದ್ಯಕೀಯ, ಬಿಎಸ್‌ಸಿ ನರ್ಸಿಂಗ್‌ನಲ್ಲಿ ಬೆಂಗಳೂರು ಚಾಮರಾಜಪೇಟೆಯ ಮಹೇಶ್ ಪಿಯು ಕಾಲೇಜು ವಿದ್ಯಾರ್ಥಿನಿ ಮಾಳವಿಕಾ ಕಪೂರ್ (97.667), ಕೃಷಿ ವಿಜ್ಞಾನದಲ್ಲಿ ಮಂಗಳೂರು ಎಕ್ಸ್‌ಪರ್ಟ್ ಪಿಯು ಕಾಲೇಜಿನ ಎಸ್‌.ಎಚ್‌.ಭೈರೇಶ್ (ಶೇ 93.75) ಪ್ರಥಮ ರ‍್ಯಾಂಕ್ ಪಡೆದಿದ್ದಾರೆ.

ನಗರ ಪ್ರದೇಶದ ವಿದ್ಯಾರ್ಥಿಗಳೇ ಅಧಿಕ: ವೃತ್ತಿಪರ ಕೋರ್ಸ್‌ಗಳತ್ತ ನಗರ ಪ್ರದೇಶದ ವಿದ್ಯಾರ್ಥಿಗಳೇ ಹೆಚ್ಚಿನ ಒಲವು ತೋರಿರುವುದು ಈ ಬಾರಿಯ ಸಿಇಟಿ ಪರೀಕ್ಷೆ ಹಾಗೂ ಫಲಿತಾಂಶದಲ್ಲೂ ಸಾಬೀತಾಗಿದೆ.

ನಗರ ಪ್ರದೇಶದ 2,06,369 ಹಾಗೂ ಗ್ರಾಮೀಣ ಪ್ರದೇಶದ 55,241 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ನಿರೀಕ್ಷೆಯಂತೆಯೇ ಪ್ರತಿ ಕೋರ್ಸ್‌ನಲ್ಲೂ 1.21 ಲಕ್ಷದಿಂದ 1.58 ಲಕ್ಷದವರೆಗೆ ನಗರ ಪ್ರದೇಶದ ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಸಂಖ್ಯೆ ಗರಿಷ್ಠ 47 ಸಾವಿರವಿದೆ.

7ನೇ ಪುಟ ನೋಡಿ

'ಸುಪ್ರೀಂ'ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಕೇಂದ್ರ ಮಾಹಿತಿ

'ಭಿನ್ನ ಕಾನೂನುಗಳಿಂದಾಗಿ ದೇಶದ ಏಕತೆಗೆ ಕಳಂಕ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ(ಪಿಟಿಐ): ಬೇರೆ ಬೇರೆ ಧರ್ಮಗಳು, ಪಂಗಡಗಳಿಗೆ ಸೇರಿದ ಜನರು ಆಸ್ತಿ ಹಾಗೂ ಮದುವೆಗೆ ಸಂಬಂಧಿಸಿ ವಿವಿಧ ರೀತಿಯ ಕಾನೂನುಗಳನ್ನು ಪಾಲನೆ ಮಾಡುವುದು ದೇಶದ ಏಕತೆಗೆ ಅವಮಾನ ಮಾಡಿದಂತೆ ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಿದೆ.

ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ವಿಚಾರವಾಗಿ ಕಳೆದ ವರ್ಷ ಅಕ್ಟೋಬರ್ 13ರಂದು ಕೇಂದ್ರ ಸರ್ಕಾರ ಈ ಪ್ರಮಾಣಪತ್ರ ಸಲ್ಲಿಸಿದೆ. ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವಂತೆ ಕೋರಿ ಅಶ್ವಿನ್ ಕುಮಾರ್ ಉಪಾಧ್ಯಾಯ ಅವರು ಅರ್ಜಿ ಸಲ್ಲಿಸಿದ್ದಾರೆ.

'ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಆಶಯವನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದ ಸಂವಿಧಾನದ 44ನೇ ವಿಧಿಯು ಈ ಆಶಯಕ್ಕೆ ಬಲ ತುಂಬುತ್ತದೆ' ಎಂದು ಕಾನೂನು ಸಚಿವಾಲಯವು ಈ ಪ್ರಮಾಣಪತ್ರದಲ್ಲಿ ವಿವರಿಸಿದೆ.

'ಏಕರೂಪ ನಾಗರಿಕ ಸಂಹಿತೆ' ಎಂಬುದು ಮದುವೆ, ವಿಚ್ಛೇದನ, ನಿರ್ವಹಣೆ, ಮಕ್ಕಳ ರಕ್ಷಣೆ ಮತ್ತು ಪಾಲನೆ, ದತ್ತು ಪಡೆಯುವುದು, ಉತ್ತರಾಧಿಕಾರಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳ ವ್ಯಾಪ್ತಿಯನ್ನು ಸೂಚಿಸುತ್ತದೆ' ಎಂದೂ ಸಚಿವಾಲಯ ಹೇಳಿದೆ.

7ನೇ ಪುಟ ನೋಡಿ







ಜನನಾಯಕ ಶಂಕರಣ್ಣ



• ಅಥಣಿ ಎಸ್. ವೀರಣ್ಣ

'ಧರ್ಮವನ್ನು ಯಾರು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ' ಎಂಬುದು ಭಗವದ್ಗೀತೆಯಲ್ಲಿನ ಸಾಲು. ಇದಕ್ಕೆ ಅನ್ವರ್ಥಕವಾದ ಬದುಕು ಸಾಗಿಸುತ್ತಿರುವವರು ನಮ್ಮ ನಡುವೆ ಇರುವ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು.

ಧರ್ಮದಲ್ಲಿ ಅಪಾರ ನಂಬಿಕೆಯುಳ್ಳ ಅವರು ಸರ್ವಧರ್ಮ ಸಮನ್ವಯಕಾರರು. ಇಂದಿನ ದಿನಗಳಲ್ಲಿ ಅವರಂತಹ ಹೃದಯ ಶ್ರೀಮಂತಿಕೆಯ ಜನರನ್ನು ಕಾಣುವುದು ವಿರಳ. ನಮ್ಮ ನೆಚ್ಚಿನ ಶಂಕರಣ್ಣ ಕೆಲವರಂತೆ ದಿನ ಬೆಳಗಾಗುವುದರಲ್ಲಿ ಶ್ರೀಮಂತರಾದವರಲ್ಲ. ಶ್ರಮದ ಮೆಟ್ಟಿಲುಗಳನ್ನು ಹತ್ತಿ ಮೇಲಕ್ಕೆ ಬಂದವರು. ಹೀಗಾಗಿ ಅವರಿಗೆ ಬಡತನ, ಶ್ರೀಮಂತಿಕೆ ಎಲ್ಲದರ ಅರಿವು ಇದೆ.

ವೀರಶೈವ ಸಮಾಜ ವಿಘಟನೆಯಾಗುತ್ತಿರುವುದನ್ನು ಕಂಡು ಮರುಗಿ ಅದನ್ನು ಒಂದು ಗೂಡಿಸಿದವರು. ಒಂದು ಸದೃಢ ವೀರಶೈವ ಸಮಾಜವನ್ನು ಕಟ್ಟಲು ಹಗಲಿರುಳು ಶ್ರಮಿಸಿದವರು. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ₹ 6 ಕೋಟಿ ಹಣವನ್ನು 'ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್' ಹೆಸರಿನಲ್ಲಿ ಸ್ಥಿರ ನಿಧಿಯಾಗಿ ಸ್ಥಾಪಿಸಿ, ಅದರ ಬಡ್ಡಿ ಹಣದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟವರು ಅವರು.

ಇದು ಅವರಿಗೆ ಸಮಾಜದ ಮೇಲಿನ ಕಾಳಜಿ ತೋರಿಸುತ್ತದೆ. ಆ ಟ್ರಸ್ಟ್‌ಗೆ ನನ್ನನ್ನು ಕಾರ್ಯದರ್ಶಿಯನ್ನಾಗಿ ಮಾಡಿರುವುದು ನನ್ನ ಮೇಲೆ ಅವರಿಗೆ ಇರುವ ದೃಢವಾದ ನಂಬಿಕೆ ಕಾರಣ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬಾಪೂಜಿ ಕೋ ಅಪರೇಟಿವ್ ಬ್ಯಾಂಕ್ ರಾಜ್ಯದಲ್ಲಿಯೇ ನಂಬರ್ ಒನ್ ಬ್ಯಾಂಕ್ ಆಗುವುದರಲ್ಲಿ ಅವರ ಪಾತ್ರ ಅಪಾರ. ಅನೇಕ ಮಠ, ದೇವಸ್ಥಾನ, ಕಲ್ಯಾಣ ಮಂಟಪಗಳಿಗೆ ಅವರು ನೀಡಿರುವ ಧನ ಸಹಾಯ ಲೆಕ್ಕವಿಲ್ಲದಷ್ಟಿದೆ.

ಮುಗಿಲೆತ್ತರಕ್ಕೆ ಬೆಳೆದಿದ್ದರೂ ಅವರು ಸರಳ, ಸಜ್ಜನಿಕೆಯ ಸಾಕಾರಮೂರ್ತಿ. ಹಲವು ಕಲ್ಯಾಣ ಮಂಟಪಗಳನ್ನು ನಿರ್ಮಿಸಿ ಬಡವರ ಮಕ್ಕಳ ವಿವಾಹ ಸಮಾರಂಭಕ್ಕೆ ಅನುಕೂಲ ಕಲ್ಪಿಸಿದ್ದಾರೆ.

ಒಂದು ಕಾಲದಲ್ಲಿ 'ಕರ್ನಾಟಕದ ಮ್ಯಾಂಚೆಸ್ಟರ್' ಎಂದು ಹೆಸರು ಪಡೆದಿದ್ದ ದಾವಣಗೆರೆಯನ್ನು 'ಕರ್ನಾಟಕದ ಆಕ್ಸ್‌ಫರ್ಡ್' ಆಗಿ ಬದಲಾಯಿಸುವುದರಲ್ಲಿಯೂ ಶ್ರೀಯುತರ ಪಾತ್ರ ಅಮೋಘ.

ಅವರು ಸ್ಥಾಪಿಸಿದ ಶಾಲೆ–ಕಾಲೇಜು, ಆಸ್ಪತ್ರೆಗಳಲ್ಲಿ ಸಾವಿರಾರು ಜನರು ಬದುಕು ಕಟ್ಟಿಕೊಂಡಿದ್ದಾರೆ. ಹೀಗೆ ಬದುಕು ಕಟ್ಟಿಕೊಂಡವರು ಶಾಮನೂರು ಶಿವಶಂಕರಪ್ಪ ಅವರನ್ನು ಪ್ರತಿದಿನ ನೆನೆಯುತ್ತಾರೆ. ಗೌರವದಿಂದ 'ಅಪ್ಪಾಜಿ' ಎಂದು ಕರೆಯುತ್ತಾರೆ.

ಈ ಗೌರವ ಸತತ ಸಾಧನೆ, ಪರಿಶ್ರಮ, ದೂರದೃಷ್ಟಿ, ಸಾಮಾಜಿಕ ಕಳಕಳಿಯಿಂದ ಬಂದುದು ಎಂಬುದು ನಿರ್ವಿವಾದ.

ನನ್ನ ಹಾಗೂ ಶಂಕರಣ್ಣ ಅವರ ಸ್ನೇಹದ ಬಗ್ಗೆ ಹೇಳದಿದ್ದರೆ ಮಾತು ಅಪೂರ್ಣವಾಗುತ್ತದೆ. ನಾನು ಇಂದು ಒಂದು ಸಾಮಾಜಿಕ ಸ್ಥಾನ–ಮಾನಗಳಿಗೆ ಏರಿದ್ದೇನೆಂದರೆ ಅದಕ್ಕೆ ಮೂಲ ಕಾರಣ ಅವರು. 1972ರಿಂದ ನನ್ನ ಹಾಗೂ ಅವರ ಬಾಂಧವ್ಯದ ಬೆಸುಗೆ ಆರಂಭವಾಗಿದೆ. 51 ವರ್ಷಗಳಿಂದ ಅವರ ಒಡನಾಡಿಯಾಗಿ ಅವರ ಬದುಕಿನ ಏರಿಳಿತಗಳನ್ನು ಕಂಡಿದ್ದೇನೆ. ನನ್ನ ಹಾಗೂ ಅವರ ಮಧ್ಯೆ ಎಂದಿಗೂ ಭಿನ್ನಾಭಿಪ್ರಾಯ ಬಂದಿಲ್ಲ. ಅದಕ್ಕೆ ಅವರ ಗುಣ ಕಾರಣ.

ಅಧಿಕಾರ ಇರಲಿ, ಇಲ್ಲದಿರಲಿ ಅವರು ಜನಾಕರ್ಷಣೆಯ ಕೇಂದ್ರಬಿಂದು. ಅದು ಅವರ ವ್ಯಕ್ತಿತ್ವದಿಂದ ಬಂದಿದ್ದು. ನಿಜಲಿಂಗಪ್ಪ ಅವರಿಂದ ಹಿಡಿದು ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ, ವೀರಪ್ಪ ಮೊಯ್ಲಿ, ದೇವರಾಜ ಅರಸ್, ಜೆ.ಎಚ್. ಪಟೇಲ್ ಸೇರಿದಂತೆ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ ಎಲ್ಲ ನಾಯಕರು ಅವರನ್ನು ಗೌರವಾದರಗಳಿಂದ ಕಾಣುತ್ತಿದ್ದರು. ಅವರು ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ. ಬೇರೆ ಪಕ್ಷದವರೂ ಅವರನ್ನು ಗೌರವಿಸುತ್ತಾರೆ. ಇದು ಅವರ ವ್ಯಕ್ತಿತ್ವಕ್ಕೆ ಸಾಕ್ಷಿ.

ಇಂಗ್ಲಿಷ್‌ನ ನಾಣ್ಣುಡಿಯಂತೆ 'Birds of The Same Feather Will Flock Together" ಎನ್ನುವಂತೆ ನನ್ನನ್ನು ಎತ್ತರಕ್ಕೆ ಹಾರಿಸಿದವರು ಅವರು.



ಶಿವಶಂಕರಪ್ಪ ಅವರೊಂದಿಗೆ ಸಮಾಲೋಚನೆಯಲ್ಲಿ ಅಥಣಿ ವೀರಣ್ಣ

ಸೋಲು–ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ಭಾವ ಅವರದು. 'ಉರಿ ಬರಲಿ, ಸಿರಿ ಬರಲಿ, ಒಂದೇ ಮನವಿರಲಿ' ಎಂದು ಬೆದರದೇ ಬೆಚ್ಚದೇ ಮುಂದಕ್ಕೆ ಅಡಿ ಇಡುವ ಅವರ ಮನೋಸ್ಥೈರ್ಯವನ್ನೂ ಎಲ್ಲರೂ ಮೆಚ್ಚಿಕೊಂಡಿದ್ದಾರೆ.

ಅವರು ಕುಟುಂಬದ ಎಲ್ಲ ಸದಸ್ಯರೊಂದಿಗೆ ಪ್ರೀತಿ, ವಾತ್ಸಲ್ಯದಿಂದ ಇರುತ್ತಾರೆ. ಈಗ 93ರ ವಸಂತ ಪೂರೈಸಿರುವ ಅವರ ದೇಹಕ್ಕೆ, ಮನಸಿಗೆ ವಯಸ್ಸಾಗಿಲ್ಲ. ಆರೋಗ್ಯಪೂರ್ಣ ಮನಸ್ಸು ಹಾಗೂ ಅವರ ಮಡದಿ ಶ್ರೀಮತಿ ಪಾರ್ವತಮ್ಮ ಅವರ ಕಾಳಜಿಯೇ ಅವರ ಆರೋಗ್ಯದ ಗುಟ್ಟು.

ಕಳೆದ ಐದು ವರ್ಷಗಳಲ್ಲಿ ದಾವಣಗೆರೆಯಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದ್ದವು. ಈಗ ಮತ್ತೆ ಅಭಿವೃದ್ಧಿ ಪರ್ವ ಆರಂಭವಾಗಲಿದೆ ಎಂಬ ನೆಮ್ಮದಿ ಜನರಲ್ಲಿದೆ. ದಾವಣಗೆರೆ ಉತ್ತರದಲ್ಲಿ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್– ದಕ್ಷಿಣದಲ್ಲಿ ಶಿವಶಂಕರಪ್ಪ ಗೆದ್ದಿರುವುದು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವುದರಿಂದ ನಗರದಲ್ಲಿ ಅಭಿವೃದ್ಧಿಯ ಶಕೆ ಆರಂಭವಾಗಲಿದೆ.

ಅಭಿವೃದ್ಧಿಯ ಹರಿಕಾರರಾದ ಶಾಮನೂರು ಶಿವಶಂಕರಪ್ಪ ಅವರು ನೂರ್ಕಾಲ ಬಾಳಲಿ. ಎಲ್ಲರಿಗೂ ಮಾರ್ಗದರ್ಶಕರಾಗಲಿ ಎಂದು ಆಶಿಸುತ್ತೇನೆ.

ಲೇಖಕರು: ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರು, ಬಾಪೂಜಿ ಬಿ–ಸ್ಕೂಲ್ ಅಧ್ಯಕ್ಷರು

ಸಮುದಾಯದ ಮಾರ್ಗದರ್ಶಿ



ಸಮುದಾಯದ ಮಾರ್ಗದರ್ಶಿ, ಜನಪ್ರಿಯ ನೇತಾರರು, ಶಿಕ್ಷಣ ಪ್ರೇಮಿಗಳು ಆದ ಶಾಮನೂರು ಶಿವಶಂಕರಪ್ಪನವರಿಗೆ 93ನೇ ಜನ್ಮದಿನದ ಶುಭಾಶಯಗಳು. ಮಠ–ಮಂದಿರಗಳ ಪಾಲಿಗೆ ಕೊಡುಗೈ ದಾನಿ ಮತ್ತು ನಮ್ಮ ಪೂಜ್ಯ ತಂದೆಯವರ ಆತ್ಮೀಯ ಒಡನಾಡಿಗಳಾದ ಶ್ರೀಯುತರ ನಾಯಕತ್ವ ಮತ್ತು ಮಾರ್ಗದರ್ಶನಗಳು ನಮ್ಮ ಸಮಾಜಕ್ಕೆ ನೂರು ವಸಂತಗಳಿಗೂ ಹೆಚ್ಚು ಕಾಲ ದೊರೆಯಲಿ ಎನ್ನುವುದೇ ನಮ್ಮೆಲ್ಲರ ಹೆಬ್ಬಯಕೆ.

–ಎಂ.ಬಿ. ಪಾಟೀಲ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ

ಬದ್ಧತೆಯ ರಾಜಕಾರಣಿ



ಶಾಮನೂರು ಶಿವಶಂಕರಪ್ಪ ಅವರು ಪರಿಶ್ರಮ, ಬದ್ಧತೆಯಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಾ ಸಾಧನೆ ಮಾಡಿದವರು. ಅವರು ಶತಾಯುಷಿಗಳಾಗಲಿ ಎಂದು ಅವರ ಜನ್ಮದಿನದ ಶುಭ ಸಂದರ್ಭದಲ್ಲಿ ದೇವರಲ್ಲಿ ಪ್ರಾರ್ಥಿಸುತ್ತೇನೆ.

–ಆರ್.ವಿ. ದೇಶಪಾಂಡೆ, ಹಳಿಯಾಳ ಶಾಸಕ

ನಿಷ್ಠೆ, ಬದ್ಧತೆಯ ಮುತ್ಸದ್ದಿ ರಾಜಕಾರಣಿ



ನಾನು ಅತಿಯಾಗಿ ಗೌರವಿಸುವ ಮುತ್ಸದ್ದಿ ರಾಜಕಾರಣಿಗಳಲ್ಲಿ ಶಾಮನೂರು ಶಿವಶಂಕರಪ್ಪ ಅವರೂ ಒಬ್ಬರು. 93 ವಸಂತಗಳನ್ನು ಕಂಡು ಶತಾಯುಷಿ ಎನಿಸಿಕೊಳ್ಳುವ ದಿನಗಳು ಹತ್ತಿರ ಬರುತ್ತಿವೆ. ಪಕ್ಷ ನಿಷ್ಠೆಗೆ ಮತ್ತೊಂದು ಹೆಸರು ಶಾಮನೂರು. ಕಾಂಗ್ರೆಸ್‌ನ ತತ್ವ, ಸಿದ್ಧಾಂತದ ವಿಚಾರದಲ್ಲಿ ಯಾವತ್ತೂ ರಾಜಿ ಮಾಡಿಕೊಳ್ಳದೇ ನಿರಂತರ ನಿಷ್ಠೆ, ಬದ್ಧತೆಯನ್ನು ಪಕ್ಷಕ್ಕೆ ಧಾರೆ ಎರೆಯುತ್ತಲೇ ಇದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ನಡೆಸಿದ ವೀರೋಚಿತ ಸಂಗ್ರಾಮಕ್ಕೂ ಬಾಲ್ಯದಲ್ಲೇ ಸಾಕ್ಷಿಯಾಗಿದ್ದವರು ಅವರು. ಪಕ್ಷ ಮತ್ತು ಸರ್ಕಾರದಲ್ಲಿ ಅತ್ಯುನ್ನತ ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವದ ಗಣಿ ಅವರು. ತೋಟಗಾರಿಕಾ ಸಚಿವರಾಗಿ ಅವರು ಮಾಡಿದ ಕೆಲಸಗಳು ಇಂದಿಗೂ ಸ್ಥಾಯಿಯಾಗಿ ಉಳಿದಿವೆ. ರಾಜ್ಯಕ್ಕೆ ಮಾದರಿಯಾಗುವ ಶಿಕ್ಷಣ ಸಂಸ್ಥೆಗಳನ್ನು, ಉದ್ದಿಮೆಗಳನ್ನು ಸ್ಥಾಪಿಸಿ ಲಕ್ಷಾಂತರ ಜನರಿಗೆ ಉದ್ಯೋಗ ಮತ್ತು ಶಿಕ್ಷಣ ದೊರಕಲು ನೆರವಾಗಿದ್ದಾರೆ. ಅವರ ಸೇವಾಮನೋಭಾವ ಅವರ ಮೇಲೆ ನನ್ನ ಗೌರವ ಹೆಚ್ಚಲು ಕಾರಣವಾಗಿವೆ. ಇವರು ಇನ್ನಷ್ಟು ಕಾಲ ಆರೋಗ್ಯ, ಚೈತನ್ಯಶೀಲರಾಗಿ ಬಾಳಲಿ. ಶತಾಯುಷಿಯಾಗಿ ಮತ್ತಷ್ಟು, ಉನ್ನತ ಅಧಿಕಾರ, ಅವಕಾಶಗಳು ಶಿವಶಂಕರಪ್ಪ ಅವರಿಗೆ ಸಿಗಲಿ ಎನ್ನುವುದು ನನ್ನ ಆಶಯ ಮತ್ತು ಪ್ರಾರ್ಥನೆ.

–ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಮಾಜ ಸೇವೆಗೆ ಬದುಕು ಮುಡುಪಿಟ್ಟ ರಾಜಕಾರಣಿ



ಸಮಾಜ ಸೇವೆಗೆ ತಮ್ಮ ಇಡೀ ಬದುಕನ್ನು ಮುಡುಪಾಗಿಟ್ಟಿರುವ ರಾಜಕಾರಣಿ ಎಂದರೆ ಅದು ಡಾ. ಶಾಮನೂರು ಶಿವಶಂಕರಪ್ಪ ಅವರು. ಅವರು ರಾಜಕಾರಣಿಯಷ್ಟೇ ಅಲ್ಲ. ಶಿಕ್ಷಣ ತಜ್ಞ, ಸರಳ, ಮಿತಭಾಷಿ, ಸ್ನೇಹಜೀವಿ, ಸಜ್ಜನಿಕೆಯ ಅಮೂರ್ತ ರೂಪ.ನೇರ ನಡೆನುಡಿಯ ವ್ಯಕ್ತಿತ್ವದ ಅವರು ಕಾಂಗ್ರೆಸ್ ಪಕ್ಷದ ಶಕ್ತಿ ಎಂದರೆ ತಪ್ಪಲ್ಲ. ತಾವು ನಿರ್ವಹಿಸಿದ ಎಲ್ಲಾ ಸ್ಥಾನಗಳಿಗೂ ಗೌರವ ತಂದ ಧೀಮಂತ ನಾಯಕರು. ಶಾಮನೂರರ ಸಮಾಜ ಸೇವೆ ಅನನ್ಯ. ಜನಪರ ಕಾಳಜಿ ಅವರ ರಾಜಕೀಯ ಬದುಕಿನ ದಿವ್ಯ ಮಂತ್ರ. ಕಷ್ಟದಲ್ಲಿದ್ದವರಿಗೆ ಸ್ಪಂದಿಸುವ ಅವರ ಮಾತೃ ಹೃದಯಕ್ಕೆ ಸಾಕ್ಷಿ ಆಗಿದ್ದು ಕೋವಿಡ್ ದಿನಗಳು. ಕಾಂಗ್ರೆಸ್‌ನ ನಿಷ್ಠಾವಂತ ನಾಯಕ, ಶಿಸ್ತಿನ ಸಿಪಾಯಿಯಾಗಿ ದುಡಿದವರು. ಇಳಿ ವಯಸ್ಸಿನಲ್ಲೂ ಜನಸೇವೆಯಲ್ಲಿ ಅವರದು ಬತ್ತದ ಅದಮ್ಯ ಉತ್ಸಾಹ. ಇದೇ ಹುರುಪು, ಉತ್ಸಾಹ, ಚೈತನ್ಯದ ಜತೆಗೆ ಶಾಮನೂರು ಶಿವಶಂಕರಪ್ಪನವರು ಇನ್ನೂ ನೂರ್ಕಾಲ ಬಾಳಲಿ. ಭಗವಂತ ಅವರಿಗೆ ಇನ್ನಷ್ಟು ಶಕ್ತಿ, ಆಯಸ್ಸು, ಆರೋಗ್ಯ, ಸಂಪತ್ತು ಕರುಣಿಸಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

–ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು

ಶತಾಯುಷಿಗಳಾಗಿ ಬಾಳಲಿ



ಶಾಮನೂರು ಶಿವಶಂಕರಪ್ಪ ಅವರು ಅಜಾತಶತ್ರು. ಎಲ್ಲ ಸಮುದಾಯದವರ, ಪಕ್ಷದವರ ಪ್ರೀತಿಗೆ ಪಾತ್ರರಾಗಿದ್ದಾರೆ. ಅವರು ಶತಾಯುಷಿಗಳಾಗಿ ಬಾಳಲಿ. ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿ ಎಲ್ಲ ಒಳಪಂಗಡಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದ್ದಾರೆ. ಅವರೊಬ್ಬ ಕೊಡುಗೈ ದಾನಿ. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಅವರಿಗೆ ಭಗವಂತ ಆಯುಷ್ಯ, ಆರೋಗ್ಯ ಕೊಟ್ಟು ಇನ್ನೂ ಹೆಚ್ಚಿನ ಸೇವೆ ಮಾಡುವ ಶಕ್ತಿ ಕೊಡಲೆಂದು ಪ್ರಾರ್ಥಿಸುವೆ.

–ಈಶ್ವರ ಖಂಡ್ರೆ, ಅರಣ್ಯ ಹಾಗೂ ಪರಿಸರ ಸಚಿವ

ಮುತ್ಸದ್ದಿ ರಾಜಕಾರಣಿ, ಕೊಡುಗೈ ದಾನಿ



ಶಾಮನೂರು ಶಿವಶಂಕರಪ್ಪ ಮುತ್ಸದ್ದಿ ರಾಜಕಾರಣಿ. ಕೊಡುಗೈ ದಾನಿ. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮಧ್ಯ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ ಶಕ್ತಿ ತುಂಬಿದ್ದಾರೆ. ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟ ನಡೆದಾಗ ಅದನ್ನು ವಿರೋಧಿಸಿ ವೀರಶೈವ ಲಿಂಗಾಯತ ಸಮಾಜವನ್ನು ಒಗ್ಗೂಡಿಸಿ ಒಂದೇ ಧರ್ಮವಾಗಿ ಉಳಿಯಲು ಅವರ ಗಟ್ಟಿಯಾದ ನಿಲುವು ಕಾರಣ.

–ಜಗದೀಶ ಶೆಟ್ಟರ್, ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ಮುಖಂಡ

ಸರಳ ಸಜ್ಜನಿಕೆಯ ಸಾಕಾರಮೂರ್ತಿ ಶಾಮನೂರು ಶಿವಶಂಕರಪ್ಪ

• ಡಾ. ಎಂ.ಜಿ. ಈಶ್ವರಪ್ಪ

ಸುಮಾರು 30 ವರ್ಷಗಳ ಹಿಂದಿನ ಮಾತು. ನಮ್ಮೆಲ್ಲರ ನೆಚ್ಚಿನ ಗೌರವ ಕಾರ್ಯದರ್ಶಿಗಳಾದ ಶಾಮನೂರು ಶಿವಶಂಕರಪ್ಪ ಅವರಿಗೆ 60 ವರ್ಷ ತುಂಬಿತ್ತು. ಹಿರಿಯರಾದ ಡಾ. ಗುರುಪಾದಪ್ಪ, ಪ್ರೊ. ಬಿ.ಜಿ. ನಾಗರಾಜ್ ಮುಂತಾದವರು ಸಭೆ ಸೇರಿ ಶ್ರೀಯುತರ ಷಷ್ಟ್ಯಬ್ಧಿ ಆಚರಿಸುವ ಕುರಿತು ನಿರ್ಧಾರ ಮಾಡಿ ರೂಪುರೇಷೆಗಳನ್ನು ಸಿದ್ಧ ಮಾಡಿದರು.

ಆ ನಿಮಿತ್ತ ಒಂದು ಸ್ಮರಣ ಸಂಚಿಕೆಯನ್ನು ಹೊರತರಬೇಕೆಂದೂ ಅದು ಡಾ. ಶಾಮನೂರು ಶಿವಶಂಕರಪ್ಪನವರ ಬದುಕಿನ ಮಗ್ಗಲುಗಳನ್ನು ಸಮಗ್ರವಾಗಿ ಒಳಗೊಳ್ಳಬೇಕೆಂದು ಚಿಂತಿಸಲಾಯಿತು. ಅದಕ್ಕೆ ನನಗೆ, ಶಿಶುತಜ್ಞ ಡಾ.ಕುಲಕರ್ಣಿ ಮತ್ತು ರಾಜ್ಯಶಾಸ್ತ್ರ ಅಧ್ಯಾಪಕ ಪ್ರೊ.ಎಂ. ಬಸವರಾಜ್ ಅವರಿಗೆ ಜವಾಬ್ದಾರಿ ವಹಿಸಲಾಯಿತು.

ಶ್ರೀಯುತರು ಹುಟ್ಟಿದ್ದು, ಬೆಳೆದದ್ದು, ಅಭ್ಯಾಸ ಮಾಡಿದ್ದು ಎಲ್ಲ ವಿಚಾರಗಳನ್ನು ಹಳೆಯ ಫೋಟೋಗಳ ಸಮೇತ ಸಂಗ್ರಹ ಮಾಡಿ ಒಂದು ಆಕಾರಕ್ಕೆ ತಂದು, ಸಂಚಿಕೆಗೆ 'ವಿದ್ಯಾಶ್ರೀ' ಎಂಬ ಶೀರ್ಷಿಕೆಯನ್ನು ಕೊಟ್ಟೆವು. ಮುಖಪುಟಕ್ಕೆ ಶ್ರೀಯುತರ ಉತ್ತಮವಾದ ಒಂದು ಫೋಟೋ ಅಗತ್ಯವಿತ್ತು. ಸ್ಥಳೀಯವಾಗಿ ದೊರಕಿದ ಯಾವ ಫೋಟೋಗಳು ತೃಪ್ತಿ ಕೊಡಲಿಲ್ಲ. ಆಗ ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಪ್ರಸಿದ್ಧವಾಗಿದ್ದ 'ಜಿ.ಕೆ. ವಾಲೆ ಅಂಡ್ ಸನ್ಸ್'ನಲ್ಲಿ ಫೋಟೋ ತೆಗೆಸುವುದೆಂದು ತೀರ್ಮಾನಿಸಿ, ಶ್ರೀಯುತರ ಹತ್ತಿರ ನಿವೇದಿಸಿಕೊಂಡೆವು. ಆಗ ಅವರು 'ನಾಳೆ ಬೆಂಗಳೂರಿಗೆ ಹೋಗುತ್ತಿದ್ದೇನೆ, ನೀವೂ ಬನ್ನಿ ಅಲ್ಲಿಯೇ ಫೋಟೋ ತೆಗೆಸುವಂತಿರಿ' ಎಂದು ಸಮ್ಮತಿ ನೀಡಿದರು. ನಾನು ಮಿತ್ರ ಬಸವರಾಜ್ ಅವರು ಮಾರನೇ ದಿವಸ ಸಂಜೆ 5.30ರ ಹೊತ್ತಿಗೆ ಚೌಕಿಪೇಟೆಯ ಅವರ ಅಂಗಡಿ ಹತ್ತಿರ ಹೋದೆವು. 6ಕ್ಕೆ ಹೊರಟೆವು. ಶ್ರೀಯುತರು ಲೋಕಾಭಿರಾಮವಾಗಿ ಮಾತನಾಡುತ್ತಾ ಸಣ್ಣದೊಂದು ನಿದ್ರೆಯ ಜೊತೆಗೆ 9ಕ್ಕೆ ಬೆಂಗಳೂರು ತಲುಪಿದೆವು. ನಾವಿಬ್ಬರು ಮೌರ್ಯ ಹೋಟೆಲ್‌ನಲ್ಲಿ, ಶ್ರೀಯುತರು ವೆಸ್ಟ್ ಎಂಡ್ ಹೋಟೆಲ್‌ನಲ್ಲಿ. ನಾವು ಕೊಠಡಿ ಸೇರಿ 10 ನಿಮಿಷ ಆಗಿರಲಿಲ್ಲ, ಅವರಿಂದ ದೂರವಾಣಿಯ ಕರೆ 'ಅಲ್ಲಿ ಊಟ ಇದೆಯಾ? ಯಾವುದೇ ತೊಂದರೆ ಇಲ್ಲವಾ? ಊಟದ ತೊಂದರೆ ಇದ್ದರೆ ವೆಸ್ಟ್ ಎಂಡ್‌ಗೇ ಬನ್ನಿ' ಎಂಬ ಅವರ ಕಳಕಳಿಯ ಮಾತು ನಮ್ಮನ್ನು ಮೂಕವಿಸ್ಮಿತರನ್ನಾಗಿಸಿತು. ಅವರ ಸಜ್ಜನಿಕೆ ಕಳಕಳಿ ನಮ್ಮಲ್ಲಿ ಬೆರಗು ಮೂಡಿಸಿತು!

ಬೆಳಿಗ್ಗೆ ಜಿ.ಕೆ. ವಾಲೆ ಅಂಡ್ ಸನ್ಸ್ ಅಂಗಡಿಗೆ ಹೋಗಿ, ಹೀಗೆ ಶಿವಶಂಕರಪ್ಪ ಅವರ ಒಂದು ಫೋಟೋ ತೆಗೆಯಬೇಕಾಗಿದೆ ಯಾವಾಗ ಎಷ್ಟು ಹೊತ್ತಿಗೆ ಕರೆದುಕೊಂಡು ಬರೋಣ ಎಂದು ಕೇಳಿದೆವು. ಯಾಕೆಂದರೆ ಅದೊಂದು ಪ್ರಸಿದ್ಧ ಸ್ಟುಡಿಯೋ, ಸಮಯ ನಿಗದಿ ಮಾಡಿಕೊಳ್ಳದೆ ಅಲ್ಲಿ ಕೆಲಸ ಆಗುತ್ತಿರಲಿಲ್ಲ.



ಸ್ಟುಡಿಯೋದ ಮಾಲೀಕ ಶಾಮನೂರು ಶಿವಶಂಕರಪ್ಪ ಅವರ ಹೆಸರು ಕೇಳುತ್ತಿದ್ದಂತೆಯೇ ಎದ್ದುನಿಂತು ತುಂಬಾ ವಿನೀತ ಭಾವದಿಂದ 'ಏನು ಶಾಮನೂರು ಶಿವಶಂಕರಪ್ಪನವರಿಗೆ ಸಮಯ ನೀಡುವುದೇ? ಅವರು ನಮ್ಮ ಸ್ಟುಡಿಯೋಗೆ ಬರುವುದೇ ಒಂದು ಭಾಗ್ಯ! ಅವರು ಯಾವಾಗಲಾದರೂ ಬರಲಿ ನಮ್ಮ ಕ್ಯಾಮರಾ ಕ್ಲಿಕ್ ಮಾಡಲು ಸಿದ್ಧವಾಗಿರುತ್ತದೆ' ಎಂದು ಸಂಭ್ರಮಪಟ್ಟರು.



ಮಧ್ಯಾಹ್ನ ಸರ್ ಅವರನ್ನು ಕರೆದುಕೊಂಡು ಹೋದೆವು. ವಿವಿಧ ಭಂಗಿಯ ಫೋಟೋ ತೆಗೆಯಲಾಯಿತು. ಅಲ್ಲಿ ತೆಗೆದ ಫೋಟೋ ಸ್ಮರಣ ಸಂಚಿಕೆ ಅಲಂಕರಿಸಿದೆ. ಶ್ರೀಯುತರು ನಮ್ಮಿಬ್ಬರನ್ನು ನಿಲ್ಲಿಸಿಕೊಂಡು ಒಂದು ಫೋಟೋ ತೆಗೆಸಿದರು. ಆಗ ನಾವಿಬ್ಬರೂ ವಿನೀತರಾಗಿ ಹೋದೆವು. ಆ ಫೋಟೋ ನಮ್ಮಲ್ಲಿ ಈಗಲೂ ಜತನವಾಗಿದೆ. ಇಂತಹ ಸಂದರ್ಭಗಳಲ್ಲಿ ಮಹಾನ್ ವ್ಯಕ್ತಿ ಮತ್ತು ಶಕ್ತಿಯಾದ ಶ್ರೀ ಶಾಮನೂರು ಶಿವಶಂಕರಪ್ಪ ಅವರು ತೋರುವ ಸರಳತೆ, ಸಜ್ಜನಿಕೆ ಮತ್ತು ಮಾನವೀಯ ಕಳಕಳಿ ಎಂತಹವರನ್ನೂ ಮೂಕವಿಸ್ಮಿತರನ್ನಾಗಿ ಮಾಡುತ್ತದೆ.

ಹಾಗೆ ನೋಡಿದರೆ ಶ್ರೀಯುತ ಶಾಮನೂರು ಶಿವಶಂಕರಪ್ಪನವರ ದಿನಚರಿಯೂ ವಿಶಿಷ್ಟವೇ. ಊಟ, ತಿಂಡಿ, ಟೀ, ಕಾಫಿಯೂ ವಿಶಿಷ್ಟವೇ. ಬೆಳಿಗ್ಗೆ ಏಳುತ್ತಿದ್ದಂತೆಯೇ ಕಾಫಿ, ನಿಧಾನವಾಗಿ ತಿಂಡಿ ನಂತರ ನಿಧಾನವಾಗಿ ಊಟ, ಊಟ ಎಂದರೆ ಸಂತೃಪ್ತಿಯ ಊಟ. ಮತ್ತು ದಿನಕ್ಕೆ ಒಂದೇ ಊಟ. ಕನ್ನಡದಲ್ಲಿ ಒಂದು ಮುತ್ತಿನಂತಹ ಮಾತಿದೆ 'ಒಂದು ಹೊತ್ತು ಉಂಡವನು ಯೋಗಿ, ಎರಡು ಹೊತ್ತು ಉಂಡವನು ಭೋಗಿ'. ಒಮ್ಮೆ ಪ್ರಸಿದ್ಧರಾದ ಡಾ. ದೇವಿಶೆಟ್ಟಿ ಅವರು ಬಾಪೂಜಿ ವಿದ್ಯಾಸಂಸ್ಥೆಯ ಕಾರ್ಯಕ್ರಮಕ್ಕೆ ಬಂದಿದ್ದರು. ಆಗ ಶ್ರೀಶಾಮನೂರು ಶಿವಶಂಕರಪ್ಪನವರು ವಿಮಾನವನ್ನು ಬಳಸುತ್ತಿದ್ದು, ಅದರ ನಿಲ್ದಾಣ ಹರಿಹರದ ಪಾಲಿಫೈಬರ್ಸ್‌ನಿಂದ ಅವರನ್ನು ಕರೆತರಲು ನಾನು, ಡಾ. ಬಿಲಸ್ ರೆಡ್ಡಿ ಹೋಗಿದ್ದೆವು. ಹರಿಹರದಿಂದ ದಾವಣಗೆರೆಯ ಶಾಮನೂರು ಅವರ ಮನೆಗೆ ಸುಮಾರು 4ಕ್ಕೆ ತಲುಪಿದೆವು. ಆಗ ಸ್ನಾನ ಮುಗಿಸಿ ಊಟಕ್ಕೆ ತಯಾರಾಗುತ್ತಿದ್ದರು. ಡಾ. ದೇವಿಶೆಟ್ಟಿಯವರನ್ನು ಸ್ವಾಗತಿಸಿದ ಶಿವಶಂಕರಪ್ಪ ಅವರು, ಸ್ವಲ್ಪಹೊತ್ತು ಮಾತುಕತೆ ಆಡಿ ಊಟ ಮಾಡೋಣ ಎಂದರು.

ಅಷ್ಟು ಹೊತ್ತಿಗೆ 4.30 ಆಗಿತ್ತು. ನನ್ನಿಂದಾಗಿ ನಿಮ್ಮ ಊಟ ತಡವಾಯಿತು ಎಂದು ಡಾಕ್ಟರ್ ದೇವಿಶೆಟ್ಟಿ ಕ್ಷಮೆಯಾಚಿಸಲು ತಯಾರಾಗುತ್ತಿದ್ದಂತೆ ಶ್ರೀಯುತರ ದಿನಚರಿ ಗೊತ್ತಾಗಿ ತಬ್ಬಿಬ್ಬಾದರು! ಒಂದೇ ಹೊತ್ತು ಊಟ ಮಾಡುವುದನ್ನು ಗಮನಿಸಿ 'ನಮ್ಮ ವೈದ್ಯ ಪದ್ಧತಿಗೆ ನೀವು ಮಾದರಿ' ಎಂದು ಪ್ರಶಂಸಿಸಿದರು! ತುಂಬು ವಯಸ್ಸಿನವರೂ, ಸಮಾಧಾನಿಗಳೂ, ಸಂಸದರೂ, ಸಚಿವರೂ, ದೀರ್ಘಕಾಲದ ಶಾಸಕರೂ, ಸದಾಕಾಲ ಕ್ರಿಯಾಶೀಲರೂ ಆದ ಡಾ. ಶಾಮನೂರು ಶಿವಶಂಕರಪ್ಪನವರ ಸರಳತೆ, ಸಜ್ಜನಿಕೆ, ಮಾನವೀಯತೆ, ಆರಾಧನೀಯವಾಗಿದೆ. ಇಂದು 93ನೇ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ ಡಾ. ಶಾಮನೂರರು ನಮಗೆ ಶತಮಾನೋತ್ಸವ ಆಚರಿಸುವ ಅವಕಾಶ ನೀಡಲೆಂದು ಹಾರೈಸೋಣ.

ಲೇಖಕರು: ಜಾನಪದ ತಜ್ಞ, ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ









ಶುಕ್ರವಾರ, ಜೂನ್ 16, 2023 | ₹ 7.00 | • www.prajavani.net · prajavani.net · prajavani · prajavani · prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ವಾಗತ ಮುಂಬೈನ ಶಾಲೆಯೊಂದಕ್ಕೆ ಗುರುವಾರ ಮೊದಲ ದಿನ ಬಂದ ವಿದ್ಯಾರ್ಥಿನಿಯನ್ನು ಶಿಕ್ಷಕಿ ಬರಮಾಡಿಕೊಂಡಿದ್ದು ಹೀಗೆ

ವಂಚನೆ: ಮೆಹುಲ್ ಚೋಕ್ಸಿ ಖಾತೆ ಮುಟ್ಟುಗೋಲು 10
ಮಾರುಕಟ್ಟೆಯಲ್ಲಿ ಲಭ್ಯತೆ ಸುಧಾರಿಸಲು, ಬೆಲೆ ನಿಯಂತ್ರಿಸಲು ಕ್ರಮ 10
ಶಸ್ತ್ರಸಜ್ಜಿತ 30 ಡ್ರೋನ್ ಖರೀದಿಗೆ ಅನುಮೋದನೆ 11
ಸೂರ್ಯಕಾಂತಿ ಎಣ್ಣೆ: ಸುಂಕ ಇಳಿಕೆ

ಆರ್‌.ಆರ್‌. ನಗರ: ಕಾಮಗಾರಿ ನಡೆಸದೆ ಬಿಲ್ • ₹118 ಕೋಟಿ ನಷ್ಟ • ಲೋಕಾಯುಕ್ತ ಶಿಫಾರಸು

ಎಂಟು ಎಂಜಿನಿಯರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಮಗಾರಿ ನಡೆಸದೆ ನಕಲಿ ಬಿಲ್ ಮಾಡಿ ₹118 ಕೋಟಿಗೂ ಹೆಚ್ಚು ಮೊತ್ತವನ್ನು ನಷ್ಟ ಮಾಡಿರುವ ಎಂಟು ಎಂಜಿನಿಯರ್‌ಗಳನ್ನು ಲೋಕಾಯುಕ್ತರ ಶಿಫಾರಸಿನ ಮೇರೆಗೆ ಸರ್ಕಾರ ಅಮಾನತು ಮಾಡಿದೆ.

ಆರ್‌.ಆರ್. ನಗರದಲ್ಲಿ ಬಿಬಿಎಂಪಿಯಿಂದ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ (ಕೆಆರ್‌ಐಡಿಎಲ್) ವಹಿಸಲಾದ ಕೆಲಸಗಳನ್ನು ಮಾಡದೆ ಬಿಲ್ ಮೊತ್ತ ಬಿಡುಗಡೆಯಾಗಿರುವುದು ಲೋಕಾಯುಕ್ತರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಪ್ರಕರಣವು ಗಂಭೀರ ಹಾಗೂ ಗುರುತರವಾಗಿದ್ದು, ಪ್ರಭಾವಿಗಳು ಹಾಗೂ ರಾಜಕಾರಣಿಗಳ ಕೈವಾಡವೂ ಇರುವ ಶಂಕೆ ಇದೆ. ಹೀಗಾಗಿ ಉನ್ನತ ತನಿಖೆಗೆ ಸಂದರ್ಭದಲ್ಲಿ ಅಧಿಕಾರಿಗಳು ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಇರುವುದರಿಂದ ಅವರನ್ನು ಅಮಾನತು ಮಾಡಬೇಕು ಎಂದು ಲೋಕಾಯುಕ್ತರು ಶಿಫಾರಸು ಮಾಡಿದ್ದರು.

ಕೆಆರ್‌ಐಡಿಎಲ್‌ಗೆ ವಹಿಸಿರುವ ಎಲ್ಲ ಕಾಮಗಾರಿಗಳ ಬಗ್ಗೆ ಉನ್ನತ ತನಿಖೆಗೆ ವಹಿಸದ ಸಂದರ್ಭದಲ್ಲಿ ದಾಖಲೆಗಳನ್ನು ತಿದ್ದುವುದು, ಸಾಕ್ಷ್ಯಾಧಾರಗಳ ಮೇಲೆ ಪ್ರಭಾವ ಬೀರುವ ಎಲ್ಲ ಸಾಧ್ಯತೆಗಳು ಮನದಟ್ಟಾಗಿವೆ. ಜೊತೆಗೆ 114 ಕಾಮಗಾರಿಗಳ ಪರಿಶೀಲನೆಯಿಂದ ಇಷ್ಟು ಬೃಹತ್ ಮೊತ್ತದ ದುರುಪಯೋಗ ಕಂಡು ಬಂದಿದ್ದು, ಇನ್ನೂ ಹೆಚ್ಚಿನ ಕಾಮಗಾರಿಗಳ ಪರಿಶೀಲನೆಯಿಂದ ಬೃಹತ್ ಮೊತ್ತದ ಅಕ್ರಮ, ಹಣ ದುರುಪಯೋಗ ಪತ್ತೆಯಾಗುವ ಸಾಧ್ಯತೆ ಇರುತ್ತದೆ. ಪ್ರಕರಣದಲ್ಲಿ ಆರೋಪಿತ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಜೆ.ಎಂ. ಚಂದ್ರನಾಥ್ ಈಗಾಗಲೇ ನಿವೃತ್ತಿ ಹೊಂದಿದ್ದು, ಅವರನ್ನು ಹೊರತುಪಡಿಸಿ ಎಂಟು ಜನರನ್ನು ಅಮಾನತುಗೊಳಿಸಿ ನಗರಾಭಿವೃದ್ಧಿ ಇಲಾಖೆ ಜೂನ್ 6ರಂದು ಆದೇಶ ಹೊರಡಿಸಿದೆ.

ಸಂಸದ ಡಿ.ಕೆ. ಸುರೇಶ್ ಅವರು ದೂರಿನಲ್ಲಿ ತಿಳಿಸಿರುವಂತೆ, 126 ಕಾಮಗಾರಿಗಳ ಪಟ್ಟಿಯಲ್ಲಿ 11 ಕಾಮಗಾರಿಗಳು ಪುನರಾವರ್ತಿತಗೊಂಡಿವೆ. ಒಂದು ಕಾಮಗಾರಿಯನ್ನು ಕೆಆರ್‌ಐಡಿಎಲ್‌ಗೆ ವಹಿಸಿಲ್ಲ. ಇನ್ನೊಂದು ಕಾಮಗಾರಿಗೆ ಸರಿಯಾದ ಜಾಬ್‌ಕೋಡ್ ನಮೂದಿಸಿಲ್ಲ. ಉಳಿದ 113 ಕಾಮಗಾರಿಗಳಿಗೆ ಬಿಬಿಎಂಪಿ ಮತ್ತು ಕೆಆರ್‌ಐಡಿಎಲ್ ನಡುವೆ ಕರಾರು ಪತ್ರವಾಗಿದೆ. 114 ಕಾಮಗಾರಿಗಳಲ್ಲಿ ಅಂದಾಜುಪಟ್ಟಿಯಲ್ಲಿ ತಿಳಿಸಿರುವಂತೆ ನಿರ್ವಹಿಸಿಲ್ಲ. ಅಳತೆ ಪುಸ್ತಕಗಳಲ್ಲಿ ಹೆಚ್ಚು ಅಳತೆ ನಮೂದಿಸಲಾಗಿದೆ. ಕಳಪೆ ಮಟ್ಟದ ಡಾಂಬರು ಕೆಲಸಗಳನ್ನು ನಿರ್ವಹಿಸಿದ್ದು, ಇದರಿಂದ ಸರ್ಕಾರಕ್ಕೆ ₹118,25,79,797 ಹೆಚ್ಚುವರಿ ಹಣ ಪಾವತಿಸಲಾಗಿದೆ ಎಂದು ತನಿಖಾಧಿಕಾರಿಗಳು ವರದಿ ನೀಡಿದ್ದರು. ಬಿಲ್‌ಗಳನ್ನು ಪಾವತಿಸಲು ಮತ್ತು ಕಾಮಗಾರಿಗಳನ್ನು ನಿರ್ವಹಿಸದಿದ್ದರೂ ಹಣವನ್ನು ಪಾವತಿಸಲು ಅಧಿಕಾರಿಗಳು ಅನುವು ಮಾಡಿಕೊಟ್ಟಿದ್ದಾರೆ. ಕಳಪೆ ಮಟ್ಟದ ಕಾಮಗಾರಿ ನಿರ್ವಹಿಸಿರುವುದು ಗಂಭೀರ ವಿಷಯ ಎಂದು ಲೋಕಾಯುಕ್ತ ವರದಿಯಲ್ಲಿ ತಿಳಿಸಲಾಗಿದೆ.

‘ಕೆಆರ್‌ಐಡಿಎಲ್‌ಗೆ ಕೆಲಸ ಕೊಡಬೇಡಿ’

ಬಿಬಿಎಂಪಿ ವತಿಯಿಂದ ಕೆಆರ್‌ಐಡಿಎಲ್‌ಗೆ ವಹಿಸಿರುವ ಕಾಮಗಾರಿಗಳನ್ನು ನಿರ್ವಹಿಸುವುದರಲ್ಲಿ ಮತ್ತು ಮೇಲುಸ್ತುವಾರಿಯಲ್ಲಿ ಬಿಬಿಎಂಪಿ ಅಧಿಕಾರಿಗಳಿಂದ ಗಂಭೀರ ಲೋಪಗಳಾಗಿವೆ. ಹಣಕಾಸಿನ ಸೋರಿಕೆಯನ್ನು ತಡೆಗಟ್ಟಲು ಮತ್ತು ಸಾರ್ವಜನಿಕ ಹಣ ದುರುಪಯೋಗವಾಗದಿರಲು ಲೋಕಾಯುಕ್ತರು ನಾಲ್ಕು ಶಿಫಾರಸು ಮಾಡಿದ್ದಾರೆ.

ಬಿಬಿಎಂಪಿಯಿಂದ ಅನುಷ್ಠಾನಗೊಳಿಸಬೇಕಾದ ಯಾವುದೇ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ ಅಥವಾ ಇತರೆ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಬಾರದು.

ಸಿವಿಲ್ ಸ್ಕ್ವೇರ್ ಕನ್ಸಲ್ಟೆಂಟ್ಸ್ (ಸಿವಿಲ್ ಎಂಜಿನಿಯರಿಂಗ್ ಕನ್ಸಲ್ಟೆಂಟ್ಸ್, 3ನೇ ಪಾರ್ಟಿ ಪರಿಶೀಲನೆ, ಪಿಎಂಸಿ, ಮೆಟೀರಿಯಲ್ ಟೆಸ್ಟಿಂಗ್ ಲ್ಯಾಬೊರೇಟರಿ) ಅವರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಇನ್ನು ಮುಂದೆ ಬಿಬಿಎಂಪಿ ಮತ್ತು ಕೆಆರ್‌ಐಡಿಎಲ್ ಸಂಸ್ಥೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಸಂಸ್ಥೆಯನ್ನು ಅನುಮೋದಿತ ಪಟ್ಟಿಯಿಂದ ತೆಗೆದುಹಾಕಬೇಕು. ರಾಜ್ಯ ಸರ್ಕಾರ ಯಾವುದೇ ಸಿವಿಲ್ ಕಾಮಗಾರಿಗಳನ್ನು ಇವರಿಗೆ ವಹಿಸಬಾರದು.

ಬಿಬಿಎಂಪಿ ವತಿಯಿಂದ ಎರಡು ವರ್ಷಗಳಲ್ಲಿ ಕೆಆರ್‌ಐಡಿಎಲ್‌ಗೆ ವಹಿಸಿರುವ ಕಾಮಗಾರಿಗಳ ಪೈಕಿ ಅನುಷ್ಠಾನವಾಗಿರುವ ಮತ್ತು ಅನುಷ್ಠಾನವಾಗುತ್ತಿರುವ ಕಾಮಗಾರಿಗಳಲ್ಲಿ ಶೇ 10ರಷ್ಟನ್ನು ಮಾದರಿ ಸಮೀಕ್ಷೆ ಮಾಡಬೇಕು. ಇದಕ್ಕಾಗಿ ಉನ್ನತ ಮಟ್ಟದ ಅಧಿಕಾರಿಯ ಅಧ್ಯಕ್ಷತೆಯಲ್ಲಿ ತಜ್ಞರೊಂದಿಗೆ ವಿಶೇಷ ಸಮಿತಿ ರಚಿಸಬೇಕು. ಇಲ್ಲದಿದ್ದರೆ, ಎಲ್ಲ ಕಾಮಗಾರಿಗಳ ಬಗ್ಗೆ ತನಿಖೆ ಮಾಡಲು ಸರ್ಕಾರ ಲೋಕಾಯುಕ್ತಕ್ಕೆ ವಹಿಬೇಕು.



ನಕಲಿ ಬಿಲ್: ₹ 118.26 ಕೋಟಿ ಅಕ್ರಮ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜರಾಜೇಶ್ವರಿನಗರ (ಆರ್‌.ಆರ್. ನಗರ) ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಯ ನವ ನಗರೋತ್ಥಾನ ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ನಿರ್ವಹಿಸದೆ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ನಕಲಿ ಬಿಲ್ ಪಾವತಿಸಿ ರಾಜ್ಯದ ಬೊಕ್ಕಸಕ್ಕೆ ₹ 118.26 ಕೋಟಿ ನಷ್ಟ ಉಂಟು ಮಾಡಿರುವುದು

ಆಪಾದಿತರು ಯಾರೆಲ್ಲ?

• ದೊಡ್ಡಯ್ಯ, ಮುಖ್ಯ ಎಂಜಿನಿಯರ್, ತಾಂತ್ರಿಕ ಮತ್ತು ಜಾಗೃತ ಕೋಶ (ಟಿವಿಸಿಸಿ), ಬಿಬಿಎಂಪಿ ಮುಖ್ಯ ಕಚೇರಿ
• ಸತೀಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ, ಬಿಬಿಎಂಪಿ
• ಬಸವರಾಜ್, ಕಾರ್ಯಪಾಲಕ ಎಂಜಿನಿಯರ್ (ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಭಾರ), ಆರ್‌ಆರ್ ನಗರ ಉಪ ವಿಭಾಗ
• ಸಿದ್ದರಾಮಯ್ಯ, ಸಹಾಯಕ ಎಂಜಿನಿಯರ್, ವಾರ್ಡ್ ನಂ 129 ಮತ್ತು 160, ಆರ್‌ಆರ್ ನಗರ ಉಪ ವಿಭಾಗ
• ಉಮೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಸಹಾಯಕ ಎಂಜಿನಿಯರ್ ಪ್ರಭಾರ, ವಾರ್ಡ್ ನಂಬರ್ 73, ಲಗ್ಗೆರೆ ಉಪ ವಿಭಾಗ)
• ಚಂದ್ರನಾಥ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕೆಆರ್‌ಐಡಿಎಲ್
• ಶ್ರೀನಿವಾಸ್, ಕಾರ್ಯಪಾಲಕ ಎಂಜಿನಿಯರ್, ಕೆಆರ್‌ಐಡಿಎಲ್

ಡಿ.ಕೆ. ಸುರೇಶ್ ಅವರು, ದಾಖಲೆಗಳ ಸಹಿತ 2020ರ ಸೆಪ್ಟೆಂಬರ್‌ನಲ್ಲಿ ಲೋಕಾಯುಕ್ತರಿಗೆ ದೂರು ನೀಡಿದ್ದರು. 'ಈ ಪ್ರಕರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ತಪ್ಪಿತಸ್ಥ ಎಂಜಿನಿಯರ್‌ಗಳನ್ನು ಬಂಧಿಸಿ ವಿಚಾರಣೆ ನಡೆಸಬೇಕು' ಎಂದು ವಿನಂತಿಸಿದ್ದರು.

ಈ ಬಗ್ಗೆ ತನಿಖೆ ನಡೆಸಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಪಿ.ವಿಶ್ವನಾಥ ಶೆಟ್ಟಿ (ಜ.27ರಂದು ನಿವೃತ್ತರಾಗಿದ್ದಾರೆ), 60 ಪುಟಗಳ

‘ಪ್ರಜಾವಾಣಿ’ಯಲ್ಲಿ 2022ರ ಫೆ.9ರಂದು ಪ್ರಕಟವಾಗಿದ್ದ ವರದಿ

ಅಮಾನತುಗೊಂಡವರು

- ದೊಡ್ಡಯ್ಯ, ಮುಖ್ಯ ಎಂಜಿನಿಯರ್, ಟಿವಿಸಿಸಿ ಕೋಶ. (ಪ್ರಸ್ತುತ– ಮುಖ್ಯ ಎಂಜಿನಿಯರ್, ಪಶ್ಚಿಮ ವಲಯ)
- ಸತೀಶ್‌ಕುಮಾರ್ ಕೆ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ ಕೋಶ.
- ಬಸವರಾಜ್ ಎನ್, ಪ್ರಭಾರ ಕಾರ್ಯಪಾಲಕ ಎಂಜಿನಿಯರ್ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್, ರಾಜರಾಜೇಶ್ವರಿನಗರ ವಿಭಾಗ (ಕರ್ನಾಟಕ ವಿದ್ಯುತ್ ನಿಗಮದಿಂದ ಎರವಲು ಸೇವೆ)
- ಸಿದ್ದರಾಮಯ್ಯ ಎಂ, ಸಹಾಯಕ ಎಂಜಿನಿಯರ್, ವಾರ್ಡ್ 129, 160, ರಾಜರಾಜೇಶ್ವರಿನಗರ ಉಪವಿಭಾಗ.
- ಎನ್.ಜಿ. ಉಮೇಶ್, ಸಹಾಯಕ ಎಂಜಿನಿಯರ್, (ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿ, ಯಶವಂತಪುರ ವಿಭಾಗ).
- ಶ್ರೀನಿವಾಸ್, ಕಾರ್ಯಪಾಲಕ ಎಂಜಿನಿಯರ್, ಕೆಆರ್‌ಐಡಿಎಲ್, ಆನಂದರಾವ್ ವೃತ್ತ.
- ವೆಂಕಟಲಕ್ಷ್ಮಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ ಕೋಶ.
- ಶ್ರೀತೇಜ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ ಕೋಶ (ಪ್ರಸ್ತುತ– ಕಾರ್ಯಪಾಲಕ ಎಂಜಿನಿಯರ್, ಟಿವಿಸಿಸಿ).

ಮತ್ತೊಂದು ಕಾಡಾನೆ ಸೆರೆ

ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಕಳೆದ ಕೆಲವು ದಿನಗಳಿಂದ ತಾಲ್ಲೂಕಿನ ಕಾಡಂಚಿನ ಪ್ರದೇಶದ ಜಮೀನುಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದ ಒಂಟಿ ಸಲಗವನ್ನು ಗುರುವಾರ ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿಯಲಾಗಿದೆ.


ಚನ್ನೇನಹಳ್ಳಿ ಸೇರಿದಂತೆ ವಿವಿಧೆಡೆ ಕೆಲ ದಿನಗಳಿಂದ ಓಡಾಡಿಕೊಂಡಿದ್ದ ಕಾಡಾನೆ ಬೆಳೆಗಳನ್ನು ನಾಶ ಮಾಡುತ್ತ ರೈತರ ನಿದ್ದೆಗೆಡಿಸಿತ್ತು. ರೈತರು ಅರಣ್ಯ ಇಲಾಖೆಗೆ ದೂರು ನೀಡಿದ್ದರು. ಆನೆ ಸೆರೆಗಾಗಿ ಅರಣ್ಯ ಇಲಾಖೆ ಸಿಬ್ಬಂದಿ ಐದು ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದರು.

ಬೆಳಿಗ್ಗೆ ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ಆನೆ ಓಡಾಟವನ್ನು ಗುರುತಿಸಿದ ಅರಣ್ಯ ಸಿಬ್ಬಂದಿ ಅರಿವಳಿಕೆ ಚುಚ್ಚುಮದ್ದು ನೀಡಿದರು. ಕೆಳಗೆ ಉರುಳಿ ಬಿದ್ದ ಆನೆಯ ಕಾಲಿಗೆ ಹಗ್ಗಗಳನ್ನು ಕಟ್ಟಿ ಸಾಗಿಸಲಾಯಿತು. ಮತ್ತಿಗೋಡು ಆನೆ ಶಿಬಿರದಿಂದ ಕರೆತಂದಿರುವ ಅಭಿಮನ್ಯು ನೇತೃತ್ವದ ಪಳಗಿದ ಆನೆಗಳ ತಂಡವನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಯಿತು.

ಕನಕಪುರದ ಕಬ್ಬಾಳು ಹಾಗೂ ಚನ್ನಪಟ್ಟಣದ ವಿರುಪಸಂದ್ರ ಗ್ರಾಮಗಳಲ್ಲಿ ಮಾವಿನ ತೋಟದ ಇಬ್ಬರು ಕಾವಲುಗಾರರನ್ನು ತುಳಿದು ಕೊಂದಿದ್ದ ಒಂಟಿ ಸಲಗವನ್ನು ತೆಂಗಿನಕಲ್ಲು ಅರಣ್ಯ ಪ್ರದೇಶದಲ್ಲಿ ಜೂನ್ 8 ರಂದು ಸೆರೆ ಹಿಡಿಯಲಾಗಿತ್ತು. ಅದಕ್ಕೂ ಅಭಿಮನ್ಯು ನೇತೃತ್ವದ ಸಾಕಾನೆಗಳ ತಂಡದ ನೆರವು ಪಡೆಯಲಾಗಿತ್ತು.

ಸೆರೆ ಹಿಡಿದ ಆನೆಯನ್ನು ಮತ್ತಿಗೋಡು ಶಿಬಿರಕ್ಕೆ ಲಾರಿಯ ಮೂಲಕ ಸಾಗಿಸಿ ಪಳಗಿಸಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು. ಪುಂಡಾನೆ ಸೆರೆ ಹಿಡಿದ ಸುದ್ದಿ ಕೇಳಿ ಈ ಭಾಗದ ರೈತರು ನಿಟ್ಟುಸಿರು ಬಿಟ್ಟರು.

2022ರ ಆಗಸ್ಟ್‌ನಲ್ಲಿ ಮತ್ತಿಗೋಡು ಆನೆ ಶಿಬಿರದಿಂದ ಕರೆತಂದಿದ್ದ ಇದೇ ಆನೆಗಳ ತಂಡ ತಾಲ್ಲೂಕಿನ ಬಿ.ವಿ. ಹಳ್ಳಿ ಗ್ರಾಮ ಹಾಗೂ ತೆಂಗಿನಕಲ್ಲು ಅರಣ್ಯ ಪ್ರದೇಶದಲ್ಲಿ ಐದು ದಿನಗಳ ಅಂತರದಲ್ಲಿ ಎರಡು ಪುಂಡಾನೆಗಳನ್ನು ಸೆರೆ ಹಿಡಿದಿತ್ತು. ಇದೀಗ ವಾರದ ಒಳಗಾಗಿ ಮತ್ತೆ ಎರಡು ಆನೆಗಳನ್ನು ಸೆರೆ ಹಿಡಿಯಲಾಗಿದೆ.



ಚನ್ನಪಟ್ಟಣ ತಾಲ್ಲೂಕಿನ ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿದ ಪುಂಡಾನೆಯನ್ನು ಹಗ್ಗ ಕಟ್ಟಿ ಎಳೆದು ತರಲಾಯಿತು

‘ಮಕ್ನಾ ಆನೆ ಹಿಡಿಯಲು ಆದ್ಯತೆ ನೀಡಿ’

ಚನ್ನಪಟ್ಟಣ: ತಾಲ್ಲೂಕಿನ ರೈತರ ಬೆಳೆಗಳ ಮೇಲೆ ಸತತ ದಾಳಿ ನಡೆಸುತ್ತಿರುವುದು ಮಕ್ನಾ ಆನೆ. ಅರಣ್ಯ ಇಲಾಖೆ ಅಧಿಕಾರಿಗಳು ಮೊದಲು ಅದನ್ನು ಹಿಡಿಯಲು ಮುಂದಾಗಬೇಕು ಎಂದು ರೈತ ಮುಖಂಡ ಸಿ.ಪುಟ್ಟಸ್ವಾಮಿ ಒತ್ತಾಯಿಸಿದ್ದಾರೆ.

ವಾಟ್ಸ್‌ಆ್ಯಪ್‌ನಲ್ಲಿ ಪೊಲೀಸರಿಗೆ ದೂರು

ಬೆಂಗಳೂರು: ‘ನಮ್ಮ 112’ ನಿಯಂತ್ರಣ ಕೊಠಡಿ ಮೂಲಕ ಜನರ ದೂರು ಸ್ವೀಕರಿಸುತ್ತಿದ್ದ ಬೆಂಗಳೂರು ಪೊಲೀಸರು, ಇದೀಗ ವಾಟ್ಸ್‌ಆ್ಯಪ್ ಮೂಲಕ ದೂರು ಪಡೆಯಲು ಮುಂದಾಗಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಪೊಲೀಸ್ ಕಮಿಷನರ್ ಬಿ. ದಯಾನಂದ್, ‘ನಮ್ಮ 112 ಉನ್ನತಿಕರಿಸಲು ಮೊದಲ ಹೆಜ್ಜೆ ಇರಿಸಲಾಗಿದೆ. ನಾಗರಿಕರು ತುರ್ತು ಸಂದರ್ಭದಲ್ಲಿ ಸಹಾಯಕ್ಕೆ ಹಾಗೂ ಇತರೆ ಯಾವುದೇ ರೀತಿಯ ದೂರುಗಳು ಇದ್ದರೆ ವಾಟ್ಸ್‌ಆ್ಯಪ್ ನಂಬರ್‌ಗೆ ಕಳುಹಿಸಬಹುದು' ಎಂದಿದ್ದಾರೆ.

ಇತ್ತೀಚೆಗಷ್ಟೇ ಹೊಯ್ಸಳ ವಾಹನದಲ್ಲಿ ಕಮಿಷನರ್ ಗಸ್ತು ತಿರುಗಿದ್ದರು. ಕೆಲ ಸಾರ್ವಜನಿಕರು, ನಿಯಂತ್ರಣ ಕೊಠಡಿ ಹಾಗೂ ಹೊಯ್ಸಳ ಸಿಬ್ಬಂದಿ ಮತ್ತಷ್ಟು ಚುರುಕಿನಿಂದ ಕೆಲಸ ಮಾಡಬೇಕು ಎಂದಿದ್ದರು. ಅದಕ್ಕೆ ಕ್ರಮ ಕೈಗೊಂಡಿರುವ ಕಮಿಷನರ್, ನಿಯಂತ್ರಣ ಕೊಠಡಿಗೆ ವಾಟ್ಸ್‌ಆ್ಯಪ್ ನಂಬರ್ ಪರಿಚಯಿಸಿದ್ದಾರೆ.

‘ಬಹುತೇಕರು ಇಂದು ವಾಟ್ಸ್‌ಆ್ಯಪ್ ಬಳಕೆ ಮಾಡುತ್ತಿದ್ದಾರೆ. ನಮ್ಮ 112 ಸಂಖ್ಯೆ ಜೊತೆಯಲ್ಲಿ ಜನರಿಗೆ ಮತ್ತಷ್ಟು ಹತ್ತಿರವಾಗಲು, ವಾಟ್ಸ್‌ಆ್ಯಪ್ ನಂಬರ್ ನೀಡಲಾಗುತ್ತಿದೆ. ಜನರು ಯಾವುದೇ ಸಮಸ್ಯೆ ಹಾಗೂ ತುರ್ತು ದೂರುಗಳು ಇದ್ದರೆ, ಫೋಟೊ ಸಮೇತ ಮಾಹಿತಿ ನೀಡಬಹುದು. ಸಿಬ್ಬಂದಿ ತ್ವರಿತವಾಗಿ ಸ್ಪಂದಿಸಲಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಬೆಂಗಳೂರು ಪೊಲೀಸರ ವಾಟ್ಸ್‌ಆ್ಯಪ್
9480801000

ವಿದ್ಯಾರ್ಥಿನಿಗೆ ಥಳಿಸಿದ ಶಿಕ್ಷಕಿ ಅಮಾನತು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ನಗರ ಹೊರವಲಯದ ತಿಮ್ಮಸಂದ್ರ ಬಳಿಯ ದಿ ಪ್ರೀತಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಗೆ ಬಾಸುಂಡೆ ಬರುವಂತೆ ಥಳಿಸಿದ್ದಾರೆ ಎಂದು ಆರೋಪಿಸಿ ಪೋಷಕರು ಗುರುವಾರ ಶಿಕ್ಷಕಿ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರು ದಾಖಲಾದ ಬೆನ್ನಲ್ಲೇ ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ್ ಗುರುವಾರ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಶಿಕ್ಷಕಿಯನ್ನು ಅಮಾನತು ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಕಿರು ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿಲ್ಲ ಎಂಬ ಕಾರಣಕ್ಕೆ ಶಿಕ್ಷಕಿಯು 4ನೇ ತರಗತಿಯಲ್ಲಿ ಓದುತ್ತಿರುವ ತಮ್ಮ ಮಗಳು ಚೈತನ್ಯಳಿಗೆ ಕೋಲಿನಿಂದ ಮೈಮೇಲೆ ಬಾಸುಂಡೆ ಬರುವಂತೆ ಥಳಿಸಿದ್ದಾರೆ ಎಂದು ನಗರದ ವೆಂಕಟಗಿರಿ ಕೋಟೆ ಬಡಾವಣೆ ನಿವಾಸಿ ದಯಾನಂದ ದೂರಿನಲ್ಲಿ ತಿಳಿಸಿದ್ದಾರೆ.

‘ವಿದ್ಯಾರ್ಥಿನಿಗೆ ಥಳಿಸಿದ ಶಿಕ್ಷಕಿ ಮತ್ತು ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ್ ಹೇಳಿದರು.

₹ 20 ಸಾವಿರಕ್ಕೆ ಕಿರುಕುಳ: ವಿದ್ಯಾರ್ಥಿ ಆತ್ಮಹತ್ಯೆ

ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ • ಇಬ್ಬರು ಸಹಪಾಠಿಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕುಂಬಳಗೋಡು ಬಳಿಯ ಕಾಲೇಜೊಂದರ ಬಿಬಿಎ ವಿದ್ಯಾರ್ಥಿ ನಿತಿನ್ ಕೆ. (20) ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ₹ 20 ಸಾವಿರ ಸಾಲದ ವಿಚಾರವಾಗಿ ಕಿರುಕುಳ ನೀಡುತ್ತಿದ್ದ ಆರೋಪದಡಿ ಇಬ್ಬರು ಸಹಪಾಠಿಗಳ ವಿರುದ್ಧ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ನಿತಿನ್, ಜೂನ್ 12ರಂದು ರಾತ್ರಿ ತಮ್ಮ ಮನೆಯ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಂದೆ ಕೃಷ್ಣ ನೀಡಿರುವ ದೂರು ಆಧರಿಸಿ, ಸಹಪಾಠಿಗಳಾದ ಜೀವನ್‌ಕುಮಾರ್ ಹಾಗೂ ವರುಣ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಿಬಿಎ ಎರಡನೇ ವರ್ಷದಲ್ಲಿ ನಿತಿನ್ ವ್ಯಾಸಂಗ ಮಾಡುತ್ತಿದ್ದರು. ಆರೋಪಿತ ಸಹಪಾಠಿಗಳ ಬಳಿ ₹ 20 ಸಾವಿರ ಕೈ ಸಾಲ ಪಡೆದಿದ್ದರು. ಅದೇ ಸಾಲದ ವಿಚಾರವಾಗಿ ಕಾಲೇಜಿನಲ್ಲಿ ಆಗಾಗ ಗಲಾಟೆ ಆಗುತ್ತಿತ್ತು. ‘ಬಡ್ಡಿ ಸಮೇತ ಹಣ ನೀಡುವವರೆಗೂ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ’ ಎಂದು ಸಹಪಾಠಿಗಳು ಹೆದರಿಸುತ್ತಿದ್ದರು. ‘ನಮಗೆ ಪೊಲೀಸರು ಹಾಗೂ ಮಾಧ್ಯಮದವರು ಪರಿಚಯವಿದ್ದಾರೆ. ಡ್ರಗ್ಸ್ ಪ್ರಕರಣದಲ್ಲಿ ನಿನ್ನನ್ನು ಸಿಲುಕಿಸಿ ಜೈಲಿಗೆ ಕಳುಹಿಸುತ್ತೇವೆ’ ಎಂಬುದಾಗಿ ಆರೋಪಿಗಳು ಬೆದರಿಸುತ್ತಿದ್ದರು.’

‘ನಿತಿನ್‌ನನ್ನು ಇತ್ತೀಚೆಗೆ ಅಪಹರಣ ಮಾಡಿದ್ದ ಆರೋಪಿಗಳು, ನಿರ್ಮಾಣ ಹಂತದ ಕಟ್ಟಡವೊಂದರ ಬಳಿ ಕರೆದೊಯ್ದು ಚಿತ್ರಹಿಂಸೆ ನೀಡಿದ್ದರು. ದ್ವಿಚಕ್ರ ವಾಹನ ಹಾಗೂ ಲ್ಯಾಪ್‌ಟಾಪ್ ಕಸಿದುಕೊಂಡಿದ್ದರು. ನೊಂದ ನಿತಿನ್ ಜೂನ್ 9ರಂದು ಮನೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ರಕ್ಷಿಸಿದ್ದ ಪೋಷಕರು, ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪೋಷಕರು ನೀಡಿದ್ದ ದೂರು ಆಧರಿಸಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಲಾಗಿತ್ತು. ಜೀವನ್‌ಕುಮಾರ್ ಹಾಗೂ ವರುಣ್‌ನನ್ನು ಠಾಣೆಗೆ ಕರೆಸಿ ಎಚ್ಚರಿಕೆ ನೀಡಿ ವಾಪಸು ಕಳುಹಿಸಲಾಗಿತ್ತು. ಠಾಣೆಯಿಂದ ಹೊರಬಂದಿದ್ದ ಆರೋಪಿಗಳು, ಪುನಃ ನಿತಿನ್‌ಗೆ ಬೆದರಿಕೆಯೊಡ್ಡಿದ್ದರು. ‘ನಮಗೆ ನೀನು ಏನು ಮಾಡಲಾಗದು. ಪೊಲೀಸರು ನಮಗೆ ಪರಿಚಯ. ಜೈಲಿಗೆ ಹೋದರೂ ಕೆಲ ದಿನಗಳಲ್ಲಿ ಹೊರಗೆ ಬರುತ್ತೇವೆ’ ಎಂದಿದ್ದರು. ಅದರಿಂದ ಮತ್ತಷ್ಟು ನೊಂದು ನಿತಿನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವಿಷಯ ತಂದೆಯ ದೂರಿನಲ್ಲಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ವ್ಹೀಲೆಗಾಗಿ ದ್ವಿಚಕ್ರ ವಾಹನ ಕಳವು: ಆರೋಪಿ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿ ಆನಂದ್‌ನನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಆನಂದ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಈತನಿಂದ ₹ 12 ಲಕ್ಷ ಮೌಲ್ಯದ 9 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಹೆಚ್ಚು ವ್ಹೀಲೆ ಮಾಡುತ್ತಿದ್ದ. ಇದಕ್ಕೆ ಬೇಕಾದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ. ಇತ್ತೀಚೆಗೆ ಠಾಣೆ ವ್ಯಾಪ್ತಿಯಲ್ಲಿ ವಾಹನ ಕದ್ದು ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡು ಈತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕದ್ದ ದ್ವಿಚಕ್ರ ವಾಹನಗಳನ್ನು ಕೆಲದಿನ ವ್ಹೀಲೆ ಮಾಡಲು ಬಳಸುತ್ತಿದ್ದ ಆರೋಪಿ, ನಂತರ ಅವುಗಳನ್ನು ಮಾರುತ್ತಿದ್ದ. ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ಕೆ.ಜಿ. ಹಳ್ಳಿ, ಕೊತ್ತನೂರು, ಕಮರ್ಷಿಯಲ್ ಸ್ಟ್ರೀಟ್ ಹಾಗೂ ಮಡಿವಾಳ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿದ್ದ’ ಎಂದು ತಿಳಿಸಿದರು.

ಸಚಿವರ ಹೆಸರಿನಲ್ಲಿ ವಂಚನೆ: ಬಂಧನ

ಬೆಂಗಳೂರು: ಮುಜರಾಯಿ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಹೆಸರಿನಲ್ಲಿ ಹಣ ಪಡೆದು ವಂಚಿಸಿದ್ದ ಆರೋಪದಡಿ ರಘು (32) ಅವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮೈಸೂರಿನ ರಘು, ಎಂಬಿಎ ಪದವೀಧರ. ಸಚಿವ ರಾಮಲಿಂಗಾರೆಡ್ಡಿ ಆಪ್ತನೆಂದು ಹೇಳಿಕೊಳ್ಳುತ್ತಿದ್ದ ಆರೋಪಿ, ಮುಜರಾಯಿ ಇಲಾಖೆಯಲ್ಲಿ ವರ್ಗಾವಣೆ ಮಾಡಿಸುವುದಾಗಿ ಹಲವರಿಂದ ಹಣ ಪಡೆದು ವಂಚಿಸಿದ್ದ. ಈತನ ವಿರುದ್ಧ ಇತ್ತೀಚೆಗೆ ಪ್ರಕರಣ ದಾಖಲಾಗಿತ್ತು. ಪುರಾವೆ ಸಂಗ್ರಹಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇಂಗ್ಲಿಷ್ ಚೆನ್ನಾಗಿ ಮಾತನಾಡುವ ಆರೋಪಿ, ಇಲಾಖೆಯ ಅಧಿಕಾರಿಗಳನ್ನು ಬೇಗನೇ ನಂಬಿಸುತ್ತಿದ್ದ. ತಾನು ಹೇಳಿದಂತೆ ಸಚಿವರು ಕೇಳುತ್ತಾರೆಂದು ಹೇಳುತ್ತಿದ್ದ. ಈತನ ಮಾತು ನಂಬುತ್ತಿದ್ದ ಅಧಿಕಾರಿಗಳು, ವರ್ಗಾವಣೆ ಮಾಡಿಸುವಂತೆ ಕೋರುತ್ತಿದ್ದರು. ಫೋನ್ ಪೇ, ಗೂಗಲ್ ಪೇ ಮೂಲಕವೂ ಹಣ ನೀಡುತ್ತಿದ್ದರು.’

‘ಹಣ ಪಡೆದ ಬಳಿಕ ಆರೋಪಿ ಮೊಬೈಲ್ ಸ್ವಿಚ್ ಆಫ್ ಮಾಡಿ ನಾಪತ್ತೆಯಾಗುತ್ತಿದ್ದ. ಸಚಿವ ಪ್ರಿಯಾಂಕ್ ಖರ್ಗೆ ಅವರ ಹೆಸರಿನಲ್ಲೂ ಆರೋಪಿ ಹಣ ಪಡೆದು ವಂಚಿಸಿರುವ ಮಾಹಿತಿ ಇದೆ’ ಎಂದರು.

ಒರಳು ಕಲ್ಲು ಎತ್ತಿಹಾಕಿ ತಂದೆ ಕೊಲೆ

ಪ್ರಜಾವಾಣಿ ವಾರ್ತೆ


ಚೇತನ್


ಗಂಗರಾಜು

ಬೆಂಗಳೂರು: ಮಾಗಡಿ ರಸ್ತೆ ಠಾಣೆ ವ್ಯಾಪ್ತಿಯಲ್ಲಿ ಗಂಗರಾಜು (50) ಅವರನ್ನು ತಲೆ ಮೇಲೆ ಒರಳು ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಮಗ ಚೇತನ್‌ನನ್ನು (28) ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಗೋಪಾಲಪುರದ ನಿವಾಸಿ ಗಂಗರಾಜು, ಪೇಟಿಂಗ್ ಕೆಲಸ ಮಾಡುತ್ತಿದ್ದರು. ಪತ್ನಿ ಸರೋಜಮ್ಮ ಹಾಗೂ ಮಗ ಚೇತನ್ ಸೇರಿ ಇಬ್ಬರು ಮಕ್ಕಳ ಜೊತೆ ವಾಸವಿದ್ದರು. ಬುಧವಾರ ತಡರಾತ್ರಿ ಮನೆಯಲ್ಲಿ ನಡೆದ ಜಗಳ, ಕೊಲೆಯಲ್ಲಿ ಅಂತ್ಯವಾಗಿದೆ’ ಎಂದು ಪೊಲೀಸರು ಹೇಳಿದರು.

‘ಮದ್ಯ ವ್ಯಸನಿ ಆಗಿದ್ದ ಗಂಗರಾಜು, ನಿತ್ಯವೂ ಕುಡಿದು ಬಂದು ಗಲಾಟೆ ಮಾಡುತ್ತಿದ್ದ. ಪತ್ನಿಗೆ ಹೊಡೆಯುತ್ತಿದ್ದ. ತಾಯಿ ರಕ್ಷಣೆಗೆ ಹೋಗುತ್ತಿದ್ದ ಮಕ್ಕಳು, ತಂದೆಗೆ ಬುದ್ಧಿವಾದ ಹೇಳುತ್ತಿದ್ದರು. ಆದರೆ, ಆತ ಮಾತು ಕೇಳುತ್ತಿರಲಿಲ್ಲ. ಇದೇ ಕಾರಣಕ್ಕೆ ನಿತ್ಯವೂ ಮನೆಯಲ್ಲಿ ಜಗಳ ಆಗುತ್ತಿತ್ತು’ ಎಂದು ತಿಳಿಸಿದರು.

ಕಲ್ಲು ಎತ್ತಿ ಹಾಕಿ ಕಥೆ ಕಟ್ಟಿದ್ದ: ‘ಬಹುಮಹಡಿ ಕಟ್ಟಡದಲ್ಲಿ ಗಂಗರಾಜು ಕುಟುಂಬ ವಾಸವಿದೆ. ಗಂಗರಾಜು ಹಾಗೂ ಚೇತನ್ ನಡುವೆ ಬುಧವಾರ ತಡರಾತ್ರಿ ಜಗಳ ಆಗಿತ್ತು. ಇಬ್ಬರೂ ಪರಸ್ಪರ ಬೈದಾಡಿಕೊಂಡಿದ್ದರು. ಮನೆಯಿಂದ ಹೊರಬಂದಿದ್ದ ಗಂಗರಾಜು, ನೆಲ ಮಹಡಿಯ ನೆಲದ ಮೇಲೆ ಮಲಗಿದ್ದರು’ ಎಂದು ಪೊಲೀಸರು ಹೇಳಿದರು.

‘ಮನೆಯಲ್ಲಿದ್ದ ಒರಳು ಕಲ್ಲು ಎತ್ತಿಕೊಂಡು ಬಂದಿದ್ದ ಚೇತನ್, ನೆಲ ಮಹಡಿಯ ಮೆಟ್ಟಿಲು ಮೇಲೆ ನಿಂತು ಗಂಗರಾಜು ತಲೆ ಮೇಲೆ ಎತ್ತಿ ಹಾಕಿದ್ದ. ಇದರಿಂದಾಗಿ ಜೋರಾದ ಶಬ್ದ ಬಂದಿತ್ತು. ಗಂಗರಾಜು ತಲೆಯಿಂದ ವಿಪರೀತ ರಕ್ತ ಸೋರಲಾರಂಭಿಸಿತ್ತು. ಪಕ್ಕದ ಮನೆಯ ಮಹಿಳೆಯೊಬ್ಬರು ಹೊರಗೆ ಬಂದು ಏನಾಯಿತೆಂದು ನೋಡಿದ್ದರು. ಅದೇ ಸಂದರ್ಭದಲ್ಲಿಯೇ ಆರೋಪಿ, ಒರಳು ಕಲ್ಲು ಎತ್ತಿಕೊಂಡು ಎರಡನೇ ಬಾರಿ ತಲೆ ಮೇಲೆ ಎತ್ತಿಹಾಕಲು ಹೊರಟಿದ್ದ. ಮಹಿಳೆಯನ್ನು ನೋಡಿ ಕಲ್ಲನ್ನು ಬೇರೆಡೆ ಎಸೆದಿದ್ದ ಆರೋಪಿ, ‘ಯಾರೋ ತಂದೆಯನ್ನು ಕೊಂದು ಓಡಿಹೋದರು’ ಎಂದು ಸುಳ್ಳು ಹೇಳಿದ್ದ. ರಸ್ತೆಗೆ ಹೋಗಿ ಆರೋಪಿಗಳನ್ನು ಹುಡುಕುವ ರೀತಿಯಲ್ಲಿ ನಟಿಸಿದ್ದ’ ಎಂದರು.

‘ನೀನು ಕಲ್ಲು ಎತ್ತಿಹಾಕಿದ್ದನ್ನು ನಾನು ನೋಡಿದ್ದೇನೆ’ ಎಂದು ಮಹಿಳೆ ಹೇಳಿದ್ದರು. ಇಲ್ಲವೆಂದು ವಾದಿಸಿದ್ದ ಆರೋಪಿ, ಅಕ್ಕ–ಪಕ್ಕದ ಮನೆಯವರನ್ನು ಎಬ್ಬಿಸಿದ್ದ. ತಂದೆಯನ್ನು ಯಾರೋ ಕೊಂದಿದ್ದಾರೆಂದು ಹೇಳಿದ್ದ. ನಂತರ, ಆಟೊದಲ್ಲಿ ಗಂಗರಾಜು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಬಳಿಕ, ಮೃತದೇಹವನ್ನು ವಾಪಸು ಮನೆಗೆ ತರಲಾಗಿತ್ತು. ಸಾವಿನ ಬಗ್ಗೆ ಅನುಮಾನಗೊಂಡಿದ್ದ ಸ್ಥಳೀಯರು, ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಮನೆಗೆ ಹೋಗಿದ್ದ ಸಿಬ್ಬಂದಿ, ಚೇತನ್‌ನನ್ನು ವಿಚಾರಣೆ ನಡೆಸಿದ್ದರು. ಮೃತದೇಹದ ಮುಂದೆ ಕುಳಿತು ಅಳುತ್ತಿದ್ದ ಆತ, ‘ ರಾತ್ರಿ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ತಂದೆಯನ್ನು ಕೊಂದಿದ್ದಾರೆ’ ಎಂಬುದಾಗಿ ಸುಳ್ಳು ಹೇಳಿದ್ದ. ತಡರಾತ್ರಿ ಮನೆಯಲ್ಲಿ ಗಲಾಟೆ ಆಗಿದ್ದ ವಿಷಯ ಸ್ಥಳೀಯರಿಂದ ಗೊತ್ತಾಗಿತ್ತು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ.’

‘ಕೊಲೆ ನೋಡಿದ್ದ ಸ್ಥಳೀಯ ಮಹಿಳೆಯಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬಂಧಿತ ಚೇತನ್, ಗುತ್ತಿಗೆ ಆಧಾರದಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

845 ‘ಸಿಐಡಿ’ ಪ್ರಕರಣ ಬಾಕಿ: ಹಲವು ವರ್ಷಗಳಿಂದ ಪೂರ್ಣಗೊಳ್ಳದ ತನಿಖೆ

ಚಾರ್ಜ್‌ಶೀಟ್ ಸಲ್ಲಿಕೆಗೆ ಗಡುವು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಿಶೇಷ ಅಪರಾಧ ಪ್ರಕರಣಗಳನ್ನು ಭೇದಿಸುವ ಉದ್ದೇಶದಿಂದ ಸ್ಥಾಪಿಸಲಾಗಿರುವ ರಾಜ್ಯದ ಅಪರಾಧ ತನಿಖಾ ವಿಭಾಗದಲ್ಲಿ (ಸಿಐಡಿ) ಸದ್ಯ 845 ಪ್ರಕರಣಗಳ ತನಿಖೆ ಹಲವು ವರ್ಷಗಳಿಂದ ಬಾಕಿ ಉಳಿದಿದೆ. ಪ್ರತಿ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿ ನಿಗದಿತ ದಿನದೊಳಗೆ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನೂತನ ಡಿಜಿಪಿ ಗಡುವು ನೀಡಿದ್ದಾರೆ.

ರಾಜ್ಯದಲ್ಲಿ ಹೆಚ್ಚು ಸುದ್ದಿಯಾಗುವ ಆರ್ಥಿಕ ಹಾಗೂ ಅಪರಾಧ ಪ್ರಕರಣಗಳನ್ನು ಸಿಐಡಿಗೆ ವಹಿಸಲಾಗುತ್ತಿದೆ. ರಾಜಧಾನಿಯ ಕಾರ್ಲಟನ್ ಕಟ್ಟಡದಲ್ಲಿರುವ ಸಿಐಡಿ ಅಧಿಕಾರಿಗಳು, ವಿಶೇಷ ತಂಡಗಳ ಮೂಲಕ ಪ್ರಕರಣಗಳನ್ನು ಭೇದಿಸುತ್ತಿದ್ದಾರೆ. ಆದರೆ, ಅಧಿಕಾರಿಗಳ ವರ್ಗಾವಣೆ ಹಾಗೂ ಸಿಬ್ಬಂದಿ ಕೊರತೆಯಿಂದಾಗಿ ಹಲವು ಪ್ರಕರಣಗಳ ತನಿಖೆ ಅರ್ಧಕ್ಕೆ ನಿಂತುಕೊಂಡಿದೆ.

ಪೊಲೀಸರ ಸುಪರ್ದಿಯಲ್ಲಾದ ‘ಲಾಕಪ್‌ಡೆತ್’ ಪ್ರಕರಣಗಳಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳುವ ಸಿಐಡಿ, ಇದರ ತನಿಖೆಯ ಜವಾಬ್ದಾರಿಯನ್ನೂ ವಹಿಸಿಕೊಳ್ಳುತ್ತಿದೆ. ಜೊತೆಗೆ, ಸೈಬರ್ ಅಪರಾಧಗಳನ್ನು



ಬಾಕಿ ಪ್ರಕರಣಗಳು ಹೆಚ್ಚಿವೆ. ತನಿಖೆಯನ್ನು ತ್ವರಿತವಾಗಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಪ್ರತಿ ವಾರವೂ ಸಭೆ ನಡೆಸಿ ಪರಿಶೀಲಿಸುತ್ತಿದ್ದೇನೆ

ಎಂ.ಎ. ಸಲೀಂ, ಸಿಐಡಿ ಡಿಜಿಪಿ

ಭೇದಿಸಲು ಪ್ರತ್ಯೇಕ ಸೈಬರ್ ಠಾಣೆಯೂ ಸಿಐಡಿಯಲ್ಲಿದೆ. ಎಸ್‌ಪಿ ನೇತೃತ್ವದಲ್ಲಿ ಸೈಬರ್ ಕ್ರೈಂ ತನಿಖಾ ತಂಡವೂ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿದೆ.

ಪೊಲೀಸ್ ನೇಮಕಾತಿ ಅಕ್ರಮ, ಪ್ರೌಢಶಾಲೆಗಳ ಗ್ರೇಡ್–2 ಸಹ ಶಿಕ್ಷಕರ ನೇಮಕಾತಿ ಅಕ್ರಮ, ರಾಜ್ಯ ಸರ್ಕಾರದ ಇ– ಪ್ರೊಕ್ಯೂರ್ ಮೆಂಟ್ ಜಾಲತಾಣ ಹ್ಯಾಕ್ ಸೇರಿದಂತೆ ಹಲವು ಪ್ರಕರಣಗಳ ತನಿಖೆಯನ್ನು ಸಿಐಡಿ ಈಗಾಗಲೇ ಪೂರ್ಣಗೊಳಿಸಿದೆ.

ನ್ಯಾಯಾಲಯದ ನಕಲಿ ಡಿಕ್ರಿ, ಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಪವರ್ ಬ್ಯಾಂಕ್ ಹಗರಣ, ಅನುಮಾನಾಸ್ಪದ ಸಾವುಗಳು ಸೇರಿದಂತೆ ಹಲವು ಪ್ರಕರಣಗಳ ತನಿಖೆ ಇದುವರೆಗೂ ಪೂರ್ಣಗೊಂಡಿಲ್ಲ. ಈ ಪ್ರಕರಣದ ಸಂತ್ರಸ್ತರು ನ್ಯಾಯಕ್ಕಾಗಿ ನಿತ್ಯವೂ ಕಚೇರಿಗೆ ಅಲೆಯುತ್ತಿದ್ದಾರೆ. ‘ಪುರಾವೆ ಕಲೆಹಾಕಲಾಗುತ್ತಿದೆ’ ಎಂಬ ಸಬೂಬು ಹೇಳಿ ಅಧಿಕಾರಿಗಳು ಸಂತ್ರಸ್ತರನ್ನು ವಾಪಸು ಕಳುಹಿಸುತ್ತಿದ್ದಾರೆ.

ಅಧಿಕಾರ ವರ್ಗಾವಣೆ: ‘ಸಿಐಡಿಗೆ ಬರುವ ಡಿವೈಎಸ್ಪಿ, ಇನ್‌ಸ್ಪೆಕ್ಟರ್ ಹಾಗೂ ಪಿಎಸ್‌ಐಗಳು ಹೆಚ್ಚು ವರ್ಷ ಇರುವುದಿಲ್ಲ. ಬೇರೆ ಕಡೆ ವರ್ಗಾವಣೆ ಆಗುತ್ತಾರೆ. ಇದು ಸಹ ಪ್ರಕರಣಗಳ ತನಿಖೆ ಅರ್ಧಕ್ಕೆ ನಿಲ್ಲಲು ಕಾರಣ’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಅಪೂರ್ಣ ತನಿಖೆಗೆ ಅಸಮಾಧಾನ

ಸಿಐಡಿ ನೂತನ ಡಿಜಿಪಿ ಎಂ.ಎ. ಸಲೀಂ, ಅಧಿಕಾರಿಗಳ ಅಪೂರ್ಣ ತನಿಖೆಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಸಿಐಡಿಯ ಎಲ್ಲ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದ ಡಿಜಿಪಿ, ‘ಬಾಕಿ ಇರುವ ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಪೂರ್ಣಗೊಳಿಸಬೇಕು. ಕಾಲಹರಣ ಮಾಡದೇ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕು’ ಎಂದು ಸೂಚನೆ ನೀಡಿದ್ದಾರೆ.

ಇದಾದ ಕೆಲದಿನಗಳಲ್ಲಿಯೇ ಅಧಿಕಾರಿಗಳು ಚುರುಕಿನಿಂದ ತನಿಖೆ ಮುಂದುವರಿಸಿದ್ದಾರೆ. ಪ್ರಕರಣಗಳ ಕಡತಗಳು ಹೊರಗೆ ಬಂದಿದ್ದು, ಪುರಾವೆಗಳ ಸಂಗ್ರಹ ಕೆಲಸ ಪುನಃ ಆರಂಭವಾಗಿದೆ. ಹೊರ ಜಿಲ್ಲೆಗಳಲ್ಲಿ ದಾಖಲಾದ ಪ್ರಕರಣಗಳ ಮಾಹಿತಿ ಕಲೆಹಾಕಲು ವಿಶೇಷ ತಂಡಗಳು ಕಾರ್ಯಾಚರಣೆ ಶುರು ಮಾಡಿವೆ.

ಪ್ರತಿ ವಾರವೂ ಪ್ರಗತಿ ಪರಿಶೀಲನೆ: ‘ವೃತ್ತಿಪರ ತನಿಖೆ ಕೈಗೊಳ್ಳುವ ಸಿಐಡಿ ಮೇಲೆ ರಾಜ್ಯ ಸರ್ಕಾರಕ್ಕೆ ಸಾಕಷ್ಟು ನಿರೀಕ್ಷೆ ಇದೆ’ ಎಂದು ಅಧಿಕಾರಿಗಳಿಗೆ ಹೇಳಿರುವ ಡಿಜಿಪಿ ಸಲೀಂ, ಬಾಕಿ ಪ್ರಕರಣಗಳ ತನಿಖೆಯ ಪ್ರಗತಿ ಪರಿಶೀಲಿಸಲು ಪ್ರತಿ ವಾರಕ್ಕೊಂದು ಸಭೆ ನಡೆಸುತ್ತಿದ್ದಾರೆ.

ಪ್ರಕರಣದ ತನಿಖೆ ಯಾವ ಹಂತದಲ್ಲಿದೆ? ಬೇರೆ ಇಲಾಖೆಗಳು ಹಾಗೂ ಹೊರ ರಾಜ್ಯಗಳ ಪೊಲೀಸರ ಸಹಕಾರ ಬೇಕಾ? ಪುರಾವೆಗಳ ಸಂಗ್ರಹದಲ್ಲಿ ಏನಾದರೂ ತೊಂದರೆ ಇದೆಯಾ ? ಎಂಬಿತ್ಯಾದಿ ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯುತ್ತಿರುವುದಾಗಿ ಮೂಲಗಳು ಹೇಳಿವೆ.

ಕೆಲಸದ ಆಮಿಷ: ₹ 10 ಲಕ್ಷ ವಂಚನೆ

ಬೆಂಗಳೂರು: ಆಕ್ಸಿಸ್ ಬ್ಯಾಂಕ್‌ನಲ್ಲಿ ಸಹಾಯಕ ವ್ಯವಸ್ಥಾಪಕ ಕೆಲಸ ಕೊಡಿಸುವ ಆಮಿಷವೊಡ್ಡಿ ₹ 10 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿ 28 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ವೆಂಕಟರಾವ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ದೂರುದಾರ ಕಂಪನಿಯೊಂದರಲ್ಲಿ ಮಾರುಕಟ್ಟೆ ಪ್ರತಿನಿಧಿಯಾಗಿದ್ದರು. ಆಕ್ಸಿಸ್ ಬ್ಯಾಂಕ್‌ನ ಅಧಿಕಾರಿ ಎಂದು ಹೇಳಿದ್ದ ವೆಂಕಟರಾವ್, ಸಹಾಯಕ ವ್ಯವಸ್ಥಾಪಕ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದರು.’

‘ಆರೋಪಿ ಮಾತು ನಂಬಿ, ಹಂತ ಹಂತವಾಗಿ ₹ 10 ಲಕ್ಷ ನೀಡಿದ್ದರು. ಹಣ ಪಡೆದಿದ್ದ ಆರೋಪಿ, ಯಾವುದೇ ಕೆಲಸ ಕೊಡಿಸಿಲ್ಲ. ಹಣ ವಾಪಸು ಕೇಳಿದ್ದಕ್ಕೆ ಬೆದರಿಕೆಯೊಡ್ಡಿರುವುದಾಗಿ ಆರೋಪಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೆಡ್ ಕಾನ್‌ಸ್ಟೆಬಲ್ ಆತ್ಮಹತ್ಯೆ

ಬೆಂಗಳೂರು: ಅಶೋಕನಗರ ಸಂಚಾರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಕೆ.ಆರ್. ಕುಮಾರ್ (44) ನೇಣು ಹಾಕಿಕೊಂಡು ಗುರುವಾರ ಬೆಳಿಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಆಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ದಾವಣಗೆರೆ ಜಿಲ್ಲೆಯ ಚನ್ನಗಿರಿಯ ಕುಮಾರ್, ಅಶೋಕನಗರ ಸಂಚಾರ ಠಾಣೆಯಲ್ಲಿ ಹಲವು ತಿಂಗಳಿನಿಂದ ಕರ್ತವ್ಯ ನಿರ್ವಹಿಸುತ್ತಿದ್ದರು. ಪತ್ನಿ, ಇಬ್ಬರು ಪುತ್ರಿಯರ ಜೊತೆ ಆಡುಗೋಡಿಯಲ್ಲಿರುವ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ನೆಲೆಸಿದ್ದರು. ಕ್ವಾರ್ಟರ್ಸ್‌ನಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

ಕಣ್ಣು ದಾನ: ಕುಮಾರ್ ಇಚ್ಛೆಯಂತೆ ಕಣ್ಣುಗಳನ್ನು ಕುಟುಂಬದವರು ದಾನ ಮಾಡಿದ್ದಾರೆ.

ಕಳ್ಳತನ: ಇಬ್ಬರ ಬಂಧನ

ಬೆಂಗಳೂರು: ಸಾರ್ವಜನಿಕರ ಗಮನ ಬೇರೆಡೆ ಸೆಳೆದು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ಕಾರ್ತಿಕ್ (37) ಹಾಗೂ ಅನುಮೋದಾಸ್ (44) ಬಂಧಿತರು. ಇವರಿಂದ ₹ 13.97 ಲಕ್ಷ ನಗದು ಕಾರು ಹಾಗೂ ಎರಡು ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ತಮಿಳುನಾಡಿನಿಂದ ಆಗಾಗ ನಗರಕ್ಕೆ ಬಂದು ಕೃತ್ಯ ಎಸಗಿ ಪರಾರಿಯಾಗುತ್ತಿದ್ದರು. ಸ್ಥಳೀಯ ನಿವಾಸಿ ಚೇತನ್ ಅವರು ಇತ್ತೀಚೆಗೆ ತಮ್ಮ ಕಾರಿನಲ್ಲಿ ₹ 15 ಲಕ್ಷ ಇಟ್ಟುಕೊಂಡು ಹೊರಟಿದ್ದರು. ಅವರ ಗಮನ ಬೇರೆಡೆ ಸೆಳೆದಿದ್ದ ಅರೋಪಿಗಳು, ಹಣದ ಬ್ಯಾಗ್ ಕದ್ದುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ದಾಖಲಾದ ಪ್ರಕರಣದ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

ಅಪರಿಚಿತನ ಅಸಭ್ಯ ವರ್ತನೆ: ಮಹಿಳೆಯರಲ್ಲಿ ಆತಂಕ

ಬೆಂಗಳೂರು: ರಾಜಗೋಪಾಲನಗರ ಠಾಣೆ ವ್ಯಾಪ್ತಿಯಲ್ಲಿ ಅಪರಿಚಿತನೊಬ್ಬ ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡಿ ಮಹಿಳೆಯರ ಎದುರು ಅಸಭ್ಯವಾಗಿ ವರ್ತಿಸುತ್ತಿದ್ದು, ಈ ಸಂಬಂಧ ಸ್ಥಳೀಯರು ಪೊಲೀಸರಿಗೆ ದೂರು ನೀಡಿದ್ದಾರೆ.

‘ವಿಧಾನಸೌಧ ಲೇಔಟ್‌ನಲ್ಲಿ ಇತ್ತೀಚೆಗೆ ಮನೆಯೊಂದಕ್ಕೆ ಹೋಗಿದ್ದ ಅಪರಿಚಿತ, ಒಣಗಲು ಹಾಕಿದ್ದ ಮಹಿಳೆಯರ ಒಳ ಉಡುಪುಗಳನ್ನು ಹಿಡಿದು ಅಸಭ್ಯವಾಗಿ ವರ್ತಿಸಿದ್ದ. ಆತಂಕಗೊಂಡಿದ್ದ ಮಹಿಳೆಯರು, ಚೀರಾಡಿದ್ದರು. ಅಷ್ಟರಲ್ಲಿಯೇ ಆರೋಪಿ ಸ್ಥಳದಿಂದ ಓಡಿ ಹೋಗಿದ್ದಾನೆ’ ಎಂದು ಸ್ಥಳೀಯರೊಬ್ಬರು ಹೇಳಿದ್ದಾರೆ.

‘ಸಂಜೆ ಹಾಗೂ ರಾತ್ರಿ ಸಂದರ್ಭದಲ್ಲಿ ಅಪರಿಚಿತ ಮನೆಗಳ ಬಳಿ ಸುತ್ತಾಡುತ್ತಿದ್ದಾನೆ. ಪೊಲೀಸ್ ಠಾಣೆಗೆ ಈಗಾಗಲೇ ದೂರು ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

ಪೊಲೀಸರು, ‘ಆರೋಪಿ ಸುಳಿವು ಪತ್ತೆಯಾಗಿಲ್ಲ. ಸ್ಥಳೀಯರು ನೀಡಿರುವ ಮಾಹಿತಿ ಆಧರಿಸಿ ತನಿಖೆ ಮುಂದುವರಿಸಲಾಗಿದೆ’ ಎಂದರು.

ನಗರದಲ್ಲಿ ಇಂದು

ಗ್ರೀನ್ ವೆಹಿಕಲ್ ಎಕ್ಸ್‌ಪೊ ಉದ್ಘಾಟನೆ: ಕೆ.ಜೆ. ಜಾರ್ಜ್, ರಹೀಂ ಖಾನ್, ಆಯೋಜನೆ: ಇಂಡಿಯಾ ಗ್ರೀನ್ ಎನರ್ಜಿ ಎಕ್ಸ್‌ಪೊ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಬೆಳಿಗ್ಗೆ 10.30

ಅಭಿನಯ ಯುವರಂಗ ಶಿಬಿರದ ಉದ್ಘಾಟನೆ: ಶೂದ್ರ ಶ್ರೀನಿವಾಸ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಅತಿಥಿಗಳು: ಕೆ.ಎ. ವೆಂಕಟೇಶ್, ಪ್ರದೀಪ್ ತಿಪಟೂರು, ಆಯೋಜನೆ: ಸಂಸ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 10.30

ವಿದ್ಯಾರ್ಥಿ ಸಮಿತಿಯ ಉದ್ಘಾಟನೆ, ಸನ್ಮಾನ ಕಾರ್ಯಕ್ರಮ: ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ, ಅತಿಥಿಗಳು: ಅಕ್ಷತ ಪಾಂಡವಪುರ, ರಶ್ಮಿ ಶ್ರೀನಿವಾಸ್, ಪಿ. ದಯಾನಂದ್ ಪೈ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಪಿ.ಯು ಮಹಿಳಾ ಕಾಲೇಜು, ಬಸವನಗುಡಿ, ಬೆಳಿಗ್ಗೆ 11.30

ಎಚ್.ವಿಶ್ವನಾಥ ಮತ್ತು ಎಂ.ಎಸ್. ಇಂದಿರಾ ಅವರ ದತ್ತಿ ಪ್ರಶಸ್ತಿ ಪ್ರದಾನ: ಚಿರಂಜೀವಿ ಸಿಂಗ್, ಪ್ರಶಸ್ತಿ ಪುರಸ್ಕೃತರು: ಸೌಮ್ಯ ಪುತ್ರನ್, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಎಚ್. ವಿಶ್ವನಾಥ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5

ಚೈತನ್ಯ ಸಂಜೆ: ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ‘ಶರಣರಲ್ಲಿ ಪರಿಸರ ಪ್ರಜ್ಞೆ’ ಕುರಿತು ಉಪನ್ಯಾಸ: ಎ.ಆರ್. ಶಿವಕುಮಾರ್, ಉಪಸ್ಥಿತಿ: ದಿಬ್ಬೂರು ವಿ. ಗಿರೀಶ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜಿನ ಸಭಾಂಗಣ, ಜಯನಗರ, ಸಂಜೆ 5.30


‘ಗುರುತ್ವ’ ವಿಶ್ವದ ನಿರ್ಮಾತೃ ನಿರ್ವಾಹಕದ ಉದ್ಘಾಟನೆ: ಬಿ.ಆರ್. ಅಯ್ಯರ್, ಅಧ್ಯಕ್ಷತೆ: ಎ.ಎಸ್. ಕಿರಣ್ ಕುಮಾರ್, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಸಂಜೆ 6



ಎ.ಎಸ್. ಕಿರಣ್ ಕುಮಾರ್


ಅಂತರರಾಷ್ಟ್ರೀಯ ಇಂಪ್ಲಾಂಟೇಷನ್ ತಜ್ಞರ ಸಮ್ಮೇಳನ ಉದ್ಘಾಟನೆ: ಡಾ. ಎಂ.ಸಿ. ಸುಧಾಕರ್, ಅತಿಥಿಗಳು: ಜಯಕರ ಎಸ್.ಎಂ., ಡಾ. ಶಿವಶರಣ ಕೆ., ಡಾ. ರಂಗನಾಥ್ ವಿ., ಸ್ಥಳ: ಕಾನ್ಕರ್ಡ್ ಹೋಟೆಲ್, ಟ್ರಿನಿಟಿ ವೃತ್ತ, ಸಂಜೆ 6.45

‘ಬೇರ ಕಲ್ಲಡ್ಕದವರ ಕಥೆಯಲ್ಲ’



ಹರ್ಷಿಕಾ ಪೂಣಚ್ಚ

‘ಪ್ರೀತಿ ಇಲ್ಲದ ಮೇಲೆ’, ‘ಚಿಟ್ಟೆ ಹೆಜ್ಜೆ’ಯಂತಹ ಧಾರಾವಾಹಿಗಳನ್ನು ನೀಡಿದ ನಿರ್ದೇಶಕ ವಿನು ಬಳಂಜ ಇದೀಗ ‘ಬೇರ’ ಚಿತ್ರದ ಮೂಲಕ ಹಿರಿತೆರೆಗೆ ಕಾಲಿಟ್ಟಿದ್ದಾರೆ. ಚಿತ್ರ ಇಂದು(ಜೂ.16) ತೆರೆ ಕಾಣುತ್ತಿದೆ. ಅಧಿಕಾರಕ್ಕಾಗಿ ಹಣದ ವ್ಯಾಪಾರಕ್ಕಿಳಿದವರ ಸುತ್ತಲೂ ಹೆಣೆದ ಕಥೆಯ ಕುರಿತು ಬಳಂಜ ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ...



ವಿನು ಬಳಂಜ

ವಿನಾಯಕ ಕೆ.ಎಸ್

- **‘ಬೇರ’ ಶೀರ್ಷಿಕೆ ಅರ್ಥವೇನು? ಇದು ಯಾವುದಕ್ಕೆ ಸಂಬಂಧಿಸಿದ ಕಥೆ?**

ಕರಾವಳಿಯಲ್ಲಿ ‘ಬೇರ’ ಎಂದರೆ ವ್ಯಾಪಾರ. ಇದು ಸಾವಿನ ವ್ಯಾಪಾರದ ಕಥೆ. ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಅಮಾಯಕರ ಕೊಲೆಗಳ ಕುರಿತಾದ ಕಥೆ. ಬೇರೆ ಬೇರೆ ಕಾರಣಕ್ಕೆ, ಅಜೆಂಡಾಗಳಿಗೆ, ನಾಯಕತ್ವಕ್ಕಾಗಿ, ಧಾರ್ಮಿಕ ಕಾರಣಗಳಿಗಾಗಿ ಕೊಲೆಗಳಾಗುತ್ತಿವೆ. ಕರಾವಳಿಯಲ್ಲಿ ಭಯೋತ್ಪಾದನೆಯ ಸ್ಲೀಪರ್ ಸೆಲ್‌ಗಳಿವೆ. ಕೋಮು ಗಲಭೆಯೊಂದಿಗೆ ಕಥೆ ಸಂಬಂಧ ಹೊಂದಿದೆ.

- **ಕಲ್ಲಡ್ಕದಲ್ಲಿ ಚಿತ್ರೀಕರಣವಾಗಿರುವುದು ಕಥೆಯ ಭಾಗವೇ?**

ಇಡೀ ಚಿತ್ರ ಬೆಳ್ತಂಗಡಿ, ಕಲ್ಲಡ್ಕ, ಬೆಂಗಳೂರಿನಲ್ಲಿ ಚಿತ್ರೀಕರಣಗೊಂಡಿದೆ. ಕಲ್ಲಡ್ಕದಲ್ಲಿ ಮ್ಯೂಸಿಯಂ ಇದೆ. ಅಲ್ಲೊಂದು ದೇವರ ಕಂಬವಿದೆ. ಅದು ಕಥೆಯ ಭಾಗ. ಹೀಗಾಗಿ ಅಲ್ಲಿ ಚಿತ್ರೀಕರಣವಾಗಿದೆ. ಎಲ್ಲರೂ ಕಲ್ಲಡ್ಕ ಎಂದಕೂಡಲೇ ಸ್ಥಳೀಯ ನಾಯಕರಾದ ಪ್ರಭಾಕರ ಭಟ್ಟರ ಕುರಿತಾದ ಕಥೆಯೆಂದು ಭಾವಿಸುತ್ತಾರೆ. ಎಲ್ಲರೂ ಅದನ್ನೇ ಕೇಳುತ್ತಾರೆ. ಆದರೆ ಕಥೆಗೂ ಅವರಿಗೂ ಯಾವ ಸಂಬಂಧವೂ ಇಲ್ಲ.

- **ಈ ಚಿತ್ರದಿಂದ ಸಾಮಾನ್ಯ ಪ್ರೇಕ್ಷಕ ಏನು ನಿರೀಕ್ಷಿಸಬಹುದು?**

ಒಳ್ಳೆ ವ್ಯಾಪಾರ ಮತ್ತು ಕೆಟ್ಟ ವ್ಯಾಪಾರದ ನಡುವಿನ ಭಿನ್ನತೆ ಗೊತ್ತಾಗುತ್ತದೆ. ಉತ್ತಮ ವಿಷಯ ಹೊಂದಿರುವ ಸಿನಿಮಾ. ಭಾವನೆಗಳ ಬಗ್ಗೆ ಮಾತಾಡುತ್ತದೆ. ಪರ–ವಿರೋಧ ಬರಬಹುದು. ಅದಕ್ಕೆ ಕಾರಣ ಬೇಕಿಲ್ಲ. ವಿರೋಧಿಸಬೇಕೆಂದುಕೊಂಡವರು ಹೇಗಿದ್ದರೂ ವಿರೋಧಿಸುತ್ತಾರೆ. ಪ್ರೇಕ್ಷಕರು ಬಂದು ನೋಡಿದ ನಂತರ ತೀರ್ಮಾನ ಅವರದ್ದು. ಅವರವರ ಭಾವಕ್ಕೆ ಬಿಟ್ಟಿದ್ದು.

- **ಧಾರಾವಾಹಿ ನಿರ್ದೇಶನದಿಂದ ದೂರ ಸರಿದಿರುವಿರಾ?**

ಹೌದು, ಸದ್ಯಕ್ಕೆ ಧಾರಾವಾಹಿ ನಿರ್ದೇಶನ ಮಾಡುತ್ತಿಲ್ಲ. ಹಾಗಂತ ಧಾರಾವಾಹಿಯಿಂದ ದೂರ ಸರಿದಿರುವೆ ಎಂದಲ್ಲ. ಸಿನಿಮಾಗಳತ್ತಲೇ ಹೆಚ್ಚು ಗಮನ ಹರಿಸಿದ್ದೇನೆ. ಇನ್ನೊಂದಷ್ಟು ಉತ್ತಮ ಕಥೆಗಳನ್ನು ಹಿರಿತೆರೆಗೆ ತರಬೇಕೆಂಬ ಕನಸಿದೆ.

- **ನಿಮ್ಮ ಹಿಂದಿನ ಧಾರಾವಾಹಿಗಳಂತೆ ಈ ಸಿನಿಮಾದಲ್ಲಿಯೂ ದೃಶ್ಯ ವೈಭವ ನಿರೀಕ್ಷಿಸಬಹುದಾ?**

ಬಹಳ ಇತಿಮಿತಿಯೊಂದಿಗೆ ಮಾಡಿದ ಸಿನಿಮಾ. ಹೀಗಾಗಿ ಗಟ್ಟಿಯಾದ ಕಂಟೆಂಟ್ ಹೊಂದಿದೆ ಎಂದಷ್ಟೇ ಹೇಳಬಲ್ಲೆ. ಮೇಕಿಂಗ್ ಕುರಿತು ಹೆಚ್ಚು ಮಾತನಾಡುವುದಿಲ್ಲ. ಪಾತ್ರವರ್ಗ ಉತ್ತಮವಾಗಿದೆ. ಕಥೆಗೆ ಅಗತ್ಯವಿರುವಷ್ಟು ದೃಶ್ಯ ವೈಭವ ಖಂಡಿತ ಕಾಣಿಸುತ್ತದೆ.

- **ಹಿಂದಿನ ಸಿನಿಮಾ ‘ನಾಥೂರಾಮ್’ ಯಾವ ಹಂತದಲ್ಲಿದೆ?**

ಆ ಸಿನಿಮಾ ಮುಂದುವರಿದಿಲ್ಲ. ಮುಹೂರ್ತವಾಗಿ ಕೆಲವಷ್ಟು ದಿನ ಚಿತ್ರೀಕರಣಗೊಂಡಿತ್ತು. ಅದೇ ಹಂತದಲ್ಲಿಯೇ ನಿಂತಿದೆ. ಕೋವಿಡ್ ಹಾಗೂ ಕೆಲವು ಕಾರಣಗಳಿಂದ ಆ ಯೋಜನೆ ನಿಂತಿತ್ತು. ಮುಂದಕ್ಕೆ ಏನಾಗುತ್ತದೆ ಗೊತ್ತಿಲ್ಲ. ಆದರೆ ಬಹಳ ಒಳ್ಳೆಯ ಕಥೆ. ಅದು ಸಾಯಬಾರದು. ಅದಕ್ಕೆ ಜೀವ ಸಿಗಬಹುದೆಂಬ ನಂಬಿಕೆ ಇದೆ.

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

‘ಹೊಡಿರೆಲೆ ಹಲಗಿ’ ಎಂದ ನಿಶ್ವಿಕಾ!

‘ಗುರುಶಿಷ್ಯರು’ ಸಿನಿಮಾದಲ್ಲಿ ‘ಆಣೆ ಮಾಡಿ ಹೇಳುತೀನಿ’ ಎಂದು ಕುಣಿದಿದ್ದ ನಟಿ ನಿಶ್ವಿಕಾ ನಾಯ್ಡು, ಇದೀಗ ಯೋಗರಾಜ್ ಭಟ್ ಅವರ ‘ಗರಡಿ’ಯಲ್ಲಿ ಐಟಂ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ‘ಹೊಡಿರೆಲೆ ಹಲಗಿ’ ಎನ್ನುತ್ತಾ ಪ್ರೇಕ್ಷಕರೆದುರಿಗೆ ಬಂದಿದ್ದಾರೆ.

‘ಗರಡಿ’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಚಿತ್ರದ ಪ್ರಚಾರ ಕಾರ್ಯ ಆರಂಭಿಸಿರುವ ಚಿತ್ರತಂಡ ಐಟಂ ಹಾಡೊಂದನ್ನು ರಿಲೀಸ್ ಮಾಡಿದೆ. ಯಶಸ್ ಸೂರ್ಯ ಹಾಗೂ ಸೋನಲ್ ಮೊಂತೆರೋ ಜೋಡಿಯಾಗಿ ನಟಿಸಿರುವ ಈ ಚಿತ್ರ ಜುಲೈ ಅಥವಾ ಆಗಸ್ಟ್‌ನಲ್ಲಿ ತೆರೆಕಾಣಲಿದೆ. ನಿಶ್ವಿಕಾ ನಾಯ್ಡು ಹೆಜ್ಜೆ ಹಾಕಿರುವ ಈ ಹಾಡನ್ನು ನಟ ಶಿವರಾಜ್‌ಕುಮಾರ್ ಬಿಡುಗಡೆಗೊಳಿಸಿದರು.ಸಾಲು ಸಾಲು ಹಿಟ್ ಹಾಡುಗಳನ್ನು ನೀಡಿರುವ ಯೋಗರಾಜ್ ಭಟ್–ವಿ.ಹರಿಕೃಷ್ಣ ಕಾಂಬಿನೇಷನ್‌ನಲ್ಲೇ ಈ ಹಾಡೂ ಮೂಡಿಬಂದಿದೆ. ‘ಹೊಡಿರೆಲೆ ಹಲಗಿ’ ಹಾಡಿಗೆ ಭಟ್ರ ಸಾಹಿತ್ಯವಿದ್ದು, ವಿ.ಹರಿಕೃಷ್ಣ ಸಂಗೀತ ನೀಡಿದ್ದಾರೆ.

‘ಗರಡಿ’ ಚಿತ್ರವನ್ನು ನಟ ಬಿ.ಸಿ.ಪಾಟೀಲ್ ಅವರ ಪತ್ನಿ ವನಜಾ ಪಾಟೀಲ್ ಹಾಗೂ ಪುತ್ರಿ ಸೃಷ್ಟಿ ಪಾಟೀಲ್ ನಿರ್ಮಾಣ ಮಾಡಿದ್ದಾರೆ. ಸಿನಿಮಾದ ಮಾರ್ಕೆಟಿಂಗ್ ಜವಾಬ್ದಾರಿಯನ್ನು ರಿಷಬ್ ಶೆಟ್ಟಿ ಅವರ ಕೆರಾಡಿ ಸ್ಟುಡಿಯೋಸ್ ವಹಿಸಿಕೊಂಡಿದೆ. ಚಿತ್ರದಲ್ಲಿ ರವಿಶಂಕರ್ ಖಳನಟನಾಗಿ ನಟಿಸಿದ್ದು, ಬಿ.ಸಿ.ಪಾಟೀಲ್ ಅವರೂ ‘ಕೋರಾಪಿಟ್ ರಂಗಪ್ಪ’ ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ.

‘ಊರನ್ನು ಕಾಯುವ ಸ್ಥಳ ‘ಗರಡಿ’ಯಾಗಿತ್ತು. ಆಗಿನ ಕಾಲದ ಪೊಲೀಸ್ ಠಾಣೆ ಎಂದೇ ಇದನ್ನು ಕರೆಯಬಹುದು. ಈ ಸಿನಿಮಾದ ಕಥೆ ಏಕಲವ್ಯ–ದ್ರೋಣನ ಕಥೆಯಂತೆ ಇದೆ. ನಾಯಕನನ್ನು ಕಾಪಾಡುವುದೇ ಕುಸ್ತಿ. ಗುರು ಮತ್ತು ಶಿಷ್ಯ, ಕುಸ್ತಿಪಟು ಮತ್ತು ಸಮಾಜದ ಸಂಬಂಧವನ್ನು ಕಥಾಹಂದರ ಹೊತ್ತಿದೆ’ ಎನ್ನುತ್ತಾರೆ ಯೋಗರಾಜ್ ಭಟ್. ‘ಈಗೇನು ಮಾಸ್ ಸಿನಿಮಾ’ ಎನ್ನುವ ಪ್ರಶ್ನೆಗೆ, ‘ಪ್ರತ್ಯೇಕವಾಗಿ ಮಾಸ್–ಕ್ಲಾಸ್ ಪ್ರೇಕ್ಷಕರು ಎಂಬುವುದೇ ಇಲ್ಲ. ಮಾಸ್ ಪ್ರೇಕ್ಷಕರೇ ‘ಮುಂಗಾರು ಮಳೆ’ ಹಿಟ್ ಮಾಡಿದರು’ ಎನ್ನುತ್ತಾ ಹಲಗಿ ಹೊಡೆದರು.



ಗರಡಿ
ನಿಶ್ವಿಕಾ ನಾಯ್ಡು

ಕಾಮಿಡಿ ಕಿಲಾಡಿಗಳ ಆಫ್‌ಲೈನ್ ಶೋಭನ!



ಆನ್‌ಲೈನ್ ಮದುವೆ...
ಜಗಪ್ಪ, ಸುಶ್ಮಿತಾ

ಖಾಸಗಿ ವಾಹಿನಿಗಳಲ್ಲಿ ಪ್ರಸಾರವಾಗುವ ‘ಗಿಚ್ಚಿ ಗಿಲಿ ಗಿಲಿ’, ‘ಮಜಾಭಾರತ’, ‘ಕಾಮಿಡಿ ಕಿಲಾಡಿಗಳು’ ಹಾಸ್ಯ ಕಾರ್ಯಕ್ರಮದ ಬಹುತೇಕ ಕಲಾವಿದರು ಅಭಿನಯಿಸಿರುವ ‘ಆನ್‌ಲೈನ್ ಮದುವೆ, ಆಫ್‌ಲೈನ್ ಶೋಭನ’ ಚಿತ್ರ ಬಿಡುಗಡೆಗೆ ಸಜ್ಜಾಗಿದೆ.

ಅಪ್ಸರ ಮೂವೀಸ್ ಸಿನಿಮಾ ನಿರ್ಮಾಣ ಮಾಡಿದೆ. ಈ ಹಿಂದೆ ‘ಗರ್ಭದಗುಡಿ’, ‘ಅಕ್ಕಭಾವ ಬಾಮೈದ’ ಇತ್ಯಾದಿ ಚಿತ್ರಗಳನ್ನು ನಿರ್ದೇಶಿಸಿದ್ದ ವೇಂಪಲ್ಲಿ ಬಾವಾಜಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಹಾಸ್ಯ ಪ್ರಧಾನ ಕಥಾಹಂದರ ಹೊಂದಿದ ಚಿತ್ರವಿದು.

ಜಗಪ್ಪ, ಸುಶ್ಮಿತ, ಸೀರುಂಡೆ ರಘು, ಗಜೇಂದ್ರ, ರಾಘವಿ ಸೇರಿದಂತೆ ಖಾಸಗಿ ವಾಹಿನಿಗಳ ಹಾಸ್ಯ ಕಾರ್ಯಕ್ರಮದ ಅನೇಕ ಕಲಾವಿದರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ‘ಈಗಿನ ಅಗತ್ಯಕ್ಕೆ ತಕ್ಕಂತೆ ಹಾಸ್ಯ, ಮನರಂಜನೆಯ ಕಥಾಹಂದರ ಹೊಂದಿರುವ ಚಿತ್ರ ಇದಾಗಿದ್ದು, ಕುಟುಂಬ ಸಮೇತ ಕುಳಿತು ವೀಕ್ಷಿಸಬಹುದು. ಮಾತಿನ ಭಾಗವನ್ನು ಬೆಂಗಳೂರು ಹಾಗೂ ಅತ್ತಿಬೆಲೆ ಸುತ್ತಮುತ್ತ ಚಿತ್ರೀಕರಿಸಲಾಗಿದೆ. ಹಾಡುಗಳನ್ನು ರೆಸಾರ್ಟ್ ಮತ್ತು ಪಬ್‌ಗಳಲ್ಲಿ ಚಿತ್ರೀಕರಿಸಿದ್ದೇವೆ. ಈಗಾಗಲೇ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ’ ಎಂದು ನಿರ್ದೇಶಕ ವೇಂಪಲ್ಲಿ ಬಾವಾಜಿ ಹೇಳಿದರು. ಬಾಲು ಅವರ ಕ್ಯಾಮೆರಾ, ಅಲೆಕ್ಸ್ ಕಲಾವಿದರ ಸಂಗೀತ ಈ ಚಿತ್ರಕ್ಕಿದೆ.

‘ಒಂದೇ ಮನೆಯ ವಾಸ ವಿಚ್ಛೇದನಕ್ಕೆ ಅಡ್ಡಿಯಾಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಸ್ಪರ ಸಮ್ಮತಿಯ ಮೇರೆಗೆ ವಿಚ್ಛೇದನ ಪಡೆಯಲು ಬಯಸುವ ಪತಿ-ಪತ್ನಿ ಒಂದೇ ಮನೆಯಲ್ಲಿ ನೆಲೆಸಿದ್ದಾರೆ ಎಂದ ಮಾತ್ರಕ್ಕೆ ಅವರ ವಿಚ್ಛೇದನಕ್ಕೆ ಅನುಮತಿ ನಿರಾಕರಿಸಲಾಗದು’ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಪ್ರಕರಣವೊಂದರಲ್ಲಿ ದಂಪತಿಗೆ ವಿಚ್ಛೇದನ ನಿರಾಕರಿಸಿ ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಿದೆ.

ಈ ಸಂಬಂಧ ಬೆಂಗಳೂರಿನ ದಂಪತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

’ಸಾಮಾನ್ಯವಾಗಿ ದಂಪತಿಯ ನಡುವೆ ವೈಮನಸ್ಸು ಉಂಟಾದಾಗ ಪರಸ್ಪರ ವಾದ ಅಥವಾ ಜಗಳ ಸಾಮಾನ್ಯ. ಈ ಪ್ರಕರಣದಲ್ಲಿ ದಂಪತಿ ವಿಚ್ಛೇದನ ಬಯಸಿದ್ದರೂ ಒಂದೇ ಮನೆಯಲ್ಲಿ ನೆಲೆಸಿರುವುದು ಅವರ ಸುಸಂಸ್ಕೃತಿಯನ್ನು ತೋರಿಸುತ್ತದೆ‘ ಎಂದು ಅಭಿಪ್ರಾಯಪಟ್ಟಿರುವ ಪೀಠ, ಪ್ರಕರಣವನ್ನು ಪುನಃ ಕೌಟುಂಬಿಕ ನ್ಯಾಯಾಲಯಕ್ಕೆ ಹಿಂದಿರುಗಿಸಿದೆ.

‘ಹೊಸದಾಗಿ ವಿಚಾರಣೆ ನಡೆಸಿ ರಾಜಿ ಅರ್ಜಿಯ ನಿಯಮಗಳಿಗೆ ಅನುಗುಣವಾಗಿ ಮಧ್ಯಸ್ಥಿಕೆದಾರರ ಸಮಕ್ಷಮದಲ್ಲಿ ಶೀಘ್ರವೇ ಸೂಕ್ತ ಆದೇಶ ಹೊರಡಿಸಿ‘ ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ. ಅಂತೆಯೇ ಇದೇ 23ರಂದು ದಂಪತಿ ಕೌಟುಂಬಿಕ ನ್ಯಾಯಾಲಯದ ಮುಂದೆ ಹಾಜರಾಗುವಂತೆ ನಿರ್ದೇಶಿಸಿದೆ.

ಪರಸ್ಪರ ಒಪ್ಪಿಗೆಯ ವಿಚ್ಛೇದನ ಕೋರಿ ದಂಪತಿ ಸಲ್ಲಿಸಿದ್ದ ಅರ್ಜಿಯನ್ನು ಕೌಟುಂಬಿಕ ನ್ಯಾಯಾಲಯ 2022ರ ಅಕ್ಟೋಬರ್ 15ರಂದು ವಜಾ ಮಾಡಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು.

ಸರ್ಕಾರಕ್ಕೆ ಹೋರಾಟದ ಎಚ್ಚರಿಕೆ ಕೊಟ್ಟ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ

ವಿದ್ಯುತ್ ದರ ಇಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ದರ ಏರಿಕೆಯಿಂದ ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಿವೆ. ಸರ್ಕಾರ ಹಿಂದಿನ ದರವನ್ನೇ ಜಾರಿಗೊಳಿಸಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಎಚ್ಚರಿಕೆ ನೀಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಕೆ.ಎನ್. ನರಸಿಂಹಮೂರ್ತಿ, ‘ಜೂನ್ ತಿಂಗಳಲ್ಲಿ ಪ್ರತಿ ಯೂನಿಟ್‌ಗೆ ₹2.89 ವಿದ್ಯುತ್ ದರ ಏರಿಕೆ ಮಾಡಿರುವುದರಿಂದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಹೊರೆಯಾಗಿದೆ. ಜತೆಗೆ ಆಸ್ತಿ ತೆರಿಗೆ ಮತ್ತು ಮಾರ್ಗದರ್ಶಿ ಮೌಲ್ಯ ಹೆಚ್ಚಳವಾಗಲಿದೆ ಎನ್ನುವ ವರದಿಗಳು ಇನ್ನೂ ಹೆಚ್ಚು ಆತಂಕಕಾರಿಯಾಗಿದ್ದು, ಸಣ್ಣ ಉದ್ಯಮಗಳ ಲಾಭದ ಪ್ರಮಾಣವನ್ನು ಮತ್ತಷ್ಟು ಕುಂಠಿತಗೊಳಿಸಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ವಿದ್ಯುತ್ ದರ ಹೆಚ್ಚಿಸುವ ಮೂಲಕ ತನ್ನ ಆದಾಯವನ್ನು ಹೆಚ್ಚಿಸುವ ಸರ್ಕಾರದ ಉದ್ದೇಶ ವಾಸ್ತವವಾಗಿ ಹೆಚ್ಚು ಫಲ ನೀಡುವುದಿಲ್ಲ. ಅನೇಕ ಉದ್ದಿಮೆದಾರರು ವಿದ್ಯುತ್‌ಗಾಗಿ ಎಸ್ಕಾಂಗಳಿಂದ ವಿಮುಖರಾಗಿ ಖಾಸಗಿ ವಲಯದ ವಿದ್ಯುತ್ ಸರಬರಾಜು ಕಂಪನಿಗಳತ್ತ ಮುಖ ಮಾಡಬೇಕಾಗುತ್ತದೆ. ಇಂಧನ ತಜ್ಞರ ಅಂದಾಜಿನ ಪ್ರಕಾರ, ಶೇಕಡವಾರು ಲೆಕ್ಕದಲ್ಲಿ, ಉತ್ಪಾದನಾ ವಲಯದಲ್ಲಿ ಎಸ್ಕಾಂಗಳಿಂದ ವಿದ್ಯುತ್ ಪಡೆಯುವ ಘಟಕಗಳ ಸಂಖ್ಯೆ ಮತ್ತು ಗ್ರಾಹಕರ ಸಂಖ್ಯೆ ಕಡಿಮೆಯಾಗುತ್ತಿದೆ. ಈಗಾಗಲೇ ಈ ವಲಯದ ಆದಾಯ ಶೇ 25 ರಿಂದ ಶೇ 14ಕ್ಕೆ ಕುಸಿದಿದೆ’ ಎಂದು ವಿವರಿಸಿದರು.

‘ಸ್ಥಳೀಯ ಸರ್ಕಾರಿ ಸಂಸ್ಥೆಗಳು ಮತ್ತು ಸರ್ಕಾರ ಬಾಕಿ ಉಳಿಸಿಕೊಂಡಿರುವ ₹11 ಸಾವಿರ ಕೋಟಿ ಸಬ್ಸಿಡಿ ಮೊತ್ತವನ್ನು ಎಸ್ಕಾಂಗಳಿಗೆ ಪಾವತಿಸಬೇಕು. ಇದರಿಂದ ಎಸ್ಕಾಂಗಳು ಸಾಲ ತೆಗೆದುಕೊಳ್ಳುವುದು ಮತ್ತು ಬಡ್ಡಿ ಪಾವತಿ ಮಾಡುವುದು ಕಡಿಮೆಯಾಗಿ ಬಳಕೆದಾರರ ಮೇಲಿನ ಹೊರೆ ಕಡಿಮೆಯಾಗಲಿದೆ’ ಎಂದು ಸಲಹೆ ನೀಡಿದರು.

‘ಪ್ರತಿ ದಿನ 2,238 ಮಿಲಿಯನ್ ಯೂನಿಟ್ ವಿದ್ಯುತ್ ಬಳಕೆ’

‘ರಾಜ್ಯದಲ್ಲಿ ಸುಮಾರು 5.65 ಲಕ್ಷಕ್ಕೂ ಹೆಚ್ಚು ಎಂಎಸ್‌ಎಂಇಗಳಿದ್ದು, ಪ್ರತಿದಿನ 2,238 ಮಿಲಿಯನ್ ಯೂನಿಟ್ ವಿದ್ಯುತ್ ಬಳಸುತ್ತಿವೆ’ ಎಂದು ಕೆ.ಎನ್. ನರಸಿಂಹಮೂರ್ತಿ ತಿಳಿಸಿದರು.

‘ರಾಜ್ಯದಲ್ಲಿ ಎಂಎಸ್‌ಎಂಇಗಳ ವಿದ್ಯುತ್ ಬಳಕೆಯು ಸುಮಾರು ಶೇಕಡ 3.51ರಷ್ಟಿದೆ. ಈ ಉದ್ಯಮ ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ಶೇ 8ರಷ್ಟು ಮಾನವ ಶಕ್ತಿಯನ್ನು ಬಳಸಲಾಗುತ್ತದೆ. ವಿದ್ಯುತ್ ದರ ಹೆಚ್ಚಳವಾದರೆ ಈ ಉದ್ಯಮದ ಮೇಲೆ ಅವಲಂಬಿತವಾಗಿರುವ ಸುಮಾರು 65 ಲಕ್ಷ ಜನರ ಉದ್ಯೋಗಕ್ಕೆ ಸಂಕಷ್ಟ ಬರಲಿದೆ. ಸರ್ಕಾರವು ಅಂತಹ ದೊಡ್ಡ ವರ್ಗದ ಜನರ ಮತ್ತು ವಿಶೇಷವಾಗಿ ತೆರಿಗೆ ಆದಾಯದ ಪ್ರಮುಖ ಭಾಗವನ್ನು ಕೊಡುಗೆ ನೀಡುವ ಜನರ ಕಾಳಜಿಯನ್ನು ನಿರ್ಲಕ್ಷಿಸಬಾರದು’ ಎಂದು ಒತ್ತಾಯಿಸಿದ್ದಾರೆ.

ಮಲ್ಲಮ್ಮನ ಬೆಳವಡಿ: ಹೆಸ್ಕಾಂ ಕಚೇರಿಗೆ ಬೀಗ ಹಾಕಿದ ರೈತರು

ಪ್ರಜಾವಾಣಿ ವಾರ್ತೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ವಿದ್ಯುತ್ ದರ ಹೆಚ್ಚಳ ಖಂಡಿಸಿ ವಿವಿಧ ಗ್ರಾಮಗಳ ರೈತರು ಗುರುವಾರ ತಾಲ್ಲೂಕಿನ ಮಲ್ಲಮ್ಮನ ಬೆಳವಡಿ ಗ್ರಾಮದ ಹೆಸ್ಕಾಂ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ದೊಡವಾಡ, ಗುಡಿಕಟ್ಟಿ, ನನುಗುಂಡಿಕೊಪ್ಪ, ಚಿಕ್ಕಬೆಳ್ಳಿಕಟ್ಟಿ ಗ್ರಾಮಗಳ ರೈತರು ಬೆಳವಡಿಯಲ್ಲಿ ಸಮಾವೇಶಗೊಂಡು ಪ್ರತಿಭಟನೆ ನಡೆಸಿದರು.

ಸೋಮೇಶ್ವರ ಸಕ್ಕರೆ ಕಾರ್ಖಾನೆ ನಿರ್ದೇಶಕ ನಿಂಗಪ್ಪ ಚೌಡನ್ನವರ, ‘ರೈತರ ಪಂಪ್‌ಸೆಟ್‌ಗಳಿಗೆ ರಾತ್ರಿ ತ್ರೀ ಫೇಸ್ ವಿದ್ಯುತ್ ಮಾತ್ರ ಪೂರೈಸುತ್ತಿದ್ದಾರೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಹೋರಾಟ ಮಾಡಲಾಗಿತ್ತು. ಆರು ತಿಂಗಳಾದರೂ ಸಮಸ್ಯೆ ಬಗೆಹರಿಸಿಲ್ಲ. ಈಗ, ವಿದ್ಯುತ್ ದರ ಏಕಾಏಕಿ ಹೆಚ್ಚಿಸಿ ರೈತರಿಗೆ ಗಾಯದ ಮೇಲೆ ಬರೆ ಎಳೆದಿದ್ದಾರೆ’ ಎಂದರು.

ದರ ಏರಿಕೆ ಖಂಡಿಸಿ ಪ್ರತಿಭಟನೆ (ಧಾರವಾಡ ವರದಿ): ವಿದ್ಯುತ್ ದರ ಏರಿಕೆ ಖಂಡಿಸಿ ಉತ್ತರ ಕರ್ನಾಟಕ ಸಣ್ಣ ಕೈಗಾರಿಕಾ ಸಂಘದವರು ಜಿಲ್ಲಾಧಿಕಾರಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

‘ವಿದ್ಯುತ್ ದರ ಏರಿಕೆಯಿಂದ ಕೈಗಾರಿಕೋದ್ಯಮ ಬಂದ್ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದಲ್ಲಿ 5.62 ಲಕ್ಷ ಸಣ್ಣ ಕೈಗಾರಿಕೆಗಳಿವೆ. ಈಗ ಅನಿಯಮಿತವಾಗಿ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ವಿದ್ಯುತ್ ದರ ಏರಿಕೆ ಮಾಡಿ ತೊಂದರೆ ಕೊಡಬಾರದು’ ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಪತ್ರಿಕೋದ್ಯಮ ಡಿಪ್ಲೊಮಾಗೆ ಪ್ರವೇಶ

ಬೆಂಗಳೂರು: ಪ್ರಾಯೋಗಿಕ ಪತ್ರಿಕೋದ್ಯಮ ತರಬೇತಿ ಸಂಸ್ಥೆ ’ಆಲ್ಮಾ ಮೀಡಿಯಾ ಸ್ಕೂಲ್’ ಪ್ರಾಯೋಗಿಕ ಪತ್ರಿಕೋದ್ಯಮ ಮತ್ತು ಮಾಧ್ಯಮ ನಿರ್ವಹಣೆ ವಿಷಯದಲ್ಲಿ 6 ತಿಂಗಳ ಡಿಪ್ಲೊಮಾ ಕೋರ್ಸ್‌ಗೆ ಪ್ರವೇಶ ಪ್ರಕ್ರಿಯೆ ಆರಂಭಿಸಿದೆ.

ಜುಲೈನಿಂದ ಹೊಸ ಬ್ಯಾಚ್‌ನ ತರಗತಿಗಳು ಆರಂಭವಾಗಲಿವೆ. ಮುದ್ರಣ, ಟಿ.ವಿ, ರೇಡಿಯೊ ಮತ್ತು ಡಿಜಿಟಲ್ ಮಾಧ್ಯಮಗಳ ಸಮಗ್ರ ಕಲಿಕೆ ಇದಾಗಿದೆ. ಪಿಯು ಮತ್ತು ಪದವಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಆಸಕ್ತರು https://forms.gle/uM5mTj6fTABs7Hkp6ನಲ್ಲಿ ಆನ್‌ಲೈನ್ ಅರ್ಜಿ ತುಂಬಿ, ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ 74069 46667, 74069 46668 ಸಂಪರ್ಕಿಸಿ.



ಹೊತ್ತಿ ಉರಿದ ಶಾಲಾ ಬಸ್...

ವಿಜಯನಗರ ಜಿಲ್ಲೆಯ ಕೊಟ್ಟೂರು ಪಟ್ಟಣದ ತರಳಬಾಳು ಶಿಕ್ಷಣ ಸಂಸ್ಥೆಗೆ ಸೇರಿದ ಶಾಲಾ ವಾಹನಕ್ಕೆ ಗುರುವಾರ ಕೆ. ಅಯ್ಯನಹಳ್ಳಿ ಬಳಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಆತಂಕಕ್ಕೆ ಕಾರಣವಾಗಿತ್ತು. ತಕ್ಷಣವೇ ಚಾಲಕ ಹಾಗೂ ಶಾಲಾ ಸಿಬ್ಬಂದಿ ಮಕ್ಕಳನ್ನು ವಾಹನದಿಂದ ಇಳಿಸಿ ಭಾರಿ ಅನಾಹುತದಿಂದ ಪಾರು ಮಾಡಿದರು

ಮನೆಗೆ ₹7.71 ಲಕ್ಷ ವಿದ್ಯುತ್ ಬಿಲ್!

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಇಲ್ಲಿನ ಉಳ್ಳಾಲಬೈಲ್ ನಿವಾಸಿ ಸದಾಶಿವ ಆಚಾರ್ಯ ಅವರ ಮನೆಗೆ ₹7.71 ಲಕ್ಷ ಮೊತ್ತದ ವಿದ್ಯುತ್ ಬಿಲ್ ನೀಡಲಾಗಿತ್ತು. ಮೀಟರ್ ರೀಡರ್ ಮಾಡಿದ ತಪ್ಪು ಗಮನಕ್ಕೆ ಬರುತ್ತಿದ್ದಂತೆಯೇ ಮೆಸ್ಕಾಂ ಅಧಿಕಾರಿಗಳು ತಪ್ಪನ್ನು ಸರಿಪಡಿಸಿ, ₹2,833 ಮೊತ್ತದ ಪರಿಷ್ಕೃತ ಬಿಲ್ ನೀಡಿದ್ದಾರೆ.

ಮನೆಗೆ ಬಂದ ಮೀಟರ್ ರೀಡರ್ ಬಿಲ್ ನೀಡಿದರು. ಅದರಲ್ಲಿ 99,338 ಯೂನಿಟ್ ಖರ್ಚಾಗಿದ್ದು, ಬಿಲ್ ಮೊತ್ತ ₹7,71,072 ನಮೂದಿಸಲಾಗಿತ್ತು. ‘ನಮಗೆ ತಿಂಗಳಿಗೆ ಸರಾಸರಿ ಮೂರು ಸಾವಿರ ಬಿಲ್ ಬರುತ್ತಿತ್ತು. ನಾವು ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಬಿಲ್ ಪಾವತಿಸಿದ್ದೇವೆ. ಈಗ ಇಷ್ಟೊಂದು ಬಿಲ್ ಬರಲು ಹೇಗೆ ಸಾಧ್ಯ ಎಂದು ಮೀಟರ್ ರೀಡರ್ ಅವರನ್ನು ಪ್ರಶ್ನಿಸಿದೆವು. ನನಗೆ ಗೊತ್ತಿಲ್ಲ. ಮೆಸ್ಕಾಂ ಕಚೇರಿಗೆ ಹೋಗಿ ವಿಚಾರಿಸಿ ಎಂದು ಅವರು ಹೇಳಿ ಹೋದರು’ ಎಂದು ಮನೆ ಮಾಲೀಕ ಸದಾಶಿವ ಆಚಾರ್ಯ ತಿಳಿಸಿದರು.

ಈ ಪ್ರಮಾದ ತಿಳಿದ ಅಧಿಕಾರಿಗಳು, ಸದಾಶಿವ ಆಚಾರ್ಯ ಅವರಿಗೆ ಪರಿಷ್ಕೃತ ಬಿಲ್ ತಲುಪಿಸಿದರು.

‘ಏಜೆನ್ಸಿಗಳ ಮೂಲಕ ಮೀಟರ್ ರೀಡಿಂಗ್ ಮಾಡಿಸಿ ಬಿಲ್ ನೀಡಲಾಗುತ್ತಿದೆ. ಮೀಟರ್ ರೀಡರ್ ಮಾಡಿದ ತಪ್ಪಿನಿಂದಾಗಿ ಹೀಗೆ ವಿದ್ಯುತ್ ಬಿಲ್ ಮುದ್ರಣವಾಗಿತ್ತು. ಬಿಲ್‌ನಲ್ಲಿ ಲೋಪ ಕಂಡುಬಂದರೆ ಅದನ್ನು ಗ್ರಾಹಕರಿಗೆ ಕೊಡುವಂತಿಲ್ಲ. ಆದರೂ, ಆತ ಕೊಟ್ಟಿದ್ದಾರೆ. ಮಾಹಿತಿ ಲಭಿಸಿದ ತಕ್ಷಣ ಪರಿಷ್ಕೃತ ಬಿಲ್ ಅನ್ನು ಸದಾಶಿವ ಅವರ ಮನೆಗೆ ತಲುಪಿಸಿದ್ದೇವೆ’ ಎಂದು ಮೆಸ್ಕಾಂನ ಉಳ್ಳಾಲ ಉಪ ವಿಭಾಗದ ಕಾರ್ಯ ನಿರ್ವಾಹಕ ಎಂಜಿನಿಯರ್ ದಯಾನಂದ ತಿಳಿಸಿದರು.

ಪಿಎಸ್‌ಐ ನೇಮಕಾತಿ ಅಕ್ರಮ ಆರೋಪ; ಏಳು ರಿಟ್ ಅರ್ಜಿಗಳ ವಿಚಾರಣೆ

ಪರಿಹಾರ ಕ್ರಮಕ್ಕೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಗಾಗಿ ನಡೆದ ಪರೀಕ್ಷೆಯಲ್ಲಿ ಆಯ್ಕೆಯಾದವರ ಪೈಕಿ ಆರೋಪಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದವರಿಗೆ ಒಂದು ಆಬ್ಜೆಕ್ಟಿವ್ ಪರೀಕ್ಷೆ ನಡೆಸಿ ಹುದ್ದೆಗೆ ಪರಿಗಣಿಸುವ ಸಾಧ್ಯತೆ ಕುರಿತು ಸರ್ಕಾರದಿಂದ ಹೈಕೋರ್ಟ್ ಮಾಹಿತಿ ಕೇಳಿದೆ.

ನೇಮಕಾತಿಯಲ್ಲಿ ಅಕ್ರಮದ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಈ ಮೊದಲು ನಡೆಸಿದ್ದ ಲಿಖಿತ ಪರೀಕ್ಷೆ ರದ್ದುಪಡಿಸಿ, ಮರುಪರೀಕ್ಷೆ ನಡೆಸಲು ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸಬೇಕು. ‘ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ, ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು‘ ಎಂದು ಕೋರಿ ಆಯ್ಕೆಯಾಗಿದ್ದ 100ಕ್ಕೂ ಅಧಿಕ ಅಭ್ಯರ್ಥಿಗಳು ಸಲ್ಲಿಸಿದ್ದ ಏಳು ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಜಿ. ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ನ್ಯಾಯಾಲಯದ ಈ ಹಿಂದಿನ ನಿರ್ದೇಶನದಂತೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂಬಂಧಿಸಿದ (ಆರೋಪಕ್ಕೆ ಗುರಿಯಾದವರನ್ನು ಹೊರತುಪಡಿಸಿ) ತನಿಖಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ವರದಿ ಪರಿಶೀಲಿಸಿದ ನ್ಯಾಯಪೀಠ, ದೋಷಾರೋಪ ಪಟ್ಟಿಯಲ್ಲಿ ಹೆಸರು ಉಲ್ಲೇಖ ಮಾಡದೇ ಇರುವ ಅಭ್ಯರ್ಥಿಗಳಿಗೆ ಆಬ್ಜೆಕ್ಟಿವ್ ಪರೀಕ್ಷೆ ನಡೆಸಿ, ಅದರ ಆಧಾರದಲ್ಲಿ ಅವರನ್ನು ಹುದ್ದೆಗೆ ಪರಿಗಣಿಸಲು ಸಾಧ್ಯವೇ ಎಂದು ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಶಶಿಕಿರಣ ಶೆಟ್ಟಿ ಈ ಬಗ್ಗೆ , ಈ ಬಗ್ಗೆ ಸರ್ಕಾರದಿಂದ ಮಾಹಿತಿ ಪಡೆದು ಕೋರ್ಟ್‌ಗೆ ತಿಳಿಸುವಂತೆ ಎಜಿಗೆ ಸೂಚಿಸಿ, ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹಿರಿಯ ವಕೀಲರಾದ ಪಿ.ಎಸ್. ರಾಜಗೋಪಾಲ್, ಕೆ.ಎನ್.ಫಣೀಂದ್ರ ಮತ್ತು ಡಿ.ಆರ್.ರವಿಶಂಕರ್ ಹಾಜರಾಗಿದ್ದರು.

ಪ್ರಕರಣವೇನು?: 545 ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ನಡೆದ ಲಿಖಿತ ಪರೀಕ್ಷೆಯಲ್ಲಿ ಅಕ್ರಮದ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಮರುಪರೀಕ್ಷೆ ನಡೆಸುವುದಾಗಿ 2022ರ ಏಪ್ರಿಲ್ 29ರಂದು ಅಂದಿನ ಬಿಜೆಪಿ ಸರ್ಕಾರ ಆದೇಶ ಹೊರಡಿಸಿತ್ತು.

‘ಈ ಆದೇಶ ರದ್ದುಪಡಿಸಬೇಕು. ಕಳಂಕರಹಿತ ಮತ್ತು ಕಳಂಕಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ ಹಿಂದಿನ ಅಧಿಸೂಚನೆ ಪ್ರಕಾರವೇ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ, ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು‘ ಎಂದು ಕೋರಿ ಕೆಲ ಅಭ್ಯರ್ಥಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಮೆಟ್ಟಿಲೇರಿದ್ದರು. ಈ ಅರ್ಜಿಗಳನ್ನು ಕೆಎಟಿ 2022ರ ಜುಲೈ 19ರಂದು ವಜಾಗೊಳಿಸಿತ್ತು. ಅರ್ಜಿದಾರರು ಈ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಅರ್ಜಿಯನ್ನು 2022ರ ಸೆಪ್ಟೆಂಬರ್ 28ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್, ಮರು ಪರೀಕ್ಷೆಗೆ ಮಧ್ಯಂತರ ತಡೆ ನೀಡಿತ್ತು.

‘ಡೇರ್‌ಡೆವಿಲ್ ಮುಸ್ತಾಫ’ನಿಗೆ ತೆರಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕಥೆಯಾಧಾರಿತ ಚಿತ್ರ ‘ಡೇರ್ ಡೆವಿಲ್ ಮುಸ್ತಾಫಾ’ಕ್ಕೆ ರಾಜ್ಯ ಸರ್ಕಾರ ತೆರಿಗೆ ವಿನಾಯಿತಿ ನೀಡಿದೆ.

‘ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿಸಲು ಚಿತ್ರ ಸಹಕಾರಿಯಾಗಿದೆ. ಅದಕ್ಕಾಗಿ ತೆರಿಗೆ ವಿನಾಯಿತಿ ನೀಡಬೇಕು’ ಎಂದು ಚಿತ್ರದ ನಿರ್ದೇಶಕ ಶಶಾಂಕ್ ಸೋಗಾಲ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

ಈ ಕುರಿತು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದು, ‘ತಮ್ಮ ಬರಹ ಮತ್ತು ಬದುಕಿನ ಮೂಲಕ ಒಂದಿಡೀ ತಲೆಮಾರಿನ ಜನರನ್ನು ಪ್ರಭಾವಿಸಿದ ಮತ್ತು ಪ್ರಭಾವಿಸುತ್ತಲೇ ಇರುವ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ಕಥೆಯಾಧಾರಿತ ಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡಿದ್ದೇನೆ. ಇಂದಿನ ಕಾಲಘಟ್ಟಕ್ಕೆ ಬೇಕಿರುವುದು ಸೌಹಾರ್ದ, ಪ್ರೀತಿ, ವಿಶ್ವಾಸಗಳ ಬುನಾದಿಯ ಮೇಲೆ ಸಮಾಜ ಕಟ್ಟುವ ಮನಸ್ಸುಗಳು’ ಎಂದಿರುವ ಅವರು ಚಿತ್ರ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಸಮಸ್ಯೆ ಪರಿಹಾರಕ್ಕೆ ಹೋಮ?

ಮಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರ ಪುತ್ತೂರು ಸಮೀಪದ ಸವಣೂರಿನ ಮೂಲಮನೆಯಲ್ಲಿ ವಿಶೇಷ ಹವನ ನಡೆಯುತ್ತಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ವಿದ್ವಾನ್ ಬಾಲಕೃಷ್ಣ ಆಚಾರ್ಯ ನೇತೃತ್ವದಲ್ಲಿ ಜೂನ್ 11ರಿಂದ ಆರಂಭವಾಗಿರುವ ಹವನವು 18ರವರೆಗೆ ನಡೆಯಲಿದೆ. ನಳಿನ್‌ಕುಮಾರ್ ಬಗ್ಗೆ ನಿರಂತರ ಟೀಕೆಗಳು, ರಾಜ್ಯ ಘಟಕದ ಅಧ್ಯಕ್ಷ ಹುದ್ದೆ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರದ ಟಿಕೆಟ್ ಕೈತಪ್ಪಿ ಹೋಗುವ ಸಾಧ್ಯತೆ ಇಂತಹ ಅನೇಕ ಸಮಸ್ಯೆಗಳ ನಿವಾರಣೆಗೆ ಹವನ ಹಮ್ಮಿಕೊಳ್ಳಲಾಗಿದೆ. ಈ ಧಾರ್ಮಿಕ ಕಾರ್ಯಕ್ಕೆ ಉಳಿದ ಯಾರಿಗೂ ಪ್ರವೇಶ ಇಲ್ಲ. ಗೋಪ್ಯತೆ ಕಾಪಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅನ್ನ ಭಾಗ್ಯ ಯೋಜನೆಗೆ ಅಕ್ಕಿ ಮಾರಾಟ ಸ್ಥಗಿತ • ಬೇರೆ ರಾಜ್ಯ, ಮಾರುಕಟ್ಟೆಯಿಂದ ಖರೀದಿಸಬೇಕಾದ ಅನಿವಾರ್ಯ

ಮೋದಿ ಸರ್ಕಾರದಿಂದ ಪ್ರತೀಕಾರ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದ ಅನ್ನ ಭಾಗ್ಯ ಯೋಜನೆಗೆ ಅಕ್ಕಿ ಮಾರಾಟ ಸ್ಥಗಿತಗೊಳಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಬಡವರ ವಿರೋಧಿ ಹಾಗೂ ದ್ವೇಷಪೂರಿತ ನಿಲುವು ಬಹಿರಂಗಗೊಂಡಿದೆ' ಎಂದು ಕಾಂಗ್ರೆಸ್ ಗುರುವಾರ ವಾಗ್ದಾಳಿ ನಡೆಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಕರ್ನಾಟಕ ರಾಜ್ಯದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, 'ಭಾರತೀಯ ಆಹಾರ ನಿಗಮದ ಬಳಿ ಹೆಚ್ಚುವರಿ ಅಕ್ಕಿ ದಾಸ್ತಾನು ಇದೆ. ಆದರೂ ನಿಗಮವು ಮುಕ್ತ ಮಾರುಕಟ್ಟೆಯಲ್ಲಿ ದೊಡ್ಡ ವ್ಯಾಪಾರಿಗಳಿಗೆ ಅಕ್ಕಿ ಮಾರಲು ಮುಂದಾಗಿದೆ. ಆದರೆ, ಕರ್ನಾಟಕಕ್ಕೆ ಅಕ್ಕಿ ನೀಡಲು ಸಿದ್ಧವಿಲ್ಲ. ಭ್ರಷ್ಟ ಬಿಜೆಪಿಯನ್ನು ಬಡಿದೋಡಿಸಿದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿ ಮತ್ತು ಬಡವರ ವಿರುದ್ಧ ಮೋದಿ ಸರ್ಕಾರ ಪ್ರತೀಕಾರ ತೀರಿಸಿಕೊಳ್ಳುತ್ತಿದೆ' ಎಂದರು.

'ಈ ಯೋಜನೆಯಿಂದ ರಾಜ್ಯದ 1.28 ಕೋಟಿ ಕುಟುಂಬಗಳು, ಸುಮಾರು 4.42 ಕೋಟಿ ಜನರು ಫಲಾನುಭವಿಗಳಾಗಿದ್ದಾರೆ. ಕಾಂಗ್ರೆಸ್ ಸರ್ಕಾರ ಇದಕ್ಕೆ ಬೇಕಾಗುವ ₹11,000 ಕೋಟಿ ನೀಡಲು ಸಿದ್ಧವಿದೆ. ಆದರೂ ಮೋದಿ ಸರ್ಕಾರ ಕೀಳು ಮಟ್ಟದ ರಾಜಕಾರಣ ಮಾಡುತ್ತಿದೆ' ಎಂದು ಕಿಡಿಕಾರಿದರು.

'ಬಿಜೆಪಿ ಸರ್ಕಾರ ಎಷ್ಟೇ ಅಡ್ಡಿಪಡಿಸಿದರೂ ಕಾಂಗ್ರೆಸ್ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿ ಮಾಡಲಿದೆ. ಕೇಂದ್ರದ ಬಡವರ ವಿರೋಧಿ ನೀತಿಯನ್ನು ಕನ್ನಡಿಗರು ಕ್ಷಮಿಸುವುದಿಲ್ಲ' ಎಂದರು.

ಈ ಸಂಬಂಧ ಟ್ವೀಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಅಕ್ಕಿಯನ್ನು ಮಾರಾಟ ಮಾಡದಂತೆ ನಿರ್ದೇಶನ ನೀಡುವ ಮೂಲಕ ಮೋದಿ ಅವರು ಕರ್ನಾಟಕದ ಸೋಲಿನ ಹತಾಶೆಯನ್ನು ಹೊರ ಹಾಕುತ್ತಿದ್ದಾರೆ. ಈ ಮೂಲಕ ಸಮಾಜದ ಕಟ್ಟಕಡೆಯ ವರ್ಗಗಳಿಗೆ ಅನ್ಯಾಯ ಮಾಡುತ್ತಿದ್ದಾರೆ' ಎಂದು ದೂರಿದರು.

'ಬಿಜೆಪಿಗೆ ಮತ ಹಾಕದಿದ್ದರೆ ಕರ್ನಾಟಕಕ್ಕೆ ಮೋದಿಯವರ ಆಶೀರ್ವಾದ ಸಿಗುವುದಿಲ್ಲ' ಎಂದು ಬಿಜೆಪಿ ಅಧ್ಯಕ್ಷ ನಡ್ಡಾ ಅವರು ಹೇಳಿದ್ದಕ್ಕೆ ಅರ್ಥ 'ಇದೇನಾ' ಎಂದು ಅವರು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪ್ರಶ್ನೆಗಳು

- ರಾಜ್ಯದಲ್ಲಿ ಪಕ್ಷದ ಸೋಲಿನಿಂದಾಗಿ ಜನರಿಗೆ ಅನ್ನ ನಿರಾಕರಿಸುವಷ್ಟರ ಮಟ್ಟಿಗೆ ಬಿಜೆಪಿ ಹಾಗೂ ಪ್ರಧಾನಿ ಮೋದಿ ಕುರುಡರಾಗಿದ್ದಾರಾ?
- ಬಿಜೆಪಿ ಹಾಗೂ ಮೋದಿ ಸರ್ಕಾರದ ಬಂಟಬಳಿವಿರುವ ದೊಡ್ಡ ವ್ಯಾಪಾರಿಗಳ ಕೂಟ ಬಡವರ ಅಕ್ಕಿಯನ್ನು ಕಸಿಯಲು ಮುಂದಾಗಿದೆಯೇ?
- ಬಡವರ ವಿರೋಧಿ ಈ ನೀತಿ ಬಗ್ಗೆ ಬಿಜೆಪಿಯ ಬಿ ಟೀಮ್ ಆಗಿರುವ ಜೆಡಿಎಸ್ ಯಾಕೆ ಮೌನವಾಗಿದೆ?
- ಕರ್ನಾಟಕ ರಾಜ್ಯದ ಸಂಸದರು, ಕೇಂದ್ರದ ಮಂತ್ರಿಗಳು ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ಕಂಡು ಮೌನವಾಗಿರುವುದೇಕೆ? ಇಷ್ಟಾದರೂ ಅವರು ಸಂಸದ ಹಾಗೂ ಸಚಿವ ಸ್ಥಾನದಲ್ಲಿ ಒಂದು ದಿನ ಮುಂದುವರಿಯಲು ಯೋಗ್ಯರೇ?
- ಅಕ್ಕಿ ನಿರಾಕರಿಸಿರುವ ವಿಚಾರದಲ್ಲಿ ರಾಜ್ಯ ಬಿಜೆಪಿ ನಾಯಕರು ಬಾಯಿಗೆ ಬೀಗ ಹಾಕಿಕೊಂಡಿರುವುದು ಏಕೆ?

'ಕೇಂದ್ರದ ಮೇಲೆ ಗೂಬೆ ಕೂರಿಸುವ ಕಾಂಗ್ರೆಸ್'

ಬೆಂಗಳೂರು: 'ಅಕ್ಕಿ ಸರಬರಾಜು ವಿಷಯದಲ್ಲಿ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಹುನ್ನಾರ ಮಾಡುತ್ತಿದೆ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಗುರುವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಅಡ್ಡಿಪಡಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿಕೆ ನೀಡುವ ಮೂಲಕ ರಾಜ್ಯದ ಜನರಿಗೆ ಮೋಸ ಮಾಡುತ್ತಿದ್ದಾರೆ' ಎಂದು ದೂರಿದರು.

'ರಾಜ್ಯ ಸರ್ಕಾರ ಗ್ಯಾರಂಟಿ ಹೆಸರಲ್ಲಿ ಮೋಸ ಮಾಡುವುದನ್ನು ಮುಂದುವರಿಸಿದೆ. ಈಗಾಗಲೇ ನೀಡಿರುವ ಭರವಸೆಯಂತೆ ಜುಲೈನಲ್ಲಿ ಜನರಿಗೆ 10 ಕೆ.ಜಿ. ಅಕ್ಕಿ ನೀಡದಿದ್ದರೆ ಜನರನ್ನು ಸಂಘಟಿಸಿ ಹೋರಾಟ ಮಾಡುತ್ತೇವೆ' ಎಂದರು.

ಅಕ್ಕಿ ಕೊಡದ ಕೇಂದ್ರದ ವಿರುದ್ಧ ದೊಡ್ಡ ಹೋರಾಟ: ಡಿಕೆಶಿ

ಮೈಸೂರು: 'ಅಕ್ಕಿಯನ್ನು ಉಚಿತವಾಗಿ ಕೊಡಿ ಎಂದು ನಾವೇನೂ ಕೇಳಿಲ್ಲ. ಆದರೂ, ಕೊಡುವುದಿಲ್ಲ ಎಂದಿರುವ ಕೇಂದ್ರ ಸರ್ಕಾರದ ವಿರುದ್ಧ ದೊಡ್ಡ ಮಟ್ಟದಲ್ಲಿ ಹೋರಾಟವನ್ನೇ ರೂಪಿಸುತ್ತೇವೆ. ಈ ಬಗ್ಗೆ ಶುಕ್ರವಾರ ಬೆಂಗಳೂರಿನಲ್ಲಿ ಮಾಹಿತಿ ನೀಡುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗುರುವಾರ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ ಅಕ್ಕಿಯನ್ನು ಜುಲೈ 1ರಿಂದ ಕೊಡಬೇಕೆಂದು ತೀರ್ಮಾನಿಸಿದ್ದೇವೆ. ನಮ್ಮ ಬಳಿ ಅಕ್ಕಿ ಇಲ್ಲ ಎಂದು ಕೇಂದ್ರ ಸರ್ಕಾರ ಕಾಗದ ಬರೆದಿದೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಛತ್ತೀಸಗಢ, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯದವರ ಜೊತೆ ಮಾತನಾಡಿದ್ದಾರೆ. ಯಾವ ರೀತಿ ಖರೀದಿಸಬೇಕೆಂಬುದನ್ನು ಪರಿಶೀಲಿಸುತ್ತಿದ್ದಾರೆ' ಎಂದು ತಿಳಿಸಿದರು.

'ಕೇಂದ್ರ ಸರ್ಕಾರದ ನಡೆಯನ್ನು ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ. ನಮಗೆ ಕೊಡಬೇಕಾಗುತ್ತದೆಂಬ ಕಾರಣಕ್ಕೆ ಎಲ್ಲ ರಾಜ್ಯಗಳಿಗೂ ಕೊಡುವುದನ್ನು ನಿಲ್ಲಿಸಿದೆ' ಎಂದು ಆರೋಪಿಸಿದರು.

'ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸಲು ಸಾಧ್ಯವಿಲ್ಲ. ಸಂಸ್ಥೆಗಳು ಹಾಗೂ ಏಜೆನ್ಸಿಗಳ ಮೂಲಕವೇ ಖರೀದಿಸಬೇಕಾಗುತ್ತದೆ' ಎಂದರು.

'ಯಾರೊಂದಿಗೂ ಬೇಳೆ ಬೇಯಿಸಿಕೊಳ್ಳುವಂತ ಕೆಲಸ ಮಾಡುವುದಿಲ್ಲ, ಅಕ್ಕಿ ಕೊಡುವ ಬಡವರ ವಿಷಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ' ಎಂದು ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಸುಳ್ಳುರಾಮಯ್ಯ ಅಲ್ಲದಿದ್ದರೆ ಎಫ್‌ಸಿಐ ಪತ್ರ ತೋರಿಸಲಿ'

ಚಿಕ್ಕಮಗಳೂರು: 'ಅನ್ನಭಾಗ್ಯ ಯೋಜನೆಗೆ ಹೆಚ್ಚುವರಿ ಅಕ್ಕಿ ಕೊಡುವುದಾಗಿ ಭಾರತೀಯ ಆಹಾರ ನಿಗಮ (ಎಫ್‌ಸಿಐ) ಸಮ್ಮತಿ ಪತ್ರ ಕೊಟ್ಟಿತ್ತೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರಶ್ನಿಸಿದರು.

'ಅಕ್ಕಿ ಕಳುಹಿಸುತ್ತೇವೆ. ಚೀಲದ ಮೇಲೆ ನಿಮ್ಮ ಹೆಸರು ಹಾಕಿಕೊಂಡು ವಿತರಿಸಿ ಎಂದು ಎಫ್‌ಸಿಐ ಪತ್ರ ನೀಡಿದೆಯೇ? ಸಿದ್ದರಾಮಯ್ಯ ಅವರು 'ಸುಳ್ಳುರಾಮಯ್ಯ' ಅಲ್ಲ ಎನ್ನುವುದಾದರೆ ಎಫ್‌ಸಿಐ ಸಮ್ಮತಿ ಪತ್ರ ತೋರಿಸಲಿ' ಎಂದು ಗುರುವಾರ ಇಲ್ಲಿ ಸವಾಲು ಹಾಕಿದರು.

'ಆಕಾಶವೇನೂ ಕಳಚಿ ಬಿದ್ದಿಲ್ಲ, ಹಣ ಕೊಟ್ಟರೆ ಅಕ್ಕಿ ಸಿಗುತ್ತದೆ. ತಲಾ 10 ಕೆ.ಜಿ ಅಕ್ಕಿ ಕೊಡಲಾಗದಿದ್ದರೆ ಎಲ್ಲಾ ಬಿಪಿಎಲ್ ಪಡಿತರ ಚೀಟಿದಾರರ ಖಾತೆಗೆ ಹಣ ಹಾಕಿ. ಅವರೇ ಅಕ್ಕಿ ಕೊಂಡುಕೊಳ್ಳುತ್ತಾರೆ. ಕೊಟ್ಟರೆ ನಾನೇ ಕೊಟ್ಟೆ ಎನ್ನುವುದು, ಕೊಡಲಾಗದಿದ್ದರೆ ಕೇಂದ್ರದ ಮೇಲೆ ಗೂಬೆ ಕೂರಿಸುವುದು ಸರಿಯೇ' ಎಂದು ಪ್ರಶ್ನಿಸಿದರು.

'ಜನರಿಗೆ ಕೊಡುವಾಗ ದೊಡ್ಡದಾಗಿ ಸದ್ದು ಮಾಡುತ್ತಾರೆ. ಕಿತ್ತುಕೊಳ್ಳುವಾಗ ಸದ್ದೇ ಇರುವುದಿಲ್ಲ. ವಿದ್ಯುತ್ ದರವನ್ನು ಮೆಲ್ಲಗೆ ಏರಿಸಿದ್ದಾರೆ. ಹಿಂದಿನ ಸರ್ಕಾರವೇ ತೀರ್ಮಾನ ಮಾಡಿತ್ತು ಎನ್ನುತ್ತಿದ್ದಾರೆ. ಸದ್ದಿಲ್ಲದೆ ಮದ್ಯದ ದರ ಏರಿಕೆ ಮಾಡಲಾಗಿದೆ. ಆಸ್ತಿ, ವಾಹನ ನೋಂದಣಿ ಶುಲ್ಕ ಹೆಚ್ಚಿಸಲಾಗುತ್ತಿದೆಯಂತೆ. ಒಂದು ಕಡೆ ಕಿತ್ತು, ಮತ್ತೊಂದು ಕಡೆ ಕೊಟ್ಟಂತೆ ಮಾಡಲಾಗುತ್ತಿದೆ. ಜನರಿಗೆ ಎಲ್ಲವೂ ಅರ್ಥವಾಗುತ್ತಿದೆ' ಎಂದರು.

ಮುಕ್ತ ಮಾರುಕಟ್ಟೆಯಿಂದ ಖರೀದಿಸುವುದಿಲ್ಲ: ಮುನಿಯಪ್ಪ

ಬೆಂಗಳೂರು: 'ಅನ್ನಭಾಗ್ಯ'ದಡಿ ಹೆಚ್ಚುವರಿ 5 ಕೆ.ಜಿ ಅಕ್ಕಿ ವಿತರಣೆಗೆ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸುವುದಿಲ್ಲ. ನೆರೆಯ ರಾಜ್ಯಗಳಿಂದಲೇ ಖರೀದಿಸಲಾಗುವುದು. ನಿಗದಿತ ಸಮಯಕ್ಕೆ ಸರಿಯಾಗಿ ಯೋಜನೆ ಆರಂಭಿಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಯೋಜನೆ ಅನುಷ್ಠಾನ ವಿಳಂಬ ಆಗದಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

'ನಮ್ಮ ಅಧಿಕಾರಿಗಳು ನೆರೆಯ ಆಂಧ್ರ, ತೆಲಂಗಾಣ, ಛತ್ತೀಸಗಢಕ್ಕೆ ಮಾತುಕತೆಗಾಗಿ ಹೋಗಿದ್ದಾರೆ. ಆ ರಾಜ್ಯಗಳಿಂದ ಅಕ್ಕಿ ಸಿಗುವ ವಿಶ್ವಾಸವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಮಾತನಾಡಿದ್ದಾರೆ' ಎಂದರು.

'ಯುಪಿಎ ಸರ್ಕಾರ ಇದ್ದಾಗ ಸಾರ್ವಜನಿಕರ, ಬಡವರ ಕಾರ್ಯಕ್ರಮದಲ್ಲಿ ತಾರತಮ್ಯ ಮಾಡಿರಲಿಲ್ಲ. ನಾವು ಗ್ಯಾರಂಟಿಯಲ್ಲಿ 10 ಕೆ.ಜಿ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದೆವು. ನಾವು ಪಕ್ಕದ ರಾಜ್ಯದಿಂದ ಅಕ್ಕಿ ತಂದು ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳುತ್ತೇವೆ' ಎಂದು ಮುನಿಯಪ್ಪ ತಿಳಿಸಿದರು.

ಆಂಧ್ರ ಮತ್ತು ತೆಲಂಗಾಣದಿಂದ ಅಕ್ಕಿಯನ್ನು ತಂದರೆ ವೆಚ್ಚ ಕಡಿಮೆಯಾಗುತ್ತದೆ. ಛತ್ತೀಸಗಢದಿಂದ ತರಿಸುವುದಾದರೆ ವೆಚ್ಚ ಅಧಿಕವಾಗುತ್ತದೆ ಎಂದರು.

ಸಂಪುಟ ಸಭೆಗೂ ಮುನ್ನ ಚರ್ಚೆ: ಹೆಚ್ಚುವರಿ ಅಕ್ಕಿಯನ್ನು ಎಲ್ಲಿಂದ ತರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಹಾರ ಇಲಾಖೆಯ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು.

ನೆರೆಯ ರಾಜ್ಯದಿಂದ ಅಕ್ಕಿಯನ್ನು ತರುವುದಾದರೆ ಸಾಗಣೆ ವೆಚ್ಚವೇ ಅಧಿಕವಾಗುತ್ತದೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ತುಂಬ ಹೊರೆಯಾಗುತ್ತದೆ ಎಂಬುದಾಗಿ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು ಎಂದು ಮೂಲಗಳು ಹೇಳಿವೆ.

ಸಂಪುಟ ಸಭೆಯ ಪ್ರಮುಖ ತೀರ್ಮಾನ

- ಕರ್ನಾಟಕ ಹೈಕೋರ್ಟ್‌ನ ಆಡಳಿತ ವೆಚ್ಚದ ಮಿತಿ, ಹಣಕಾಸು ಅಧಿಕಾರ ಹೆಚ್ಚಳ, ವಿತ್ತೀಯ ಆಡಳಿತಾತ್ಮಕ ವಿಚಾರದ ಅಧಿಕಾರವನ್ನು ಮುಖ್ಯನ್ಯಾಯಮೂರ್ತಿಗಳಿಗೆ ನೀಡಲು ಒಪ್ಪಿಗೆ
- ಕೆಪಿಎಸ್‌ಸಿಯಲ್ಲಿ ಖಾಲಿ ಇರುವ ಸದಸ್ಯ ಹುದ್ದೆಗಳ ಭರ್ತಿ ಮಾಡುವ ಅಧಿಕಾರ ಮುಖ್ಯಮಂತ್ರಿಗೆ ನೀಡಲಾಗಿದೆ
- ಕರ್ನಾಟಕ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ–ತಂತ್ರಜ್ಞಾನ ಇಲಾಖೆ ಬೆಂಗಳೂರು ಟೆಕ್ ಸಮ್ಮಿಟ್ ನಡೆಸಲು ₹17.90 ಕೋಟಿ ನೀಡಲು ಅನುಮತಿ.
- ವಿಪತ್ತು ನಿರ್ವಹಣೆ ಸಂಬಂಧ ನಿರ್ದೇಶನ ನೀಡಲು ಸಂಪುಟ ಉಪಸಮಿತಿ ರಚಿಸಲು ಒಪ್ಪಿಗೆ

ಸುದ್ದಿ 2 ನಿಮಿಷ

ಮಂಗಳೂರು: ಕೋಮುದ್ವೇಷ ನಿಗ್ರಹ ಘಟಕ ಆರಂಭ

ಮಂಗಳೂರು: ಮತೀಯ ಗೂಂಡಾಗಿರಿ ತಡೆಯಲು ಹಾಗೂ ಸೌಹಾರ್ದ ಕಾಪಾಡಲು ನಗರದಲ್ಲಿ ಕೋಮುದ್ವೇಷ ನಿಗ್ರಹ ಘಟಕ ಕಾರ್ಯಾರಂಭ ಮಾಡಿದೆ. ನಗರ ಅಪರಾಧ ನಿಗ್ರಹ ದಳದ ಸಹಾಯಕ ಪೊಲೀಸ್ ಕಮಿಷನರ್ (ಎಸಿಪಿ) ಪಿ.ಎ. ಹೆಗ್ಡೆ ಈ ಘಟಕದ ಮುಖ್ಯಸ್ಥರಾಗಿದ್ದಾರೆ.

ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಈಚೆಗೆ ಜಿಲ್ಲೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಕೋಮುದ್ವೇಷ ನಿಗ್ರಹ ಘಟಕ ಸ್ಥಾಪನೆ ಮಾಡುವ ಕುರಿತು ಪ್ರಸ್ತಾಪಿಸಿದ್ದರು. 'ಜೂನ್ 13ರಿಂದ ಘಟಕ ಆರಂಭಗೊಂಡಿದೆ. ಮೊದಲ ಹಂತದಲ್ಲಿ ಹಳೆಯ ಪ್ರಕರಣಗಳನ್ನು ಪರಾಮರ್ಶೆ ಮಾಡಲಾಗುತ್ತಿದ್ದು ಅವುಗಳ ತನಿಖೆ ಪ್ರಕ್ರಿಯೆ ಮೇಲೆ ನಿಗಾ ಇರಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆರು ಸಿಬ್ಬಂದಿ ಒಳಗೊಂಡ ಘಟಕ ಇದಾಗಿದ್ದು ಕೋಮು ಸಾಮರಸ್ಯ ಕದಡಲು ಕಾರಣವಾಗುವ ಎಲ್ಲ ಪ್ರಕರಣಗಳನ್ನು ಈ ಘಟಕ ಗಂಭೀರವಾಗಿ ಪರಿಗಣಿಸಲಿದೆ. ಪ್ರಾಥಮಿಕ ಹಂತದಲ್ಲಿ ಪ್ರಕರಣವನ್ನು ಆಯಾ ಪೊಲೀಸ್ ಠಾಣೆಗಳಲ್ಲಿ ದಾಖಲಿಸಲಾಗುವುದು. ನಂತರ ಈ ಘಟಕಕ್ಕೆ ವರ್ಗಾಯಿಸಲಾಗುವುದು ಎಂದು ತಿಳಿಸಿದರು.

ನಗರ ವ್ಯಾಪ್ತಿಯಲ್ಲಿ ಕಳೆದ ಒಂದು ದಶಕದಲ್ಲಿ ನಡೆದ ಪ್ರಕರಣಗಳ ದಾಖಲೆಗಳನ್ನು ಪರಿಶೀಲಿಸಿ ಅದರಲ್ಲಿ ಕೋಮುದ್ವೇಷ ಹರಡುವ ಅಥವಾ ಸಾಮರಸ್ಯಕ್ಕೆ ಧಕ್ಕೆ ತರುವ ಅಂಶಗಳಿದ್ದರೆ ಗಂಭೀರವಾಗಿ ಪರಿಗಣಿಸಲಾಗುವುದು. ಇಂಥ 200 ಪ್ರಕರಣಗಳನ್ನು ಈಗಾಗಲೇ ಪಟ್ಟಿ ಮಾಡಲಾಗಿದೆ. ಅದರಲ್ಲಿ ಭಾಗಿಯಾದವರ ಮೇಲೆ ನಿಗಾ ಇರಿಸಲಾಗಿದೆ ಎಂದು ವಿವರಿಸಿದರು.

ಮಳೆಗಾಗಿ ದೇವರಿಗೆ 'ಜಲ ದಿಗ್ಬಂಧನ'



ಎಂ.ಕೆ. ಹುಬ್ಬಳ್ಳಿ (ಬೆಳಗಾವಿ ಜಿಲ್ಲೆ): ಮಳೆಗಾಗಿ ಪ್ರಾರ್ಥಿಸಿ ದೇವರಿಗೆ ಪೂಜೆ, ಪ್ರಾರ್ಥನೆ, ಕಪ್ಪೆ, ಕತ್ತೆಗಳಿಗೆ ಮದುವೆ ಮಾಡುವುದು ಸಾಮಾನ್ಯ. ಆದರೆ, ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ. ಹುಬ್ಬಳ್ಳಿ ಪಟ್ಟಣದ ಭಕ್ತರು ದೇವರಿಗೇ 'ಜಲ ದಿಗ್ಬಂಧನ' ಹಾಕಿದ್ದಾರೆ.

ಪಟ್ಟಣದ ಸೂರ್ಯನಾರಾಯಣ ದೇವರ ಮೂರ್ತಿಯ ಸುತ್ತಲೂ ನೀರು ಹಾಕಿ ಜಲ ದಿಗ್ಬಂಧನ ಹಾಕಿದರು. ಇದಕ್ಕಾಗಿ ಮಲಪ್ರಭಾ ನದಿಯಿಂದ ನೀರು ಹೊತ್ತು ತಂದರು. ಬುಧವಾರ ರಾತ್ರಿಯಿಂದಲೇ ಜಾಗರಣೆ ನಡೆಸಿ, ಭಜನೆ, ಪ್ರಾರ್ಥನೆ ಮಾಡಿದರು. ಗುರುವಾರ ಬೆಳಿಗ್ಗೆ ದೇವರಿಗೆ ಜಲ ದಿಗ್ಬಂಧನ ಮಾಡಿ, ಮಳೆಗಾಗಿ ಪ್ರಾರ್ಥಿಸಿ ದೇವಸ್ಥಾನದ ಬಾಗಿಲು ಮುಚ್ಚಿದರು. ಮಳೆಯಾಗುವ ತನಕ ಗರ್ಭಗುಡಿಯ ಬಾಗಿಲು ತೆರೆಯದಿರಲು ಗ್ರಾಮಸ್ಥರು ನಿರ್ಧರಿಸಿದ್ದಾರೆ.

'ಈ ಪದ್ಧತಿ ಪೂರ್ವಜರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಹಿಂದೆ ಸಾಕಷ್ಟು ಸಲ ಮಳೆಗಾಗಿ ಪ್ರಾರ್ಥಿಸಿ ಹೀಗೆ ದೇವಸ್ಥಾನದ ಗರ್ಭಗುಡಿಯಲ್ಲಿ ನೀರು ತುಂಬಿಸಿ, ಬಾಗಿಲು ಮುಚ್ಚಿದ್ದೇವೆ. ಆಗ ಉತ್ತಮ ಮಳೆಯಾಗಿದೆ' ಎಂದು ಊರ ಹಿರಿಯರು ಮಾಹಿತಿ ನೀಡಿದರು.

'ರಾಜ್ಯದ ಯೋಜನೆಗೂ ಕೇಂದ್ರಕ್ಕೂ ಸಂಬಂಧ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕ ಸರ್ಕಾರವು ಬಡವರಿಗೆ 10 ಕೆ.ಜಿ. ಅಕ್ಕಿ ನೀಡುವ ಯೋಜನೆ ಘೋಷಣೆ ಮಾಡುವ ಮುನ್ನ ಕೇಂದ್ರ ಸರ್ಕಾರದ ಜತೆಗೆ ಸಮಾಲೋಚನೆ ನಡೆಸಿಲ್ಲ' ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಸುಬೋದ್ ಕುಮಾರ್ ಸಿಂಗ್ ಹೇಳಿದರು.

ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅನ್ನ ಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿ ವ್ಯಕ್ತಿಗೆ 10 ಕೆ.ಜಿ. ಅಕ್ಕಿ ನೀಡುವುದಾಗಿ ಕರ್ನಾಟಕ ಸರ್ಕಾರ ಪ್ರಕಟಿಸಿದೆ. ಇದಕ್ಕೂ ಕೇಂದ್ರ ಸರ್ಕಾರಕ್ಕೂ ಸಂಬಂಧ ಇಲ್ಲ. ಇದು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಯೋಜನೆ. ಇದಕ್ಕೆ ಬೇಕಿರುವ ಅಕ್ಕಿಯನ್ನು ರಾಜ್ಯ ಸರ್ಕಾರವೇ ಸಂಗ್ರಹಿಸಬೇಕು. ಆಹಾರಧಾನ್ಯಗಳನ್ನು ಖರೀದಿಸಿ ವಿತರಿಸುವ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳುವುದಿಲ್ಲ' ಎಂದು ಹೇಳಿದರು.

'ಈಶಾನ್ಯ ರಾಜ್ಯಗಳು ಹಾಗೂ ನೈಸರ್ಗಿಕ ವಿಕೋಪ ಎದುರಿಸುತ್ತಿರುವ ರಾಜ್ಯಗಳಿಗೆ ಹೊರತುಪಡಿಸಿ ಉಳಿದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ ಅಕ್ಕಿ ಹಾಗೂ ಗೋಧಿ ಮಾರಾಟವನ್ನು ಜೂನ್ 13ರಂದು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿತು. ಈ ನಿರ್ಧಾರವನ್ನು ಏಕಾಏಕಿ ತೆಗೆದುಕೊಂಡಿಲ್ಲ. ಇದು ಉದ್ದೇಶಪೂರ್ವಕವೂ ಅಲ್ಲ. ವಿವಿಧ ಇಲಾಖೆಗಳ ಜತೆಗೆ ಸಮಾಲೋಚನೆ ನಡೆಸಿ ಈ ಆದೇಶ ಹೊರಡಿಸಲಾಗಿದೆ. ಇದು ನಿರ್ದಿಷ್ಟ ರಾಜ್ಯಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ಹಠಾತ್ ನಿರ್ಧಾರವಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ಶಕ್ತಿ' ಕೈಬಿಡಲು ಆಟೊ ಚಾಲಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರ ಪ್ರದೇಶದಲ್ಲಿ 'ಶಕ್ತಿ' ಯೋಜನೆ ಕೈ ಬಿಡಬೇಕು ಎಂದು ಆಗ್ರಹಿಸಿ 500ಕ್ಕೂ ಹೆಚ್ಚು ಆಟೊಗಳನ್ನು ಕೆಲಕಾಲ ರಸ್ತೆ ಮಧ್ಯೆ ನಿಲ್ಲಿಸಿ ಆಟೊ ಚಾಲಕರು ಹಾಗೂ ಮಾಲೀಕರು ಗುರುವಾರ ಕೇಂದ್ರ ಬಸ್ ನಿಲ್ದಾಣದ ಎದುರು ಪ್ರತಿಭಟನೆ ನಡೆಸಿದರು.



ನಗರ ಪ್ರದೇಶದಲ್ಲಿ 'ಶಕ್ತಿ' ಯೋಜನೆ ಕೈ ಬಿಡಬೇಕು ಎಂದು ಆಗ್ರಹಿಸಿ ಬೆಳಗಾವಿಯಲ್ಲಿ ಗುರುವಾರ ಆಟೊಗಳನ್ನು ನಿಲ್ಲಿಸಿ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

'ಬೆಳಗಾವಿ ನಗರದಿಂದ ಹೊರಗಡೆ ಸಂಚರಿಸುವ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕೊಡಿ. ಆದರೆ, ನಗರದ ಆಟೊಗಳು ಓಡುವುದೇ ಮಹಿಳೆಯರನ್ನು ಅವಲಂಬಿಸಿ. ಬೆಳಗಾವಿ ನಗರದಲ್ಲಿ ಪರವಾನಗಿ ಇರುವ 10 ಸಾವಿರಕ್ಕೂ ಹೆಚ್ಚು ಆಟೊಗಳಿವೆ. ಉಚಿತ ಪ್ರಯಾಣದ ಕಾರಣ ಮಹಿಳೆಯರು ಆಟೊಗಳಿಂದ ದೂರವಾಗಿದ್ದಾರೆ. ಇದರಿಂದ ನಮ್ಮ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ' ಎಂದು ಚಾಲಕ ಜಾವೇದ್ ಹುಬ್ಬಳ್ಳಿ ದೂರಿದರು.

'ಉಚಿತ ಯೋಜನೆಗೆ ನಮ್ಮ ವಿರೋಧವಿಲ್ಲ. ಆದರೆ, ನಗರದಲ್ಲಿ ಇದಕ್ಕೆ ಅವಕಾಶ ನೀಡಬಾರದು. ಪುರುಷರು ಬೈಕ್, ಕಾರುಗಳಲ್ಲಿ ಓಡಾಡುತ್ತಾರೆ. ವಿದ್ಯಾರ್ಥಿಗಳಿಗೆ ಪಾಸ್‌ಗಳಿವೆ. ಆಟೊಗಳಲ್ಲಿ ಓಡಾಡುವುದು ಮಹಿಳೆಯರು ಮಾತ್ರ. ಈಗ ಅವರೂ ಇಲ್ಲದಿದ್ದರೆ ನಮ್ಮ ಉಪಜೀವನ ಕಷ್ಟವಾಗುತ್ತದೆ. ಈ ಬಗ್ಗೆ ಜೂನ್ 23ರೊಳಗೆ ನಿರ್ಧಾರ ಪ್ರಕಟಿಸಬೇಕು' ಎಂದರು.

ಚಲಿಸುತ್ತಿದ್ದ ಬಸ್‌ನಿಂದ ಬಿದ್ದ ವೃದ್ಧೆ-ಚಿಕ್ಕೋಡಿ (ಬೆಳಗಾವಿ ಜಿಲ್ಲೆ ವರದಿ): ತಾಲ್ಲೂಕಿನ ಕೇರೂರು ಗ್ರಾಮದಲ್ಲಿ ಗುರುವಾರ ಬಸ್ ಏರಿ ಹೊರಟಿದ್ದ ವೃದ್ಧೆಯೊಬ್ಬರು ಆಯತಪ್ಪಿ ರಸ್ತೆಗೆ ಬಿದ್ದು ಗಾಯಗೊಂಡರು.

ಚಿಕ್ಕೋಡಿ ಡಿಪೊಗೆ ಸೇರಿದ ಬಸ್ ಚಿಕ್ಕೋಡಿ ಬಸ್ ನಿಲ್ದಾಣದಿಂದ ಕಾಡಾಪುರ ಕಡೆಗೆ ಹೊರಟಿತ್ತು. ಉಚಿತ ಪ್ರಯಾಣಕ್ಕೆ ಅವಕಾಶವಿದ್ದ ಕಾರಣ ಅಪಾರ ಸಂಖ್ಯೆಯ ಮಹಿಳೆಯರು ಕಿಕ್ಕಿರಿದು ಹತ್ತಿದ್ದರು. ಹಲವು ಪುರುಷರು ಒಳಗೆ ಜಾಗವಿಲ್ಲದೇ ಬಾಗಿಲಲ್ಲೇ ನೇತಾಡುತ್ತಿದ್ದರು.

ಬಸ್ ಕೇರೂರಿಗೆ ಬಂದಾಗ ವೃದ್ಧೆ ಕೂಡ ಏರಿದರು. ಆದರೆ, ಬಾಗಿಲಲ್ಲೇ ನೇತಾಡುತ್ತ ಪ್ರಯಾಣಿಸುತ್ತಿದ್ದ ವೇಳೆ ವೃದ್ಧೆ ಜಾರಿ ರಸ್ತೆ ಮೇಲೆ ಬಿದ್ದರು. ಆ ಸಮಯಕ್ಕೆ ಹಿಂದಿನಿಂದ ಯಾವುದೇ ವಾಹನ ಬಾರದ ಕಾರಣ ಹೆಚ್ಚಿನ ಅವಘಡ ಸಂಭವಿಸಲಿಲ್ಲ. ಜನ ಅವರನ್ನು ಎಬ್ಬಿಸಿ ಆರೈಕೆ ಮಾಡಿದರು. ಇದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಎಲ್ಲೆಡೆ ಹರಿದಾಡಿತು.

ಪ್ರಿಯಕರನ ಭೇಟಿಗೆ ಉಚಿತ ಬಸ್‌ನಲ್ಲಿ ಬಂದ ಮಹಿಳೆ!

ಪುತ್ತೂರು (ದಕ್ಷಿಣ ಕನ್ನಡ): ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯವನ್ನು ಬಳಸಿಕೊಂಡು ಹುಬ್ಬಳ್ಳಿಯ ಮಹಿಳೆಯೊಬ್ಬರು ಪ್ರಿಯಕರನ ಭೇಟಿಗೆ ಬಂದಿರುವ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಮಹಿಳೆಯೊಬ್ಬರು ಅದೇ ಊರಿನ ಯುವಕರೊಬ್ಬರನ್ನು ಪ್ರೀತಿಸುತ್ತಿದ್ದು, ಅವರು ಕೋಡಿಂಬಾಡಿ ಭಾಗದಲ್ಲಿ ತೋಟದಲ್ಲಿ ಕೂಲಿ ಕೆಲಸಕ್ಕೆ ಬಂದಿದ್ದಾರೆ. 11 ತಿಂಗಳ ಮಗುವಿನೊಂದಿಗೆ ತವರು ಮನೆಯಲ್ಲಿದ್ದ ಆಕೆ, ಮಗುವನ್ನು ಅಲ್ಲಿಯೇ ಬಿಟ್ಟು ನಾಪತ್ತೆಯಾಗಿದ್ದರು. ಮೊಬೈಲ್ ಫೋನ್ ಕರೆಯನ್ನೂ ಸ್ವೀಕರಿಸುತ್ತಿರಲಿಲ್ಲ. ಆಕೆ ಪ್ರೀತಿಸುತ್ತಿರುವ ವಿಷಯ ತಿಳಿದಿದ್ದ ತವರು ಮನೆಯವರು, ಆಕೆ ಪ್ರಿಯಕರನ ಭೇಟಿಗೆ ಬಂದಿರಬಹುದೆಂದು ಭಾವಿಸಿ, ಪುತ್ತೂರಿಗೆ ಬಂದಿದ್ದಾರೆ.

ಪಾಲಕರು ಹುಡುಕಾಟ ನಡೆಸುತ್ತಿರುವಾಗ, ಭೇಟಿಯಾದ ಕೋಡಿಂಬಾಡಿ ಗ್ರಾಮ ಪಂಚಾಯಿತಿ ಸದಸ್ಯ ಜಯಪ್ರಕಾಶ್ ಬದಿನಾರ್ ಅವರು, ಈ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದಾರೆ. ಪೊಲೀಸರು ಸ್ಥಳಕ್ಕೆ ಬಂದು, ಕೋಡಿಂಬಾಡಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಈ ಯುವಕನ ಮೊಬೈಲ್ ಫೋನ್ ಲೊಕೇಷನ್ ಪತ್ತೆ ಮಾಡಿದಾಗ ಅವರಿಬ್ಬರೂ ಸಿದ್ದಕಟ್ಟೆ ಟವರ್ ವ್ಯಾಪ್ತಿಯಲ್ಲಿರುವುದು ಗೊತ್ತಾಗಿದೆ.

ಗುರುವಾರ ಕೂಡ ಈ ಇಬ್ಬರು ಪ್ರೇಮಿಗಳು ಎಲ್ಲಿದ್ದಾರೆಂದು ಪತ್ತೆಯಾಗಿಲ್ಲ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ಶಿಷ್ಟಾಚಾರ ಬದಿಗಿಟ್ಟು ಒಂದಾದ ಮಠಾಧೀಶರು

ಕೇಂದ್ರದ ಒಬಿಸಿ ಪಟ್ಟಿಗೆ ವೀರಶೈವ– ಲಿಂಗಾಯತ ಒಳಪಂಗಡಗಳ ಸೇರ್ಪಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಗೆ ಸೇರಿಸುವಂತೆ ಹೋರಾಟ ನಡೆಸಲು ಸಮುದಾಯದ ಹಲವು ಮಠಾಧೀಶರು ತಮ್ಮ ಮಠಗಳ ಶಿಷ್ಟಾಚಾರ ಬಿಟ್ಟು ಒಂದಾಗಿದ್ದಾರೆ' ಎಂದು ಹುಬ್ಬಳ್ಳಿಯ ಮೂರುಸಾವಿರ ಮಠದ ಡಾ.ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಹೇಳಿದರು.



ಹುಬ್ಬಳ್ಳಿಯ ಮೂರು ಸಾವಿರ ಮಠದ ಆವರಣದಲ್ಲಿ ಗುರುವಾರ ವೀರಶೈವ ಲಿಂಗಾಯತ ಮಠಾಧೀಶರ ವೇದಿಕೆಯು ಆಯೋಜಿಸಿದ್ದ ಚಿಂತನ– ಮಂಥನ ಹಾಗೂ ಹಕ್ಕೊತ್ತಾಯ ಸಭೆಯಲ್ಲಿ ಡಾ.ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿದರು. ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶಿರಹಟ್ಟಿಯ ಫಕ್ಕೀರೇಶ್ವರ ಮಠದ ಫಕ್ಕೀರ ಸಿದ್ಧರಾಮ ಸ್ವಾಮೀಜಿ, ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ವೀರಶೈವ ಲಿಂಗಾಯತ ಮಠಾಧೀಶರ ವೇದಿಕೆಯು ಇಲ್ಲಿನ ಮೂರು ಸಾವಿರ ಮಠದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ 'ಚಿಂತನ–ಮಂಥನ' ಹಾಗೂ ಹಕ್ಕೊತ್ತಾಯ ಸಭೆಯಲ್ಲಿ ಮಾತನಾಡಿದ ಅವರು, 'ಉಜ್ಜಯಿನಿ ಪೀಠ, ಶ್ರೀಶೈಲ ಪೀಠ ಹಾಗೂ ಕಾಶಿ ಪೀಠದ ಜಗದ್ಗುರುಗಳು ನಮ್ಮ ಜೊತೆ ಸಮವಾಗಿ ಕೂತಿರುವುದೇ ಇದಕ್ಕೆ ಸಾಕ್ಷಿ' ಎಂದರು.

'ಒಬಿಸಿ ಮೀಸಲಾತಿ ಎಂಬ ರೊಟ್ಟಿಗಾಗಿ ಇಡೀ ಸಮಾಜ ಹಸಿದಿದೆ. ನಮಗೆ ರೊಟ್ಟಿ ಹಾಕಿದ ಭಕ್ತರ ಮಕ್ಕಳಿಗೆ ರೊಟ್ಟಿ ಕೊಡಿಸಲು ನಾವೆಲ್ಲ ಒಂದಾಗಿದ್ದೇವೆ. ನಮ್ಮ ಮಠಗಳ ಶಿಷ್ಟಾಚಾರವನ್ನೂ ಬದಿಗೊತ್ತಿದ್ದೇವೆ' ಎಂದರು.

ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಮಾತನಾಡಿ, 'ಮಠಾಧೀಶರ ಮೇಲೆ ಸಮಾಜದ ಋಣವಿದೆ. ಅದನ್ನು ತೀರಿಸಲು ಸಮಾಜದ ಮಕ್ಕಳಿಗೆ ಒಬಿಸಿ ಮೀಸಲಾತಿ ಕೊಡಿಸಬೇಕಿದೆ. ವೀರಶೈವ–ಲಿಂಗಾಯತ ಸಮುದಾಯದ 70 ಒಳಪಂಗಡಗಳ ಪೈಕಿ 16 ಒಳಪಂಗಡಗಳನ್ನು ಮಾತ್ರ ಒಬಿಸಿ ಪಟ್ಟಿಗೆ ಸೇರಿಸಲಾಗಿದೆ. ಇನ್ನುಳಿದ ಪಂಗಡಗಳಿಗೆ ಅನ್ಯಾಯವಾಗಿದೆ. ಇದನ್ನು ಕೇಂದ್ರ ಸರ್ಕಾರ ಸರಿಪಡಿಸಬೇಕು ಎಂಬುದು ನಮ್ಮ ಹಕ್ಕೊತ್ತಾಯ' ಎಂದರು.

ಶಿರಹಟ್ಟಿಯ ಫಕ್ಕೀರೇಶ್ವರ ಮಠದ ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, 'ಒಬಿಸಿ ಮಾನ್ಯತೆ ದೊರಕಿಸಲು ಗುರು–ವಿರಕ್ತ ಪರಂಪರೆಯ ಮಠಾಧೀಶರೆಲ್ಲರೂ ಒಂದಾಗಿದ್ದೇವೆ. ಪೀಠಗಳೂ ಒಂದಾಗುತ್ತಿವೆ. ಮೀಸಲಾತಿ ಪಡೆಯುವುದು ನಮ್ಮ ಹಕ್ಕು ಹೊರತು ಭಿಕ್ಷೆಯಲ್ಲ. ನಮ್ಮ ಬೇಡಿಕೆಯನ್ನು ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು. ತಪ್ಪಿದಲ್ಲಿ ಸಮಯ ನಿಗದಿ ಮಾಡಿ ಮಠಾಧೀಶರ ನಿಯೋಗ ಕರೆದೊಯ್ಯೋಣ' ಎಂದು ಹೇಳಿದರು.

ಕಲಬುರಗಿಯಲ್ಲಿ ಮುಂದಿನ ಸಭೆ: 'ಬೆಂಗಳೂರಿನಲ್ಲಿ ಮೊದಲ ಮತ್ತು ಹುಬ್ಬಳ್ಳಿಯಲ್ಲಿ ಎರಡನೇ ಸಭೆ ಆಗಿದೆ. ಮೂರನೇ ಸಭೆಯನ್ನು ಕಲಬುರಗಿಯಲ್ಲಿ ಜುಲೈ 9ರಂದು ಹಮ್ಮಿಕೊಳ್ಳಲಾಗಿದೆ' ಎಂದು ವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉಜ್ಜಯಿನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಮುಂಡರಗಿಯ ಅನ್ನದಾನೇಶ್ವರ ಮಠದ ಅನ್ನದಾನ ಸ್ವಾಮೀಜಿ, ಶಿರಹಟ್ಟಿಯ ಫಕ್ಕೀರೇಶ್ವರ ಮಠದ ಫಕ್ಕೀರ ಸಿದ್ಧರಾಮ ಸ್ವಾಮೀಜಿ ಇದ್ದರು.

> **ರಾಜ್ಯದಲ್ಲಿ ಈಗಾಗಲೇ ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನು ಒಬಿಸಿ ಪಟ್ಟಿಗೆ ಸೇರಿಸಲಾಗಿದೆ. ಕೇಂದ್ರ ಸರ್ಕಾರವೂ ಒಬಿಸಿ ಪಟ್ಟಿಗೆ ಸೇರಿಸಬೇಕು**
> **ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ,** ಶ್ರೀಶೈಲ ಪೀಠ

'ಮೀಸಲಾತಿ: ಮುಖ್ಯಮಂತ್ರಿ ಸಭೆ ಕರೆಯಲಿ'

ಬೆಳಗಾವಿ: 'ಲಿಂಗಾಯತ ಸಮುದಾಯಕ್ಕೆ ಮೀಸಲಾತಿ ನೀಡುವ ವಿಚಾರವಾಗಿ ನಮ್ಮೊಂದಿಗೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೀಘ್ರವೇ ಸಭೆ ಕರೆಯಬೇಕು' ಎಂದು ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

'ಮೀಸಲಾತಿ ಚಳವಳಿ ಒಂದು ಹಂತಕ್ಕೆ ತಲುಪಿದ್ದ ವೇಳೆಯೇ ವಿಧಾನಸಭೆ ಚುನಾವಣೆ ಎದುರಾಗಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ಪ್ರಸ್ತುತ ಹೋರಾಟ ಸಮಿತಿಯ ಕಾನೂನು ಘಟಕದೊಂದಿಗೆ ಸಭೆ ನಡೆಸಿ, ಮುಂದಿನ ಹೆಜ್ಜೆ ಇಡುತ್ತೇವೆ. ಸಿ.ಎಂ ಭೇಟಿಯಾಗಿ ಹಕ್ಕೊತ್ತಾಯ ಮಂಡಿಸುವ ಕುರಿತು ನಿರ್ಧರಿಸಿದ್ದೇವೆ. ಪಂಚಮಸಾಲಿ ಸಮುದಾಯದ ಶಾಸಕರು, ಹೋರಾಟಗಾರರನ್ನು ಒಳಗೊಂಡ ನಿಯೋಗದ ಭೇಟಿಗೆ ಅವಕಾಶ ನೀಡಬೇಕು' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

'ಸಿದ್ದರಾಮಯ್ಯ ಅವರು ಪರಿಶಿಷ್ಟ ಹಾಗೂ ಹಿಂದುಳಿದ ವರ್ಗಗಳ ಸ್ವಾಮೀಜಿಗಳ ಸಭೆ ಕರೆದು ಚರ್ಚಿಸಿದ್ದಾರೆ. ಅಂತೆಯೇ ಪಂಚಮಸಾಲಿ ಸಮುದಾಯದ ಸಭೆ ಕರೆದು ಮೀಸಲಾತಿ ವಿಷಯವಾಗಿ ನಮಗೆ ಯಾವ ರೀತಿ ನ್ಯಾಯ ಕೊಡುತ್ತಾರೆ ಎಂಬುದನ್ನು ಸ್ಪಷ್ಟಪಡಿಸಬೇಕು. ಕೇಂದ್ರದ 'ಒಬಿಸಿ' ಮೀಸಲಾತಿ ಪಟ್ಟಿಯಲ್ಲಿ ಲಿಂಗಾಯತ ಸಮುದಾಯದ ಒಳಪಂಗಡಗಳನ್ನು ಸೇರಿಸುವ ವಿಚಾರವಾಗಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ತಿಳಿಸಬೇಕು' ಎಂದರು.

'2ಡಿ' ಮೀಸಲಾತಿ ವಿಚಾರ ನ್ಯಾಯಾಲಯದಲ್ಲಿದೆ. ನ್ಯಾಯಾಲಯದ ತೀರ್ಪು ನಾವು ಒಪ್ಪಿಕೊಳ್ಳಲೇಬೇಕು. ಆದರೆ, ಸರ್ಕಾರ ತನ್ನ ನಿಲುವು ತಿಳಿಸಲಿ. ಈ ಬಾರಿ ನಮ್ಮ ಸಮುದಾಯ ಕಾಂಗ್ರೆಸ್‌ಗೆ ಆಶೀರ್ವದಿಸಿದ ಕಾರಣ ನಮಗೆ ನ್ಯಾಯ ಸಿಗುತ್ತದೆ ಎಂಬ ಸಂಪೂರ್ಣ ವಿಶ್ವಾಸವಿದೆ. ಲಿಂಗಾಯತ ಪಂಚಮಸಾಲಿ ಸಮುದಾಯದ ಐವರಿಗೆ ಮಂತ್ರಿ ಸ್ಥಾನ ಕೇಳಿದ್ದೆವು. ಈ ಪೈಕಿ ಶಿವಾನಂದ ಪಾಟೀಲ, ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಸಚಿವ ಸ್ಥಾನ ಕೊಡಲಾಗಿದೆ. ಮುಂದಿನ ದಿನಗಳಲ್ಲಿ ಉಳಿದವರು ಮಂತ್ರಿಯಾಗುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

ನೌಕಾದಳದ ಹಡಗಿಗೆ ಕಾರವಾರದ 'ಅಂಜದೀಪ್' ಹೆಸರು

ಪ್ರಜಾವಾಣಿ ವಾರ್ತೆ

ಕಾರವಾರ: ಭಾರತೀಯ ನೌಕಾದಳಕ್ಕೆ ಬುಧವಾರ ಚೆನ್ನೈನ ಕಟ್ಟುಪಲ್ಲಿಯಲ್ಲಿ ನೂತನವಾಗಿ ಸೇರ್ಪಡೆಗೊಂಡ ಜಲಾಂತರ್ಗಾಮಿ ನಿರೋಧಕ ಯುದ್ಧನೌಕೆಗೆ ಕಾರವಾರ ಸಮೀಪದ ನಡುಗಡ್ಡೆ 'ಅಂಜದೀಪ್' ಹೆಸರು ಇಡಲಾಗಿದೆ.

ಅಂಜದೀಪ್‌ಗೆ ಸ್ಥಳೀಯವಾಗಿ 'ಅಂಜದೀವ್' ಎಂಬ ಹೆಸರಿದೆ. ನಗರದಿಂದ 5 ಕಿ.ಮೀ ದೂರದಲ್ಲಿರುವ ಅಂಜದೀವ್ ನಡುಗಡ್ಡೆ ಈ ಮೊದಲು ಪ್ರವಾಸಿ ತಾಣವಾಗಿತ್ತು. ನೌಕಾನೆಲೆ ನಿರ್ಮಾಣಗೊಂಡ ನಂತರ ಆ ಸ್ಥಳ ನೌಕಾದಳದ ವ್ಯಾಪ್ತಿಗೆ ಸೇರಿದೆ. ಹೀಗಾಗಿ ಅಲ್ಲಿಗೆ ಸಾರ್ವಜನಿಕರ ಭೇಟಿ ನಿರ್ಬಂಧಿಸಲಾಗಿದೆ. ಆದರೆ, ಪ್ರವಾಸೋದ್ಯಮ ಇಲಾಖೆಯ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಈಗಲೂ 'ಅಂಜದೀವ್' ಹೆಸರು ಇದೆ.

ದ್ವೀಪದಲ್ಲಿ ನೌಕಾದಳ ಈ ಮುನ್ನ ಶಸ್ತ್ರಾಸ್ತ್ರ ತರಬೇತಿ ನಡೆಸುತ್ತಿತ್ತು. ನೌಕಾದಳಕ್ಕೆ ಬಹುದೊಡ್ಡ ಕೊಡುಗೆ ನೀಡಿರುವ ಕಾರಣಕ್ಕೆ ನೌಕೆಗೆ ದ್ವೀಪದ ಹೆಸರಿಟ್ಟು ಗೌರವಿಸಲಾಗಿದೆ. ಕೋಲ್ಕತ್ತದಲ್ಲಿ ತಯಾರಾಗಿರುವ ಯುದ್ಧನೌಕೆಯು 900 ಟನ್ ತೂಕವಿದ್ದು 77 ಮೀ. ಉದ್ದವಿದೆ. ಪ್ರತಿ ಗಂಟೆಗೆ 25 ನಾಟಿಕಲ್ ಮೈಲು ದೂರ ಕ್ರಮಿಸುವ ಸಾಮರ್ಥ್ಯ ಹೊಂದಿದೆ. ಜತೆಗೆ, ನೌಕೆಗೆ ಅತ್ಯಾಧುನಿಕ ಶಬ್ಧಶೋಧಕ ಉಪಕರಣವನ್ನೂ ಅಳವಡಿಸಲಾಗಿದೆ.



ನೌಕಾದಳಕ್ಕೆ ಹೊಸದಾಗಿ ಸೇರ್ಪಡೆಗೊಂಡ ಜಲಾಂತರ್ಗಾಮಿ ನಿರೋಧಕ ಯುದ್ಧನೌಕೆ 'ಅಂಜದೀಪ್'

ಚರ್ಚೆಗೆ ಸಿದ್ಧ: ಚಕ್ರತೀರ್ಥ

ಶಿವಮೊಗ್ಗ: 'ನನ್ನ ಅವಧಿಯಲ್ಲಿ ಪರಿಷ್ಕರಣೆ ಸಮಿತಿ ಶಿಫಾರಸು ಮಾಡಿದ್ದ ಆ ಪಠ್ಯಪುಸ್ತಕ ಈಗ ಸರ್ಕಾರದ ಸ್ವತ್ತು. ಅದನ್ನು ಪ್ರಶ್ನಿಸಲು ನಾನು ಯಾರು? ಪಠ್ಯ ಸೇರ್ಪಡೆಯ ನಿರ್ಣಯ ಕೈಗೊಳ್ಳಲು ಸರ್ಕಾರ ಸ್ವತಂತ್ರವಾಗಿದೆ' ಎಂದು ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಹಿಂದಿನ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರು ಇಲ್ಲಿ ಹೇಳಿದರು.

'ನಾವು ಪಠ್ಯ ಪರಿಷ್ಕರಿಸುವಾಗ ಸಮಿತಿಯ ಹಿಂದಿನ ಅಧ್ಯಕ್ಷರನ್ನೂ ಚರ್ಚೆಗೆ ಆಹ್ವಾನಿಸಿದ್ದೆವು. ನಮ್ಮ ಆಹ್ವಾನಕ್ಕೆ ಅವರು ಪ್ರತಿಕ್ರಿಯಿಸಲಿಲ್ಲ. ಈಗಿನ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿ ಒಂದು ವೇಳೆ ನನ್ನನ್ನು ಚರ್ಚೆಗೆ ಆಹ್ವಾನಿಸಿದರೆ ಪಾಲ್ಗೊಳ್ಳಲು ಸಿದ್ಧ' ಎಂದರು.

ಸಿಇಟಿ: ಶ್ರೀಚೈತನ್ಯ ಸಂಸ್ಥೆಗೆ ಹಲವು ರ್‍ಯಾಂಕ್

ಪ್ರಜಾವಾಣಿ ವಾರ್ತೆ


ಸಾತ್ವಿಕ್ ಎಂ


ಆಕಾಶ್ ಜಿ.


ಪ್ರತೀಕ್ಷಾ


ಆದಿತ್ಯ ಕೆ. ಅನಿಲ್


ಧ್ರುವ್ ಶಿವಕಾಂತ್

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಗುರುವಾರ ಪ್ರಕಟಿಸಿದ ಸಿಇಟಿ ಫಲಿತಾಂಶದಲ್ಲಿ ಮೊದಲ 10 ರ್‍ಯಾಂಕ್‌ಗಳಲ್ಲಿ 'ಶ್ರೀಚೈತನ್ಯ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್'ನ ನಾಲ್ವರು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

ಧ್ರುವ್ ಶಿವಕಾಂತ್ ಪಿ. ಕೃಷಿ ವಿಜ್ಞಾನದಲ್ಲಿ 4ನೇ ರ್‍ಯಾಂಕ್, ಪ್ರತೀಕ್ಷಾ ಎ. ಯೋಗ ಮತ್ತು ನ್ಯಾಚುರೋಪತಿಯಲ್ಲಿ 6ನೇ ರ್‍ಯಾಂಕ್, ಆದಿತ್ಯ ಕೆ.ಅನಿಲ್ ಬಿ- ಫಾರ್ಮಾದಲ್ಲಿ 7ನೇ ರ್‍ಯಾಂಕ್, ಆಕಾಶ್ ಜಿ. ಯೋಗ ಮತ್ತು ನ್ಯಾಚುರೋಪತಿಯಲ್ಲಿ 8ನೇ ರ್‍ಯಾಂಕ್ ಹಾಗೂ ಸಾತ್ವಿಕ್ ಎಂ. ಅವರು ಪಶುವೈದ್ಯಕೀಯ ವಿಜ್ಞಾನದಲ್ಲಿ 13ನೇ ರ್‍ಯಾಂಕ್ ಪಡೆದಿದ್ದಾರೆ.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಿ.ಎಸ್.ರಾವ್, ನಿರ್ದೇಶಕಿ ಸುಷ್ಮಾ ಬೊಪಣ್ಣ ಮತ್ತು ಸಂಸ್ಥೆಯ ಸಿಬ್ಬಂದಿ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಆರೋಪ ಸಮರ್ಥನೆಗೆ ಸಾಕ್ಷ್ಯಗಳಿಲ್ಲ; ಪೋಕ್ಸೊ ಪ್ರಕರಣ ರದ್ದತಿಗೆ ದೆಹಲಿ ಪೊಲೀಸರ ಶಿಫಾರಸು

ಬ್ರಿಜ್‌ಭೂಷಣ್ ವಿರುದ್ಧ ದೋಷಾರೋಪ ಪಟ್ಟಿ

ಪ್ರಜಾವಾಣಿ ವಾರ್ತೆ


ಬ್ರಿಜ್‌ಭೂಷಣ್ ಸಿಂಗ್


ದೆಹಲಿಯಲ್ಲಿರುವ ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ನಿವಾಸದ ಭದ್ರತೆಗೆ ಗುರುವಾರ ಸಿಆರ್‌ಪಿಎಫ್ ಯೋಧರನ್ನು ನಿಯೋಜಿಸಲಾಗಿತ್ತು —ಎಎಫ್‌ಪಿ ಚಿತ್ರ

ನವದೆಹಲಿ: ಲೈಂಗಿಕ ಕಿರುಕುಳ ಮತ್ತು ತಮ್ಮನ್ನು ಹಿಂಬಾಲಿಸುತ್ತಿದ್ದ ಕುರಿತು ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಆರು ಮಹಿಳಾ ಕುಸ್ತಿಪಟುಗಳು ಮಾಡಿದ್ದ ಆರೋಪಗಳಿಗೆ ಸಂಬಂಧಿಸಿ ತನಿಖೆ ನಡೆಸಿದ್ದ ದೆಹಲಿ ಪೊಲೀಸರು ಇಲ್ಲಿನ ನ್ಯಾಯಾಲಯಕ್ಕೆ ಗುರುವಾರ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಬಾಲಕಿ ಮಾಡಿದ್ದ ಆರೋಪಗಳನ್ನು ಸಮರ್ಥಿಸುವ ಸಾಕ್ಷ್ಯಗಳು ಇಲ್ಲ. ಹೀಗಾಗಿ ಸಿಂಗ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ದಾಖಲಿಸಿರುವ ಪ್ರಕರಣವನ್ನು ರದ್ದು-ಪಡಿಸಬೇಕು ಎಂದು ಪೊಲೀಸರು ಶಿಫಾರಸು ಮಾಡಿದ್ದಾರೆ.

ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಕುಸ್ತಿಪಟುಗಳು ಒಂದೂವರೆ ತಿಂಗಳ ಕಾಲ ದೆಹಲಿಯ ಜಂತರ್ ಮಂಥರ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ರೈತ ಸಂಘಟನೆಗಳು, ವಿವಿಧ ವಿರೋಧ ಪಕ್ಷಗಳು ಕುಸ್ತಿಪಟುಗಳ ಪ್ರತಿಭಟನೆಗೆ ಬೆಂಬಲ ನೀಡಿದ್ದವು. ಸಿಂಗ್ ವಿರುದ್ಧ ಕ್ರಮಕ್ಕೆ ಗಡುವು ಸಹ ನೀಡಲಾಗಿತ್ತು. ಕೊನೆಗೆ, ಪ್ರತಿಭಟನನಿರತ ಕುಸ್ತಿಪಟುಗಳೊಂ-ದಿಗೆ ಕಳೆದ ವಾರ ಸಭೆ ನಡೆಸಿದ್ದ ಸರ್ಕಾರ, ಜೂನ್ 15ರ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸುವುದಾಗಿ ಹೇಳಿತ್ತು.

ಎರಡು ಎಫ್‌ಐಆರ್: ಬಾಲಕಿ ಸೇರಿದಂತೆ ಏಳು ಮಹಿಳಾ ಕುಸ್ತಿ ಪಟುಗಳು ದೂರು ನೀಡಿದ್ದರು. ಇದರ ಆಧಾರದಲ್ಲಿ ಏಪ್ರಿಲ್ 28ರಂದು ದೆಹಲಿ ಪೊಲೀಸರು ಸಿಂಗ್ ವಿರುದ್ಧ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದ್ದರು. ಆದರೆ, ಬಾಲಕಿ ಮತ್ತು ಆಕೆಯ ತಂದೆ ನ್ಯಾಯಾಧೀಶರ ಮುಂದೆ ಹಾಜರಾಗಿ, ತಾವು ಮಾಡಿದ್ದ ಆರೋಪಗಳಿಂದ ಹಿಂದೆ ಸರಿದಿದ್ದಾರೆ ಎನ್ನಲಾಗಿದೆ.

ಆರು ಮಹಿಳಾ ಕುಸ್ತಿಪಟುಗಳ ದೂರುಗಳ ಅನ್ವಯ, ಐಪಿಸಿಯ ಸೆಕ್ಷನ್ 354(ಮಹಿಳೆಯ ಘನತೆಗೆ ಧಕ್ಕೆ ತರುವುದು), 354ಎ (ಲೈಂಗಿಕ ಕಿರುಕುಳ) ಹಾಗೂ 354ಡಿ (ಹಿಂಬಾಲಿಸುವುದು) ಅಡಿ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಂಗ್ ಅವರ ಆಪ್ತ ಎನ್ನಲಾದ, ಫೆಡರೇಷನ್‌ನ ಪದಾಧಿಕಾರಿ ವಿನೋದ್ ತೋಮರ್ ಅವರ ಹೆಸರನ್ನು ಸಹ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಅವರ ವಿರುದ್ಧ ಐಪಿಸಿ ಸೆಕ್ಷನ್ 354, 354ಎ, 506 ಹಾಗೂ 109ರ ಅಡಿ ದೋಷಾರೋಪ ಹೊರಿಸಲಾಗಿದೆ.

'ಸಿಂಗ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾ-ಗಿತ್ತು. ಸಿಆರ್‌ಪಿಸಿ ಸೆಕ್ಷನ್ 173ರಡಿ ವರದಿ ಸಲ್ಲಿಸಿದ್ದು, ದೂರುದಾರರಾದ ಸಂತ್ರಸ್ತ ಬಾಲಕಿ ಹಾಗೂ ಬಾಲಕಿಯ ತಂದೆ ನೀಡಿರುವ ಹೇಳಿಕೆಗಳ ಆಧಾರದ ಮೇಲೆ ಪ್ರಕರಣ ರದ್ದು ಮಾಡುವಂತೆ ನ್ಯಾಯಾಲಯಕ್ಕೆ ಕೋರಿದ್ದೇವೆ. ಈ ಪ್ರಕರಣ ಕುರಿತು ಜುಲೈ 4ರಂದು ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ನ್ಯಾಯಾಲಯ ಹೇಳಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮೌನಕ್ಕೆ ಶರಣು: ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರಿಂದ ತಮ್ಮ ಹೋರಾಟದ ಮುಂದಿನ ನಡೆ ಕುರಿತು ಕುಸ್ತಿಪಟುಗಳು ಮೌನ ತಾಳಿದ್ದಾರೆ.

ಭಾರತದ ಕ್ರೀಡಾರಂಗಕ್ಕೆ ಕರಾಳ ದಿನ: ಕಾಂಗ್ರೆಸ್

ನವದೆಹಲಿ(ಪಿಟಿಐ): 'ಮಹಿಳಾ ಕುಸ್ತಿಪಟುಗಳು ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ಆದರೆ, ಆರೋಪಿಯನ್ನು ರಕ್ಷಿಸಲು ಸರ್ಕಾರ ಯತ್ನಿಸುತ್ತಿದೆ. ಭಾರತದ ಕ್ರೀಡಾರಂಗಕ್ಕೆ ಇದು ಕರಾಳ ದಿನ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಗುರುವಾರ ಟೀಕಿಸಿದ್ದಾರೆ.

ಬಾಲಕಿ ದೂರಿನ ಆಧಾರದಲ್ಲಿ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ದಾಖಲಿಸಿದ್ದ ಪೋಕ್ಸೊ ಪ್ರಕರಣ ರದ್ದುಪಡಿ-ಸುವಂತೆ ದೆಹಲಿ ಪೊಲೀಸರು ಶಿಫಾರಸು ಮಾಡಿರುವ ಹಿನ್ನೆಲೆಯಲ್ಲಿ ಸುರ್ಜೇವಾಲಾ ಈ ವಾಗ್ದಾಳಿ ನಡೆಸಿದ್ದಾರೆ.

'ಬೇಟಿ ಡರಾವೊ, ಬ್ರಿಜ್‌ಭೂಷಣ್ ಬಚಾವೊ' (ಪುತ್ರಿಯರನ್ನು ಹೆದರಿಸಿ, ಬ್ರಿಜ್‌ಭೂಷಣ್ ರಕ್ಷಿಸಿ) ಎಂಬುದು ಬಿಜೆಪಿಯ ಹೊಸ ಘೋಷಣೆಯಾಗಿದೆ' ಎಂದು ಅವರು ಟೀಕಿಸಿದ್ದಾರೆ.

ಸಿಇಟಿ ರ್‍ಯಾಂಕ್ ಪಡೆದವರು

ರ್‍ಯಾಂಕ್	ಹೆಸರು	ಶೇಕಡಾ	ವಿದ್ಯಾಸಂಸ್ಥೆ
	ಎಂಜಿನಿಯರಿಂಗ್		
2	ಅರುಣ್ ಕೃಷ್ಣಸ್ವಾಮಿ	97.5	ಕುಮಾರನ್ ಚಿಲ್ಡ್ರನ್ ಹೋಂ, ಮಲ್ಲಸಂದ್ರ, ಬೆಂಗಳೂರು
3	ಸಮೃದ್ಧ್ ಶೆಟ್ಟಿ	97.167	ಆರ್‌ವಿ ಪಿಯು ಕಾಲೇಜು, ಜಯನಗರ, ಬೆಂಗಳೂರು
4	ಸುಮೇಧ್ ಎಸ್.ಎಸ್.	97.056	ಜಿಂದಾಲ್ ವಿದ್ಯಾಮಂದಿರ, ತೋರಣಗಲ್ಲು, ಬಳ್ಳಾರಿ
5	ಮಾಧವ್ ಸೂರ್ಯ ತಡೆಪಳ್ಳಿ	96.834	ನಾರಾಯಣ ಇ–ಟೆಕ್ನೊ ಸ್ಕೂಲ್, ಮಾರತಹಳ್ಳಿ, ಬೆಂಗಳೂರು
6	ಸುಜಿತ್ ಅಡಿಗ	96.667	ಆರ್‌ವಿ ಪಿಯು ಕಾಲೇಜು, ಜಯನಗರ, ಬೆಂಗಳೂರು
7	ಉಜ್ವಲ್ ಎಲ್. ಶಂಕರ್	96.5	ನಾರಾಯಣ ಒಲಿಂಪಿಯಾಡ್ ಸ್ಕೂಲ್, ಶಂಕರನಗರ, ಬೆಂಗಳೂರು
8	ರಿಶಿತಾ ಗುಪ್ತ	96.334	ಅಲ್ಫೈನ್ ಪಬ್ಲಿಕ್ ಸ್ಕೂಲ್, ಕನಕಪುರ ರೋಡ್, ಬೆಂಗಳೂರು
9	ಅಭಿನವ್	96.223	ದೀಕ್ಷಾ ಸಿಎಫ್‌ಎಲ್ ಪಿಯು ಕಾಲೇಜು, ತಲಘಟ್ಟಪುರ, ಬೆಂಗಳೂರು
10	ಭುವನ್ ಕೆ. ಪ್ರಸಾದ್	96	ದೀಕ್ಷಾ ಸಿಎಫ್‌ಎಲ್ ಪಿಯು ಕಾಲೇಜು, ಬೆಂಗಳೂರು
	ಯೋಗ ಮತ್ತು ನ್ಯಾಚುರೋಪಥಿ		
2	ಬೈರೇಶ್ ಎಸ್.ಎಚ್.	98.167	ಎಕ್ಸ್‌ಪರ್ಟ್ ಪಿಯು ಕಾಲೇಜು, ಮಂಗಳೂರು
3	ಸೃಜನ್ ಎಂ.ಎಚ್.	97.889	ಬಿಎಎಸ್‌ಇ ಪಿಯು ಕಾಲೇಜು ಹುಬ್ಬಳ್ಳಿ
4	ಕಾರ್ತಿಕ್ ಮನೋಹರ್ ಸಿಮಸಾನ್	97.5	ಲೇಡಿ ಅನುಸೂಯ ಸಿಂಘನೀಯ ಎಜುಕೇಶನ್ ಅಕಾಡಮಿ, ರಾಜಸ್ಥಾನ
5	ಮಾಳವಿಕಾ ಕಪೂರ್	97.445	ಮಹೇಶ್ ಪಿ.ಯು. ಕಾಲೇಜು, ಚಾಮರಾಜಪೇಟೆ, ಬೆಂಗಳೂರು
6	ಪ್ರತೀಕ್ಷಾ ಎ.	97	ಚೈತನ್ಯ ಪಿಯು ಕಾಲೇಜು, ರಾಜಾಜಿನಗರ, ಬೆಂಗಳೂರು
7	ವೈಶಾಖ ಎಂ.	96.278	ಎಕ್ಸೆಲೆಂಟ್ ಸೈನ್ಸ್ ಆ್ಯಂಡ್ ಕಾಮರ್ಸ್ ಪಿಯುಸಿ, ಮೂಡುಬಿದ್ರಿ
8	ಆಕಾಶ್ ಗೋವಿಂದಯ್ಯ	96.222	ಚೈತನ್ಯ ಪಿಯು ಕಾಲೇಜು, ನಾಗರಬಾವಿ, ಬೆಂಗಳೂರು
9	ಸಾತ್ವಿಕ್ ಕುಲಕರ್ಣಿ	96.056	ಮಿರಾಂಡ ಜೂನಿಯರ್ ಕಾಲೇಜು, ಇಂದಿರಾನಗರ, ಬೆಂಗಳೂರು
10	ಶ್ರೀನಿವಾಸ್ ಬಸನಗೌಡ ಮಾಲಿಪಾಟೀಲ್	96	ಸರ್ ಎಂವಿ ಪಿಯು ಕಾಲೇಜು, ದಾವಣಗೆರೆ
	ಕೃಷಿ ವಿಜ್ಞಾನ (ಬಿಎಸ್‌ಸಿ, ಎಜಿ)		
2	ಅನುರಾಗ್ ರಂಜನ್	95.417	ಪ್ರಮಾಣ ಪಿಯು ಕಾಲೇಜು, ರಾಯಚೂರು
3	ಕಾರ್ತಿಕ್ ಮನೋಹರ್ ಸಿಮಸಾನ್	95.25	ಲೇಡಿ ಅನುಸೂಯ ಸಿಂಘನೀಯ ಎಜುಕೇಶನ್ ಅಕಾಡಮಿ, ರಾಜಸ್ಥಾನ
4	ಪಸುಪುಲೇಟಿ ಧ್ರುವ್ ಶಿವಕಾಂತ್	95.25	ಚೈತನ್ಯ ಟೆಕ್ನೊ ಸ್ಕೂಲ್, ಜೆ.ಪಿ.ನಗರ, ಬೆಂಗಳೂರು
5	ಶ್ರೀನಿವಾಸ್ ಬಸನಗೌಡ ಮಾಲಿಪಾಟೀಲ್	94.792	ಸರ್ ಎಂವಿ ಪಿಯು ಕಾಲೇಜು, ದಾವಣಗೆರೆ
6	ಪ್ರಣವ್ ಗುಜ್ಜಾರ್	94.5	ಕಾರ್ಕಳ ಜ್ಞಾನಸುಧಾ ಪಿಯುಸಿ, ಕುಕ್ಕುಂದೂರು, ಉಡುಪಿ
7	ಪ್ರೀತಂ ಎನ್.	94.25	ವಿದ್ಯಾಮಂದಿರ್ ಐಎನ್‌ಡಿ ಪಿಯು ಕಾಲೇಜು, ಮಲ್ಲೇಶ್ವರಂ, ಬೆಂಗಳೂರು
8	ಪ್ರಣವ್ ಆರ್.ಭಟ್	94.25	ವೆಂಕಟ್ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ರಾಜಾಜಿನಗರ್, ಬೆಂಗಳೂರು
9	ಉಜ್ವಲ್ ಎಲ್. ಶಂಕರ್,	94.209	ನಾರಾಯಣ ಒಲಿಂಪಿಯಾಡ್ ಸ್ಕೂಲ್, ಶಂಕರನಗರ, ಬೆಂಗಳೂರು
10	ಸಾತ್ವಿಕ್ ಕುಲಕರ್ಣಿ	94	ಮಿರಾಂಡ ಜೂನಿಯರ್ ಕಾಲೇಜು, ಇಂದಿರಾನಗರ, ಬೆಂಗಳೂರು
	ಪಶು ವೈದ್ಯಕೀಯ		
2	ಪ್ರತೀಕ್ಷಾ ಆರ್.	97.222	ಕುಮಾರನ್ ಚಿಲ್ಡ್ರನ್ಸ್ ಹೋಂ ಕಾಂಪೋಸಿಟ್ ಪಿಯುಸಿ, ಪದ್ಮನಾಭನಗರ, ಬೆಂಗಳೂರು
3	ಚಂದನ್ ಗೌಡ ಸಿ.ಎನ್.	96.667	ಮಹೇಶ್ ಪಿಯು ಕಾಲೇಜು, ಚಾಮರಾಜಪೇಟ್, ಬೆಂಗಳೂರು
4	ಬೈರೇಶ್ ಎಸ್.ಎಚ್.	96.667	ಎಕ್ಸ್‌ಪರ್ಟ್ ಪಿಯು ಕಾಲೇಜು, ಮಂಗಳೂರು
5	ಕಾರ್ತಿಕ್ ಮನೋಹರ್ ಸಿಮಸಾನ್	96.667	ಲೇಡಿ ಅನುಸೂಯ ಸಿಂಘನೀಯ ಎಜುಕೇಶನ್ ಅಕಾಡಮಿ, ರಾಜಸ್ಥಾನ
6	ಸೃಜನ್ ಎಂ.ಎಚ್.	96.111	ಬಿಎಎಸ್‌ಇ ಪಿಯು ಕಾಲೇಜು ಹುಬ್ಬಳ್ಳಿ
7	ಆದಿತ್ಯ	95	ಶಹೀನ್ ಐಎನ್‌ಡಿ ಪಿಯು ಕಾಲೇಜು, ಬೀದರ್
8	ಆದರ್ಶ ಎಸ್. ಸಜ್ಜನ್	95	ಶ್ರೀರಾಂ ಗ್ಲೋಬಲ್ ಸ್ಕೂಲ್, ಸಮೇತನಹಳ್ಳಿ, ಬೆಂಗಳೂರು
9	ಪ್ರತೀಕ್ಷಾ ಎ.	95	ಚೈತನ್ಯ ಪಿಯು ಕಾಲೇಜು, ರಾಜಾಜಿನಗರ, ಬೆಂಗಳೂರು
10	ಆಕಾಶ್ ಗೋವಿಂದಯ್ಯ	94.444	ಚೈತನ್ಯ ಪಿಯು ಕಾಲೇಜು, ನಾಗರಬಾವಿ, ಬೆಂಗಳೂರು
	ಬಿ. ಫಾರ್ಮಾ		
2	ಮಾಳವಿಕಾ ಕಪೂರ್	97.222	ಮಹೇಶ್ ಪಿ.ಯು. ಕಾಲೇಜು, ಚಾಮರಾಜಪೇಟೆ, ಬೆಂಗಳೂರು
3	ಮಾಧವ್ ಸೂರ್ಯ ತಡೆಪಳ್ಳಿ	96.667	ನಾರಾಯಣ ಇ–ಟೆಕ್ನೊ ಸ್ಕೂಲ್, ಮಾರತಹಳ್ಳಿ, ಬೆಂಗಳೂರು
4	ಬೈರೇಶ್ ಎಸ್.ಎಚ್.	96.667	ಎಕ್ಸ್‌ಪರ್ಟ್ ಪಿಯು ಕಾಲೇಜು, ಮಂಗಳೂರು
5	ಕಾರ್ತಿಕ್ ಮನೋಹರ್ ಸಿಮಸಾನ್	96.667	ಲೇಡಿ ಅನುಸೂಯ ಸಿಂಘನೀಯ ಎಜುಕೇಶನ್ ಅಕಾಡಮಿ, ರಾಜಸ್ಥಾನ
6	ಚಂದನ್ ಗೌಡ ಸಿ.ಎನ್.	96.667	ಮಹೇಶ್ ಪಿ.ಯು. ಕಾಲೇಜು, ಚಾಮರಾಜಪೇಟ್, ಬೆಂಗಳೂರು
7	ಆದಿತ್ಯ ಅನಿಲ್	96.111	ಚೈತನ್ಯ ಟೆಕ್ ಸ್ಕೂಲ್, ಕೆ.ಆರ್.ಪುರಂ, ಬೆಂಗಳೂರು
8	ವಿಘ್ನೇಶ್ ನಟರಾಜ ಕುಮಾರ್	96.111	ಕುಮಾರನ್ ಚಿಲ್ಡ್ರನ್ಸ್ ಹೋಂ, ಮಲ್ಲಸಂದ್ರ, ಬೆಂಗಳೂರು
9	ಸೃಜನ್ ಎಂ.ಎಚ್.	96.111	ಬಿಎಎಸ್‌ಇ ಪಿಯು ಕಾಲೇಜು ಹುಬ್ಬಳ್ಳಿ
10	ರಿಶಿತ್ ಗುಪ್ತ	95	ಅಲ್ಫೈನ್ ಪಬ್ಲಿಕ್ ಸ್ಕೂಲ್, ಕನಕಪುರ ರಸ್ತೆ, ಬೆಂಗಳೂರು
	ಫಾರ್ಮಾ ಡಿ.		
2	ಮಾಳವಿಕಾ ಕಪೂರ್	97.222	ಮಹೇಶ್ ಪಿ.ಯು. ಕಾಲೇಜು, ಚಾಮರಾಜಪೇಟೆ, ಬೆಂಗಳೂರು
3	ಮಾಧವ್ ಸೂರ್ಯ ತಡೆಪಳ್ಳಿ	96.667	ನಾರಾಯಣ ಇ–ಟೆಕ್ನೊ ಸ್ಕೂಲ್, ಮಾರತಹಳ್ಳಿ, ಬೆಂಗಳೂರು
4	ಬೈರೇಶ್ ಎಸ್.ಎಚ್.	96.667	ಎಕ್ಸ್‌ಪರ್ಟ್ ಪಿಯು ಕಾಲೇಜು, ಮಂಗಳೂರು
5	ಕಾರ್ತಿಕ್ ಮನೋಹರ್ ಸಿಮಸಾನ್	96.667	ಲೇಡಿ ಅನುಸೂಯ ಸಿಂಘನೀಯ ಎಜುಕೇಶನ್ ಅಕಾಡಮಿ, ರಾಜಸ್ಥಾನ
6	ಚಂದನ್ ಗೌಡ ಸಿ.ಎನ್.	96.667	ಮಹೇಶ್ ಪಿ.ಯು. ಕಾಲೇಜು, ಚಾಮರಾಜಪೇಟ್, ಬೆಂಗಳೂರು
7	ಆದಿತ್ಯ ಅನಿಲ್	96.111	ಚೈತನ್ಯ ಟೆಕ್ ಸ್ಕೂಲ್, ಕೆ.ಆರ್.ಪುರಂ, ಬೆಂಗಳೂರು
8	ವಿಘ್ನೇಶ್ ನಟರಾಜ ಕುಮಾರ್	96.111	ಕುಮಾರನ್ ಚಿಲ್ಡ್ರನ್ಸ್ ಹೋಂ, ಮಲ್ಲಸಂದ್ರ, ಬೆಂಗಳೂರು
9	ಸೃಜನ್ ಎಂ.ಎಚ್.	96.111	ಬಿಎಎಸ್‌ಇ ಪಿಯು ಕಾಲೇಜು ಹುಬ್ಬಳ್ಳಿ
10	ರಿಶಿತ್ ಗುಪ್ತ	95	ಅಲ್ಫೈನ್ ಪಬ್ಲಿಕ್ ಸ್ಕೂಲ್, ಕನಕಪುರ ರಸ್ತೆ, ಬೆಂಗಳೂರು
	ಬಿ.ಎಸ್‌ಸಿ ನರ್ಸಿಂಗ್		
2.	ಪ್ರತೀಕ್ಷಾ ಆರ್.	97.222	ಕುಮಾರನ್ ಚಿಲ್ಡ್ರನ್ಸ್ ಹೋಂ ಕಾಂಪೋಸಿಟ್ ಪಿಯುಸಿ, ಪದ್ಮನಾಭನಗರ, ಬೆಂಗಳೂರು
3	ಚಂದನ್ ಗೌಡ ಸಿ.ಎನ್.	96.667	ಮಹೇಶ್ ಪಿಯು ಕಾಲೇಜು, ಚಾಮರಾಜಪೇಟ್, ಬೆಂಗಳೂರು
4	ಬೈರೇಶ್ ಎಸ್.ಎಚ್.	96.667	ಎಕ್ಸ್‌ಪರ್ಟ್ ಪಿಯು ಕಾಲೇಜು, ಮಂಗಳೂರು
5	ಕಾರ್ತಿಕ್ ಮನೋಹರ್ ಸಿಮಸಾನ್	96.667	ಲೇಡಿ ಅನುಸೂಯ ಸಿಂಘನೀಯ ಎಜುಕೇಶನ್ ಅಕಾಡಮಿ, ರಾಜಸ್ಥಾನ
6	ಸೃಜನ್ ಎಂ.ಎಚ್.	96.111	ಬಿಎಎಸ್‌ಇ ಪಿಯು ಕಾಲೇಜು ಹುಬ್ಬಳ್ಳಿ
7	ಆದಿತ್ಯ	95	ಶಹೀನ್ ಐಎನ್‌ಡಿ ಪಿಯು ಕಾಲೇಜು, ಬೀದರ್
8	ಆದರ್ಶ ಎಸ್. ಸಜ್ಜನ್	95	ಶ್ರೀರಾಂ ಗ್ಲೋಬಲ್ ಸ್ಕೂಲ್, ಸಮೇತನಹಳ್ಳಿ, ಬೆಂಗಳೂರು
9	ಪ್ರತೀಕ್ಷಾ ಎ.	95	ಚೈತನ್ಯ ಪಿಯು ಕಾಲೇಜು, ರಾಜಾಜಿನಗರ, ಬೆಂಗಳೂರು
10	ಆಕಾಶ್ ಗೋವಿಂದಯ್ಯ	94.444	ಚೈತನ್ಯ ಪಿಯು ಕಾಲೇಜು, ನಾಗರಬಾವಿ, ಬೆಂಗಳೂರು

ಕಾಯ್ದೆ ವಾಪಸ್‌ಗೆ ಬಸವರಾಜ ಬೊಮ್ಮಾಯಿ ವಿರೋಧ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದ್ವೇಷದ ಹಾಗೂ ತುಷ್ಟೀಕರಣ ರಾಜಕಾರಣ ಮಾಡುತ್ತಿದ್ದು, ಹಿಂದಿನ ಸರ್ಕಾರದ ತೀರ್ಮಾನ ರದ್ದು ಮಾಡುವುದನ್ನೇ ತನ್ನ ಸಾಧನೆ ಎನ್ನುವಂತೆ ನಡೆದುಕೊಳ್ಳು ತ್ತಿದೆ ಎಂದು ಮಾಜಿ ಸಿ.ಎಂ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಸಮಾಜಕ್ಕೆ ಮಾರಕವಾಗಿದ್ದ ಮತಾಂತರ ನಿಷೇಧ ಕಾಯ್ದೆಯನ್ನು ರದ್ದು ಮಾಡುವ ತೀರ್ಮಾನ ತೆಗೆದು ಕೊಂಡಿರುವ ಸರ್ಕಾರ ಯಾರ ಓಲೈಕೆ ಮಾಡುತ್ತಿದೆ. ಹೈಕಮಾಂಡ್ ಹಂಗಿನಲ್ಲಿ ಅಧಿಕಾರ ನಡೆಸುತ್ತಿರುವ ಸಿದ್ದರಾಮಯ್ಯನವರು ರಾಜ್ಯದ ಜನರ ಹಿತಾಸಕ್ತಿಗಿಂತ ಹೈಕಮಾಂಡ್ ಓಲೈಕೆಗೆ ಆದ್ಯತೆ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

'ಆರೆಸ್ಸೆಸ್ ಸ್ಥಾಪಿಸಿರುವ ಕೇಶವ ಬಲಿರಾಂ ಹೆಡಗೇವಾರ್ ಹಾಗೂ ವೀರ ಸಾವರ್ಕರ್ ಅವರ ಕುರಿತ ಪಠ್ಯವನ್ನು ತೆಗೆದು ಹಾಕಲು ತೀರ್ಮಾನ ತೆಗೆದುಕೊಂಡಿರುವುದು ದೇಶದ್ರೋಹಕ್ಕೆ ಸಮಾನ' ಎಂದಿದ್ದಾರೆ.

ನೀಟ್‌ನಲ್ಲಿ 'ಪರಿಶ್ರಮ' ಭರ್ಜರಿ ಸಾಧನೆ

ಅಕಾಡೆಮಿಯಿಂದ ಹಿಂದಿನ ಬಾರಿಗಿಂತ ಉತ್ತಮ ಸಾಧನೆ: ಪ್ರದೀಪ್ ಈಶ್ವರ್

ಪ್ರಜಾವಾಣಿ ವಾರ್ತೆ


ಪ್ರದೀಪ್ ಈಶ್ವರ್


ನಾರಾಯಣ ಸ್ವಾಮಿ ಟಿ.ಎ. 685 ಅಂಕ


ರೋಹಿತ್, 675 ಅಂಕ


ಉಜ್ವಲ್ ಕೆ., 676 ಅಂಕ


ಸಚಿನ್ ಕೆ.ಎಸ್., 675 ಅಂಕ


ಹೃಷಿಕೇಶ್ ನಾರಾಯಣ್, 655 ಅಂಕ


ವಿನೋದ್ ಎಸ್ ಗಾಣಿಗಿ, 655 ಅಂಕ


ತಯಾಬ್, 665 ಅಂಕ


ಪ್ರಜ್ವಲ್ ಆರ್., 670 ಅಂಕ

ಬೆಂಗಳೂರು: ಪ್ರಸಕ್ತ ಸಾಲಿನ ನೀಟ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿರುವ 'ಪರಿಶ್ರಮ ನೀಟ್ ಅಕಾಡೆಮಿಯ' ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರದ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಪಡೆಯಲಿದ್ದಾರೆ ಎಂದು ಪರಿಶ್ರಮ ನೀಟ್ ಅಕಾಡೆಮಿ ಸಂಸ್ಥಾಪಕ ನಿರ್ದೇಶಕ ಪ್ರದೀಪ್ ಈಶ್ವರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಅಕಾಡೆಮಿಯಲ್ಲಿ ದೀರ್ಘ ಅವಧಿಯ ಕೋರ್ಸ್‌ಗೆ 1,532 ವಿದ್ಯಾರ್ಥಿಗಳು ಸೇರಿಕೊಂಡಿದ್ದರು. ಅವರಲ್ಲಿ 800ರಿಂದ 1,000 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾ-ರೆ. ದಕ್ಷಿಣ ಭಾರತದ ಸಾವಿರಾರು ವಿದ್ಯಾ-ರ್ಥಿಗಳಿಗೆ ಕಬ್ಬಿಣ ಕಡಲೆಯಾಗಿರುವ ನೀಟ್ ಎನ್ನುವುದು ಪರಿಶ್ರಮ ವಿದ್ಯಾ-ರ್ಥಿಗಳಿಗೆ ಸುಲಭದ ತುತ್ತಾಗಿದೆ. ಈ ಸಾಧನೆ ಕೇವಲ ಪರಿಶ್ರಮ ಅಕಾಡೆಮಿಯದ್ದು ಎನ್ನುವುದಕ್ಕಿಂತ, ಕನ್ನಡಿಗರದ್ದು. ಕನ್ನಡದ ಹುಡುಗನೊಬ್ಬ ಸ್ಥಾಪಿಸಿದ ಈ ಸಂಸ್ಥೆ ಇಂದು ರಾಷ್ಟ್ರ-ಮಟ್ಟದಲ್ಲಿ ಹೆಸರಾಗುವುದಕ್ಕೆ ಕಾರಣ ಕರ್ನಾಟಕದ ಜನ ನೀಡಿದ ಸಹಕಾರ' ಎಂದು ಹೇಳಿದರು.

'ನಮ್ಮ ಅಕಾಡೆಮಿಯಲ್ಲಿ ಶ್ರದ್ಧೆಯಿಂದ 10 ತಿಂಗಳು ಪರಿಶ್ರಮ ಹಾಕಿದ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ಆದರೆ ಹೋಂ ಸಿಕ್ ಆಗಿ ಮನೆ ಹೋಗುತ್ತಿದ್ದ ವಿದ್ಯಾ-ರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲ. ಇಲ್ಲಿಗೆ ಬರುವ ವಿದ್ಯಾರ್ಥಿಗಳು ಅದಾಗಲೇ ಎರಡು ವರ್ಷ ಶ್ರಮ ಪಟ್ಟು ಓದಿರುತ್ತಾರೆ. ಆದರೆ ವೈದ್ಯ ಸೀಟು ಪಡೆಯುವುದಕ್ಕೆ ಸಾಧ್ಯವಾಗಿ ರುವುದಿಲ್ಲ. ಅಂಥವರು ನಮ್ಮಲ್ಲಿ 10 ತಿಂಗಳು ಶ್ರದ್ಧೆಯಿಂದ ಓದುತ್ತಾರೆ. ಅವರನ್ನು ಸಂಪೂರ್ಣವಾಗಿ ಇದೇ ವಿಷಯದಲ್ಲಿ ತೊಡಗುವಂತೆ ಮಾಡುವುದರಿಂದಲೇ, ಉತ್ತಮ ಫಲಿತಾಂಶ ಸಿಗಲು ಸಾಧ್ಯವಾಗಿದೆ' ಎಂದು ವಿವರಿಸಿದರು.

ಪರಿಶ್ರಮ ನೀಟ್ ಅಕಾಡೆಮಿ ಕೆಂಗೇರಿಯಲ್ಲಿ ಮಾತ್ರವಿದೆ. ರಾಜ್ಯದ ಯಾವ ಭಾಗದಲ್ಲಿಯೂ ಶಾಖೆಯಿಲ್ಲ ಎಂದು ಸ್ಪಷ್ಟಪಡಿಸಿದರು.

ವರ್ಷ	ವಿದ್ಯಾರ್ಥಿಗಳು	ತೇರ್ಗಡೆ ಆದವರು
2020	130	88
2021	240	220
2022	730	503
2023	1532	800-1000

'ಉತ್ತಮ ರ್‍ಯಾಂಕ್ ನಿರೀಕ್ಷಿಸಿದ್ದೆ'

ಮಂಗಳೂರು: ಸಿಇಟಿ ಫಲಿತಾಂಶದಲ್ಲಿ ಇಲ್ಲಿನ ಎಕ್ಸ್‌ಪರ್ಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಬೈರೇಶ್ ಎಚ್.ಎಸ್., ಬಿ.ಎಸ್ಸಿ ಕೃಷಿಯಲ್ಲಿ ಪ್ರಥಮ, ಬಿಎನ್‌ವೈಎಸ್‌ನಲ್ಲಿ ದ್ವಿತೀಯ, ನರ್ಸಿಂಗ್, ಬಿ–ಫಾರ್ಮಾ, ಫಾರ್ಮಾ ಡಿ ಮತ್ತು ವೆಟರ್ನರಿಯಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಎಂಜಿನಿಯರಿಂಗ್‌ನಲ್ಲಿ 16ನೇ ರ್‍ಯಾಂಕ್ ಪಡೆದಿದ್ದಾರೆ.

ಇವರು ವೈದ್ಯಕೀಯ ಪ್ರವೇಶಕ್ಕಾಗಿ ನಡೆದ ರಾಷ್ಟ್ರಮಟ್ಟದ ನೀಟ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಒಟ್ಟು 720 ಅಂಕಗಳಲ್ಲಿ 710 ಅಂಕಗಳನ್ನು ಗಳಿಸಿದ್ದಾರೆ.

ಕೋಲಾರದ ಕೋಮುಲ್ ಡೇರಿಯಲ್ಲಿ ಸೀನಿಯರ್ ಕೆಮಿಸ್ಟ್ ಆಗಿರುವ ಹರೀಶ್ ಎಸ್.ಬಿ ಹಾಗೂ ವಕ್ಕಲೇರಿಯಾ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ರಾಧಮ್ಮ ಕೆ. ಅವರ ಪುತ್ರರಾದ ಬೈರೇಶ್, 8ನೇ ತರಗತಿಯಲ್ಲಿರುವಾಗಲೇ ವೈದ್ಯನಾಗುವ ಕನಸು ಕಂಡಿದ್ದರಂತೆ. ಪಿಯುಸಿಗೆ ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿಗೆ ಸೇರಿದ್ದ ಅವರು, ಪ್ರತಿ ದಿನ 4ರಿಂದ 5 ತಾಸು ಅಭ್ಯಾಸ ಮಾಡುತ್ತಿದ್ದರು.

ಸಿಇಟಿ: ಬಾಲಕಿಯರ ಸಾಧನೆ

ಒಂದನೇ ಪುಟದಿಂದ

25 ಸಾವಿರದಿಂದ 26 ಸಾವಿರದವರೆಗೆ ಕನ್ನಡ ಭಾಷಾ ಮಾಧ್ಯಮದ ವಿದ್ಯಾರ್ಥಿಗಳೂ ಸ್ಥಾನ ಪಡೆದಿರುವುದು ಈ ಬಾರಿಯ ಫಲಿತಾಂಶದ ವಿಶೇಷ.

ಹೆಚ್ಚಿನ ಮಾಹಿತಿಗೆ http://kea.kar.nic.in ಸಂಪರ್ಕಿಸಿ, ವಿಷಯವಾರು ಅಂಕಗಳ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ತಿದ್ದುಪಡಿಗೆ ಮತ್ತೆ ಅವಕಾಶ

ದಾಖಲೆಗಳ ತಿದ್ದುಪಡಿಗೆ ಹಲವು ಬಾರಿ ಅವಕಾಶ ನೀಡಿದರೂ, ಸಿಇಟಿಗೆ ಅರ್ಜಿ ಸಲ್ಲಿಸಿದ 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ದಾಖಲೆ ಸರಿಪಡಿಸಿಕೊಂಡಿಲ್ಲ. ಕಂದಾಯ ದಾಖಲೆಗಳ ಸಂಖ್ಯೆ (ಆರ್‌ಡಿ ನಂಬರ್) ತಾಳೆಯಾಗಿಲ್ಲ. ಅವರಿಗೆ ಜೂನ್ 17ರ ಸಂಜೆ 5ರವರೆಗೆ ಅವಕಾಶ ನೀಡಲಾಗಿದೆ. ಒಂದು ವಾರದ ನಂತರ ಮೆರಿಟ್ ಆಧಾರದಲ್ಲಿ ಕಾಲೇಜುಗಳ ಆಯ್ಕೆಗೆ ಕೌನ್ಸೆಲಿಂಗ್ ಆರಂಭಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಉನ್ನತ ರ್‍ಯಾಂಕ್ ಪಡೆದ ವಿದ್ಯಾ-ರ್ಥಿಗಳಿಗೆ ವಿಶೇಷ ಆರ್ಥಿಕ ನೆರವು ನೀಡುವ ಯೋಜನೆ ಚರ್ಚೆಯಲ್ಲಿದೆ. ಈ ಹಂತದಲ್ಲಿ ಶುಲ್ಕ ಪರಿಷ್ಕರಣೆ ಮಾಡಲಾಗದು. ಕರ್ನಾಟಕ ವೃತ್ತಿಪರ ಕಾಲೇಜುಗಳ ಶುಲ್ಕ ನಿಯಂತ್ರಣ ಸಮಿತಿ ಅಧ್ಯಕ್ಷರ ಬದಲಾವಣೆಯ ಕುರಿತು ಯಾವುದೇ ನಿರ್ಧಾರ ಮಾಡಿಲ್ಲ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹಗರಣದ ತನಿಖೆಯ ಮಾಹಿತಿ ಪಡೆದ ನಂತರ ಮುಂದಿನ ತೀರ್ಮಾನ ತೆಗೆದು-ಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಫಲಿತಾಂಶ ಬಂದಿಲ್ಲವೇ? ಹಾಗಾದರೆ ಹೀಗೆ ಮಾಡಿ..

ಯಾವುದೇ ಅಭ್ಯರ್ಥಿಗಳ ರ್‍ಯಾಂಕ್ ಪಟ್ಟಿಯಲ್ಲಿ ಇರದೇ ಇದ್ದರೆ, ತಡೆಹಿಡಿಯ-ಲಾಗಿದ್ದರೆ ಅಂಥವರು ತಮ್ಮ ಅರ್ಹತಾ ಪರೀಕ್ಷೆಯ ಅಂಕಪಟ್ಟಿಯ ಪ್ರತಿಯನ್ನು keauthority-ka@nic.in ಗೆ ಇ-ಮೇಲ್ ಮಾಡಬೇಕು ಅಥವಾ ಪ್ರಾಧಿಕಾರಕ್ಕೆ ಭೇಟಿ ನೀಡಿ ರ್‍ಯಾಂಕಿಂಗ್ ಪಡೆದುಕೊಳ್ಳಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದರು.

ಸಿಬಿಎಸ್‌ಸಿ ಸೇರಿದಂತೆ ಹೆಚ್ಚಿನ ಅಭ್ಯರ್ಥಿಗಳು ಇಂಗ್ಲಿಷ್ ವಿಷಯದ ಅಂಕಗಳನ್ನು ನಮೂದಿಸಲಿಲ್ಲ. ಇದರಿಂದ ಫಲಿತಾಂಶ ದೊರೆಯದಿರುವುದು ಗಮನಕ್ಕೆ ಬಂದಿದೆ. ಅಂಥವರು ಅಂಕಗಳನ್ನು ನಮೂದಿಸಿದ ತಕ್ಷಣ ಫಲಿತಾಂಶ ದೊರೆಯಲಿದೆ. https://cetonline.Karnataka.gov.in/marksentry2023/forms/login.aspx ಮೂಲಕ ಭೌತ ವಿಜ್ಞಾನ, ಗಣಿತ, ರಸಾಯನ ವಿಜ್ಞಾನ, ಜೀವ ವಿಜ್ಞಾನ ಹಾಗೂ ಇಂಗ್ಲಿಷ್ ವಿಷಯಗಳ ಅಂಕಗಳನ್ನು ನಮೂದಿಸಲು ಅವಕಾಶ ನೀಡಲಾಗಿದೆ ಎಂದರು.

ದ್ವಿತೀಯ ಪಿಯು ಪೂರಕ ಪರೀಕ್ಷೆಯ ಫಲಿತಾಂಶ ಬಂದ ನಂತರ ಅಂಕಗಳನ್ನು ದಾಖಲಿಸಲು ಅವಕಾಶ ನೀಡಲಾಗುವುದು. ಅವರಿಗೂ ರ್‍ಯಾಂಕ್ ನೀಡಲಾಗುವುದು. ನೀಟ್ ಪರೀಕ್ಷೆಯ ಫಲಿತಾಂಶದಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ ಮತ್ತು ಹೋಮಿಯೋಪಥಿ ಕೋರ್ಸುಗಳ ಪ್ರವೇಶಕ್ಕೆ ಅರ್ಹತೆಗೆ ಅನುಗುಣವಾಗಿ ಅಭ್ಯ-ರ್ಥಿಗಳನ್ನು ಪರಿಗಣಿಸಲಾಗುವುದು. ಈ ವರ್ಷದ ಎನ್‌ಎಟಿಎ (ವಾಸ್ತುಶಿಲ್ಪ ಶಾಸ್ತ್ರ ಪ್ರವೇಶ ಪರೀಕ್ಷೆ) ಅಂಕಗಳ ಆಧಾರದ ಮೇಲೆ ಪ್ರವೇಶ ನೀಡಲಾಗುವುದು ಎಂದು ವಿವರಿಸಿದರು.

2,44,345 ಸಿಇಟಿ ಬರೆದಿದ್ದ ವಿದ್ಯಾರ್ಥಿಗಳು

1,29,780 ಬಾಲಕಿಯರು

1,14,565 ಬಾಲಕರು

ಕೋರ್ಸ್	ಅರ್ಹ ಅಭ್ಯರ್ಥಿಗಳ ಸಂಖ್ಯೆ
ಎಂಜಿನಿಯರಿಂಗ್	2,03,381
ಕೃಷಿ ವಿಜ್ಞಾನ	1,64,187
ಪಶುವೈದ್ಯಕೀಯ	1,66,746
ಯೋಗ ಮತ್ತು ನ್ಯಾಚುರೋಪಥಿ	1,66,756
ಬಿ ಫಾರ್ಮಾ	2,06,191
ಫಾರ್ಮಾ ಡಿ	206340
ನರ್ಸಿಂಗ್	1,66,808

1.11 ಲಕ್ಷ ಲಭ್ಯವಿರುವ ಎಂಜಿನಿಯರಿಂಗ್ ಸೀಟುಗಳು

53,248 ಸರ್ಕಾರಿ ಕೋಟಾ

25,171 ಕಾಮೆಡ್–ಕೆ ಸೀಟುಗಳು

33,463 ಆಡಳಿತ ಮಂಡಳಿ ಕೋಟಾ

ಕಷ್ಟ ಅನ್ನಿಸಿದ್ದ ವಿಷಯಗಳಿಗೆ ಹೆಚ್ಚು ಒತ್ತು ನೀಡಿ ಓದುತ್ತಿದ್ದೆ. ಮುಂದೆ ಎಂಜಿನಿಯರಿಂಗ್ ಓದಿ ಅಂಗವಿಕಲರಿಗೆ ಉಪಯೋಗವಾಗುವ ಸಲಕರಣೆಗಳನ್ನು ಕಂಡು ಹಿಡಿಯಬೇಕು.

ವಿಘ್ನೇಶ್ ಎನ್.ಕುಮಾರ್, ಎಂಜಿನಿಯರಿಂಗ್‌ನಲ್ಲಿ ಪ್ರಥಮ ರ್‍ಯಾಂಕ್

ನೀಟ್ ಮತ್ತು ಸಿಇಟಿಗೆ ಒಟ್ಟೊಟ್ಟಿಗೆ ತಯಾರಿ ನಡೆಸಿದ್ದೆ. ನೀಟ್‌ನಲ್ಲಿ 103ನೇ ರ್‍ಯಾಂಕ್ ಪಡೆದಿದ್ದೆ. ಇನ್ನೊಂದು ಪರೀಕ್ಷೆ ಎಂದಷ್ಟೇ ತಿಳಿದುಕೊಂಡು ಓದುತ್ತಿದ್ದೆ.

ಪ್ರತೀಕ್ಷಾ ಆರ್., ಬಿಎನ್‌ವೈಎಸ್, ಬಿ.ಫಾರ್ಮಾ ಮತ್ತು ಫಾರ್ಮಾ ಡಿ. ಯಲ್ಲಿ ಪ್ರಥಮ ರ್‍ಯಾಂಕ್

ನಿಗದಿತ ವೇಳಾಪಟ್ಟಿ ಮಾಡಿಕೊಂಡು ಓದುತ್ತಿದ್ದೆ. ಮುಂದೆ ಎಂಬಿಬಿಎಸ್ ಮಾಡಿ ಹೃದ್ರೋಗ ತಜ್ಞೆಯಾಗಬೇಕು ಎಂಬ ಗುರಿ ಇಟ್ಟುಕೊಂಡಿದ್ದೇನೆ.

ಮಾಳವಿಕಾ ಕಪೂರ್, ವೆಟರ್ನರಿಯಲ್ಲಿ ಮತ್ತು ಬಿಎಸ್‌ಸಿ ನರ್ಸಿಂಗ್‌ನಲ್ಲಿ ಪ್ರಥಮ ರ್‍ಯಾಂಕ್

ಅಧಿವೇಶನದಲ್ಲಿ ಮಸೂದೆ

ಒಂದನೇ ಪುಟದಿಂದ...

ಯಾವುದೇ ಒಂದು ಧರ್ಮದ ಆಚರಣೆಗಳನ್ನು ಅವಹೇಳನ ಮಾಡುವುದನ್ನೂ ಆಮಿಷ ಎಂದೇ ಪರಿ-ಗಣಿಸಲಾಗಿತ್ತು. ಮತಾಂತರ ಮಾಡಿದರೆ ದಂಡ ಮತ್ತು ಜೈಲು ಶಿಕ್ಷೆ ವಿಧಿಸಲಾಗುತ್ತಿತ್ತು.

ಮತಾಂತರ ಆಗಲು ಇಚ್ಛೆ ಇದ್ದವರು, ಸಂಬಂಧ ಪಟ್ಟ ಪ್ರಾಧಿಕಾರದ ಎದುರು ಅರ್ಜಿ ಸಲ್ಲಿಸಬೇಕಿತ್ತು. ಮತಾಂತರ ಕುರಿತ ಅರ್ಜಿಯನ್ನು ಸದರಿ ಕಚೇರಿಯಲ್ಲಿ ಪ್ರಕಟಿಸಿ, ಆಕ್ಷೇಪ ಸಲ್ಲಿಸಲು ಅವಕಾಶ ಇತ್ತು. ಸಂಬಂಧಿ ಮಾತ್ರವಲ್ಲದೇ, ಯಾರು ಬೇಕಾದರೂ ಆಕ್ಷೇಪಣೆ ಸಲ್ಲಿಸಲೂ ಅವಕಾಶ ನೀಡಲಾಗಿತ್ತು.

ಈ ಕಾಯ್ದೆಯು ತಮಗೆ ಬೇಕಾದ ಮತವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಕಿತ್ತುಕೊಂಡಂತೆ ಎಂದು ಅನೇಕರು ಆರೋಪಿಸಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಮತಾಂತರ ಕಾಯ್ದೆಯನ್ನು ವಾಪಸ್ ಪಡೆಯುವುದಾಗಿ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಲಾಗಿತ್ತು. ಸರ್ಕಾರ ಅಸ್ತಿತ್ವಕ್ಕೆ ಬಂದ ಒಂದು ತಿಂಗಳಿನಲ್ಲೇ ಈ ಕಾಯ್ದೆಯನ್ನು ವಾಪಸ್ ಪಡೆಯುವ ನಿರ್ಣಯ ಕೈಗೊಳ್ಳಲಾಗಿದೆ.

ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ಕಾಯ್ದೆಯನ್ನೂ ಹಿಂದಕ್ಕೆ ಪಡೆಯಲು ನಿರ್ಧರಿಸಲಾಗಿದೆ. ಮುಂದಿನ ವಿಧಾನಮಂಡಲ ಅಧಿವೇಶ-ನದಲ್ಲಿ ಮಸೂದೆ ಮಂಡಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಸುದ್ದಿಗೋಷ್ಠಿಯ-ಲ್ಲಿ ಹೇಳಿದರು.

ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿದ ಮೇಲೆ ಸರ್ಕಾರದ ಉದ್ದೇಶ ಈಡೇರಲಿಲ್ಲ. ರೈತರಿಗೆ ಉತ್ತಮ ಬೆಲೆ ಸಿಕ್ಕಿರಲಿಲ್ಲ. ಇದರಿಂದ ಲಕ್ಷಾಂತರ ಕುಟುಂಬಗಳಿಗೆ ಕಹಿ ಅನುಭವ ಆಗಿದೆ. ಸಾಕಷ್ಟು ಜನರು ಹಾನಿ ಅನುಭವಿಸಿ-ದ್ದಾರೆ. ಮಾರುಕಟ್ಟೆಯಲ್ಲಿ ವ್ಯಾಪಾರವೂ ಕುಸಿತವಾಗಿತ್ತು ಎಂದು ಶಿವಾನಂದ ಪಾಟೀಲ ತಿಳಿಸಿದರು.

ಇನ್ನು ಮುಂದೆ ವ್ಯಾಪಾರಕ್ಕೆ ಪರವಾನಗಿ ಪಡೆಯಬೇಕು, ಮಾರುಕಟ್ಟೆ ಒಳಗೆ ಇರುವ ಕಾನೂನು ಹೊರಗೂ ಅನ್ವಯವಾಗುತ್ತದೆ. ಮಾರುಕಟ್ಟೆ ಒಳಗೆ ಎಷ್ಟು ಶುಲ್ಕ ಕಟ್ಟುತ್ತಾರೋ ಹೊರಗೆ ವ್ಯಾಪಾರ ಮಾಡುವವರೂ ಅಷ್ಟೇ ಶುಲ್ಕ ಪಾವತಿಸಬೇಕಾಗುತ್ತದೆ ಎಂದರು.

'ಹೆಡಗೇವಾರ್, ಸಾವರ್ಕರ್ ಪಾಠಕ್ಕೆ ಕೊಕ್'

ಒಂದನೇ ಪುಟದಿಂದ...

'ಹಿಂದೆ ಹಾಳು ಮಾಡಿದ್ದನ್ನು ಸರಿಪಡಿಸಲು ರಾಜಪ್ಪ ದಳವಾಯಿ, ಚಂದ್ರಶೇಖರ್, ರಾಜೇಶ್ ಮತ್ತು ಅಶ್ವ-ತ್ಥನಾರಾಯಣ ಅವರನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಅವರಿಂದ 45 ಬದಲಾವಣೆಗಳ ಸಲಹೆ ಬಂದಿತ್ತು. ಕೆಲವು ಪದಗಳು, ವಾಕ್ಯಗಳು ಮತ್ತು ಪಠ್ಯ ಬದಲಿಸಲು ಸೂಚಿಸಿದ್ದಾರೆ. 6 ರಿಂದ 10 ತರಗತಿವರೆಗಿನ ಕನ್ನಡ ಮತ್ತು ಸಮಾಜ ಪಠ್ಯ ಪುಸ್ತಕಗಳಲ್ಲಿ ಬದಲಾವಣೆ ಮಾಡಲಾಗಿದೆ' ಎಂದು ಮಧು ತಿಳಿಸಿದರು.

'ಈಗಾಗಲೇ ಪಠ್ಯಪುಸ್ತಕಗಳು ಮುದ್ರಣವಾಗಿ ಮಕ್ಕಳ ಕೈಗೆ ತಲುಪಿವೆ. ಈ ಹಂತದಲ್ಲಿ ಪಠ್ಯ-ಪುಸ್ತಕಗಳನ್ನು ಮರು ಮುದ್ರಿಸಲು ಸಾಧ್ಯವಿಲ್ಲ. ಹಿಂದಿನ ಸರ್ಕಾರ ಮಾಡಿದ ಬದಲಾವಣೆಗೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಇದರಿಂದ ಹೆದರಿದ ಬಿಜೆಪಿಯವರು ಪೂರ್ಣ ಪ್ರಮಾಣದಲ್ಲಿ ಬದಲಾವಣೆ ಮಾಡಲು ಸಾಧ್ಯವಾಗಲಿಲ್ಲ' ಎಂದು ಹೇಳಿದರು.

'ಪಠ್ಯ ಪುಸ್ತಕಗಳ ಸಮಗ್ರ ಬದಲಾವಣೆ ತಜ್ಞರ ಸಮಿತಿಯೊಂದನ್ನು ರಚಿಸಲಾಗುವುದು. ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಮುಖ್ಯಮಂ-ತ್ರಿಯವರ ಮಾರ್ಗದರ್ಶನದಂತೆ ಪಠ್ಯವನ್ನು ಸಮಗ್ರವಾಗಿ ಬದಲಾವಣೆ ಮಾಡಲಾಗುವುದು' ಎಂದರು.

'ಭಿನ್ನ ಕಾನೂನುಗಳಿಂದಾಗಿ ದೇಶದ ಏಕತೆಗೆ ಕಳಂಕ'

ಒಂದನೇ ಪುಟದಿಂದ...

'ಕೆಲ ವಿಚಾರಗಳಿಗೆ ಸಂಬಂಧಿಸಿ ಬೇರೆ ಬೇರೆ ವೈಯಕ್ತಿಕ ಕಾನೂನುಗಳಿವೆ. ಆದರೆ, ಇಂಥ ಕಾನೂನುಗಳನ್ನು ಪಾಲಿಸುತ್ತಿರುವ ವಿವಿಧ ಸಮುದಾಯ-ಗಳನ್ನು ಒಂದು ಸಾಮಾನ್ಯ ವೇದಿಕೆಗೆ ತರುವ ಮೂಲಕ ದೇಶದ ಏಕತೆ ಸಾಧಿಸುವುದಕ್ಕೆ ಸಂವಿಧಾನದ 44ನೇ ವಿಧಿಯ ಅವಕಾಶ ನೀಡುತ್ತದೆ' ಎಂದು ವಿವರಿಸಿದೆ.


'ಆಸ್ತಿ ಹೊಂದುವ ಹಕ್ಕು, ಅದರ ನಿರ್ವಹಣೆ ಹಾಗೂ ಉತ್ತ-ರಾಧಿಕಾರಕ್ಕೆ ಸಂಬಂಧಿಸಿ ಒಂದು ಸಾಮಾನ್ಯ ಕಾನೂನು ಇರಬೇಕು ಎಂಬ ಪರಿಕಲ್ಪನೆಯೇ 44ನೇ ವಿಧಿಗೆ ಆಧಾರ. ಈ ವಿಧಿಯು ಧರ್ಮವನ್ನು ಸಾಮಾಜಿಕ ಸಂಬಂಧಗಳು ಹಾಗೂ ವೈಯಕ್ತಿಕ ಕಾನೂನುಗಳಿಂದ ಪ್ರತ್ಯೇಕಿ-ಸುತ್ತದೆ. ಈ ಕಾರಣಕ್ಕಾಗಿ ಆಸ್ತಿ ಮತ್ತು ವಿವಾಹಕ್ಕೆ ಸಂಬಂಧಿಸಿ ಬೇರೆ ಬೇರೆ ಕಾನೂನುಗಳನ್ನು ಅನುಸರಿಸುವುದು ದೇಶದ ಒಗ್ಗಟ್ಟಿಗೆ ಅವಮಾನ ಮಾಡಿ-ದಂತಾಗುತ್ತದೆ' ಎಂದೂ ಪ್ರತಿಪಾದಿಸಿದೆ.

'ಏಕರೂಪ ನಾಗರಿಕ ಸಂಹಿತೆ ಬಹಳ ಸೂಕ್ಷ್ಮ ಹಾಗೂ ಮಹತ್ವದ ವಿಷಯ. ವಿವಿಧ ಸಮುದಾಯಗಳಿಗೆ ಸಂಬಂಧಿಸಿ ಜಾರಿಯಲ್ಲಿರುವ ಬೇರೆ ಬೇರೆ ವೈಯಕ್ತಿಕ ಕಾನೂನುಗಳಲ್ಲಿನ ಅವಕಾಶಗಳ ಕುರಿತು ಆಳ ಅಧ್ಯಯನದ ಅಗತ್ಯ ಇದೆ' ಎಂದು ಕಾನೂನು ಸಚಿವಾಲಯ ತಿಳಿಸಿದೆ.

ಕೇಂದ್ರ ಸರ್ಕಾರದ ಮನವಿ ಮೇರೆಗೆ 21ನೇ ಕಾನೂನು ಆಯೋಗವು ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಂಬಂಧಿಸಿ ಹಲವು ಭಾಗಿದಾರರಿಂದ ಅಹವಾಲುಗಳನ್ನು ಸ್ವೀಕರಿಸಿ, ಪರಿಶೀಲನೆ ನಡೆಸಿದೆ. ಈ ಕುರಿತು ಸಾರ್ವಜನಿಕವಾಗಿ ವ್ಯಾಪಕ ಚರ್ಚೆ ನಡೆಯಬೇಕು ಎಂಬ ಉದ್ದೇಶದಿಂದ ಆಯೋಗವು 2018ರ ಆಗಸ್ಟ್ 31ರಂದು ತನ್ನ ವೆಬ್‌ಸೈಟ್‌ನಲ್ಲಿ ವರದಿಯನ್ನು ಪ್ರಕಟಿಸಿದೆ ಎಂದಿರುವ ಕೇಂದ್ರ ಸರ್ಕಾರ, ಈ ವಿಚಾರವಾಗಿ ಅಶ್ವಿನ್ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಅರ್ಜಿ ಸಮರ್ಥನೀಯವಲ್ಲ ಎಂದು ಪ್ರತಿಪಾದಿಸಿದೆ.

ಕೇಂದ್ರದ ಪ್ರಮಾಣ ಪತ್ರದಲ್ಲಿರುವ ಅಂಶಗಳು

- ಕಾನೂನು ರಚಿಸುವುದು ಸಂಸತ್‌ನ ಸಾರ್ವಭೌಮ ಅಧಿಕಾರ. ಈ ವಿಚಾರವಾಗಿ ಹೊರಗಿನ ಯಾವುದೇ ಪ್ರಾಧಿಕಾರ/ಸಂಸ್ಥೆಯು ಸಂಸತ್‌ಗೆ ನಿರ್ದೇಶನ ನೀಡುವಂತಿಲ್ಲ
- ಒಂದು ನಿರ್ದಿಷ್ಟ ಕಾನೂನು ರಚಿಸುವಂತೆ ಯಾವುದೇ ಹೊರಗಿನ ಶಕ್ತಿ ಸಂಸತ್‌ಗೆ ನಿರ್ದೇಶನ ನೀಡುವಂತಿಲ್ಲ ಎಂದು ಈ ಹಿಂದಿನ ಹಲವಾರು ತೀರ್ಪುಗಳಲ್ಲಿ ಸ್ಪಷ್ಟಪಡಿಸಲಾಗಿದೆ
- ಕಾನೂನು ರಚಿಸುವುದು ನೀತಿ ನಿರೂಪಣೆಗೆ ಸಂಬಂಧಿಸಿದ್ದು. ಚುನಾಯಿತ ಪ್ರತಿನಿಧಿಗಳು ಈ ಕುರಿತು ನಿರ್ಧಾರ ಕೈಗೊಳ್ಳಬೇಕು. ಈ ವಿಚಾರವಾಗಿ ನ್ಯಾಯಾಲಯವು ಯಾವುದೇ ನಿರ್ದೇಶನ ಕೊಡುವಂತಿಲ್ಲ
- ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳ ಆಧಾರದ ಮೇಲೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಬಾರದು ಎಂದು ಹಲವಾರು ತೀರ್ಪುಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ



ಸುಭಾಷಿತ

ಆಲೋಚಿಸುವುದು ಕಷ್ಟದ ಕೆಲಸ. ಹಾಗಾಗಿ, ಕೆಲವರಷ್ಟೇ ಆ ಕೆಲಸ ಮಾಡುತ್ತಾರೆ.

–ಆಲ್ಬರ್ಟ್ ಐನ್‌ಸ್ಟೀನ್

ದತ್ತಾಂಶ ಸೋರಿಕೆ: ಖಾಸಗಿತನದ ಹಕ್ಕು ರಕ್ಷಣೆ ಸರ್ಕಾರದ ಹೊಣೆ

ಕೋವಿಡ್ ಲಸಿಕೆ ಹಾಕಿಸಿಕೊಂಡ ಜನರ ದತ್ತಾಂಶಗಳು ಕೋವಿನ್ ದತ್ತಕೋಶದಿಂದ ಸೋರಿಕೆ ಆಗಿವೆ ಎಂಬ ವರದಿಗಳು ದೇಶದ ದತ್ತಾಂಶ ರಕ್ಷಣೆ ವ್ಯವಸ್ಥೆ ದುರ್ಬಲವಾಗಿದೆ ಎಂಬ ಆತಂಕವನ್ನು ಇನ್ನಷ್ಟು ಹೆಚ್ಚು ಮಾಡುವಂತೆ ಇವೆ. ಇದು, ದತ್ತಾಂಶ ಸುರಕ್ಷತೆಯನ್ನು ಬಲಪಡಿಸಬೇಕಿದೆ ಎನ್ನುವ ಎಚ್ಚರಿಕೆ ಗಂಟೆಯೂ ಹೌದು. ಹೆಸರು, ಲಿಂಗ, ಹುಟ್ಟಿದ ದಿನಾಂಕ, ಆಧಾರ್ ಸಂಖ್ಯೆ, ಪ್ಯಾನ್, ಪಾಸ್‌ಪೋರ್ಟ್ ಸಂಖ್ಯೆ, ಮತದಾರರ ಗುರುತಿನ ಚೀಟಿ ಮತ್ತು ಲಸಿಕೆ ಹಾಕಿಸಿಕೊಂಡಿರುವುದರ ವಿವರಗಳನ್ನು ಕೋವಿನ್ ಪೋರ್ಟಲ್‌ನಲ್ಲಿ ಸಂಗ್ರಹಿಸಲಾಗಿತ್ತು. ಇಂತಹ ವೈಯಕ್ತಿಕ ಮಾಹಿತಿಯು ಟೆಲಿಗ್ರಾಂ ಬಾಟ್ ಮೂಲಕ ಸೋರಿಕೆ ಆಗಿದೆ. ಸೋರಿಕೆ ನಡೆದೇ ಇಲ್ಲ ಎಂದು ಹೇಳಿರುವ ಕೇಂದ್ರ ಸರ್ಕಾರವು ತನಿಖೆಗೆ ಆದೇಶ ನೀಡಿದೆ. ಕೇಂದ್ರದ ಮಾಹಿತಿ ತಂತ್ರಜ್ಞಾನ (ಐಟಿ) ಸಚಿವ ರಾಜೀವ್ ಚಂದ್ರಶೇಖರ್ ಅವರು ಈ ಬಾರಿ ಸೋರಿಕೆ ನಡೆದೇ ಇಲ್ಲ ಎಂದು ಹೇಳಿರುವುದು ಕಳವಳ ಹೆಚ್ಚುವಂತೆ ಮಾಡಿದೆ. ಈಗ ಸಾರ್ವಜನಿಕವಾಗಿ ಲಭ್ಯ ಇರುವ, ನಾಗರಿಕರ ದತ್ತಾಂಶವು ಈ ಹಿಂದೆ ಸೋರಿಕೆ ಆದದ್ದು ಆಗಿರಬಹುದು ಎಂದು ಸಚಿವರು ಹೇಳಿದ್ದಾರೆ. ಈ ಹಿಂದೆಯೂ ಸೋರಿಕೆ ಆಗಿತ್ತು ಎಂಬ ವಿಚಾರವು ಈಗಿನ ಸೋರಿಕೆ ಪ್ರಕರಣವನ್ನು ಇನ್ನಷ್ಟು ಗಂಭೀರಗೊಳಿಸುತ್ತದೆ. ಜೊತೆಗೆ, ಇಲ್ಲಿ ಸೋರಿಕೆ ಎಂಬುದು ಸಾಮಾನ್ಯವಾಗಿಬಿಟ್ಟಿದೆಯೆ ಎಂಬ ಪ್ರಶ್ನೆಯನ್ನೂ ಹುಟ್ಟು ಹಾಕುತ್ತದೆ. ಸೋರಿಕೆಯನ್ನು ತಡೆಯಲು ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ ಎಂಬ ಆತಂಕವೂ ಮೂಡಿದೆ.



ನಿರ್ದಿಷ್ಟ ಉದ್ದೇಶಕ್ಕಾಗಿ ಮಾತ್ರ ಸಂಸ್ಥೆಯ ಜೊತೆ ಹಂಚಿಕೊಳ್ಳಲಾದ ದತ್ತಾಂಶವು ಸುರಕ್ಷಿತವಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಸರ್ಕಾರದ ಕೆಲಸ

ವಿವಿಧ ಇ-ವೇದಿಕೆಗಳಿಂದ ವೈಯಕ್ತಿಕ ಮತ್ತು ಸಾರ್ವಜನಿಕ ವಲಯದ ಗೋಪ್ಯ ಸ್ವರೂಪದ ದತ್ತಾಂಶಗಳು ಹಲವು ಬಾರಿ ಸೋರಿಕೆ ಆಗಿವೆ. ಇಂತಹ ಸೋರಿಕೆಯು ವಾಣಿಜ್ಯ, ಸುರಕ್ಷತೆ ಮತ್ತು ಇತರ ಪರಿಣಾಮಗಳಿಗೆ ಕಾರಣ ಆಗಬಹುದು. ಕೋವಿನ್‌ನಂತಹ ಸಾರ್ವಜನಿಕ ಇ-ವೇದಿಕೆಯಿಂದ ದತ್ತಾಂಶ ಸೋರಿಕೆ ಆದರೆ ಅದರ ಹೊಣೆಯನ್ನು ಸರ್ಕಾರವೇ ಹೊರಬೇಕಾಗುತ್ತದೆ. ಉದ್ಯೋಗಿಗಳ ಭವಿಷ್ಯ ನಿಧಿಯಿಂದ ಕೂಡ ದತ್ತಾಂಶ ಸೋರಿಕೆ ಕಳೆದ ನವೆಂಬರ್‌ನಲ್ಲಿ ಆಗಿತ್ತು. ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೇಲೆ ಗಂಭೀರವಾದ ಸೈಬರ್ ದಾಳಿ ಕಳೆದ ವರ್ಷ ನಡೆದಿತ್ತು. ಇದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲಾಗಿದೆ ಎಂದು ಸರ್ಕಾರ ಆಗ ಹೇಳಿತ್ತು. ರೈಲ್ವೆ ಟಿಕೆಟ್ ಹಂಚಿಕೆ ಮತ್ತು ಕ್ರೆಡಿಟ್ ಕಾರ್ಡ್ ದತ್ತಾಂಶವೂ ಸೋರಿಕೆ ಆಗಿತ್ತು. ಕೋವಿನ್ ಪೋರ್ಟಲ್‌ನಿಂದ ಸೋರಿಕೆ ಆಗಿರುವ ಭಾರಿ ಪ್ರಮಾಣದ ದತ್ತಾಂಶಗಳನ್ನು ವಿವಿಧ ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವಿದೆ. ನಿರ್ದಿಷ್ಟ ಉದ್ದೇಶಕ್ಕಾಗಿ ಮಾತ್ರ ಸರ್ಕಾರದ ಸಂಸ್ಥೆಯ ಜೊತೆಗೆ ದತ್ತಾಂಶವನ್ನು ಹಂಚಿಕೊಳ್ಳಲಾಗಿರುತ್ತದೆ. ಅದು ಸುರಕ್ಷಿತವಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಸರ್ಕಾರದ ಕೆಲಸ. ಈ ಹಿಂದೆ ಆಗಿದ್ದ ಮಾಹಿತಿ ಸೋರಿಕೆ ಪ್ರಕರಣಗಳ ತನಿಖೆಯ ಫಲಿತಾಂಶವೇನು ಎಂಬುದು ಯಾವತ್ತೂ ಬಹಿರಂಗವಾಗಿದ್ದೇ ಇಲ್ಲ.

ಖಾಸಗಿತನವು ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಆರು ವರ್ಷಗಳ ಹಿಂದೆಯೇ ಹೇಳಿದೆ. ಹಾಗಿದ್ದರೂ ಖಾಸಗಿತನದ ಹಕ್ಕಿಗೆ ಮಾನ್ಯತೆ ನೀಡಲು, ಅದನ್ನು ಒಪ್ಪಿಕೊಳ್ಳಲು ಸರ್ಕಾರ ಸಿದ್ಧವಿಲ್ಲ. ಪೌರರ ಮಾತು ಮತ್ತು ಚಟುವಟಿಕೆಗಳ ಮೇಲೆ ಕಣ್ಗಾವಲು ಇರಿಸಿ ವಿವಿಧ ರೀತಿಯಲ್ಲಿ ಖಾಸಗಿತನದ ಹಕ್ಕನ್ನು ಸರ್ಕಾರವೇ ಉಲ್ಲಂಘಿಸಿದೆ. ಇದಕ್ಕಾಗಿ ಸರ್ಕಾರವು ತೀವ್ರ ಟೀಕೆಗೆ ಒಳಗಾಗಿದ್ದೂ ಇದೆ. ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಸಮಿತಿಯು ದತ್ತಾಂಶ ರಕ್ಷಣೆಗಾಗಿ ಕರಡು ಮಸೂದೆಯೊಂದನ್ನು ಸಿದ್ಧಪಡಿಸಿಕೊಟ್ಟಿತ್ತು. ಹಾಗಿದ್ದರೂ ದತ್ತಾಂಶ ರಕ್ಷಣೆಗೆ ಬೇಕಿರುವ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಬದುಕಿನ ಎಲ್ಲ ಆಯಾಮಗಳನ್ನೂ ಡಿಜಿಟಲೀಕರಣವು ಆವರಿಸಿಕೊಂಡಿದೆ. ದಕ್ಷತೆಗೆ ಮತ್ತು ಅನುಕೂಲಕ್ಕಾಗಿ ಡಿಜಿಟಲೀಕರಣವು ಅತ್ಯಂತ ಅಗತ್ಯ. ಆದರೆ, ಡಿಜಿಟಲ್ ಇಂಡಿಯಾ ನೀತಿಗೆ ಒತ್ತು ನೀಡುತ್ತಿರುವ ಸರ್ಕಾರವು ಪೌರರ ಖಾಸಗಿ ಮಾಹಿತಿಯು ಸೋರಿಕೆಯಾಗುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳುವುದರಲ್ಲಿ ಹಿಂದೆ ಬಿದ್ದಿದೆ. ರಾಷ್ಟ್ರೀಯ ಸೈಬರ್ ಸುರಕ್ಷತೆ ಕಾರ್ಯತಂತ್ರದ ಪ್ರಸ್ತಾವವನ್ನು 2019ರಲ್ಲಿಯೇ ಸಿದ್ಧಪಡಿಸಿದ್ದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ದತ್ತಾಂಶ ಸೋರಿಕೆ ಪ್ರಕರಣಗಳ ಕುರಿತು ಸಮಗ್ರವಾದ ತನಿಖೆ ನಡೆಯಬೇಕು. ವ್ಯವಸ್ಥೆಯಲ್ಲಿ ಇರುವ ಹುಳುಕುಗಳು ಮತ್ತು ಲೋಪಗಳನ್ನು ಸರಿಪಡಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು.

ದಿನದ ಟ್ವೀಟ್

ಬೆಲೆ ಸ್ಥಿರತೆಗಾಗಿ ಕ್ರಮ



ಮಾರುಕಟ್ಟೆ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಹಳ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಕಾಂಗ್ರೆಸ್ ಪಕ್ಷವು ತನ್ನ ಭರವಸೆಗಳ ಈಡೇರಿಸುವಿಕೆಯಲ್ಲಿನ ವೈಫಲ್ಯವನ್ನು ಬಿಜೆಪಿ ಮೇಲೆ ಹೊರಿಸಬಾರದು. ವೈಫಲ್ಯವನ್ನು ಒಪ್ಪಿಕೊಂಡು ಮುಂದುವರಿಯಿರಿ.

(ಕೇಂದ್ರವು ರಾಜ್ಯಕ್ಕೆ ಅಕ್ಕಿ ಕೊಡುವುದನ್ನು ಉದ್ದೇಶಪೂರ್ವಕವಾಗಿ ತಡೆಹಿಡಿದಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಬಿ.ಎಲ್.ಸಂತೋಷ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

ಕಿಡಿನುಡಿ



ನಾವು ಕೇಂದ್ರವನ್ನು ಉಚಿತವಾಗಿ ಅಕ್ಕಿ ಕೇಳಿರಲಿಲ್ಲ. ಅವರು ಕೇಳಿದಷ್ಟು ಹಣ ಕೊಡಲು ಸಿದ್ಧರಿದ್ದೇವೆ. ಅವರಲ್ಲಿ ಏಳು ಲಕ್ಷ ಟನ್ ಆಹಾರಧಾನ್ಯ ಸ್ಟಾಕ್ ಇದ್ದರೂ ಕೊಡದೆ ರಾಜಕಾರಣ ಮಾಡಿದ್ದಾರೆ. ಕೇಂದ್ರವು ರಾಜಕೀಯ ಉದ್ದೇಶದಿಂದ ತೀರ್ಮಾನ ಮಾಡಿದೆ. ಬಡವರಿಗೆ ಊಟ ಕೊಡುವ ವಿಚಾರದಲ್ಲಿ ರಾಜಕೀಯ ಮಾಡಿರುವುದನ್ನು ಖಂಡಿಸುತ್ತೇನೆ.

ಕೆ.ಎಚ್.ಮುನಿಯಪ್ಪ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 16-6-1998

• ಬಿಕ್ಕಟ್ಟು ತೀವ್ರ: ಸಭೆಗೆ ಆಗ್ರಹ

ಬೆಂಗಳೂರು, ಜೂನ್ 15– ಸಂಪುಟ ವಿಸ್ತರಣೆಯಿಂದ ಆಡಳಿತಾರೂಢ ಜನತಾದಳದಲ್ಲಿ ಉಂಟಾಗಿರುವ ಬಿಕ್ಕಟ್ಟು ಇನ್ನೂ ಪರಿಹಾರ ಕಾಣದೇ ಇರುವುದರಿಂದ ರಾಜಕೀಯ ಅನಿಶ್ಚಿತತೆ ಹಾಗೆಯೇ ಮುಂದುವರಿದಿದೆ. ಈ ಮಧ್ಯೆ ಅತೃಪ್ತ ಸಚಿವರು– ಶಾಸಕರು ಇಂದು ರಾತ್ರಿ ಮತ್ತೆ ಸಭೆ ಸೇರಿ, ತುರ್ತಾಗಿ ದಳದ ಶಾಸಕಾಂಗ ಪಕ್ಷದ ಸಭೆಯನ್ನು ಕರೆಯುವಂತೆ ಮುಖ್ಯಮಂತ್ರಿಗಳನ್ನು ಆಗ್ರಹಪಡಿಸಿದ್ದಾರೆ.

ಹಿರಿಯ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸಂಪುಟ ವಿಸ್ತರಣೆ ಮಾಡಲು ತೀರ್ಮಾನಿಸಿದ ಮುಖ್ಯಮಂತ್ರಿಗಳ ನಿಲುವನ್ನು ಪ್ರತಿಭಟಿಸಿ ಸಂಪುಟಕ್ಕೆ ಸಾಮೂಹಿಕವಾಗಿ ರಾಜೀನಾಮೆ ನೀಡಲು ಉದ್ದೇಶಿಸಿದ್ದ ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕೆಲವು ಸಚಿವರು, ಇಂದು ನಡೆಸಿದ ಮಧ್ಯಸ್ಥಿಕೆಯಿಂದಾಗಿ ರಾಜೀನಾಮೆ ನಿರ್ಧಾರವನ್ನು ತಾತ್ಕಾಲಿಕವಾಗಿ ಮುಂದೂಡಿದ್ದಾರೆ.

ಈ ಮಧ್ಯೆ, ಬಿಕ್ಕಟ್ಟಿಗೆ ಪರಿಹಾರ ಕಂಡು ಹಿಡಿಯಲು ಕೆಲವು ಹಿರಿಯ ಸಚಿವರು ಹಾಗೂ ಪ್ರದೇಶ ಜನತಾದಳದ ಅಧ್ಯಕ್ಷ ಬಿ.ಎಲ್.ಶಂಕರ್ ಅವರು ಸಂಧಾನ ಯತ್ನ ನಡೆಸಿದ್ದರೂ ಅದು ಇನ್ನೂ ಯಶಸ್ಸು ಕಂಡಿಲ್ಲ.

• ಚಂಡಮಾರುತಕ್ಕೆ ಬಂದರು ಪಟ್ಟಣ ನಾಮಾವಶೇಷ

ರಾಜ್‌ಕೋಟ್, ಜೂನ್ 15 (ಯುಎನ್‌ಐ)– ಗುಜರಾತ್ ಕರಾವಳಿಯ ಮೇಲೆ ಈಚೆಗೆ ಬೀಸಿದ ಭೀಕರ ಚಂಡಮಾರುತದಿಂದಾಗಿ ರಾಜ್‌ಕೋಟ್ ಜಿಲ್ಲೆಯ ಬಂದರು ಪಟ್ಟಣವಾದ ನವಲಕ್ಕಿ ನಾಮಾವಶೇಷವಾಗಿದೆ. ಚಂಡಮಾರುತದ ಬಗ್ಗೆ ಎಚ್ಚರಿಕೆ ನೀಡುವ ತಂತಿ ಸಂದೇಶ ತಡವಾಗಿ ಬಂದುದರಿಂದ ಇಲ್ಲಿ ಭಾರಿ ಸಾವು–ನೋವು ಸಂಭವಿಸಿತು.

50 ವರ್ಷಗಳ ಹಿಂದೆ

ಶನಿವಾರ, 16-6-1973

• ಆರೋಪ ನಿಜವಾದರೆ ರಾಜೀನಾಮೆ, ಸಾರ್ವಜನಿಕ ಕ್ಷೇತ್ರದಿಂದಲೇ ನಿರ್ಗಮನ

ಬೆಂಗಳೂರು, ಜೂನ್ 15– ತಮ್ಮ ವಿರುದ್ಧ ಕೆಲವರು ಮಾಡಿರುವ ಆಪಾದನೆಗಳಲ್ಲಿ ‘ಲೇಶಾಂಶ ಸತ್ಯ ಇದ್ದರೂ ನಾನು ಕೇವಲ ಮಂತ್ರಿ ಪದವಿಯಿಂದಲೇ ಅಲ್ಲ, ಸಾರ್ವಜನಿಕ ಜೀವನದಿಂದಲೇ’ ನಿರ್ಗಮಿಸುವುದಾಗಿ ಕೈಗಾರಿಕೆ ಸಚಿವ ಶ್ರೀ ಎಸ್.ಎಂ.ಕೃಷ್ಣ ಅವರು ಇಂದು ವಿಧಾನ ಪರಿಷತ್ತಿನಲ್ಲಿ ಘೋಷಿಸಿದರು.

ಆಪಾದನೆಗಳ ಬಗ್ಗೆ ಕೂಡಲೇ ವಿಚಾರಣೆ ನಡೆಸಿ ‘ನನ್ನ ಮೇಲೆ ಬಂದಿರುವ ಆರೋಪಗಳ ಬಗ್ಗೆ ತನಿಖೆ’ ನಡೆಸಬೇಕೆಂದೂ ಸಚಿವರು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡಿದ್ದಾರೆ.

ಮಂಡ್ಯ ಜಿಲ್ಲೆಯ ‘ಕೆಲವು ವಿದ್ಯಾರ್ಥಿಗಳು’ ತಮ್ಮ ವಿರುದ್ಧ ಸ್ವಜನಪಕ್ಷಪಾತದ ಆಪಾದನೆಗಳನ್ನು ಮಾಡಿದ್ದಾರೆಂಬ ಸುದ್ದಿ ಬೆಳಗಿನ ಪತ್ರಿಕೆಗಳಲ್ಲಿ ಬಂದ ನಂತರ ಸಚಿವ ಶ್ರೀ ಕೃಷ್ಣ ಅವರು ದೆಹಲಿಯಲ್ಲಿರುವ ಮುಖ್ಯಮಂತ್ರಿ ಶ್ರೀ ಅರಸು ಅವರೊಡನೆ ಫೋನಿನಲ್ಲಿ ಮಾತನಾಡಿ, ವಿಧಾನ ಪರಿಷತ್ತಿನಲ್ಲಿ ಹೇಳಿಕೆ ನೀಡುವ ನಿರ್ಧಾರ ಕೈಗೊಂಡರು.

• ಭಾರತ ಉಪಖಂಡ ‘ಕಾತರ ವಲಯ’ ಆಗದಿರಲಿ: ಇಂದಿರಾ

ಬೆಲ್‌ಗ್ರೇಡ್, ಜೂನ್ 15– ಪಾಕಿಸ್ತಾನದ ಮನೋಭಾವನೆ ಮತ್ತು ವರ್ತನೆಯಲ್ಲಿ ತೀವ್ರ ರೀತಿಯಲ್ಲಿ ಬದಲಾವಣೆಗಳಾಗುತ್ತಿದ್ದರೂ ಆ ನೆರೆ ರಾಷ್ಟ್ರದ ಜತೆ ಶಾಂತಿಯುತ ಸಹಬಾಳ್ವೆ ನಡೆಸಬೇಕೆಂಬ ಭಾರತದ ಹೆಬ್ಬಯಕೆಯನ್ನು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಪುಷ್ಟೀಕರಿಸಿದರು.

‘ಬಿಟ್ಟಿಭಾಗ್ಯ’ ಎಂದು ಹೀಗಳೆಯುವುದ ಬಿಡಿ, ‘ತುಟ್ಟಿಭಾಗ್ಯ’ ಕೊಟ್ಟವರ ಕಡೆ ನೋಡಿ

ಕೈ ಗ್ಯಾರಂಟಿ ಮತ್ತು ಕಮಲದ ವಾರಂಟಿ



ಗತಿಬಿಂಬ

ವೈ.ಗ.ಜಗದೀಶ್

‘**ನಾವು** ಎಷ್ಟು ಖರ್ಚು ಮಾಡುತ್ತೇವೆ ಎಂಬುದು ಮುಖ್ಯವಲ್ಲ, ಯಾರಿಗೆ ಖರ್ಚು ಮಾಡುತ್ತೇವೆ ಎಂಬುದು ಮುಖ್ಯ’ –ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಕುರಿ ಕಾಯುವವನಿಗೆ ಅರ್ಥಶಾಸ್ತ್ರ ಏನು ಗೊತ್ತು’ ಎಂದು ಹಂಗಿಸಲ್ಪಟ್ಟಿದ್ದ ವ್ಯಕ್ತಿಯೊಬ್ಬರು ಹಣಕಾಸು ಸಚಿವರಾದಾಗಲಷ್ಟೇ ಇಂತಹ ಮಾತು ಕೇಳಲು ಸಾಧ್ಯ. ‘ಬಿಟ್ಟಿಭಾಗ್ಯ’ ಎಂದು ಹೀಗಳೆಯುವವರಿಗೆ ಸಿದ್ದರಾಮಯ್ಯ ತಿರುಗೇಟು ಕೊಟ್ಟಿದ್ದು ಹೀಗೆ. ಬಾಲ್ಯದಲ್ಲಿ ಕಷ್ಟವನ್ನೇ ಉಂಡು, ಹೊದ್ದು ಮಲಗಿದ್ದ ಕೆಲವರಲ್ಲಿ ಮಾತ್ರ ತಾಯ್ತನದ ಅಂತಃಕರಣ ಉಕ್ಕುತ್ತದೆ, ಯೋಜನೆಗಳನ್ನು ರೂಪಿಸುವಾಗ ಹೃದಯ ಕಲಕಿ, ಸಂಕಷ್ಟದಲ್ಲಿರುವವರನ್ನು ಸಂತೈಸುವ ಭಾವ ಮಿಡಿಯುತ್ತದೆ.

ಸೂಟಿನಲ್ಲಿ ಚಿನ್ನದ ರೇಖುಗಳನ್ನು ಪೋಣಿಸಿಕೊಂಡು, ಕಾರ್ಯಕ್ರಮಕ್ಕೊಂದು ದಿರಿಸು ಧರಿಸಿ ಕಂಗೊಳಿಸುವವರಿಗೆ ಜನರ ಎದೆಯಾಳದಲ್ಲಿನ ಆರ್ತನಾದ, ನೋವಿನಿಂದ ಹಿಪ್ಪೆಯಾಗಿರುವ ಬದುಕಿನ ಪಡಿಪಾಟಲು ಹೇಗೆ ಗೋಚರಿಸೀತು? ‘ಈರುಳ್ಳಿ ದುಬಾರಿಯಾಗಿದೆಯಲ್ಲ’ ಎಂಬ ಪ್ರಶ್ನೆಗೆ, ‘ನಾನು ಈರುಳ್ಳಿಯನ್ನೇ ತಿನ್ನುವುದಿಲ್ಲ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಉತ್ತರಿಸಿದ್ದರು. ಸಿದ್ದರಾಮಯ್ಯ ಹಾಗೂ ನಿರ್ಮಲಾ ಅವರ ವಾಕ್ಯಗಳನ್ನು ವ್ಯಾಖ್ಯಾನಿಸುವುದು ಬೇಡ, ಅಕ್ಕಪಕ್ಕ ಇಟ್ಟು ನೋಡಿದರೂ ಸಾಕು.

ಕಾಂಗ್ರೆಸ್ ಗ್ಯಾರಂಟಿಗಳ ಅನುಕೂಲ, ಆರ್ಥಿಕತೆಯ ಮೇಲೆ ಅದು ಬೀರಬಹುದಾದ ‘ದುಷ್ಟ’ ಪರಿಣಾಮಗಳ ಬಗ್ಗೆ ಸ್ವಯಂಘೋಷಿತ ‘ಅರ್ಥಶಾಸ್ತ್ರಜ್ಞ’ರು ಸಂಪುಟಗಟ್ಟಲೇ ಮಾಹಿತಿಗಳನ್ನು ಮುಂದಿಟ್ಟು ವಿಶ್ಲೇಷಣೆ ನಡೆಸಿದ್ದಾರೆ. ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತುಕೊಂಡು, ಸಾಮಾಜಿಕ ಜಾಲತಾಣದಲ್ಲಿ ಜಾಲಾಡಿಕೊಂಡು ಇರುವವರಿಗೆ ಬಿಸಿಲಿನಲ್ಲಿ ಬೆಂದು, ಮಳೆಯಲ್ಲಿ ನೆಂದು ದುಡಿದು ಹಣ್ಣಾಗಿರುವ, ಮಣ್ಣಾಗಿರುವವರ ಪಾಡೇನು ಗೊತ್ತು?

ಚುನಾವಣೆಗೆ ಮೊದಲು ಕಾಂಗ್ರೆಸ್ ಘೋಷಿಸಿದ ‘ಗ್ಯಾರಂಟಿ’ಗಳಷ್ಟೇ ಆ ಪಕ್ಷಕ್ಕೆ ಭಾರಿ ಬಹುಮತ ತಂದುಕೊಡಲಿಲ್ಲ. ಬಿಜೆಪಿ ನೇತೃತ್ವದ ಸರ್ಕಾರದ ಮೇಲಿದ್ದ ಭ್ರಷ್ಟಾಚಾರದ ಆರೋಪ, ಕೂಡಿಬಾಳುತ್ತಿದ್ದ ಜನರ ಮಧ್ಯೆ ಮತದ್ವೇಷದ ವಿಷ ಬಿತ್ತಿದ ಹತ್ತುಹಲವು ಕಿತಾಪತಿಗಳೇ ಕಮಲ ಮುದುಡಲು ಕಾರಣ. ಪ್ರಧಾನಿ ನರೇಂದ್ರ ಮೋದಿಯವರ ವರ್ಚಸ್ಸು ಕೂಡ ಬಿಜೆಪಿ ಕೈಹಿಡಿಯಲಿಲ್ಲ. ಇದು, ಅವರ ಪ್ರಭಾವಳಿ ಕುಂದುತ್ತಿರುವುದರ ನಿದರ್ಶನವೇ?

ಕಾಂಗ್ರೆಸ್ ಗ್ಯಾರಂಟಿಗಳು ಮತ್ತು ಅವುಗಳ ಅನುಷ್ಠಾನದತ್ತ ಸರ್ಕಾರ ಇಟ್ಟ ಹೆಜ್ಜೆಯು, ಅಧಿಕಾರದಲ್ಲಿದ್ದಾಗ ಅಭಿವೃದ್ಧಿ, ಜನಕಲ್ಯಾಣಕ್ಕಿಂತ ಜನರನ್ನು ಕಿತ್ತಾಟಕ್ಕೆ ಹಚ್ಚುವ ಉಪದ್ವ್ಯಾಪಗಳಲ್ಲೇ ಮುಳುಗಿದ್ದ ‘ಕೇಸರಿ’ ಪಡೆಯನ್ನು ದಂಗುಬಡಿಸಿದೆ. ಕುಟುಂಬವೊಂದನ್ನು ಸಬಲಗೊಳಿಸುವ, ಅದರಲ್ಲೂ ಸಂಸಾರದ ಬಗ್ಗೆ ನೆದರೇ ಇಲ್ಲದಂತಹ ಗಂಡಸರ ಧೋರಣೆಯಿಂದ ಧೃತಿಗೆಟ್ಟಿರುವ ಮಹಿಳೆಯರಿಗೆ ಸುರಕ್ಷಿತ ಹಾಗೂ ನೆಮ್ಮದಿಯ ವಾತಾವರಣ ರೂಪಿಸುವುದನ್ನು ಕಾಂಗ್ರೆಸ್ ಗ್ಯಾರಂಟಿಗಳು ಗುರಿಯಾಗಿಸಿಕೊಂಡಿವೆ. ಹಿಜಾಬ್ ಹಾಕಬಾರದು ಎಂಬಲ್ಲಿಂದ ಶುರುವಾದ ಹಿಂದಿನ ಸರ್ಕಾರದ ಅವಧಿಯ ಕ್ಯಾತೆಗಳು ಕುಂಕುಮ ಇಟ್ಟುಕೊಳ್ಳಬೇಕು, ಮೈಮುಚ್ಚುವ ರೀತಿ ಬಟ್ಟೆ ಹಾಕಿಕೊಳ್ಳಬೇಕು ಎಂಬೆಲ್ಲ ವಾದಗಳನ್ನು ಮುಂದಿಟ್ಟುಕೊಂಡು ‘ಸ್ತ್ರೀಶಕ್ತಿ’ಯನ್ನು ಮತ್ತೆ ಮನೆಯೊಳಗೆ ನೂಕುವತ್ತ ಸಾಗಿದ್ದವು.

ರಾಜ್ಯವ್ಯಾಪಿ ಎಲ್ಲಿ ಬೇಕಾದರೂ ಓಡಾಡಲು ಉಚಿತ ಬಸ್ ಪ್ರಯಾಣದ ವ್ಯವಸ್ಥೆ ಮಾಡಿರುವ ಸರ್ಕಾರ, ಹೆಣ್ಣುಮಕ್ಕಳು ಗಂಡಾಳ್ತನದ ಹಂಗಿಲ್ಲದೆ ಮುಕ್ತವಾಗಿ ಓಡಾಡುವಂತೆ, ರೆಕ್ಕೆ ಬಿಚ್ಚಿ ಹಾರುವಂತೆ ಮಾಡಿದೆ. ಸಣ್ಣಪುಟ್ಟ ಕೆಲಸ ಸಿಕ್ಕಿದರೆ ಮನೆಯಿಂದ ಹೊರಕ್ಕೆ ಹೋಗಿ ಬದುಕು ಕಟ್ಟಿಕೊಳ್ಳಬಹುದೆಂಬ ಕನಸು ಹೆಣ್ಣುಮಕ್ಕಳಿಗೆ ಸಹಜವಾಗಿ ಇರುತ್ತದೆ. ಆದರೆ, ಸಿಗುವ ಸಂಬಳದಲ್ಲಿ ಹೆಚ್ಚಿನ ಪಾಲು ಬಸ್ ಪ್ರಯಾಣಕ್ಕೇ ಹೋದರೆ ಪ್ರಯೋಜನವೇನು ಎಂಬ ಕಾರಣಕ್ಕೆ ಅನೇಕರು ಹೋಗುತ್ತಿರಲಿಲ್ಲ. ಅಂತಹವರಿಗೆ ದುಡಿಯುವ ಚೈತನ್ಯ ತುಂಬಿ, ತಮ್ಮದೇ ಬದುಕು ಕಟ್ಟಿಕೊಳ್ಳುವ ವಾತಾವರಣ ಕಲ್ಪಿಸಿದೆ. ವಿದ್ಯುತ್ ಬಿಲ್‌ಗೆ ಪ್ರತಿ ತಿಂಗಳು ಗಂಡನ ಕಡೆಗೆ ಕೈಚಾಚಬೇಕಾದ, ತಿನ್ನುವ ಗಂಜಿಗೆ ಕಾಸು ಗಿಂಜಬೇಕಾದ ದಯನೀಯ ಸ್ಥಿತಿಯಿಂದ ಮಹಿಳೆಯರನ್ನು ಹೊರತರಲಿದೆ. ಇವೆಲ್ಲವೂ ಸ್ತ್ರೀಸಂಕುಲ ತಲೆ ಎತ್ತಿ ಜೀವನ ನಡೆಸುವ ನವ ಸಮಾಜವನ್ನು ಸೃಷ್ಟಿಸಲಿವೆ.

ಕಾಂಗ್ರೆಸ್ ಗ್ಯಾರಂಟಿಯಿಂದ ದೇಶವೇ ಕೊಳ್ಳೆ ಹೋಗಲಿದೆ ಎಂದು ಹಲುಬುತ್ತಿರುವವರು ಉತ್ತರಿಸಬೇಕಾದ ಇನ್ನೊಂದು ವಿಷಯವಿದೆ. ಮೋದಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದೀಚೆಗೆ, ವಸೂಲಾಗದ ಸಾಲವೆಂದು ಗುರುತಿಸಲಾದ ₹ 11.17 ಲಕ್ಷ ಕೋಟಿಯನ್ನು ‘ರೈಟ್ ಆಫ್’ ಮಾಡಲಾಗಿದೆ. ಬಸ್ಸಿಗೆ ಹತ್ತಲು ಕಾಸಿಲ್ಲದವರು, ಗಂಜಿ ಉಣ್ಣಲು ಅಕ್ಕಿ ಇಲ್ಲದವರು ಮಾಡಿದ ಸಾಲ ಇದಲ್ಲ. ದೇಶದ ಸಂಪತ್ತನ್ನು ಕೊಳ್ಳೆಹೊಡೆದು ವಿದೇಶಕ್ಕೆ ಪರಾರಿಯಾದವರು ಮಾಡಿಟ್ಟಿದ್ದ ಸಾಲ. ಕಾಂಗ್ರೆಸ್ ಗ್ಯಾರಂಟಿ ಈಡೇರಿಸಲು ವರ್ಷಕ್ಕೆ ₹ 59 ಸಾವಿರ ಕೋಟಿ ಬೇಕು ಎಂಬ ಅಂದಾಜಿದೆ. ಹಾಗೆ ಮಾಡಿದರೂ ರೈಟ್ ಆಫ್ ಮಾಡಿದ ಮೊತ್ತದಲ್ಲಿ ಸುಮಾರು 20 ವರ್ಷ ಕರ್ನಾಟಕದ ಜನರಿಗೆ ಉಚಿತ ಸೌಲಭ್ಯವನ್ನು ಕೊಡಬಹುದಾಗಿತ್ತು. ಅದೆಲ್ಲ ಬೇಡ ಬಿಡಿ, 2019ರ ಲೋಕಸಭೆ ಚುನಾವಣೆಗೆ ಮೊದಲು ಮೋದಿಯವರು ಪ್ರತಿ ರೈತನ ಕುಟುಂಬಕ್ಕೆ ₹ 6 ಸಾವಿರ ನೀಡುವ ಕಿಸಾನ್ ಸಮ್ಮಾನ್ ಯೋಜನೆ ಘೋಷಿಸಿದರು. ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರು ಇದಕ್ಕೆ ₹ 4 ಸಾವಿರ ಸೇರಿಸಿದರು. ರೈತನ ಹಿತದೃಷ್ಟಿಯಿಂದ ಒಳ್ಳೆಯದಾದರೂ ಚುನಾವಣೆಗೆ ಮುನ್ನ ಮುಫತ್ತು ನೀಡಿದ್ದನ್ನು ಯಾರೊಬ್ಬರೂ ‘ಬಿಟ್ಟಿಭಾಗ್ಯ’ ಎನ್ನಲೇ ಇಲ್ಲ.

ಸಿದ್ದರಾಮಯ್ಯ ಅಧಿಕಾರ ಬಿಟ್ಟಿಳಿಯುವಾಗ 2018ರಲ್ಲಿ ರಾಜ್ಯದ ಸಾಲ ₹ 2,85,238 ಕೋಟಿಯಷ್ಟಿತ್ತು. ಬಸವರಾಜ ಬೊಮ್ಮಾಯಿ ಅಧಿಕಾರದಿಂದ ಇಳಿಯುವ ವೇಳೆ ರಾಜ್ಯದ ಒಟ್ಟು ಋಣಭಾರ ₹ 5,18,366 ಕೋಟಿಯಷ್ಟಾಗಲಿದೆ ಎಂದು ಬಜೆಟ್ ಅಂದಾಜು ಮಾಡಿದೆ. ಅಂದರೆ, ಕಳೆದ ಐದು ವರ್ಷದಲ್ಲಿ ‘ಬಿಟ್ಟಿಭಾಗ್ಯ’ ನೀಡದೇ ಇದ್ದರೂ ₹ 2,33,126 ಕೋಟಿ ಸಾಲ ಮಾಡಲಾಗಿದೆ. ಯಾರಿಗೆ ಖರ್ಚು ಮಾಡಬೇಕಾಗಿತ್ತೋ ಅದು ಆಗಿಲ್ಲ ಎನ್ನುವುದೇ ಇಲ್ಲಿನ ಸತ್ಯ.

ಅಷ್ಟಕ್ಕೂ ಬಿಜೆಪಿ ಅಧಿಕಾರ ಇರುವ ರಾಜ್ಯಗಳಲ್ಲಿ ಉಚಿತ ಕೊಡುಗೆಗಳು ಇಲ್ಲವೆಂದೇನೂ ಇಲ್ಲ. ಉತ್ತರ ಪ್ರದೇಶದಲ್ಲಿ 2022ರಲ್ಲಿ ನಡೆದ ವಿಧಾನಸಭೆ ಚುನಾವಣೆಗೆ ಮೊದಲು ಅಕ್ಕಿ, ಗೋಧಿ, ಎಣ್ಣೆ, ಬೇಳೆಕಾಳು, ಉಪ್ಪು ನೀಡುವುದಾಗಿ ಘೋಷಿಸಲಾಗಿತ್ತು. ಬಿಜೆಪಿ ಅಧಿಕಾರದಲ್ಲಿರುವ ಕೆಲವು ರಾಜ್ಯಗಳಲ್ಲಿ ಸದ್ಯವೇ ಚುನಾವಣೆ ಬರಲಿದ್ದು, ಅಲ್ಲಿನ ಮುಖ್ಯಮಂತ್ರಿಗಳು ‘ಬಿಟ್ಟಿಭಾಗ್ಯ’ ಪ್ರಕಟಿಸಿದ್ದಾರೆ. ಏಕೆಂದರೆ, ಮೋದಿಯವರ ಹಾವಭಾವ, ರಂಗಿನ ದಿರಿಸು ಜನರನ್ನು ಹೆಚ್ಚು ಆಕರ್ಷಿಸುವುದಿಲ್ಲ ಎಂಬುದು ಬಿಜೆಪಿಯವರಿಗೆ ಗೊತ್ತಾದಂತಿದೆ. ಏಕೆಂದರೆ, ಬಿಜೆಪಿಯ ರಕ್ಷಾಕವಚದಂತಿರುವ ಆರ್‌ಎಸ್‌ಎಸ್ ನಾಯಕರೇ ಇದನ್ನು ಹೇಳಿಬಿಟ್ಟಿದ್ದಾರೆ.

ಕರ್ನಾಟಕದ ಚುನಾವಣೆ ಬಳಿಕ ಆರ್‌ಎಸ್‌ಎಸ್ ಮುಖವಾಣಿ ‘ದಿ ಆರ್ಗನೈಸರ್’ನ ಮೇ 23ರ ಸಂಚಿಕೆಯ ಸಂಪಾದಕೀಯದಲ್ಲಿ ‘ಮೋದಿ ಅವರ ವರ್ಚಸ್ಸು ಹಾಗೂ ಹಿಂದುತ್ವ ಸಿದ್ಧಾಂತವನ್ನು ಮುನ್ನೆಲೆಗೆ ತರುವುದರಿಂದಷ್ಟೇ ಭವಿಷ್ಯದಲ್ಲಿ ಚುನಾವಣೆಗಳನ್ನು ಗೆಲ್ಲಲು ಸಾಧ್ಯವಿಲ್ಲ. ಸ್ಥಳೀಯವಾಗಿ ಬಲವಾದ ನಾಯಕತ್ವ ಹಾಗೂ ಯೋಜನೆಗಳ ಪರಿಣಾಮಕಾರಿ ಜಾರಿಯೂ ಅಗತ್ಯ. ರಾಜ್ಯದಲ್ಲಿ ಉತ್ತಮ ಆಡಳಿತವಿದ್ದಾಗ ಮಾತ್ರ ಸಿದ್ಧಾಂತ ಮತ್ತು ನಾಯಕತ್ವವು ಪಕ್ಷಕ್ಕೆ ನಿಜಕ್ಕೂ ಆಸ್ತಿಯಾಗುತ್ತವೆ’ ಎಂದು ವಿಶ್ಲೇಷಿಸಲಾಗಿದೆ.

9 ವರ್ಷಗಳಲ್ಲಿ ಮೋದಿಯವರ ಭರವಸೆಗಳು ನಿರಾಸೆಯ ಹಾಸಿಗೆಯ ಮೇಲೆ ಹೇಗೆ ಅಂಗಾತ ಮಲಗಿವೆ ಎಂಬುದನ್ನು ಜನ ನೋಡಿದ್ದಾರೆ. ವಿಧಾನಸಭೆ ಚುನಾವಣೆ ವೇಳೆ, ಕಾಂಗ್ರೆಸ್ ಗ್ಯಾರಂಟಿಗಳಿಗೆ ಮೇ 13ರ ಬಳಿಕ ವಾರಂಟಿಯೇ ಇರುವುದಿಲ್ಲ’ ಎಂದು ಮೋದಿ, ಬಸವರಾಜ ಬೊಮ್ಮಾಯಿ ಹೇಳಿದ್ದರು. ಆರ್‌ಎಸ್‌ಎಸ್ ಹೇಳಿರುವುದು, ಬಿಜೆಪಿಗರು ಗ್ಯಾರಂಟಿಗೆ ಜೋತು ಬಿದ್ದಿರುವುದನ್ನು ಕಂಡರೆ, ಮೋದಿಯವರಿಗೆ ಇನ್ನೆಷ್ಟು ದಿನ ವಾರಂಟಿ ಇದೆ ಎಂಬ ಅನುಮಾನ ಮೂಡದಿರದು.

ಅಷ್ಟಕ್ಕೂ ಗ್ಯಾರಂಟಿ, ಉಚಿತ ಕೊಡುಗೆಗಳ ಬಗ್ಗೆ ಹೀಗಳೆಯುವವರು ತಮ್ಮ ಕುಟುಂಬದ ಪರಿಸ್ಥಿತಿಯನ್ನು ನೋಡಿಕೊಳ್ಳಲಿ. ಕೇಂದ್ರದ ನಿಯಂತ್ರಣ ತಪ್ಪಿದ ಕ್ರಮಗಳಿಂದ ಬೆಲೆ ಏರಿಕೆಯ ಭಾರ ಜನರನ್ನು ಕುಸಿಯುವಂತೆ ಮಾಡಿದೆ. ವಿದೇಶಿ ಮಾರುಕಟ್ಟೆಯಲ್ಲಿ ಇಂಧನ ಉತ್ಪನ್ನಗಳ ಧಾರಣೆ ಕುಸಿದಿದ್ದರೂ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಕೇಂದ್ರ ಇಳಿಸಿಲ್ಲ. ಅಕ್ಕಿ–ಕಾಳು ತಿನ್ನುವಂತಿಲ್ಲ. ಎಣ್ಣೆ ಬಳಸುವಂತಿಲ್ಲ. ಬಿಟ್ಟಿಭಾಗ್ಯವನ್ನು ಹೀಗಳೆಯುವವರು ಕೇಂದ್ರ ನೀಡಿದ ‘ತುಟ್ಟಿಭಾಗ್ಯ’ದ ಕಡೆಗೂ ನೋಡಲಿ.



ಚುರುಮುರಿ



‘ನವ’ ಸರ್ಕಾರಿ ಕಾರು

• ನಾರಾಯಣ ರಾಯಚೂರ್

‘ರೀ, ನಾವೂ ನಮ್ಮ ಕಾರ್ ನಂಬರ್ ಚೇಂಜ್ ಮಾಡಿಸ್ಕೊಂಡು ಬಿಡೋಣವಾ?’ ಆಸ್ತಿಗೋಸ್ಕರ ಹೆಸರು ಚೇಂಜ್ ಮಾಡಿಕೊಳ್ಳೋದನ್ನ ಕೇಳಿದೀನಿ, ಇದೇನೇ ಇದು ಕಾರ್ ನಂಬರ್ ಚೇಂಜ್‌ನ ಮರ್ಮ?!’

‘ಹೊಸ ಸರ್ಕಾರದ ಸಚಿವರು, ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿ ಎಲ್ಲರೂ ಹೊಸ ಕಾರು ‘9’ ಸಂಖ್ಯೆ ಇರೋ ನಂಬರದೇ ಇರಬೇಕು, ಅದು ಅದೃಷ್ಟಶಾಲಿ ಅಂತ ದುಂಬಾಲ್ ಬಿದ್ದಿದ್ದಾರಂತೆ. ಫ್ರಂಟ್ ಪೇಜ್‌ನಲ್ಲೇ ಬಂದಿದೆಯಲ್ಲರೀ, ನೋಡಲಿಲ್ಲವಾ?’

‘ಓಹ್ ಅದಾ ವಿಷ್ಯ... ನೋಡ್ದೆ ನೋಡ್ದೆ... ನವಗ್ರಹ, ನವನಿಧಿ, ನವಧಾನ್ಯ, ಭಗವದ್ಗೀತೆ (ಹದಿನೆಂಟು– ಒಂಬತ್ತರ ಗುಣಕ– ಅಧ್ಯಾಯ!)- ಹೀಗೆ ಸಮರ್ಥನೆ, ಸಾರಿಗೆ ಇಲಾಖೆಯವರ ಕಾನೂನಾತ್ಮಕ ವಿವರಣೆ, ‘ಇ’ ಹರಾಜು... ಎಲ್ಲ ಓದಿದೆ. ಒಂಬತ್ತು ಸಂಸ್ಕೃತದಲ್ಲಿ ನವ ಎಂದು ಕರೆಸಿಕೊಳ್ಳುತ್ತಲ್ವೇ. ನವ ಅಂದರೆ ಹೊಸ ಕೂಡ. ನವ ಸರ್ಕಾರಕ್ಕೆ ‘ನವ’ ಕ್ರೇಜ್’.

‘ಎಂಟರ ನಂಟು ಅಂತ ಕೇಳಿದ್ವಿ, ಇದು ಒಂಬತ್ತರ ನಂಟು. ನೈನ್ ಈಸ್ ಫೈನ್ ಅಂತ ಯಾವುದೋ ಸಂಖ್ಯಾಶಾಸ್ತ್ರಜ್ಞ ಹೇಳಿರಬೇಕು, ಅದಕ್ಕೇ ಈ ಒಂಬತ್ತು ಪಡೆಯಲು ಬೆಂಬತ್ತಿರಬೇಕು’.

‘ಹತ್ತು’ ನಂಬರಿನ ಹಿಂದೆ ಬಿದ್ದಿದ್ದರೆ ಚೆನ್ನಾಗಿತ್ತು ಅನ್ಸತ್ತೆ. ಯಾಕೆ ಅಂದ್ರೆ ಸಾಮಾನ್ಯವಾಗಿ ‘ಕಾರು ಹತ್ತು’ ಅನ್ನಲ್ವೇ?’

‘ಕೆಲವು ಸಚಿವರು ಹೊಸ ಕಾರೇ ಬೇಕೂಂತ ಬೇಡಿಕೆ ಇಟ್ಟಿದ್ದಾರಂತಲ್ಲ?’

‘ಸಹಜ, ಹೊಸ ಅರ್ಥಾತ್ ನವ, ನವ ಸರ್ಕಾರ, ನವ ಕಾರು’.

‘ಕೃಷಿ ಸಚಿವರು ಮಾತ್ರ ಕಾರ್ ಕೇಳದೆ ನನಗೆ ಕಾರ್ಟ್ (ಎತ್ತಿನ ಗಾಡಿ) ಕೊಡಿ ಅಂತ ಕೇಳಿದರೆ ಎಷ್ಟು ಸಮಂಜಸವಾಗಿ ಇರುತ್ತಲ್ವಾ?’

‘ಮುಖ್ಯಮಂತ್ರಿಗಳು ಹಾರ ತುರಾಯಿ ಬೇಡ, ಸಂಸ್ಕೃತಿ ಸಚಿವರು ಹಾರದ ಬದಲು ಪುಸ್ತಕ ಕೊಡಿ ಅಂತ ಹೇಳಿದ ಹಾಗೆ ಅಂತೀಯಾ?’

‘ಅವರು ಯಾವುದಾದರೂ ಕಾರ್ ತಗೊಳ್ಳಿ ಬಿಡಿ, ನಮಗಂತೂ ಫ್ರೀ ಬಸ್ಸೇ ಕೊಟ್ಟಿದ್ದಾರಲ್ಲ. ನಮ್ಮದೇ ರೋಡು ನಾವೇ ಕ್ವೀನು’.

‘ಸರಿಯಮ್ಮ, ನಾವು ಮಾತ್ರ ಬಸ್ಸೂ ಇಲ್ಲಾ ಕಾರೂ ಇಲ್ಲ... ಬೇ-ಕಾರ್’!

ಸಂಗತ

ಚಿತ್ರನಗರಿ ನಿರ್ಮಾಣ ತುರ್ತು ಅಗತ್ಯವೇ?

ಚಿತ್ರರಂಗದ ಏಳಿಗೆಗಾಗಿ ಕೈಗೊಳ್ಳಬೇಕಿರುವ ತುರ್ತು ಸುಧಾರಣಾ ಕ್ರಮಗಳು ಹಲವು ಇವೆ

• ಕೇಸರಿ ಹರವೂ

ಚಿತ್ರರಂಗ ಗುಣಾತ್ಮಕವಾಗಿ, ಸಮಾಜಮುಖಿಯಾಗಿ ಏಳಿಗೆ ಹೊಂದುವ ದೃಷ್ಟಿಯಿಂದ ಸರ್ಕಾರ ತುರ್ತಾಗಿ ಕೈಗೊಳ್ಳಬೇಕಿರುವ ಸುಧಾರಣಾ ಕ್ರಮಗಳು, ಉತ್ತೇಜಕ ಹೆಜ್ಜೆಗಳು ಹಲವು ಇವೆ. ಹೀಗಿರುವಾಗ, ಚಿತ್ರನಗರಿಯನ್ನು ತುರ್ತಾಗಿ ನಿರ್ಮಿಸಬೇಕಾದ ಅಗತ್ಯವಿದೆಯೇ ಎಂಬ ಬಗ್ಗೆ ಯೋಚಿಸಬೇಕಿದೆ.

ರಾಜ್ಯದಲ್ಲಿ ಎಲ್ಲೇ ಚಿತ್ರನಗರಿ ನಿರ್ಮಿಸುವ ಯೋಜನೆ ಹಾಕಿಕೊಂಡರೂ ಅದಕ್ಕೆ ಕನಿಷ್ಠ ಇನ್ನೂರು ಎಕರೆ ವಿಶಾಲವಾದ ಬಯಲು ಭೂಮಿ ಬೇಕು. ಜಾಗತಿಕ ಮಟ್ಟದ ಶೂಟಿಂಗ್ ಫ್ಲೋರುಗಳು, ಒಳಾಂಗಣ, ಹೊರಾಂಗಣ ಸೆಟ್ಟುಗಳು, ಸಂಕಲನ ಹಾಗೂ ಸಂಸ್ಕರಣ ಘಟಕಗಳು, ಅತ್ಯಾಧುನಿಕ ಮೂಲಸೌಕರ್ಯ, ವಸತಿ, ಉದ್ಯಾನಗಳು, ಮನರಂಜನೆಗೆ ಅಗತ್ಯವಾದ ತಂತ್ರಜ್ಞಾನ ಸೌಲಭ್ಯಗಳನ್ನು ನಿರ್ಮಿಸಬೇಕೆಂದರೆ ನೂರಾರು ಕೋಟಿ ರೂಪಾಯಿ ಹೂಡಿದರೂ ಕಡಿಮೆಯೇ. ಅಲ್ಲದೆ, ಒಂದು ಪರಿಪೂರ್ಣವಾದ ಸುಸಜ್ಜಿತ ಚಿತ್ರನಗರಿಯ ನಿರ್ಮಾಣಕ್ಕೆ ಕನಿಷ್ಠ ಒಂದು ದಶಕದಷ್ಟು ಸಮಯ ಬೇಕಾಗುತ್ತದೆ. ಇದು ಚಿತ್ರನಗರಿ ಯೋಜನೆಯ ಒಂದು ಆಯಾಮ.

ರಾಜ್ಯದ ಇಂದಿನ ಸ್ಥಿತಿಗತಿಯ ದೃಷ್ಟಿಯಿಂದ ಮತ್ತೊಂದು ಅತಿಮುಖ್ಯ ಆಯಾಮವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಚಿತ್ರನಗರಿಯ ನಿರ್ಮಾಣ ಹಂತ ಮತ್ತು ನಂತರದಲ್ಲಿ ಅದರ ನಿರಂತರ ನಿರ್ವಹಣೆಗೆ ಎಷ್ಟು ಖರ್ಚಾಗುತ್ತದೆ, ಅಷ್ಟು ವ್ಯಯಿಸಿಯೂ ಅದು ಎಷ್ಟು ಉದ್ಯೋಗ ಸೃಷ್ಟಿ ಮಾಡುತ್ತದೆ? ಬೊಕ್ಕಸಕ್ಕೆ ಎಷ್ಟು ವರಮಾನ ತಂದುಕೊಡುತ್ತದೆ? ಅದೇ ಇನ್ನೂರು ಎಕರೆಯಲ್ಲಿ ಒಂದು ಅತ್ಯವಶ್ಯಕ ಕೈಗಾರಿಕಾ ಪ್ರದೇಶವನ್ನೋ ಸಹಕಾರಿ ಕೃಷಿ ಉದ್ಯಮವನ್ನೋ ಸೌರಶಕ್ತಿ ಘಟಕವನ್ನೋ ಸ್ಥಾಪಿಸುವುದಕ್ಕಿಂತ ಹೆಚ್ಚು ಗುಣಾತ್ಮಕ ಲಾಭಗಳನ್ನು ಚಿತ್ರನಗರಿ ತಂದುಕೊಡುತ್ತದೆಯೇ?

ಇವೆಲ್ಲಕ್ಕಿಂತಲೂ ಮುಖ್ಯವಾದ ಇನ್ನಷ್ಟು ಪ್ರಶ್ನೆಗಳು ಎದುರಾಗುತ್ತವೆ. ಆದ್ಯತೆಯ ವಲಯಗಳಿಗೆ ಪೂರೈಸಿ, ಚಿತ್ರನಗರಿಗೂ ಬೇಕಿರುವಷ್ಟು ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿಸುವ ಧಾರಣಾ ಸಾಮರ್ಥ್ಯ ನಮ್ಮ ಪರಿಸರ ಸ್ಥಿತಿಗೆ ಇದೆಯೇ? ಮೇಲೆ ಉದಾಹರಿಸಿದ ಇತರ ಉದ್ಯೋಗಗಳು ಆ ಪ್ರದೇಶದಲ್ಲಿ ಮೂಡಿಸುವ ಕಾರ್ಬನ್ ಹೆಜ್ಜೆ ಗುರುತಿಗಿಂತ ಕಡಿಮೆ ಹೆಜ್ಜೆ ಗುರುತನ್ನು ಚಿತ್ರನಗರಿಯೊಂದು ಮೂಡಿಸುತ್ತದೆಯೇ? ಒಂದೊಮ್ಮೆ ಇಡೀ ಚಿತ್ರನಗರಿಯನ್ನು ಸಂಪೂರ್ಣ ಪರಿಸರ ಪೂರಕವಾಗಿ ವಿನ್ಯಾಸಗೊಳಿಸಿ, ಅದರ ಕಾರ್ಬನ್ ಹೆಜ್ಜೆಗುರುತು ಸೊನ್ನೆ ಎಂದರೂ, ಅಲ್ಲಿ ತಯಾರಾಗುವ ಉತ್ಪನ್ನಗಳ ಸಾಮಾಜಿಕ ಪರಿಣಾಮಗಳು ಮೂಡಿಸುವ ಕಾರ್ಬನ್ ಹೆಜ್ಜೆಗುರುತು ದೊಡ್ಡಮಟ್ಟದ್ದೇ ಆಗಿರುತ್ತದೆ.

ದೇಶದಲ್ಲಿ ಈಗಾಗಲೇ ಇರುವ ಹಲವು ಚಿತ್ರನಗರಿಗಳನ್ನು ಬಳಸಿಕೊಳ್ಳುತ್ತಿರುವವರು ಅತಿದೊಡ್ಡ ಹೂಡಿಕೆಯ ಚಿತ್ರಗಳು ಮತ್ತು ಟಿ.ವಿ ಕಾರ್ಯಕ್ರಮಗಳನ್ನು ನಿರ್ಮಿಸುವವರು ಮಾತ್ರ. ಬಹುತೇಕ ಟಿ.ವಿ. ಕಾರ್ಯಕ್ರಮಗಳು ಗ್ರಾಹಕ ಮಾರುಕಟ್ಟೆಯ ಪ್ರಾಯೋಜನೆಯಿಂದ ನಿರ್ಮಾಣವಾಗುತ್ತ ಜನರನ್ನು ಕೊಳ್ಳುಬಾಕ ಸಂಸ್ಕೃತಿಯತ್ತ ಪ್ರೇರೇಪಿಸುತ್ತಿವೆಯೇ ವಿನಾ ಅವುಗಳಲ್ಲಿ ಯಾವ ಕಲೆ ಅಥವಾ ಸಮಾಜಪ್ರಜ್ಞೆ ಉಳಿದಿಲ್ಲ. ಇನ್ನು ಅತಿವಾಣಿಜ್ಯ ಉದ್ದೇಶಕ್ಕಾಗಿ ತಯಾರಾಗುವ ದೊಡ್ಡ ಬಂಡವಾಳದ ತಾರಾಮೌಲ್ಯದ ಚಿತ್ರಗಳಲ್ಲಿ ನಾಡು, ನುಡಿ ಅಥವಾ ಆರೋಗ್ಯಕರ ಮನರಂಜನೆಯ ಉದ್ದೇಶಗಳು ಗೌಣವಾಗಿರುತ್ತವೆ.

ಇತ್ತೀಚಿನ ವರ್ಷಗಳಲ್ಲಿ ಹೊಸ ತಲೆಮಾರಿನ ಹತ್ತಾರು ಪ್ರತಿಭಾವಂತರು ಕನ್ನಡ ಮತ್ತು ಪ್ರಾದೇಶಿಕ ಭಾಷಾ ಚಿತ್ರರಂಗಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಸಣ್ಣ ಮತ್ತು ಮಧ್ಯಮ ಗಾತ್ರದ ಬಂಡವಾಳ ಹೂಡಿ ವಸ್ತು, ವಿನ್ಯಾಸದಲ್ಲಿ ಹೊಸತನ, ಹೊಸ ಕಾಳಜಿ, ಹೊಸ ಪ್ರಾದೇಶಿಕ ಮೌಲ್ಯಗಳನ್ನು ಚಿತ್ರಗಳಲ್ಲಿ ತುಂಬುತ್ತಿದ್ದಾರೆ. ಹೊಸ ನಟರು, ತಂತ್ರಜ್ಞರು ಮಿಂಚುತ್ತಿದ್ದಾರೆ. ಚಿತ್ರನಗರಿಗೆ ಬಂದು ನಿರ್ಮಾಣಕಾರ್ಯ ಮಾಡಿ ಎಂದರೆ ಬಹುಶಃ ಅವರಲ್ಲಿ ಅನೇಕರು ಬರಲಾರರು. ಅದು ಅವರಿಗೆ ಕೈಗೆಟಕದು ಎನ್ನುವುದಕ್ಕಿಂತ ಹೆಚ್ಚಾಗಿ, ಆ ಚಿತ್ರಗಳು ಗುಣಾತ್ಮಕವಾಗಿ ಗೆಲ್ಲುತ್ತಿರುವುದು ಮತ್ತು ಸಮಾಜಕ್ಕೆ ಪ್ರತಿಸ್ಪಂದಿಯಾಗಿರುವುದು ನಮ್ಮ ನೆಲ, ಭಾಷೆ, ಜನಪದ ಕಟ್ಟಿಕೊಟ್ಟಿರುವ ಸಾಮಾಜಿಕತೆ ಮತ್ತು ಸಮಕಾಲೀನತೆಯ ಬಲದಿಂದಲೇ. ಆ ಬಲವನ್ನು ಚಿತ್ರನಗರಿಯ ಕೃತಕ ಸೆಟ್ಟುಗಳು, ಉದ್ಯಾನಗಳು ಕೊಡಲು ಸಾಧ್ಯವೇ ಇಲ್ಲ. ಗುಣಾತ್ಮಕ ಪ್ರಯೋಗಗಳು ವಾಣಿಜ್ಯಾತ್ಮಕವಾಗಿಯೂ ಯಶಸ್ಸು ಕಾಣುವಂತಹ ಸನ್ನಿವೇಶವನ್ನು ನಮ್ಮ ನಾಡು ನಿರ್ಮಿಸಿಕೊಡಬೇಕು.



ಸಣ್ಣ ಮತ್ತು ಮಧ್ಯಮ ಬಂಡವಾಳದ ಉತ್ತಮ ಸಮಾಜಮುಖಿ ಚಿತ್ರಗಳಿಗೆ ಇಂದು ಕರ್ನಾಟಕದಲ್ಲಿ ಚಿತ್ರಮಂದಿರಗಳು ದೊರಕುತ್ತಿಲ್ಲ. ಚಿತ್ರಮಂದಿರಗಳಲ್ಲಿ ವರ್ಷಕ್ಕೆ ಕನಿಷ್ಠ ಇಂತಿಷ್ಟು ವಾರ ಕನ್ನಡ ಮತ್ತು ಪ್ರಾದೇಶಿಕ ಭಾಷಾ ಚಿತ್ರಗಳನ್ನು ಪ್ರದರ್ಶಿಸಬೇಕು ಎನ್ನುವ ನಿಯಮವನ್ನು ಮತ್ತೆ ಜಾರಿಗೆ ತರಬೇಕು.

ಚಿತ್ರಗಳಿಗೆ ಸರ್ಕಾರ ನೀಡುವ ಸಹಾಯಧನದ ಬಿಡುಗಡೆ ತೀರಾ ವಿಳಂಬವಾಗುತ್ತಿದೆ. ಅಲ್ಲದೆ, ಸಬ್ಸಿಡಿ ಹಂಚಿಕೆಯಲ್ಲಿ ಭ್ರಷ್ಟಾಚಾರದ ಆರೋಪಗಳೂ ಕೇಳಿಬಂದಿವೆ. ಗುಣಾತ್ಮಕ ಮತ್ತು ಸಮಾಜಮುಖಿ ಚಿತ್ರಗಳನ್ನು ಇನ್ನಷ್ಟು ಉತ್ತೇಜಿಸುವ ದಿಸೆಯಲ್ಲಿ ಇಡೀ ಸಬ್ಸಿಡಿ ನೀತಿಯನ್ನೇ ಪರಿಷ್ಕರಿಸುವುದು ಸೂಕ್ತ. ರಾಜ್ಯದಲ್ಲಿ ಚಲನಚಿತ್ರ ಅಕಾಡೆಮಿ ಇದೆಯಾದರೂ, ಅದು ನಿಜವಾದ ಅರ್ಥದಲ್ಲಿ ಅಕಡೆಮಿಕ್ ಆಗಿ ಕೆಲಸ ಮಾಡಿದ್ದು ಬಹಳ ಕಡಿಮೆ. ಎಲ್ಲಿಯವರೆಗೆ ಚಿತ್ರೋದ್ಯಮಕ್ಕೂ ಚಿತ್ರಮಾಧ್ಯಮಕ್ಕೂ ಇರುವ ವ್ಯತ್ಯಾಸದ ಸ್ಪಷ್ಟತೆ ಅಕಾಡೆಮಿಗೆ ಬರುವುದಿಲ್ಲವೋ ಅಲ್ಲಿಯವರೆಗೆ ಅಕಾಡೆಮಿಯನ್ನು ಸ್ಥಾಪಿಸಿದ ನಿಜ ಉದ್ದೇಶ ಈಡೇರುವುದಿಲ್ಲ. ಅದಾಗಬೇಕೆಂದರೆ, ಅಕಾಡೆಮಿಗೆ ಬಹಳಷ್ಟು ಸ್ವಾಯತ್ತತೆ ದೊರಕಬೇಕು.

ಇಂತಹ ಇನ್ನೂ ಹಲವಾರು ಬೇಡಿಕೆಗಳ ಕಡೆಗೆ ಸರ್ಕಾರ ತುರ್ತು ಗಮನಹರಿಸಬೇಕೆ ವಿನಾ ಚಿತ್ರನಗರಿಯ ನಿರ್ಮಾಣಕ್ಕಲ್ಲ.

ವಾಚಕರ ವಾಣಿ

ಆಸ್ಪತ್ರೆ ಸುಧಾರಣೆ: ಕಾರ್ಯರೂಪಕ್ಕೆ ಬರಲಿ

ಸರ್ಕಾರಿ ಆಸ್ಪತ್ರೆಗಳ ಸುಧಾರಣೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಗಡುವು ನೀಡಿರುವುದು ಒಳ್ಳೆಯ ಬೆಳವಣಿಗೆ. ಆದರೆ ಇಂತಹ ಗಡುವು ಅಥವಾ ನಿರ್ದೇಶನ ಮೌಖಿಕ ಆದೇಶವಷ್ಟೇ ಆಗದೆ ಕಾರ್ಯರೂಪಕ್ಕೆ ಬರಬೇಕು. ಅದರಂತೆ ಆರೋಗ್ಯ ಇಲಾಖೆಯಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಔಷಧ ಸರಬರಾಜಿನಲ್ಲಿರುವ ಕೊರತೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು.

ಗ್ರಾಮೀಣ ಭಾಗದಲ್ಲಿ ಕೆಲಸ ನಿರ್ವಹಿಸುವ ವೈದ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಇರುವ ಗ್ರಾಮದಲ್ಲಿ ವಾಸ್ತವ್ಯ ಹೂಡದೆ ಸಮೀಪದ ಪಟ್ಟಣ ಅಥವಾ ನಗರದಲ್ಲಿ ಮನೆ ಮಾಡಿಕೊಂಡಿರುವುದರಿಂದ ಹಳ್ಳಿಯ ಜನರು ಕಷ್ಟಪಡುವಂತಾಗಿದೆ. ರಾತ್ರಿ ವೇಳೆ ಹಾಗೂ ತುರ್ತು ಸಮಯದಲ್ಲಿ ಪಟ್ಟಣದ ಆಸ್ಪತ್ರೆಯ ಮೊರೆ ಹೋಗಿ ಹಣ ಮತ್ತು ಸಮಯವನ್ನು ಅವರು ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಗ್ರಾಮೀಣ ಪ್ರದೇಶಕ್ಕೆ ನಿಯೋಜಿತರಾದ ವೈದ್ಯರು ಅಲ್ಲಿಯೇ ವಾಸ್ತವ್ಯ ಹೂಡಿ ಬಡ ಹಾಗೂ ದುರ್ಬಲ ವರ್ಗದವರ ಚಿಕಿತ್ಸೆಗೆ ನೆರವಾಗುವುದಕ್ಕೆ ಪೂರಕವಾಗಿ ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಆದೇಶ ಜಾರಿ ಮಾಡಬೇಕು.

ಹುಸೇನಬಾಷಾ, ತಳೇವಾಡ, ಹುಬ್ಬಳ್ಳಿ

ಕೊಪ್ಪಳ ಆಸ್ಪತ್ರೆ: ಬೇಕು ಯಂತ್ರಗಳು

ಸಿದ್ದರಾಮಯ್ಯ ಅವರು ಹಿಂದಿನ ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಸಿ.ಟಿ. ಸ್ಕ್ಯಾನ್ ಯಂತ್ರ ಮಂಜೂರಾಗಿ ಅದು ಕಾರ್ಯನಿರ್ವಹಿಸುತ್ತಿದೆ. ಇದೇ ಅವಧಿಯಲ್ಲಿ ಆಸ್ಪತ್ರೆಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ಸಹ ಮಂಜೂರಾಗಿತ್ತು. ಆದರೆ ಚುನಾವಣೆ ಘೋಷಣೆಯಾಗಿ ನಂತರ ಬೇರೆ ಪಕ್ಷದ ನೇತೃತ್ವದ ಸರ್ಕಾರ ಬಂದಿದ್ದರಿಂದ ಆಸ್ಪತ್ರೆಗೆ ಎಂಆರ್‌ಐ ಯಂತ್ರ ಬರಲೇ ಇಲ್ಲ. ಈಗ ಮತ್ತೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾರೆ. ಇತ್ತೀಚೆಗೆ ನಡೆಸಿದ ಆರೋಗ್ಯ ಇಲಾಖೆಯ ಸಭೆಯಲ್ಲಿ, ರಾಜ್ಯದ ಪ್ರತಿಯೊಂದು ತಾಲ್ಲೂಕಿಗೂ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ಅಳವಡಿಸಬೇಕು ಎಂದು ಹೇಳಿರುವುದು ಜನಪರ ನಿರ್ಧಾರ. ಅದರಂತೆ ಕೊಪ್ಪಳ ಜಿಲ್ಲಾ ಆಸ್ಪತ್ರೆ ಹಾಗೂ ಕೊಪ್ಪಳ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಪ್ರತ್ಯೇಕವಾಗಿ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ, ಸಿ.ಟಿ. ಸ್ಕ್ಯಾನ್ ಯಂತ್ರಗಳನ್ನು ಅಳವಡಿಸಬೇಕು.

ಎಸ್.ಎ.ಗಫಾರ್, ಕೊಪ್ಪಳ

ಹೊಸ ತಲೆಮಾರಿಗೆ ಲೋಹಿಯಾ ಸಂಪುಟ

ರಾಮ ಮನೋಹರ ಲೋಹಿಯಾ ಅವರು ಆಧುನಿಕ ಭಾರತ ಕಂಡ ಶ್ರೇಷ್ಠ ಸಮಾಜವಾದಿ ಚಿಂತಕ. ಜಾತ್ಯತೀತ ಪರಿಕಲ್ಪನೆ, ಮಾತೃಭಾಷೆಯಲ್ಲಿ ಶಿಕ್ಷಣ, ದೇಶಿ ಪ್ರಜ್ಞೆ, ಸ್ವಾತಂತ್ರ್ಯದ ಆತ್ಮವಿಶ್ವಾಸ, ರೈತಪರ ಚಿಂತನೆ, ಮಹಿಳಾಪರ ಧೋರಣೆ, ಸಮಾನತೆ, ಅಧಿಕಾರ ವಿಕೇಂದ್ರೀಕರಣ, ಸಣ್ಣ ಘಟಕಗಳ ತಂತ್ರಜ್ಞಾನದಂತಹ ಹತ್ತು ಹಲವು ವಿಷಯಗಳ ಬಗ್ಗೆ ತಮ್ಮದೇ ಆದ ಸಿದ್ಧಾಂತವನ್ನು ಪ್ರತಿಪಾದಿಸಿದವರು. ಕರ್ನಾಟಕದ ಸಂಸ್ಕೃತಿ ಹಾಗೂ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಮೇಲೆ ಅವರ ವಿಚಾರಗಳು ದಟ್ಟವಾಗಿ ಪ್ರಭಾವ ಬೀರಿರುವುದನ್ನು ನೋಡಿದರೆ, ಅವರ ಸಿದ್ಧಾಂತದ ಅನನ್ಯತೆ ಅರ್ಥವಾಗದೇ ಇರದು. ಕಣ್ಣೆದುರಿಗೆ ಯಾವುದೇ ಚಳವಳಿಗಳು ಇಲ್ಲದ, ದಿಕ್ಕು ತಪ್ಪುತ್ತಿರುವ ಈ ಹೊತ್ತಿನ ಹೊಸ ತಲೆಮಾರಿಗೆ ಅವರ ಚಿಂತನೆಗಳು ಹೊಸ ಕಣ್ಣೋಟವನ್ನು ಕೊಡಬಲ್ಲವು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಲೋಹಿಯಾ ಸಂಪುಟಗಳು ಈ ಮುಂಚೆ ಪ್ರಕಟಗೊಂಡಿದ್ದವು. ಅವುಗಳನ್ನು ಸರ್ಕಾರ ಬೇಗ ಮರುಮುದ್ರಣ ಮಾಡಲಿ. ಪ್ರಕಟವಾಗದೇ ಉಳಿದಿರುವ ಹೊಸ ಸಂಪುಟಗಳು ಕೂಡ ಪ್ರಕಟವಾಗಿ ಓದುಗರ ಕೈಗೆ ಸಿಗುವಂತಾಗಲಿ.

ದಸ್ತಗೀರಸಾಬ್ ದಿನ್ನಿ, ಕೆ.ಗಿರಿಜಾ ರಾಜಶೇಖರ್, ಇಟಗಿ ಭೀಮನಗೌಡ, ಜೆ.ಎಲ್.ಈರಣ್ಣ , ಭೀಮೋಜಿರಾವ್ ಜಗತಾಪ್, ರಾಯಚೂರು

ಪ್ರಿಯವಲ್ಲದ್ದೆಲ್ಲ ಮೌಢ್ಯವಲ್ಲ...

‘ಅಮಾನವೀಯ, ದುಷ್ಟ ಪದ್ಧತಿಗಳು ಮತ್ತು ವಾಮಾಚರ ಪ್ರತಿಬಂಧನೆ ಮತ್ತು ನಿರ್ಮೂಲನೆ ಕಾಯ್ದೆ, 2017’ರಲ್ಲಿ ಜ್ಯೋತಿಷ, ಸಂಖ್ಯಾಶಾಸ್ತ್ರ, ವಾಸ್ತು, ಹಸ್ತಸಾಮುದ್ರಿಕದಂತಹ ಮೂಢನಂಬಿಕೆಗಳನ್ನು ಸೇರಿಸಲಾಗಿಲ್ಲ ಎಂದಿದ್ದಾರೆ ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ (ವಾ.ವಾ., ಜೂನ್ 15). ಇವು ಆಳವಾದ ಅಧ್ಯಯನ, ಸಂಶೋಧನೆ ನಡೆಸಿ ಸಾವಿರಾರು ವರ್ಷಗಳಿಂದ ನಂಬಿ ಬಂದ ಶಾಸ್ತ್ರಗಳು. ವೈಜ್ಞಾನಿಕ ತಳಹದಿಯ ಮೇಲೆ ವೈಚಾರಿಕತೆಯನ್ನು ಒಳಗೊಂಡ ವಿಮರ್ಶಾಪೂರ್ವಕ ವಿದ್ಯೆ. ತನಗರ್ಥವಾಗದ್ದು, ಪ್ರಿಯವಲ್ಲದ್ದು ಮೌಢ್ಯ ಎನ್ನುವುದು ತರವಲ್ಲ. ನಂಬುವವರು, ಅರ್ಥವಾದವರು ಅನುಸರಿಸುತ್ತಾರೆ. ನಂಬಿಕೆಯು ಮೌಢ್ಯವಲ್ಲ.

ಅನಂತ ಹೆಗ್ಡೆ, ಬಾಳೇಗದ್ದೆ, ಶಿರಸಿ

ವಿದ್ಯುತ್ ದರ ಹೆಚ್ಚಳ: ಹಗಲು ದರೋಡೆ

ಈ ತಿಂಗಳು ಬಂದಿರುವ ಮನೆಯ ವಿದ್ಯುತ್ ಬಿಲ್ ನೋಡಿದರೆ, ಸಾಮಾನ್ಯ ವರ್ಗದ ಜನರಿಗೆ ಆಘಾತ ಆಗುವುದೊಂದೇ ಬಾಕಿ. ಹಿಂದಿನ ತಿಂಗಳಿಗೆ ಹೋಲಿಸಿದರೆ ಅದರ ಎರಡರಿಂದ ಎರಡೂವರೆ ಪಟ್ಟು ಹೆಚ್ಚು ಬಿಲ್ ಬಂದಿದೆ. ಹತ್ತಿರದ ವಿದ್ಯುತ್ ಪ್ರಸರಣ ನಿಗಮದ ಕಚೇರಿಗೆ ಹೋಗಿ ವಿಚಾರಿಸಿದಾಗ, ಅದು ಏಪ್ರಿಲ್ ತಿಂಗಳಿನಿಂದ ಪೂರ್ವಾನ್ವಯವಾಗಿರುವ ಹೆಚ್ಚುವರಿ ಶುಲ್ಕ ಮತ್ತು ಅದಕ್ಕೆ ಬಡ್ಡಿ ಸೇರಿಸಿ ಈ ತಿಂಗಳು ನೀಡಿದ್ದೇವೆ. ನಿಮಗೆ ಹೆಚ್ಚಿನ ಮಾಹಿತಿ ಬೇಕಿದ್ದರೆ ಇದನ್ನು ಓದಿಕೊಳ್ಳಿ ಎನ್ನುತ್ತಾ ಬುಕ್‌ಲೆಟ್ ಒಂದನ್ನು ನೀಡುತ್ತಾರೆ. ಏಪ್ರಿಲ್‌ನಿಂದ ಅನ್ವಯವಾಗುವಂತೆ ವಿದ್ಯುತ್ ದರ ಹೆಚ್ಚಾಗಿರುವುದು ಹೆಚ್ಚಿನ ಸಾರ್ವಜನಿಕರ ಗಮನಕ್ಕೆ ಬಂದಿರುವುದೇ ಇಲ್ಲ. ಹೀಗೆ ಮಾಡುವುದು ಹಗಲು ದರೋಡೆಯಲ್ಲದೆ ಮತ್ತಿನ್ನೇನು?


ಇದು ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ ಮಾಡಿ ಹೋಗಿರುವುದು, ನಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುತ್ತಾರೆ ಈಗಿನ ಸಚಿವರು. ಮುಖ್ಯವಾಗಿ, ಸೋಲಾರ್ ಅನ್ನು ಉತ್ತೇಜಿಸಿ ವಿದ್ಯುತ್ ಉಳಿಸುವ ಸಲುವಾಗಿಯೇ ಸೋಲಾರ್ ಅಳವಡಿಸಿಕೊಳ್ಳುವ ಮನೆಗೆ ಪ್ರತಿ ತಿಂಗಳು ವಿದ್ಯುತ್ ಬಿಲ್‌ನಲ್ಲಿ ₹ 50 ಸಹಾಯಧನ ನೀಡಲಾಗುತ್ತಿತ್ತು. ಆದರೆ ಈಗ ಬಂದಿರುವ ಬಿಲ್‌ನಲ್ಲಿ ವಿನಾಯಿತಿ ನೀಡಿಲ್ಲ. ಈ ವಿನಾಯಿತಿಯನ್ನು ಹೀಗೆ ಇದ್ದಕ್ಕಿದ್ದಂತೆ ರದ್ದುಪಡಿಸುವುದು ಎಷ್ಟು ಸರಿ? ಸೋಲಾರ್ ಸೌಲಭ್ಯ ಅಳವಡಿಸಿಕೊಂಡಿರುವ ಮನೆಯ ವಿದ್ಯುತ್ ಬಿಲ್‌ನಲ್ಲಿ ₹ 50 ವಿನಾಯಿತಿ ಎಂದಿನಂತೆ ಮುಂದುವರಿಯಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತೀಯ ಆಹಾರ ನಿಗಮದ ಹೆಚ್ಚುವರಿ ಸಂಗ್ರಹದ ಮಾರಾಟಕ್ಕೆ ನಿರ್ಬಂಧ


ಕೇಂದ್ರದ ಅಕ್ಕಿ ರಾಜ್ಯಗಳಿಗಿಲ್ಲ ಖಾಸಗಿಯವರಿಗೆ ಮಾತ್ರ



ದೇಶದ ಪ್ರತಿ ವ್ಯಕ್ತಿಗೂ ಅಗತ್ಯ ಪ್ರಮಾಣದ ಆಹಾರ ದೊರೆಯಬೇಕು ಎಂದು 2013ರಲ್ಲಿ ಯುಪಿಎ ಸರ್ಕಾರವು 'ಆಹಾರ ಭದ್ರತಾ ಕಾಯ್ದೆ'ಯನ್ನು ಜಾರಿಗೆ ತಂದಿತ್ತು. ದೇಶದ ಜನರಿಗೆ ಅಗತ್ಯವಿರುವಷ್ಟು ಆಹಾರ ಧಾನ್ಯಗಳನ್ನು ಖರೀದಿಸಿ, ಎಲ್ಲಾ ಕಾಲಕ್ಕೂ ಲಭ್ಯವಿರುವಂತೆ ನೋಡಿಕೊಳ್ಳುವ ಹೊಣೆ ಕೇಂದ್ರ ಸರ್ಕಾರದ್ದು ಮತ್ತು ಅರ್ಹರನ್ನು ಗುರುತಿಸಿ, ಅವರಿಗೆ ಪಡಿತರವನ್ನು ವಿತರಿಸುವ ಹೊಣೆ ರಾಜ್ಯ ಸರ್ಕಾರದ್ದು ಎಂದು ಈ ಕಾಯ್ದೆ ಹೇಳುತ್ತದೆ.ಅನ್ನಭಾಗ್ಯ ಯೋಜನೆಗೆ ಅಗತ್ಯವಿರುವ ಅಕ್ಕಿಯ ಲಭ್ಯತೆಯನ್ನು ಕೇಂದ್ರ ಸರ್ಕಾರ ತಡೆಯುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರ ಆರೋಪಿಸಿದೆ. ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿ ಅಕ್ಕಿಯನ್ನು ಮಾರಾಟ ಮಾಡಬಾರದು ಎಂದು ಭಾರತೀಯ ಆಹಾರ ನಿಗಮಕ್ಕೆ ಕೇಂದ್ರ ಸರ್ಕಾರ ಮಂಗಳವಾರವಷ್ಟೇ ಸೂಚಿಸಿದೆ. ಇದು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಜಟಾಪಟಿಗೂ ಕಾರಣವಾಗಿದೆ

• ಜಯಸಿಂಹ ಆರ್.

ಎಫ್‌ಸಿಐನಲ್ಲಿದೆ ಹೆಚ್ಚುವರಿ ದಾಸ್ತಾನು



ಆಹಾರ ಭದ್ರತೆ ಕಾಯ್ದೆಯ ಅಡಿಯಲ್ಲಿ ಪ್ರತಿ ರಾಜ್ಯಕ್ಕೆ ಎಷ್ಟು ಲಕ್ಷ ಟನ್ ಆಹಾರ ಧಾನ್ಯಗಳನ್ನು ನೀಡಬೇಕು ಎಂಬುದನ್ನು ನಿಗದಿಪಡಿಸಲಾಗಿದೆ. ಎಲ್ಲಾ ರಾಜ್ಯಕ್ಕೆ ವಿತರಣೆ ಮಾಡಲು ಅಗತ್ಯವಿರುವಷ್ಟು ಆಹಾರ ಧಾನ್ಯವನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಿ, ಸಂಗ್ರಹಿಸಿ ಇಡುವ ಮತ್ತು ರಾಜ್ಯಗಳಿಗೆ ಅದನ್ನು ವಿತರಣೆ ಮಾಡುವ ಹೊಣೆ ಕೇಂದ್ರ ಸರ್ಕಾರದ್ದು. ಹೀಗೆ ವಿತರಿಸುವುದಕ್ಕೆ ಅಗತ್ಯವಿರುವುದಕ್ಕಿಂತ ಹೆಚ್ಚಿನ ಆಹಾರ ಧಾನ್ಯಗಳನ್ನು ಖರೀದಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. ಹೆಚ್ಚುವರಿ ಆಹಾರ ಧಾನ್ಯಗಳನ್ನು ರಾಜ್ಯ ಸರ್ಕಾರಗಳಿಗೆ ಮುಕ್ತ ಮಾರುಕಟ್ಟೆ ಬೆಲೆಯಲ್ಲಿ ಮಾರಾಟ ಮಾಡುವ, ಖಾಸಗಿ ಕಂಪನಿಗಳಿಗೂ ಮಾರಾಟ ಮಾಡುವ ಅಧಿಕಾರವೂ ಕೇಂದ್ರ ಸರ್ಕಾರಕ್ಕೆ ಇದೆ. ಹೆಚ್ಚುವರಿ ಧಾನ್ಯಗಳನ್ನು ಹೀಗೆ ಮಾರಾಟ ಮಾಡುವ ವ್ಯವಸ್ಥೆಯನ್ನು 'ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ- ಒಎಂಎಸ್‌ಎಸ್' ಎಂದು ಕರೆಯಲಾಗುತ್ತದೆ.

ಒಎಂಎಸ್‌ಎಸ್ ಅಡಿಯಲ್ಲಿ ರಾಜ್ಯ ಸರ್ಕಾರಗಳು ತಮಗೆ ಅಗತ್ಯವಿರುವ ಹೆಚ್ಚುವರಿ ಧಾನ್ಯಗಳನ್ನು ಖರೀದಿಸಲು ಅವಕಾಶವಿದೆ. ಆದರೆ, ಕೇಂದ್ರ ಸರ್ಕಾರವು ಇದೇ ಮಂಗಳವಾರ ಭಾರತೀಯ ಆಹಾರ ನಿಗಮಕ್ಕೆ ಸುತ್ತೋಲೆ ನೀಡಿದ್ದು, 'ಒಎಂಎಸ್‌ಎಸ್ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ಅಕ್ಕಿ ಮತ್ತು ಗೋಧಿಯನ್ನು ಮಾರಾಟ ಮಾಡುವುದನ್ನು ನಿಲ್ಲಿಸಲಾಗಿದೆ' ಎಂದು ಆದೇಶಿಸಿದೆ. ಆದರೆ, ಇದೇ ಯೋಜನೆ ಅಡಿಯಲ್ಲಿ ಖಾಸಗಿ ಕಂಪನಿಗಳು ಅಕ್ಕಿ ಮತ್ತು ಗೋಧಿಯನ್ನು ಖರೀದಿಸಲು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ಹೇಳಿದೆ.

ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವಿತರಿಸಲು 550 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯಗಳ ಅವಶ್ಯಕತೆ ಇದೆ ಎಂದು ಆಹಾರ ಭದ್ರತೆ ಕಾಯ್ದೆಯಲ್ಲಿ ನಿಗದಿಪಡಿಸಲಾಗಿದೆ. ಈ 550 ಲಕ್ಷ ಟನ್‌ನಲ್ಲಿ ಅಕ್ಕಿ, ಗೋಧಿ ಮತ್ತು ಬೇಳೆಕಾಳುಗಳೂ ಸೇರಿವೆ. ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾದ ಭಾರತೀಯ ಆಹಾರ ನಿಗಮದ ವಿವಿಧ ಗೋದಾಮುಗಳಲ್ಲಿ ಈಗ 731 ಲಕ್ಷ ಟನ್‌ಗಳಿಗೂ ಹೆಚ್ಚು ಆಹಾರ ಧಾನ್ಯದ ಸಂಗ್ರಹವಿದೆ. ಅಗತ್ಯಕ್ಕಿಂತ ಹೆಚ್ಚು ಆಹಾರ ಧಾನ್ಯದ ಸಂಗ್ರಹ ಇದ್ದರೂ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿ ಅಕ್ಕಿ ಮತ್ತು ಗೋಧಿಯನ್ನು ಮಾರಾಟ ಮಾಡದಂತೆ ಸೂಚನೆ ನೀಡಿದೆ.

ಅಕ್ಕಿ ಮತ್ತು ಗೋಧಿಯ ಬೆಲೆಯನ್ನು ನಿಯಂತ್ರಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಇದರಿಂದ ರಾಜ್ಯ ಸರ್ಕಾರಗಳು ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿಯನ್ನು ಖರೀದಿಸುವ ಅನಿವಾರ್ಯಕ್ಕೆ ಒಳಗಾಗಿವೆ. ಇದರಿಂದ ಹೆಚ್ಚುವರಿ ಅಕ್ಕಿಯನ್ನು ರಾಜ್ಯ ಸರ್ಕಾರಗಳು ಹೆಚ್ಚು ಹಣ ಕೊಟ್ಟು ಖರೀದಿಸಬೇಕಾಗುತ್ತದೆ. ಪರಿಣಾಮವಾಗಿ ರಾಜ್ಯ ಸರ್ಕಾರಗಳ ಹೊರೆ ಹೆಚ್ಚಾಗುತ್ತದೆ.

ಆಹಾರ ಭದ್ರತಾ ಕಾಯ್ದೆಗೆ ಸಂಬಂಧಿಸಿದಂತೆ ಯಾವುದೇ ಕಾನೂನುಗಳನ್ನು ಬದಲಿಸುವ, ರಚಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. ಆದರೆ, ಹಾಗೆ ಮಾಡುವ ಮುನ್ನ ರಾಜ್ಯ ಸರ್ಕಾರಗಳ ಜತೆಗೆ ಸಮಾಲೋಚನೆ ನಡೆಸಲೇಬೇಕು ಎಂದು ಆಹಾರ ಭದ್ರತಾ ಕಾಯ್ದೆ ಹೇಳುತ್ತದೆ. ಈಗ ಒಎಂಎಸ್‌ಎಸ್ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿ ಅಕ್ಕಿ ಮತ್ತು ಗೋಧಿ ಮಾರಾಟ ಮಾಡಬಾರದು ಎಂಬ ನಿರ್ಧಾರ ತೆಗೆದುಕೊಳ್ಳುವಾಗ, ರಾಜ್ಯ ಸರ್ಕಾರಗಳ ಜತೆಗೆ ಕೇಂದ್ರ ಸರ್ಕಾರವು ಸಮಾಲೋಚನೆ ನಡೆಸಿತ್ತೇ ಎಂಬುದರ ಬಗ್ಗೆ ಮಾಹಿತಿ ಇಲ್ಲ.

ಕಡು ಬಡವರಿಗೆ ಪಡಿತರ ನೀಡುವ 'ಟಾರ್ಗೆಟೆಡ್ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂ–ಟಿಪಿಡಿಎಸ್' ಮತ್ತು ರಾಜ್ಯ ಸರ್ಕಾರಗಳ 'ಇತರೆ ಕಲ್ಯಾಣ ಯೋಜನೆ'ಗಳಿಗೆ ಅಗತ್ಯವಿರುವಷ್ಟು ಅಕ್ಕಿ ಮತ್ತು ಗೋಧಿಯನ್ನು ಖರೀದಿಸುವ, ಸಂಗ್ರಹಿಸುವ ಮತ್ತು ರಾಜ್ಯಗಳಿಗೆ ವಿತರಿಸುವ ಹೊಣೆಗಾರಿಕೆ ಕೇಂದ್ರ ಸರ್ಕಾರದ್ದು ಎಂದು ಆಹಾರ ಭದ್ರತಾ ಕಾಯ್ದೆಯ 2ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಅಗತ್ಯವಿರುವಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದೂ ಕೇಂದ್ರ ಸರ್ಕಾರದ ಹೊಣೆಗಾರಿಕೆ ಎಂದು ಈ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಹೀಗಿದ್ದಾಗ ರಾಜ್ಯ ಸರ್ಕಾರದ ಪಡಿತರ ಯೋಜನೆಗಳೆಲ್ಲಾ, ಈ ಕಾಯ್ದೆ ವಿವರಿಸಿರುವ 'ಇತರೆ ಕಲ್ಯಾಣ ಯೋಜನೆಗಳ' ವ್ಯಾಪ್ತಿಗೆ ಬರುತ್ತದೆ. ಇತರೆ ಕಲ್ಯಾಣ ಯೋಜನೆಗಳಿಗೆ ಅಗತ್ಯವಿರುವ ಆಹಾರ ಧಾನ್ಯವನ್ನು ಒದಗಿಸುವುದು ಕೇಂದ್ರ ಸರ್ಕಾರದ ಹೊಣೆ.

ರಾಜ್ಯದ ಎಫ್‌ಸಿಐ ಗೋದಾಮುಗಳಲ್ಲಿನ ಸಂಗ್ರಹ

ಗೋದಾಮು	ಅಕ್ಕಿ ಸಂಗ್ರಹ	ಗೋಧಿ ಸಂಗ್ರಹ
ಬೆಂಗಳೂರು	1.50 ಲಕ್ಷ ಟನ್	17,352 ಟನ್
ಮೈಸೂರು	70,947 ಟನ್	3,851 ಟನ್
ಶಿವಮೊಗ್ಗ	1.03 ಲಕ್ಷ ಟನ್	1,702 ಟನ್
ಹುಬ್ಬಳ್ಳಿ	1.70 ಲಕ್ಷ ಟನ್	2,085 ಟನ್
ರಾಯಚೂರು	1.63 ಲಕ್ಷ ಟನ್	6,274 ಟನ್
ಒಟ್ಟು	6.59 ಲಕ್ಷ ಟನ್	31,264 ಟನ್

ರಾಜ್ಯ ಕೇಳಿದ್ದು ಹೆಚ್ಚುವರಿ 1.66 ಲಕ್ಷ ಟನ್

ಆಹಾರ ಭದ್ರತಾ ಕಾಯ್ದೆಯ ಅಡಿಯಲ್ಲಿ ಕರ್ನಾಟಕಕ್ಕೆ ವಾರ್ಷಿಕ 25.56 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯವನ್ನು ನಿಗದಿ ಮಾಡಲಾಗಿದೆ. ಅಷ್ಟು ಪ್ರಮಾಣದ ಆಹಾರ ಧಾನ್ಯವನ್ನು ಕೇಂದ್ರ ಸರ್ಕಾರವು ಒದಗಿಸಲೇಬೇಕು. ರಾಜ್ಯ ಸರ್ಕಾರ ಜಾರಿಗೆ ತರಲು ಹೊರಟಿರುವ ಅನ್ನಭಾಗ್ಯ ಯೋಜನೆಗೆ ಪ್ರತಿ ತಿಂಗಳು ಹೆಚ್ಚುವರಿಯಾಗಿ 13,819.5 ಟನ್‌ಗಳಷ್ಟು ಅಕ್ಕಿ ಬೇಕಾಗುತ್ತದೆ. ಪ್ರತಿ ತಿಂಗಳಿಗೆ 13,819 ಟನ್‌ಗಳಂತೆ ಒಂದು ವರ್ಷಕ್ಕೆ ಹೆಚ್ಚುವರಿಯಾಗಿ 1.66 ಲಕ್ಷ ಟನ್‌ಗಳಷ್ಟು ಅಕ್ಕಿ ಬೇಕಾಗುತ್ತದೆ.

ಒಎಂಎಸ್‌ಎಸ್ ಯೋಜನೆ ಅಡಿಯಲ್ಲಿ, ಹೆಚ್ಚುವರಿ ಅಕ್ಕಿಯನ್ನು ಪ್ರತಿ ಕ್ವಿಂಟಾಲ್‌ಗೆ ₹3,400ರಂತೆ ಖರೀದಿಗೆ ಅವಕಾಶ ನೀಡಬೇಕು ಎಂದು ರಾಜ್ಯ ಸರ್ಕಾರವು ಎಫ್‌ಸಿಐ ಅನ್ನು ಕೋರಿತ್ತು. ರಾಜ್ಯದ ಐದು ಕಡೆ ಇರುವ ಎಫ್‌ಸಿಐ ಗೋದಾಮುಗಳಲ್ಲಿ ಮೇ ಅಂತ್ಯಕ್ಕೆ 6.59 ಲಕ್ಷ ಟನ್‌ಗಳಷ್ಟು ಅಕ್ಕಿಯ ಸಂಗ್ರಹವಿತ್ತು. ಹೆಚ್ಚುವರಿ ಅಕ್ಕಿ ಖರೀದಿಗೆ ಎಫ್‌ಸಿಐ ಅನುಮೋದನೆಯನ್ನೂ ನೀಡಿತ್ತು. ಆದರೆ, ಎಫ್‌ಸಿಐ ಅನುಮೋದನೆ ನೀಡಿದ ಮರುದಿನವೇ ಕೇಂದ್ರ ಸರ್ಕಾರವು ಒಎಂಎಸ್‌ಎಸ್ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ಅಕ್ಕಿ ಮತ್ತು ಗೋಧಿ ಮಾರಾಟ ಮಾಡುವುದನ್ನು ನಿಲ್ಲಿಸಿದೆ.

25.56 ಲಕ್ಷ ಟನ್
ಆಹಾರ ಭದ್ರತಾ ಕಾಯ್ದೆಯ ಪ್ರಕಾರ ರಾಜ್ಯಕ್ಕೆ ನಿಗದಿಯಾಗಿರುವ ಆಹಾರ ಧಾನ್ಯಗಳ ಪ್ರಮಾಣ

1.66 ಲಕ್ಷ ಟನ್
ಪ್ರತಿ ತಿಂಗಳಿಗೆ 13,819.5 ಟನ್‌ಗಳಂತೆ, ಒಂದು ವರ್ಷಕ್ಕೆ ಅಗತ್ಯವಿರುವ ಹೆಚ್ಚುವರಿ ಅಕ್ಕಿಯ ಪ್ರಮಾಣ


ಎಥೆನಾಲ್ ಉತ್ಪಾದನೆಗೆ 29.5ಲಕ್ಷ ಟನ್ ಅಕ್ಕಿ

• ಸುಕೃತ ಎಸ್.

2019ರಿಂದ 2023ರವರೆಗೆ ಒಟ್ಟು 29.05 ಲಕ್ಷ ಟನ್ ಉತ್ತಮ ಗುಣಮಟ್ಟದ ಅಕ್ಕಿಯನ್ನು ಎಥೆನಾಲ್ ಉತ್ಪಾದನೆಗೆ ಕೇಂದ್ರ ಸರ್ಕಾರ ನೀಡಿದೆ. ಎಥೆನಾಲ್ ಮಿಶ್ರಣ ಯೋಜನೆಯು ನಮ್ಮ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದು ಎಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೇಳಿಕೊಂಡಿದೆ.

ಮಾನವ ಬಳಕೆಗೆ ಉಪಯುಕ್ತವಲ್ಲದ ಅಕ್ಕಿ, ಜೋಳ ಸೇರಿದಂತೆ ಆಹಾರ ಧಾನ್ಯಗಳನ್ನು ಬಳಸಿ ಎಥೆನಾಲ್ ಉತ್ಪಾದನೆಯನ್ನು ಹೆಚ್ಚಿಸಲು ರಾಷ್ಟ್ರೀಯ ಜೈವಿಕ ಇಂಧನ ಯೋಜನೆ 2018ಕ್ಕೆ ಸರ್ಕಾರವು ತಿದ್ದುಪಡಿ ತಂದಿತ್ತು. ಆದರೆ, ಭಾರತ ಆಹಾರ ನಿಗಮದ (ಎಫ್‌ಸಿಐ) ಬಳಿ ಇರುವ ಉತ್ತಮ ಗುಣಮಟ್ಟದ ಹೆಚ್ಚುವರಿ ಅಕ್ಕಿಯನ್ನೂ ಎಥೆನಾಲ್ ಉತ್ಪಾದನೆಗೆ ಬಳಸಬಹುದು ಎಂದು 2020ರಲ್ಲಿ ಮತ್ತೊಮ್ಮೆ ತಿದ್ದುಪಡಿ ತರಲಾಗಿದೆ. ಹೀಗಾಗಿ 2022–23ನೇ ಆರ್ಥಿಕ ವರ್ಷದಲ್ಲಿ ಸುಮಾರು 16 ಲಕ್ಷ ಟನ್ ಅಕ್ಕಿಯನ್ನು ಎಥೆನಾಲ್ ಉತ್ಪಾದನೆಗೆ ಬಳಸಿಕೊಳ್ಳಲಾಗಿದೆ.

2020ರಲ್ಲಿ ತಂದಿದ್ದ ತಿದ್ದುಪಡಿಯು ಜನರ ಆಕ್ರೋಶಕ್ಕೆ ಕಾರಣವಾಗಿತ್ತು. ಅಭಿವೃದ್ಧಿ ಹೊಂದುತ್ತಿರುವ, ಇನ್ನೂ ಬಡತನ ಇರುವ ಭಾರತದಂತ ದೇಶದಲ್ಲಿ ತಿನ್ನಲು ಅಕ್ಕಿ ಇಲ್ಲದ ಹೊತ್ತಲ್ಲಿ, ಎಥೆನಾಲ್ ಉತ್ಪಾದನೆಗೆ ಗುಣಮಟ್ಟದ ಅಕ್ಕಿ ಕೊಡುವುದರ ಬಗ್ಗೆ ಕಟು ಟೀಕೆ ವ್ಯಕ್ತವಾಗಿತ್ತು. ಎಥೆನಾಲ್‌ಗೆ ಅಕ್ಕಿ ಬಳಸಿದರೆ, ತಿನ್ನಲು ಅಕ್ಕಿಯ ಕೊರತೆ ಉಂಟಾಗುತ್ತದೆ ಎಂಬ ಕಳವಳವೂ ವ್ಯಕ್ತವಾಗಿತ್ತು.



ಏನಿದು ಎಥೆನಾಲ್ ಮಿಶ್ರಣ ಯೋಜನೆ?

2003ರಲ್ಲೇ ಈ ಯೋಜನೆಗೆ ಚಾಲನೆ ದೊರೆತಿತ್ತು. ಆದರೆ, 2018ರಲ್ಲಿ ಈ ಯೋಜನೆಗೆ ವೇಗ ನೀಡಲಾಯಿತು ಎಂದು ಕೇಂದ್ರ ಹೇಳಿದೆ. ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಇದರಿಂದಾಗಿ, ವಾಯು ಮಾಲಿನ್ಯ ಕಡಿಮೆಯಾಗುತ್ತದೆ ಮತ್ತು ಕಚ್ಚಾ ತೈಲ ಆಮದು ಕುಗ್ಗುತ್ತದೆ ಎಂದು ಸರ್ಕಾರ ಹೇಳಿದೆ.

2021–22ರ ಹೊತ್ತಿಗೆ ಒಂದು ಲೀಟರ್ ಪೆಟ್ರೋಲ್‌ಗೆ ಶೇ 10ರಷ್ಟು (ಇ10) ಎಥೆನಾಲ್ ಅನ್ನು ಮಿಶ್ರಣ ಮಾಡಬೇಕು ಎಂಬ ಗುರಿ ಹಾಕಿಕೊಳ್ಳಲಾಗಿತ್ತು. ಈ ಗುರಿಯನ್ನು ಸರ್ಕಾರ ತಲುಪಿದೆ. 2025–26ರ ಹೊತ್ತಿಗೆ ಈ ಪ್ರಮಾಣವು ಶೇ 20ಕ್ಕೆ ತಲುಪುವುದು ಸರ್ಕಾರದ ಮುಂದಿನ ಗುರಿ. ಪ್ರಾಯೋಗಿಕ ಯೋಜನೆಗಾಗಿ ಕೇಂದ್ರಾಡಳಿತ ಪ್ರದೇಶ ಸೇರಿದಂತೆ 11 ರಾಜ್ಯಗಳಲ್ಲಿ ಒಂದು ಲೀಟರ್ ಪೆಟ್ರೋಲ್‌ಗೆ ಶೇ 20ರಷ್ಟು (ಇ20) ಎಥೆನಾಲ್ ಅನ್ನು ಮಿಶ್ರಣ ಮಾಡಿ ಪೆಟ್ರೋಲ್ ಬಂಕ್‌ಗಳ ಮೂಲಕ ಜನರಿಗೆ ನೀಡಲಾಗುತ್ತಿದೆ. 11 ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದೆ.

ಪಡಿತರಕ್ಕೆ ಹೆಚ್ಚು ದರ: ಎಥೆನಾಲ್‌ಗೆ ಕಡಿಮೆ ದರ

ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ (ಒಎಂಎಸ್‌ಎಸ್) ಅಡಿಯಲ್ಲಿ ರಾಜ್ಯಗಳು ಹಾಗೂ ವ್ಯಕ್ತಿಗಳು ಧಾನ್ಯಗಳನ್ನು ಖರೀದಿಸಬಹುದಾಗಿದೆ. ಇಲ್ಲಿ ಖರೀದಿ ಮಾಡಲು ಒಂದು ಕ್ವಿಂಟಾಲ್ ಅಕ್ಕಿಗೆ ₹3,400 ದರ ನಿಗದಿ ಮಾಡಲಾಗಿದೆ. ಆದರೆ, ಎಥೆನಾಲ್ ಉತ್ಪಾದನೆಗೆ ಅಕ್ಕಿ ಖರೀದಿಸಲು ಒಂದು ಕ್ವಿಂಟಾಲ್‌ಗೆ ₹2,400 ನಿಗದಿಪಡಿಸಲಾಗಿದೆ. ತೀರಾ ಇತ್ತೀಚೆಗೆ ಆಹಾರ ಸಚಿವಾಲಯವು ಈ ಮಾರ್ಗಸೂಚಿಯನ್ನು ಸಿದ್ಧಪಡಿಸಿದೆ.

ಆಧಾರ: ಕೇಂದ್ರ ಪಡಿತರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸುತ್ತೋಲೆಗಳು, ಪಿಟಿಐ, ಪಿಐಬಿ ಪತ್ರಿಕಾ ಪ್ರಕಟಣೆಗಳು, ಭಾರತೀಯ ಆಹಾರ ನಿಗಮದ ದಾಸ್ತಾನು ವರದಿಗಳು, ಆಹಾರ ಭದ್ರತಾ ಕಾಯ್ದೆ–2013, ಮುಕ್ತ ಮಾರುಕಟ್ಟೆ ಮಾರಾಟ ಯೋಜನಾ ನಿಯಮಗಳು, ಮುಖ್ಯಮಂತ್ರಿ ಸಿದ್ಧರಾಮಯ್ಯ ಟ್ವೀಟ್

ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ರಾಜ್ಯದಲ್ಲಿ ನಡೆಯಬೇಕಿದ್ದ ಭಾರಿ ರೈಲು ಅವಘಡ ಸ್ವಲ್ಪದರಲ್ಲೇ ತಪ್ಪಿದೆ. ಮುಸ್ಲಿಮನೊಬ್ಬ ರೈಲು ಸಂಚರಿಸುವಾಗ, ಹಳಿಯ ಮೇಲೆ ಎಲ್‌ಪಿಜಿ ಸಿಲಿಂಡರ್ ಎಸೆದಿದ್ದಾನೆ. ಅದೃಷ್ಟವಶಾತ್ ಸಿಲಿಂಡರ್ ಸ್ಫೋಟಗೊಂಡಿಲ್ಲ. ಅದು ಸ್ಫೋಟಗೊಂಡಿದ್ದರೆ, ಸಾವಿರಾರು ಮಂದಿ ಸಾಯಬೇಕಿತ್ತು. ಅಂತಹ ದೊಡ್ಡ ಅನಾಹುತವನ್ನು ಜನರು ಮತ್ತು ರೈಲ್ವೆ ಸಿಬ್ಬಂದಿ ತಡೆದಿದ್ದಾರೆ. ಪ್ರಧಾನಿ ಮೋದಿ ಅವರಿಗೆ ಕೆಟ್ಟ ಹೆಸರು ತರಲೆಂದೇ ಹೀಗೆ ಮಾಡುತ್ತಿದ್ದಾರೆ' ಎಂಬ ವಿವರ ಇರುವ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರ ಜತೆಯಲ್ಲಿ ಒಂದು ವಿಡಿಯೊ ಸಹ ಹಂಚಿಕೊಳ್ಳಲಾಗಿದೆ. ಆದರೆ, ಈ ವಿವರಗಳೆಲ್ಲವೂ ಸುಳ್ಳು.



ಇದು ಸುಳ್ಳು ಸುದ್ದಿ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಕರ್ನಾಟಕಕ್ಕೂ ಈ ವಿಡಿಯೊಗೂ ಸಂಬಂಧವಿಲ್ಲ. 'ಇದು ಉತ್ತರ ಪ್ರದೇಶದ ಗುರುಗ್ರಾಮ ಜಿಲ್ಲೆಯ ಕಥಾಗೋದಾಮ್ ರೈಲು ನಿಲ್ದಾಣಕ್ಕೆ ಸಂಬಂಧಿಸಿದ್ದ ವಿಡಿಯೊ. 2022ರ ಜುಲೈ 5ರಂದು ಈ ಘಟನೆ ನಡೆದಿತ್ತು. ಗಂಗಾರಾಮ್ ಎಂಬ ವ್ಯಕ್ತಿ ಖಾಲಿ ಸಿಲಿಂಡರ್ ಹೊತ್ತು ರೈಲುಹಳಿ ದಾಟುತ್ತಿದ್ದ. ರೈಲು ಬಂದಿದ್ದರಿಂದ ಸಿಲಿಂಡರ್ ಎಸೆದು, ಓಡಿಹೋಗಿದ್ದ. ಇದನ್ನು ಗಮನಿಸಿದ್ದ ರೈಲ್ವೆ ಪೊಲೀಸರು, ರೈಲನ್ನು ತಡೆದು ನಿಲ್ಲಿಸಿದ್ದರು. ಆದರೆ, ಅಷ್ಟರಲ್ಲಾಗಲೇ ಗಾಲಿಗೆ ಸಿಲುಕಿ ಸಿಲಿಂಡರ್ ಛಿದ್ರವಾಗಿತ್ತು. ನಂತರ ಗಂಗಾರಾಮ್‌ನನ್ನು ಬಂಧಿಸಿ, ಪ್ರಕರಣ ದಾಖಲಿಸಲಾಗಿತ್ತು. ಈ ಬಗ್ಗೆ ರೈಲ್ವೆ ಪೊಲೀಸರೇ ಮಾಹಿತಿ ನೀಡಿದ್ದಾರೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮುನಿವೃತ್ತಿ ಸೂತ್ರಗಳು

ತನುರುಜೆಗೆ ಪಥ್ಯಾನ್ನ, ಬಾಯ ಚಪಲಕ್ಕಲ್ಲ |
ಮನದ ಶಿಕ್ಷೆಗೆ ಲೋಕ, ಮಮಕಾರಕಲ್ಲ ||
ಗುಣಚರ್ಯೆ ವಿಶ್ವಸಮರಸಕೆ, ಕಾಮಿತಕಲ್ಲ |
ಮುನಿವೃತ್ತಿ ಸೂತ್ರವಿದು – ಮಂಕುತಿಮ್ಮ || **907** ||

ಪದ-ಅರ್ಥ: ತನುರುಜೆಗೆ = ತನು(ದೇಹ) + ರುಜೆ-(ಆಲಸ್ಯ), ವಿಶ್ವಸಮರಸಕ್ಕೆ = ವಿಶ್ವದ ಸಮನ್ವಯತೆಗೆ, ಹೊಂದಾಣಿಕೆಗೆ, ಕಾಮಿತಕಲ್ಲ = ಸ್ವಂತ ಅಪೇಕ್ಷೆಯ ತೀರಿಕೆಗಲ್ಲ.

ವಾಚ್ಯಾರ್ಥ: ಪಥ್ಯದ ಆಹಾರವಿರುವುದು ದೇಹಾಲಸ್ಯವನ್ನು ಕಡಿಮೆಮಾಡುವುದಕ್ಕೆ, ಬಾಯಿಯ ಚಪಲಕ್ಕಲ್ಲ. ಈ ಲೋಕವಿರುವುದು ಮನಸ್ಸಿಗೆ ಶಿಕ್ಷಣ ನೀಡುವುದಕ್ಕೆ, ಮಮಕಾರಕ್ಕೆ ಅಲ್ಲ. ನಮ್ಮ ಗುಣಗಳು ಮತ್ತು ನಡವಳಿಕೆಗಳು ವಿಶ್ವದ ಸಮರಸಕ್ಕೆ, ನಮ್ಮ ಸ್ವಂತ ಅಪೇಕ್ಷೆಗಳ ತೃಪ್ತಿಗಾಗಿ ಅಲ್ಲ. ಇದು ಜ್ಞಾನಿಗಳ ವೃತ್ತಿಯ ಸೂತ್ರ.

ವಿವರಣೆ: ಮುನಿಗಳು ಹೇಗಿರುತ್ತಾರೆ? ಭಗವದ್ಗೀತೆ ಹೇಳುತ್ತದೆ – "ಯಾನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮಿ |
ಯಸ್ಯಾಂ ಜಾಗರ್ತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ||

"ಎಲ್ಲರಿಗೂ ಯಾವಾಗ ಕತ್ತಲೆಯಾಗಿರುತ್ತದೋ, ಆಗ ಸಂಯಮಿಯಾದವನು ಜಾಗ್ರತನಾಗಿರುತ್ತಾನೆ. ಯಾವಾಗ ಎಲ್ಲರೂ ಯಾವ ವಿಷಯಗಳಲ್ಲಿ ಜಾಗ್ರತರಾಗಿರುತ್ತಾರೋ, ಆಗ ಮುನಿಯಾದವನು ಅದನ್ನು ರಾತ್ರಿಯಂತೆ ಭಾವಿಸುತ್ತಾನೆ". ಎಲ್ಲರೂ ಅಜ್ಞಾನದಿಂದ (ರಾತ್ರಿ) ಇರುವಾಗ ಸಂಯಮಿಯಾದವನು ಅಜ್ಞಾನದಿಂದ ದೂರವಿರಲು ಜಾಗ್ರತನಾಗಿರುತ್ತಾನೆ. ಪ್ರಪಂಚದ ಸುಖ ಭೋಗಗಳಲ್ಲಿ ಸಾಮಾನ್ಯ ಜನ ಮೈಮರೆತಾಗ, ಮುನಿಯಾದವನು ಅವುಗಳ ಬಗ್ಗೆ ಮೋಹವನ್ನು ಬೆಳೆಸಿಕೊಳ್ಳದೆ, ಸ್ಥಿತಪ್ರಜ್ಞನಾಗಿರುತ್ತಾನೆ. ಹಾಗಾದರೆ ಮುನಿಗಳು ಜೀವನದ ಚಟುವಟಿಕೆಗಳಿಂದ ವಿಮುಖರೆ? ಇಲ್ಲ. ಅವರು ಸದಾ ಜಾಗ್ರತರಾಗಿ, ಸಮಾಜಮುಖಿಯಾಗಿ ದುಡಿಯುತ್ತಿದ್ದರೂ ಅಂತರಂಗದಲ್ಲಿ ಪರಮಶಾಂತಿಯನ್ನು ಹೊಂದಿದವರು. ಯಾಕೆಂದರೆ ಅವರಿಗೆ ಕರ್ತವ್ಯವಿದೆ, ಮಮಕಾರವಿಲ್ಲ. ತಂದೆಯ ಒಂದು ಮಾತಿಗೆ ಸಮೃದ್ಧ ರಾಜ್ಯದ ಚಕ್ರವರ್ತಿ ಪದವಿಯನ್ನು ಕ್ಷಣಮಾತ್ರದಲ್ಲಿ ತೊರೆದು ಕಾಡಿಗೆ ಹೋದ ರಾಮ, ಎಲ್ಲ ರಾಜರುಗಳ ಕಿರೀಟಗಳು ತನ್ನ ಪದತಲದಲ್ಲೇ ಇದ್ದರೂ ರಾಜನಾಗದೆ ಉಳಿದ ಕೃಷ್ಣ, ಒಂದು ಕ್ಷಣದಲ್ಲಿ ತಾನು ಜಿಪುಣತನದಿಂದ ಗಳಿಸಿದ ನವಕೋಟಿಯನ್ನು ಮನದಿಂದ ತೆಗೆದು ಹಾಕಿ ಪುರಂದರದಾಸನಾದ ಶೀನಪ್ಪನಾಯಕ, ಇವರು ತೋರಿದ ನಡೆಗಳೆಲ್ಲ ಮುನಿವೃತ್ತಿಯೇ. ಈ ವಿಷಯವನ್ನು ಕಗ್ಗ ಸುಂದರ ಉದಾಹರಣೆಗಳಿಂದ ತಿಳಿಸುತ್ತದೆ. ರೋಗಕ್ಕೆ ದೇಹಾಲಸ್ಯವಾದಾಗ ಪಥ್ಯದ ಊಟ. ಅದು ಆರೋಗ್ಯಕ್ಕೆ ಹಿತವಾದದ್ದು ಆದರೆ ನಾಲಿಗೆಯ ರುಚಿಗಲ್ಲ. ಹಾಗೆಯೇ ಲೋಕವಿರುವುದು ಮನದ ಪರಿಷ್ಕಾರಕ್ಕೆ, ಶಿಕ್ಷಣಕ್ಕೆ. ಅದು ಮಮಕಾರವನ್ನು ಬೆಳೆಸಿಕೊಳ್ಳುವುದಕ್ಕಲ್ಲ. ನಮ್ಮ ಎಲ್ಲ ಗುಣಗಳು, ನಡೆಗಳು ವಿಶ್ವದ ಸಂತೋಷದ ಬಾಳ್ವೆಗೆ, ಸಮನ್ವಯತೆಗೆ ಹೊರತು ಕೇವಲ ಸ್ವಂತದ ಅಪೇಕ್ಷೆಗಳ ಪೂರೈಸುವುದಕ್ಕಲ್ಲ. ಹೀಗೆ ಲೋಕದಲ್ಲಿಯ ನಮ್ಮ ನಡೆ ಸಮನ್ವಯತೆಗೆ, ಸಮರಸಕ್ಕೆ ಕಾರಣವಾದರೆ, ನಮ್ಮ ಜೀವನಾನುಭವ ಮನಸ್ಸಿನ ಶಿಕ್ಷಣಕ್ಕೆ ಮಾತ್ರವಾಗಿದ್ದು, ವೈಯಕ್ತಿಕ ಕಾಮನೆಗಳ ತೃಪ್ತಿಗಾಗಿ ಅಲ್ಲವಾಗಿದ್ದರೆ ಅದೇ ಮುನಿವೃತ್ತಿ. ಈ ನಡೆಗಳೇ ಆ ಮುನಿವೃತ್ತಿಯ ಸೂತ್ರಗಳು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜೂನ್ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ತ್ರಯೋದಶಿ ಗಂ. 08-41 ನಕ್ಷತ್ರ: ಕೃತ್ತಿಕಾ ಗಂ. 15-07 ಯೋಗ: ಧೃತಿ 25-22 ಕರಣ: ವಣಿಜ ಗಂ. 08-41, ಮಿಥುನ ಮಾಸದ 01 ನೇ ದಿನ, ಮಳೆನಕ್ಷತ್ರ: ಮೃಗಶಿರ 3. ರಾಹುಕಾಲ : ಬೆಳಿಗ್ಗೆ 10-30 – 12-00 ಸೂರ್ಯೋದಯ : 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 27 ಜುಲ್ಕಾಯದ್
ಅದೃಷ್ಟ ಸಂಖ್ಯೆ : 1, 3

ಮೇಷ: ವಾಹನದ ಖರೀದಿಯ ಯೋಗವಿದ್ದು ನಿಮ್ಮಾಸೆಯಂತೆಯೇ ದೊಡ್ಡ ವಾಹನ ಕೊಳ್ಳಬಹುದು. ಸರ್ವತೋಮುಖ ಅಭಿವೃದ್ಧಿಗೆ ಸೋದರವರ್ಗದವರ ಬೆಂಬಲ ಸಿಗಲಿದೆ. ವೃತ್ತಿಯಲ್ಲಿ ಅಭಿವೃದ್ಧಿಯು ಸಮಾಧಾನ ನೀಡಲಿದೆ.

ವೃಷಭ: ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಹಣಕಾಸಿನ ಸ್ಥಿತಿ ಗತಿ ನೋಡಿಕೊಂಡು ನಿವೇಶನವನ್ನು ಖರೀದಿಸುವ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಹಠ ಸ್ವಭಾವವನ್ನು ಕಡಿಮೆ ಮಾಡುವುದರಿಂದ ಏಳಿಗೆ ಇರುವುದು.

ಮಿಥುನ: ನ್ಯಾಯಾಲಯದ ವಿಚಾರಗಳಲ್ಲಿ ಮಧ್ಯಸ್ಥಿಕೆ, ರಾಜೀ ಮನೋಭಾವ ಕಾರ್ಯಾನುಕೂಲಕ್ಕೆ ಸಾಧಕವಾಗುತ್ತದೆ. ಸಂಘ ಸಂಸ್ಥೆಗಳ ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ಕರ್ಕಾಟಕ: ಕಂಪನಿಯ ವಿದೇಶದಲ್ಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸಬಹುದು. ಅಧ್ಯಾಪಕ ವರ್ಗದವರಿಗೆ ವಿದ್ಯಾರ್ಥಿಗಳ ಮೇಲುಗೈಯಿಂದ ಸಂತೋಷ ಹಾಗೂ ಗೌರವ ಸಿಗುವುದು. ಕುಟುಂಬದಲ್ಲಿ ಕಲಹ ದೂರಾಗಲಿದೆ.

ಸಿಂಹ: ಕೋರ್ಟು ಕಚೇರಿಯ ಕೆಲಸ ಕಾರ್ಯಗಳು ಯಾವುದೇ ರೀತಿಯ ಪರದಾಟವಿಲ್ಲದೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ನಡೆಯುತ್ತದೆ. ಸುಗಂಧದ್ರವ್ಯದ ಬಗ್ಗೆ ಕೆಲಸ ಮಾಡುತ್ತಿರುವವರಿಗೆ ಬಯಸಿದ ಫಲಿತಾಂಶ ದೊರೆಯಲಿದೆ.

ಕನ್ಯಾ: ಸದಾಕಾಲ ಕಾರ್ಯ ಪ್ರವೃತ್ತರಾಗಿ, ತಪ್ಪುಗಳನ್ನು ಮಾಡದೇ ಸರಿಯಾದ ದಾರಿಯಲ್ಲಿ ದುಡಿಯುವ ನಿಮಗೆ ಈ ದಿನ ಉತ್ತಮ ಫಲಗಳು ಅನುಭವಕ್ಕೆ ಬರಲಿದೆ. ಬಹಳ ದಿನಗಳ ನಂತರ ಮನಸ್ಸಿಗೆ ಹಿತವಾದ ಅನುಭವ ಸಿಗಲಿದೆ.

ತುಲಾ: ಕಾಗದಪತ್ರಗಳ ಬರಹಗಾರರಿಗೆ ಮತ್ತು ಕಂಪ್ಯೂಟರ್ ಕೆಲಸಗಾರರಿಗೆ ತೃಪ್ತಿಕರ ದಿನ. ಬದುಕನ್ನು ಅರ್ಥಪೂರ್ಣವಾಗಿ ನಡೆಸುವ ಬಗ್ಗೆ ನಿಮ್ಮ ಯೋಚನೆಗಳಿರಲಿ. ಹಳೆಯ ಯೋಜನೆಗಳಿಗೆ ಮರು ಜೀವ ಕೊಡಲು ನಿಶ್ಚಯಿಸುವಿರಿ.

ವೃಶ್ಚಿಕ: ಇನ್ನೊಬ್ಬರಿಗೆ ನೋವಿಗೆ ಸಮಾಧಾನ ಹೇಳುವ ಅಥವಾ ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವ ಮನೋಭಾವ ಬೆಳೆಸಿಕೊಳ್ಳಿ. ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕುಗಳನ್ನು ಸ್ನೇಹಿತನ ಸಹಾಯದಿಂದ ನಿವಾರಿಸಿಕೊಳ್ಳುವಿರಿ.

ಧನು: ಆಸಕ್ತಿಕರ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡರೆ ಹೊಸ ಯೋಜನೆಗಳಿಗೆ ಸಹಕಾರಿಯಾಗಲಿದೆ. ದಾನ ಧರ್ಮ ಪರೋಪಕಾರಗಳಲ್ಲಿ ಆಸಕ್ತಿ ಮೂಡಿ ಉಪಕಾರ ಮಾಡುವುದರಿಂದ ಪುಣ್ಯ ಸಂಪಾದನೆಯಾಗುತ್ತದೆ.

ಮಕರ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ಎದುರಿಸಬೇಕಾದರೂ ಪ್ರಯತ್ನದಿಂದ ಜಯ ಹೊಂದುವಿರಿ. ಶಿಕ್ಷಕ ವರ್ಗದವರಿಗೆ ಅಧಿಕ ಜವಾಬ್ದಾರಿಯ ಕೆಲಸವಿರುವುದು. ಪ್ರತಿಭೆಗೆ ತಕ್ಕ ಪ್ರತಿಫಲ ಸಿಗುವುದು.

ಕುಂಭ: ಯಾವುದೇ ರಂಗದಲ್ಲಾದರೂ ಬಯಕೆಗೆ ತಕ್ಕಂತೆ ದೂರ ಕ್ರಮಿಸುವ ಸಾಮರ್ಥ್ಯ ನಿಮಗಿದೆ. ಅರಣ್ಯ ಸುತ್ತಾಡುವ ಹವ್ಯಾಸ ಹೊಂದಿರುವವರು ಅಂಥ ಸಮಯದಲ್ಲಿ ಜಾಗ್ರತೆವಹಿಸುವುದು ಅವಶ್ಯಕ.


ಮೀನ: ಪರೋಪಕಾರ್ಯಗಳನ್ನು ಮಾಡಿ ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವಿರಿ. ಉದ್ದಿಮೆದಾರರಿಗೆ ಸರ್ಕಾರದಿಂದ ಅನುಕೂಲ ಉಂಟಾಗಲಿದೆ. ಮೇಲಧಿಕಾರಿಗಳಿಗೆ ನಿಮ್ಮ ಮೇಲಿನ ವಿಶ್ವಾಸ ವೃದ್ಧಿಯಾಗಲಿದೆ.

ಪದಬಂಧ 5351

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಸಂಪೂರ್ಣ ಹಾನಿಯಿದು (4)
5.ಅಸಹಾಯಕದಲ್ಲಿನ ನೆರವು! (3)
6.ವನದಲ್ಲಿ ತಿಳಿದುಬಂದ ಸುದ್ದಿ! (4)
8.ನರಕಾಧಿಪತಿ ಹೊತ್ತಿರುವ ಒಜ್ಜೆ (4)
12.ಒಳಗಿನ ಉದ್ದೇಶ (4)
14.ಒಪ್ಪವಾಗಿ ರಾಗದೊಡನಿರುವ ಪ್ರೀತಿ (4)
15.ಬಿರಿ ಬಿರನೆ ಆದ ವಿಕ್ರಯ (3)
16.ಸಭೆಯನ್ನು ವಿಸರ್ಜಿಸುವುದು (4)

ಮೇಲಿಂದ ಕೆಳಕ್ಕೆ
1.ಒಳ್ಳೆಯ ನಡತೆಯಿಲ್ಲದಿರುವಿಕೆ (5)
2.ಆದಾಯ ಮತ್ತು ಖರ್ಚು (4)
3.ವರನು ನೋಡುತ್ತಿರುವ ಕೊಳ (4)
4.ರೋಗ ಮೊದಲಾದವನ್ನು ಗುಣಪಡಿಸುವಿಕೆ (3)
7.ತಪ್ಪನ್ನು ಮನ್ನಿಸುವುದು (2)
9. ನಮ್ಮ ದೇಶವಿದು (3)
10.ಈ ರೀತಿ ದೃಷ್ಟಾಂತವನ್ನು ನೀಡು! (5)
11.ತಲೆಯ ಕೂದಲಿಗೆ ಹತ್ತುವ ಕ್ರಿಮಿ (2)
12.ಅಂಗದಲ್ಲಿ ಸುಗಂಧ ಲೇಪನ! (4)
13.ಎಲ್ಲೆಯೊಳಗೆ ತೋರಿದ ಆತುರ (4)
14.ಆಗಸದತ್ತ ನೋಡುತ್ತಿರುವ ಮಡಿವಾಳ (3)



5350ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಿಲಿಕೆ 2.ಜಲಜ
4.ಆವರೋಹ
7.ಪ್ರತಿಫಲ 9.ನವಯೌವನ
12.ಸ್ವಾಭಿಮಾನ
13.ಋಷುವತ್ತು 15.ನಕ್ಷತ್ರ
16.ಮನವಿ

ಮೇಲಿಂದ ಕೆಳಕ್ಕೆ:
1.ಗಿರ್ಧಾರಿಂಅ 3.ಜಟಿಲ 5.ವರ
6.ಹಯವದನ 7.ಪ್ರಭಾವಬೀರು
8.ಫಲ 10.ನಾಭಿ
11.ನವ 12.ಸ್ವಾಧೀನ
14.ತುಪವಿ

ಸುಡೊಕು 5737


	8			7			4	
		4	6		8			9
7				1		8		
					4	6	7	
6		1	7		2			4
								1
				6		5		
	3	6	2		5			7
8		5		4			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5736 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2



ಷೇರುಪೇಟೆ ವಹಿವಾಟು	310
ಇಂದಿನ ಅಂತ್ಯ	62,917
ಹಿಂದಿನ ಅಂತ್ಯ	63,228

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	18,756
ಇಂದಿನ ಅಂತ್ಯ	18,688
▼	68
ದಿನದ ಕನಿಷ್ಠ	18,669

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹290-520
ದ್ವಿತಳಿ (ಬಿ.ವಿ)	₹339-610

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹580

ಮಾರುಕಟ್ಟೆಯಲ್ಲಿ ಲಭ್ಯತೆ ಸುಧಾರಿಸಲು, ಬೆಲೆ ನಿಯಂತ್ರಿಸಲು ಕ್ರಮ

ಸೂರ್ಯಕಾಂತಿ ಎಣ್ಣೆ: ಸುಂಕ ಇಳಿಕೆ



ಮುಖ್ಯಾಂಶಗಳು
- ಶೇ 12.5ಕ್ಕೆ ತಗ್ಗಿದ ಸಂಸ್ಕರಿಸಿದ ಅಡುಗೆ ಎಣ್ಣೆಗಳ ಸುಂಕ
- ಆಮದು ಪ್ರಮಾಣ ಹೆಚ್ಚಾಗುವ ಸಾಧ್ಯತೆ ಕಡಿಮೆ: ಎಸ್‌ಇಎ

ನವದೆಹಲಿ (ಪಿಟಿಐ): ಸಂಸ್ಕರಿಸಿದ ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆ ಮೇಲಿನ ಆಮದು ಸುಂಕವನ್ನು ಶೇಕಡ 17.5ರಿಂದ ಶೇ 12.5ಕ್ಕೆ ಇಳಿಕೆ ಮಾಡಲಾಗಿದೆ.

ದೇಶದಲ್ಲಿ ಅಡುಗೆ ಎಣ್ಣೆ ಲಭ್ಯತೆ ಸುಧಾರಿಸಲು ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಪರಿಷ್ಕರಣೆಯಿಂದಾಗಿ ಸಂಸ್ಕರಿಸಿದ ಅಡುಗೆ ಎಣ್ಣೆಗಳ ಮೇಲಿನ ಸುಂಕವು ಶೇ 13.7ರಷ್ಟು ಆಗಿದೆ (ಸಮಾಜ ಕಲ್ಯಾಣ ಸೆಸ್ ಒಳಗೊಂಡು).

ಸಾಮಾನ್ಯವಾಗಿ ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆಯನ್ನು ಕಚ್ಚಾ ರೂಪದಲ್ಲಿ ಭಾರತವು ಆಮದು ಮಾಡಿಕೊಳ್ಳುತ್ತದೆ; ಸಂಸ್ಕರಿಸಿದ ರೂಪದಲ್ಲಿ ಅಲ್ಲ. ಆದರೆ, ಸರ್ಕಾರವು ಸಂಸ್ಕರಿಸಿದ ಎಣ್ಣೆಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಿದೆ.

ಈ ಕ್ರಮದಿಂದಾಗಿ ದೇಶದ ಮಾರುಕಟ್ಟೆಯಲ್ಲಿ ಒಂದಷ್ಟುಮಟ್ಟಿಗೆ ತಾತ್ಕಾಲಿಕವಾಗಿ ಪ್ರಯೋಜನ ಆಗಲಿದೆಯಾದರೂ, ಅದು ಆಮದನ್ನು ಉತ್ತೇಜಿಸುವ ಸಾಧ್ಯತೆ ಕಡಿಮೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ (ಎಸ್‌ಇಎ) ಕಾರ್ಯನಿರ್ವಾಹಕ ನಿರ್ದೇಶಕ ಬಿ.ವಿ. ಮೆಹ್ತಾ ಹೇಳಿದ್ದಾರೆ.

ಸದ್ಯ, ಸಂಸ್ಕರಿಸಿದ ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆ ಆಮದು ಆಗಿಲ್ಲ. ಈ ಬಾರಿ ಮುಂಗಾರು ವಾಡಿಕೆಯಂತೆ ಇರಲಿದೆ ಎಂದು ಹವಾಮಾನ ಇಲಾಖೆ ಅಂದಾಜು ಮಾಡಿದೆ. ಹೀಗಿದ್ದರೂ ಎಲ್ ನಿನೊ ಪರಿಣಾಮವನ್ನು ಸಂಪೂರ್ಣವಾಗಿ ಕಡೆಗಣಿಸುವಂತಿಲ್ಲ. ಅದು ಮುಂಗಾರಿನ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದ್ದು, ಮುಂಗಾರು ಬೆಳೆಗಳಿಗೆ ಹಾನಿ ಮಾಡಬಹುದು. 2023–24ರಲ್ಲಿ ಅಡುಗೆ ಎಣ್ಣೆಗಳ ಲಭ್ಯತೆಯನ್ನು ಕಡಿಮೆ ಮಾಡಬಹುದು ಎಂದು ಮೆಹ್ತಾ ತಿಳಿಸಿದ್ದಾರೆ.

ಭಾರತವು ದೇಶಿ ಬೇಡಿಕೆಯ ಅಡುಗೆ ಎಣ್ಣೆಯ ಶೇ 60ರಷ್ಟನ್ನು ಆಮದು ಮಾಡಿಕೊಳ್ಳುತ್ತಿದೆ.

ತಾಳೆ ಎಣ್ಣೆ ಆಮದು ಇಳಿಕೆ: ತಾಳೆ ಎಣ್ಣೆ ಆಮದು ಮೇನಲ್ಲಿ ಶೇ 14.59ರಷ್ಟು ಇಳಿಕೆ ಕಂಡು 4.39 ಲಕ್ಷ ಟನ್‌ಗಳಿಗೆ ತಲುಪಿದೆ. ಆದರೆ, ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ಎಸ್‌ಇಎ ಹೇಳಿದೆ.

2022ರ ಮೇ ತಿಂಗಳಲ್ಲಿ 5.14 ಲಕ್ಷ ಟನ್ ತಾಳೆ ಎಣ್ಣೆ ಆಮದಾಗಿತ್ತು. ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು 1.18 ಲಕ್ಷ ಟನ್‌ನಿಂದ 2.95 ಲಕ್ಷ ಟನ್‌ಗಳಿಗೆ ಏರಿಕೆ ಆಗಿದೆ.

ಸೂಚ್ಯಂಕಗಳ ಮೂರು ದಿನಗಳ ಓಟಕ್ಕೆ ತಡೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಐ.ಟಿ. ಮತ್ತು ಹಣಕಾಸು ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಮೂರು ದಿನಗಳ ಸೂಚ್ಯಂಕದ ಓಟಕ್ಕೆ ಗುರುವಾರ ತಡೆ ಬಿದ್ದಿತು.

ಯುರೋಪಿನ ಮಾರುಕಟ್ಟೆಗಳಲ್ಲಿ ನಡೆದ ಇಳಿಮುಖ ವಹಿವಾಟು ಮತ್ತು ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಕಂಡಿರುವುದು ಸಹ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 310 ಅಂಶ ಇಳಿಕೆ ಕಂಡರೆ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 68 ಅಂಶಗಳಷ್ಟು ಇಳಿಕೆ ಆಯಿತು. ವಿಪ್ರೊ ಷೇರು ಶೇ 2ರವರೆಗೆ ಗರಿಷ್ಠ ನಷ್ಟ ಕಂಡಿತು.

ಅಮೆರಿಕದ ಫೆಡರಲ್ ರಿಸರ್ವ್ ಈ ಬಾರಿ ಬಡ್ಡಿದರ ಹೆಚ್ಚಳಕ್ಕೆ ತಡೆ ನೀಡಿದೆ, ಆದರೆ ಅದು ನೀಡಿರುವ ಹೇಳಿಕೆಯು ಈ ವರ್ಷದಲ್ಲಿ ಇನ್ನೆರಡು ಬಾರಿ ಬಡ್ಡಿದರ ಹೆಚ್ಚಳ ಮಾಡುವ ಸಾಧ್ಯತೆಯನ್ನು ಮೂಡಿಸಿದೆ. ಇದು ದೇಶಿ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮಾರುಕಟ್ಟೆಗಳಲ್ಲಿ ವಹಿವಾಟು ಇಳಿಕೆ ಕಂಡಿದ್ದರೂ ನಿಫ್ಟಿ ಮಿಡ್ ಕ್ಯಾಪ್ ಇಂಡೆಕ್ಸ್‌ನಲ್ಲಿ ಉತ್ತಮ ಖರೀದಿ ವಹಿವಾಟು ನಡೆಯಿತು. ಅದು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ನಡೆಸಿತು ಎಂದೂ ಅವರು ತಿಳಿಸಿದ್ದಾರೆ.

ವಂಚನೆ: ಮೆಹುಲ್ ಚೋಕ್ಸಿ ಖಾತೆ ಮುಟ್ಟುಗೋಲು



ಮೆಹುಲ್ ಚೋಕ್ಸಿ


ನವದೆಹಲಿ (ಪಿಟಿಐ): ಬ್ಯಾಂಕ್‌ಗಳಿಗೆ ವಂಚನೆ ಎಸಗಿರುವ ಆರೋಪ ಎದುರಿಸುತ್ತಿರುವ, ದೇಶಭ್ರಷ್ಟ ಉದ್ಯಮಿ ಮೆಹುಲ್ ಚೋಕ್ಸಿ ಅವರಿಗೆ ಸೇರಿದ ಬ್ಯಾಂಕ್ ಖಾತೆಗಳು, ಷೇರುಗಳು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಆದೇಶಿಸಿದೆ.

ಗೀತಾಂಜಲಿ ಜೆಮ್ಸ್ ಲಿಮಿಟೆಡ್ ಕಂಪನಿಯ ಷೇರುಗಳ ಅಕ್ರಮ ವಹಿವಾಟಿಗೆ ಸಂಬಂಧಿಸಿದ ಪ್ರಕರಣದಲ್ಲಿ ದಂಡ ಪಾವತಿಸುವಂತೆ ಸೆಬಿ 2022ರ ಅಕ್ಟೋಬರ್‌ನಲ್ಲಿ ಚೋಕ್ಸಿ ಅವರಿಗೆ ಆದೇಶಿಸಿತ್ತು. ಇದನ್ನು ಪಾವತಿಸುವಲ್ಲಿ ಅವರು ವಿಫಲರಾಗಿದ್ದಾರೆ. ಈ ಕಾರಣಕ್ಕಾಗಿ ಸೆಬಿ ಮುಟ್ಟುಗೋಲು ಆದೇಶ ಹೊರಡಿಸಿದೆ.

ಚೋಕ್ಸಿ ಅವರು ಗೀತಾಂಜಲಿ ಜೆಮ್ಸ್ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆಗಿದ್ದರು. ಅವರು ನೀರವ್ ಮೋದಿ ಅವರ ಸಂಬಂಧಿಯೂ ಹೌದು. ಇಬ್ಬರೂ ಸೇರಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹14 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ವಂಚಿಸಿರುವ ಆರೋಪ ಎದುರಿಸುತ್ತಿದ್ದಾರೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ವಂಚಿಸಿರುವ ಪ್ರಕರಣವು ಬಹಿರಂಗವಾದ ನಂತರದಲ್ಲಿ ಇಬ್ಬರೂ ದೇಶದಿಂದ ಪಲಾಯನ ಮಾಡಿದ್ದಾರೆ. ಬ್ಯಾಂಕ್‌ಗಳು, ಷೇರುಗಳನ್ನು ಇರಿಸಿಕೊಳ್ಳುವ ಸಿಡಿಎಸ್‌ಎಲ್ ಹಾಗೂ ಎನ್‌ಎಸ್‌ಡಿಎಲ್, ಮ್ಯೂಚುವಲ್ ಫಂಡ್ ಕಂಪನಿಗಳು ಚೋಕ್ಸಿ ಅವರ ಖಾತೆಯಿಂದ ಹಣ, ಷೇರುಗಳು ಅಥವಾ ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ಹಿಂಪಡೆಯಲು ಅವಕಾಶ ಕೊಡಬಾರದು ಎಂದು ಸೆಬಿ ಆದೇಶದಲ್ಲಿ ಹೇಳಿದೆ.

‘ಎಫ್‌ಪಿಐ: ಭಾರತದ ಬಗ್ಗೆ ಆಶಾವಾದ’



ಮುಂಬೈ (ಪಿಟಿಐ): ಅಮೆರಿಕ ಹಾಗೂ ಯುರೋಪಿನ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ವಿಚಾರವಾಗಿ ಆಶಾವಾದ ಹೊಂದಿದ್ದಾರೆ ಎಂದು ಸ್ವಿಜರ್ಲೆಂಡ್‌ನ ಬ್ರೋಕರೇಜ್ ಸಂಸ್ಥೆ ಯುಬಿಎಸ್ ಸೆಕ್ಯುರಿಟೀಸ್ ವರದಿ ಹೇಳಿದೆ.

ಅವರು ಹೊಂದಿರುವ ಆಶಾವಾದವು ದೇಶದ ಷೇರು ಮಾರುಕಟ್ಟೆಗಳಿಗೆ ಈ ವರ್ಷದ ಮಾರ್ಚ್ ನಂತರದಲ್ಲಿ ಹರಿದು ಬಂದಿರುವ ಹೂಡಿಕೆ ಮೊತ್ತದಿಂದಲೇ ಗೊತ್ತಾಗುತ್ತಿದೆ ಎಂದು ಅದು ಹೇಳಿದೆ.

ಅಮೆರಿಕ ಹಾಗೂ ಯುರೋಪಿನ ಐವತ್ತಕ್ಕೂ ಹೆಚ್ಚಿನ ಬಂಡವಾಳ ಹೂಡಿಕೆದಾರರ (ಎಫ್‌ಪಿಐ) ಜೊತೆ ಮಾತುಕತೆ ನಡೆಸಿ, ಈ ವರದಿ ಸಿದ್ಧಪಡಿಸಲಾಗಿದೆ. ಮಾರ್ಚ್ ನಂತರದಲ್ಲಿ ಎಫ್‌ಪಿಐ ಹೂಡಿಕೆದಾರರು ಭಾರತದ ಷೇರು ಮಾರುಕಟ್ಟೆಗಳಲ್ಲಿ ತೊಡಗಿಸಿರುವ ಮೊತ್ತವು 9.5 ಬಿಲಿಯನ್ ಡಾಲರ್ (₹77 ಸಾವಿರ ಕೋಟಿ) ದಾಟಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಜಯ ಸಾಧಿಸಬಹುದು ಎಂಬ ನಿರೀಕ್ಷೆಯನ್ನು ಜಾಗತಿಕ ಹೂಡಿಕೆದಾರರು ಹೊಂದಿದ್ದಾರೆ.

ದೇಶದ ಬಗ್ಗೆ ಹಾಗೂ ಇಲ್ಲಿನ ಷೇರು ಮಾರುಕಟ್ಟೆಯ ಬಗ್ಗೆ ಯುಬಿಎಸ್ ಸೆಕ್ಯುರಿಟೀಸ್ ಎಚ್ಚರಿಕೆಯ ಮಾತುಗಳನ್ನೂ ಹೇಳಿದೆ. ಬ್ಯಾಂಕ್ ಬಡ್ಡಿ ದರ ಹೆಚ್ಚುತ್ತಿರುವ ಕಾರಣ ಜನರು ತಮ್ಮ ಹಣವನ್ನು ಈಕ್ವಿಟಿಗಳ ಬದಲು ಬೇರೆ ಕಡೆ ತೊಡಗಿಸಬಹುದು ಎಂದು ಅದು ಹೇಳಿದೆ. ಹೀಗಾಗಿ, ಈ ವರ್ಷದಲ್ಲಿ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ, 18 ಸಾವಿರ ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಬಹುದು ಎಂದು ಅದು ಅಂದಾಜು ಮಾಡಿದೆ.

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)	
ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಖಾದ್ಯ ತೈಲ ಮುಂಬೈ



(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1640(1650)
ಸೋಯಾ (ರಿಫೈನ್ಡ್)	₹915(930)
ಸೂರ್ಯಕಾಂತಿ (ರಿಫೈನ್ಡ್)	₹915(915)
ಪಾಮೋಲಿನ್	₹843(842)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	480
ಏಲಕ್ಕಿ ಧಾರಣೆ ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	27309-33369
ಕೋಕ	28000-33499
ಹಳೆಚಾಲಿ	36739-39499
ಹೊಸಚಾಲಿ	36469-38579
ಪುತ್ತೂರು	
ಕೋಕ	11000-25000
ಹೊಸತು	33500-40500
ಸಾಗರ	
ಬಿಳಿಗೋಟು	26890-35899
ಚಾಲಿ	34001-38639
ಕೋಕ	21899-36710
ಕೆಂಪುಗೋಟು	21569-37999
ರಾಶಿ	33989-51999
ಸಿಪ್ಪೆಗೋಟು	4199-22189
ಶಿವಮೊಗ್ಗ	
ಬೆಟ್ಟೆ	47100-54499
ಗೊರಬಲು	18000-38669
ರಾಶಿ	31000-52596
ಸರಕು	50159-82900
ಸಿದ್ದಾಪುರ	
ಬಿಳಿಗೋಟು	29199-33299
ಚಾಲಿ	36299-38739
ಕೋಕ	28911-32899
ಕೆಂಪುಗೋಟು	32619-33099
ರಾಶಿ	45509-49899
ತಟ್ಟಿಬೆಟ್ಟೆ	38109-43189
ಶಿರಸಿ	
ಬೆಟ್ಟೆ	39409-48799
ಬಿಳಿಗೋಟು	28099-33199
ಚಾಲಿ	36108-39301
ಕೆಂಪುಗೋಟು	24199-34899
ರಾಶಿ	45599-49701
ಯಲ್ಲಾಪುರ	
ಬಿಳಿಗೋಟು	27099-35599
ಚಾಲಿ	35427-38899
ಕೋಕ	20019-32699
ಕೆಂಪುಗೋಟು	30099-35999
ರಾಶಿ	42900-54299
ತಟ್ಟಿಬೆಟ್ಟೆ	38400-47419

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15300	15350	15200	184.40 ಸೆಂಟ್ಸ್
ಎಸಿ	7980	8000	7700	
ಆರ್‌ಪಿ	10800	10850	10800	ಲಂಡನ್
ಆರ್‌ಸಿ	6230	249on OT	6125	2725ಡಾಲರ್ಸ್

ಇನ್ಫಿನಿಕ್ಸ್‌ನಿಂದ ‘ನೋಟ್ 30 5ಜಿ’ ಸ್ಮಾರ್ಟ್‌ಫೋನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫಿನಿಕ್ಸ್ ಕಂಪನಿಯು ‘ಇನ್ಫಿನಿಕ್ಸ್ ನೋಟ್ 30’ ಹೆಸರಿನ ಹೊಸ 5ಜಿ ಸ್ಮಾರ್ಟ್‌ಫೋನ್ ಬಿಡುಗಡೆ ಮಾಡಿದೆ. 8 + 128 ಜಿ.ಬಿ. ಸಾಮರ್ಥ್ಯದ ಸ್ಮಾರ್ಟ್‌ಫೋನ್ ಬೆಲೆ ₹13,999 ಮತ್ತು 16 + 256 ಜಿ.ಬಿ. ಸಾಮರ್ಥ್ಯದ ಸ್ಮಾರ್ಟ್‌ಫೋನ್ ಬೆಲೆ ₹ 14,999.

ಗರಿಷ್ಠ ರೆಸಲ್ಯೂಷನ್ ಹೊಂದಿರುವ ಕ್ಯಾಮೆರಾ, ಹೆಚ್ಚಿನ ಸಂಗ್ರಹಣಾ ಸಾಮರ್ಥ್ಯ ಹಾಗೂ ವೇಗ ಮತ್ತು ಸುರಕ್ಷಿತ ಚಾರ್ಜಿಂಗ್‌ನಂತಹ ವೈಶಿಷ್ಟ್ಯಗಳನ್ನು ಹೊಂದಿದೆ. ಹೀಗಾಗಿ ₹15 ಸಾವಿರದಿಂದ ₹20 ಸಾವಿರದವರೆಗಿನ ಸ್ಮಾರ್ಟ್‌ಫೋನ್ ವಿಭಾಗದಲ್ಲಿ ಉತ್ತಮ ಬೇಡಿಕೆ ಸೃಷ್ಟಿಸುವ ವಿಶ್ವಾಸವಿದೆ ಎಂದು ಕಂಪನಿಯ ಸಿಇಒ ಅನಿಶ್ ಕಪೂರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

6.78 ಇಂಚು ಎಚ್‌ಎಚ್‌ಡಿ ಅಮೊಎಲ್‌ಇಡಿ ಡಿಸ್‌ಪ್ಲೇ, ಆಂಡ್ರಾಯ್ಡ್ 13 ಒಎಸ್ ಆಧಾರಿತ ಎಕ್ಸ್‌ಒಎಸ್ 13, ಮೀಡಿಯಾಟೆಕ್ ಡೈಮೆನ್ಸಿಟಿ 5080 6ಎನ್‌ಎಂ ಪ್ರೊಸೆಸರ್, ವೇಗದ ಚಾರ್ಜಿಂಗ್, 108ಎಂಪಿ ಟ್ರಿಪಲ್ ಕ್ಯಾಮೆರಾ, 5 ಸಾವಿರ ಎಂಎಎಚ್ ಬ್ಯಾಟರಿಯನ್ನು ಇದು ಒಳಗೊಂಡಿದೆ.

ಮುಂಬೈ ಧಾರಣೆ

ಶೇಂಗಾ

15-6-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650(1660)
ಒಂದು ವಾರದ ಡೆಲಿವರಿ	1645(1655)
ಸೋಯಾ ಕಚ್ಚಾ	870(882)
ಪಾಮ್ ವಾರದ ಡೆಲಿವರಿ	841(840)
ಸೂರ್ಯಕಾಂತಿ ಎಣ್ಣೆ ಕಚ್ಚಾ	820(820)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,850(59,000)
ಬೆಳ್ಳಿ ಕೆ.ಜಿ 71,250(72,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭಾರಿ ಗಾಳಿ, ಮಳೆ: ಮರ ಉರುಳಿ ಮೂವರಿಗೆ ಪೆಟ್ಟು • 94 ಸಾವಿರ ಜನರ ಸ್ಥಳಾಂತರ, 1521 ಶಿಬಿರ ಸ್ಥಾಪನೆ

ಸೌರಾಷ್ಟ್ರ, ಕಛ್‌ಗೆ ಬಿಪೊರ್‌ಜಾಯ್ ಪ್ರವೇಶ





ಬಿಪೊರ್‌ಜಾಯ್ ಪರಿಣಾಮ ಸಮುದ್ರದಲ್ಲಿ ಬೃಹತ್ ಅಲೆಗಳು ಮೂಡಿದ್ದು, ಮುಂಬೈನ ಮೆರಿನ್ ಡ್ರೈವ್‌ನಲ್ಲಿ ಗುರುವಾರ ಎತ್ತರದ ಅಲೆಗಳನ್ನು ಗಮನಿಸುತ್ತಿರುವ ನಿರ್ಮಾಣ ಕಾರ್ಮಿಕರು (ಎಡಚಿತ್ರ). ಚಂಡಮಾರುತ ಪ್ರವೇಶದ ಹಿಂದೆಯೇ ಕಛ್ ಜಿಲ್ಲೆಯ ಮಾಂಡ್ವಿ ಪಟ್ಟಣದಲ್ಲಿ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಯಿತು –ಪಿಟಿಐ ಚಿತ್ರಗಳು

ಅಹಮದಾಬಾದ್/ಜಖೌ (ಪಿಟಿಐ): ಗುಜರಾತ್‌ನ ಕರಾವಳಿ ವಲಯವನ್ನು ಬಿಪೊರ್‌ಜಾಯ್ ಚಂಡಮಾರುತ ಗುರುವಾರ ರಾತ್ರಿ ಪ್ರವೇಶಿಸಿತು.

ಸೌರಾಷ್ಟ್ರ ಕರಾವಳಿಯನ್ನು ಮೊದಲಿಗೆ ಪ್ರವೇಶಿಸಿದ್ದ ಚಂಡಮಾರುತ, ಬಳಿಕ ಕಛ್ ಜಿಲ್ಲೆಯ ಕರಾವಳಿ ವ್ಯಾಪಿಸಿತು. ಭಾರಿ ಮಳೆ, ಗಾಳಿ ಇದ್ದು ಮರ, ವಿದ್ಯುತ್ ಕಂಬಗಳು ಉರುಳಿದವು.

‘8 ಜಿಲ್ಲೆಗಳಲ್ಲಿ ಚಂಡಮಾರುತದ ಪರಿಣಾಮವಿರಲಿದ್ದು, ಇದು ಮಧ್ಯರಾತ್ರಿಯವರೆಗೂ ಹೆಚ್ಚು ಸಕ್ರಿಯವಾಗಿತ್ತು. ಶುಕ್ರವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಇದು ದುರ್ಬಲವಾಗಬಹುದು’ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಚಂಡಮಾರುತದಿಂದಾಗಿ ಕಛ್ ಜಿಲ್ಲೆಯ ಜಖೌ ಮತ್ತು ಮಾಂಡ್ವಿ ಪಟ್ಟಣಗಳಲ್ಲಿ ಹಲವು ಮರ, ವಿದ್ಯುತ್ ಕಂಬಗಳು ಉರುಳಿದ್ದು, ವಿದ್ಯುತ್ ಪೂರೈಕೆ ವ್ಯವಸ್ಥೆ ವ್ಯತ್ಯಯವಾಗಿವೆ. ಮನೆಗಳ ಚಾವಣಿ ಶೀಟುಗಳೂ ಹಾರಿವೆ. ಮರ ಉರುಳಿ ಮೂವರು ಗಾಯಗೊಂಡಿದ್ದು, ಸಾವುಗಳ ಕುರಿತು ವರದಿಯಾಗಿಲ್ಲ.

ಹಾನಿ ಪ್ರಮಾಣವು ಕನಿಷ್ಠವಾಗಿರುವಂತೆ ಸರ್ಕಾರ ಅಗತ್ಯ ಮುನ್ನೆಚ್ಚರಿಕೆ ವಹಿಸಿದ್ದು, ರಕ್ಷಣಾ ಕ್ರಮಗಳನ್ನು ಕೈಗೊಂಡಿದೆ. 94 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ. ಸಂಭವನೀಯ ಬಾಧಿತ ಪ್ರದೇಶಗಳಲ್ಲಿ ರಕ್ಷಣಾತಂಡಗಳನ್ನು ನಿಯೋಜಿಸಿದೆ.

‘ಕಛ್ ಜಿಲ್ಲೆಯ ಜಖೌ ಬಂದರು ವಲಯದಲ್ಲಿ ಚಂಡಮಾರುತ ಪರಿಣಾಮ ವ್ಯಕ್ತವಾಯಿತು. ಗಾಳಿಯವೇಗ ಗಂಟೆಗೆ 145 ಕಿ.ಮೀ ಇತ್ತು’ ಎಂದು ಹವಾಮಾನ ಇಲಾಖೆ ತಿಳಿಸಿದೆ. ಸಮುದ್ರದಲ್ಲಿ ಬೃಹತ್ ಅಲೆಗಳು, ಧಾರಾಕಾರ ಮಳೆ, ಭೂಕುಸಿತದ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆಯನ್ನು ನೀಡಿದೆ.

ಚಂಡಮಾರುತ ಅಪ್ಪಳಿಸುವ ಮುನ್ನವೇ ಕಛ್ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಗುರುವಾರ ಮಧ್ಯಾಹ್ನವೇ ಧಾರಾಕಾರ ಮಳೆಯಾಗಿದೆ. ಜಾಮ್‌ನಗರ, ರಾಜಕೋಟ್, ಪೋರಬಂದರ್, ದೇವ್‌ಭೂಮಿ ದ್ವಾರಕಾ, ಅಮ್ರೇಲಿಯಲ್ಲಿ ಗುರುವಾರ ಮಧ್ಯಾಹ್ನದವರೆಗಿನ ಆರು ಗಂಟೆಗಳಲ್ಲಿ 10–20 ಮಿ.ಮೀ ಮಳೆಯಾಗಿದೆ.

ಚಂಡಮಾರುತ ಅಪ್ಪಳಿಸಿದ ಬಳಿಕ ಈ ಜಿಲ್ಲೆಗಳಲ್ಲಿ ಭಾರಿ ಬಿರುಗಾಳಿ, ಧಾರಾಕಾರ ಮಳೆ, ಭೂಕುಸಿತ ಸೇರಿದಂತೆ ಸಾಕಷ್ಟು ಪ್ರತಿಕೂಲ ಪರಿಣಾಮ ಆಗಬಹುದು ಎಂದು ಇಲಾಖೆಯು ಅಂದಾಜು ಮಾಡಿದೆ.

ಜನರ ಸ್ಥಳಾಂತರ: ಮುಂಜಾಗ್ರತೆಯಾಗಿ ಕರಾವಳಿಯ ಎಂಟು ಜಿಲ್ಲೆಗಳಲ್ಲಿ, ಸಮುದ್ರ ತೀರ ಭಾಗದ ಜನವಸತಿ ಪ್ರದೇಶಗಳಿಂದ ಈವರೆಗೆ ಸುಮಾರು 94 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ. ಅವರಿಗಾಗಿ 8 ಜಿಲ್ಲೆಗಳಲ್ಲಿ 1,521 ತಾತ್ಕಾಲಿಕ ಶಿಬಿರ ಸ್ಥಾಪಿಸಲಾಗಿದೆ. ಸ್ಥಳಾಂತರ ಮಾಡಲಾದವರಲ್ಲಿ 8,900 ಮಕ್ಕಳು, 1,131 ಗರ್ಭಿಣಿಯರು, 4,697 ವಯಸ್ಕರು ಸೇರಿದ್ದಾರೆ. ಈ ಶಿಬಿರಗಳಲ್ಲಿ ಸೇವೆ ಒದಗಿಸಲು ವೈದ್ಯರ ತಂಡಗಳನ್ನು ನಿಯೋಜಿಸಲಾಗಿದೆ.

ರಕ್ಷಣಾ ತಂಡಗಳ ನಿಯೋಜನೆ: ರಾಷ್ಟ್ರೀಯ ಪ್ರಕೃತಿ ವಿಕೋಪ ರಕ್ಷಣಾ ಪಡೆಯ 15, ರಾಜ್ಯದ 12 ತಂಡಗಳು, ಸೇನೆ, ನೌಕಾಪಡೆ, ವಾಯುಪಡೆ, ಕರಾವಳಿ ಕಾವಲು ಪಡೆ, ಬಿಎಸ್‌ಎಫ್ ಸಿಬ್ಬಂದಿ ನಿಯೋಜಿಸಿದೆ.

ಮುಂಜಾಗ್ರತೆಗೆ ಏನೇನು ಕ್ರಮ?

- ಭುಜ್, ಜಾಮ್‌ನಗರ, ಗಾಂಧಿಧಾಮ, ನಲಿಯಾ, ದ್ವಾರಕಾ, ಮಾಂಡ್ವಿ ವಲಯದಲ್ಲಿ 27 ರಕ್ಷಣಾ ಪಡೆ ನಿಯೋಜಿಸಿದ ಸೇನೆ.
- ರಕ್ಷಣಾ ಕಾರ್ಯಗಳಿಗೆ ಅಗತ್ಯವಿದ್ದರೆ ಬಳಸಲು ದೆಹಲಿ, ವಡೋದರ, ಅಹಮದಾಬಾದ್‌ನಲ್ಲಿ ತಲಾ ಒಂದು ಸೇನಾ ಹೆಲಿಕಾಪ್ಟರ್ ಸಜ್ಜು. ನೌಕಾಪಡೆಯಿಂದಲೂ ವಿವಿಧೆಡೆ 15 ತಂಡಗಳು ನಿಯೋಜನೆ.
- ಕಚ್ಚಾ ಮನೆ, ಗುಡಿಸಲುಗಳಿಗೆ ತೀವ್ರ, ಆರ್‌ಸಿಸಿ ಮನೆಗಳಿಗೆ ಭಾಗಶಃ ಹಾನಿ, ರಸ್ತೆಗಳಲ್ಲಿ ಪ್ರವಾಹ ಸ್ಥಿತಿ ಮೂಡುವ ಎಚ್ಚರಿಕೆ. ವಿದ್ಯುತ್ ಮತ್ತು ಸಂಪರ್ಕ, ಕುಡಿಯುವ ನೀರು ಪೂರೈಕೆ ವ್ಯತ್ಯಯವಾಗುವ ಸಾಧ್ಯತೆ.
- ಪರಿಹಾರ ಕಾರ್ಯಗಳಿಗೆ ಅಡ್ಡಿಯಾಗದಂತೆ ಸಂಪರ್ಕ ಸಾಧಿಸಲು ಅಧಿಕಾರಿಗಳು, ರಕ್ಷಣಾ ತಂಡಗಳಿಗೆ ಸ್ಯಾಟಲೈಟ್ ಫೋನ್ ವಿತರಣೆ, ಹ್ಯಾಮ್ ರೇಡಿಯೊ ತಂಡಗಳ ನೆರವು ಪಡೆಯಲು ಕ್ರಮ
- 76 ರೈಲುಗಳ ಸಂಚಾರ ರದ್ದು, 36 ರೈಲುಗಳ ಸಂಚಾರದ ಅಂತರ ಕಡಿತಗೊಳಿಸಿದ ಪಶ್ಚಿಮ ರೈಲ್ವೆ.
- ಮುಂಜಾಗ್ರತೆಯಾಗಿ ಗುಜರಾತ್‌ನ ಜಗತ್ ಮಂದಿರ್, ತ್ರಿಲೋಕ್ ಸುಂದರ್ ಒಳಗೊಂಡು ದ್ವಾರಕಾ ದೇವಸ್ಥಾನದ ಬಾಗಿಲು ಬಂದ್. ಈ ದೇಗುಲವು ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆ ಸುಪರ್ದಿಯಲ್ಲಿದೆ.
- ಚಂಡಮಾರುತ ಪರಿಣಾಮ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿಯೂ ಹಗುರದಿಂದ ಸಾಧಾರಣ ಮಳೆಯಾಗಿದೆ.

ಎತ್ತರದ ಅಲೆಗಳು ಏಳುವ ನಿಟ್ಟನಲ್ಲಿ ಮುಂಜಾಗ್ರತೆಯಾಗಿ ಸಮುದ್ರ ತೀರಗಳಿಗೆ ಹೋಗದಂತೆ ಜನರನ್ನು ನಿಯಂತ್ರಿಸಿದ್ದು, ಜೀವರಕ್ಷಕ ಸಾಧಕಗಳೊಂದಿಗೆ ರಕ್ಷಣಾ ಸಿಬ್ಬಂದಿಯನ್ನು ಕಡಲತೀರಗಳಲ್ಲಿ ನಿಯೋಜಿಸಿದೆ.

ಯುಸಿಸಿ: ಬಿಜೆಪಿ–ವಿಪಕ್ಷಗಳ ಜಟಾಪಟಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತು ಕಾನೂನು ಆಯೋಗವು ಜನಾಭಿಪ್ರಾಯ ಸಂಗ್ರಹಕ್ಕೆ ಮುಂದಾಗಿರುವುದು ಬಿಜೆಪಿ ಹಾಗೂ ಕಾಂಗ್ರೆಸ್ ಸೇರಿದಂತೆ ಇತರ ವಿರೋಧ ಪಕ್ಷಗಳ ನಡುವೆ ಜಟಾಪಟಿಗೆ ಕಾರಣವಾಗಿದೆ.

‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಎಲ್ಲ ರಂಗಗಳಲ್ಲಿ ವಿಫಲವಾಗಿದೆ. ಆದರೆ, ಧ್ರುವೀಕರಣ ಮತ್ತು ಜ್ವಲಂತ ವಿಷಯಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ತನ್ನ ಕಾರ್ಯಸೂಚಿಯನ್ನು ಕೇಂದ್ರ ಸರ್ಕಾರ ಮುಂದುವರಿಸಿದೆ. ಇದರ ಭಾಗವಾಗಿಯೇ ಯುಸಿಸಿ ಕುರಿತು ಜನಾಭಿಪ್ರಾಯ ಸಂಗ್ರಹಕ್ಕೆ ಮುಂದಾಗಿದೆ’ ಎಂದು ಕಾಂಗ್ರೆಸ್ ಟೀಕಿಸಿದೆ.

ಕಾಂಗ್ರೆಸ್‌ನ ಈ ಆರೋಪಕ್ಕೆ ತಿರುಗೇಟು ನೀಡಿರುವ ಬಿಜೆಪಿ, ‘ಮೂಲಭೂತವಾದಿಗಳ ಒತ್ತಡಕ್ಕೆ ಮಣಿದಿರುವ ಕಾಂಗ್ರೆಸ್, ತನ್ನ ಮತ ಬ್ಯಾಂಕ್ ರಾಜಕಾರಣದ ಕಾರಣಕ್ಕಾಗಿ ಕೇಂದ್ರ ಸರ್ಕಾರದ ಈ ನಡೆಯನ್ನು ವಿರೋಧಿಸುತ್ತಿದೆ’ ಎಂದಿದೆ.

‘ರಾಷ್ಟ್ರೀಯ ಮಹತ್ವ ಇರುವಂತಹ ಅನೇಕ ವಿಷಯಗಳ ಕುರಿತು ಕಾನೂನು ಆಯೋಗ ಅದ್ಭುತ ಕಾರ್ಯ ಮಾಡಿದೆ. ಆದರೆ, ಬಿಜೆಪಿಯ ರಾಜಕೀಯ ಮಹತ್ವಾಕಾಂಕ್ಷೆಗಳಿಗಿಂತ ರಾಷ್ಟ್ರದ ಹಿತಾಸಕ್ತಿ ಭಿನ್ನ ಎಂಬುದನ್ನು ಆಯೋಗ ನೆನಪಿನಲ್ಲಿಟ್ಟುಕೊಳ್ಳಬೇಕು’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

‘ಈ ಹಂತದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವುದರ ಅಗತ್ಯವಿಲ್ಲ ಹಾಗೂ ಅಪೇಕ್ಷಣೀಯವೂ ಅಲ್ಲ ಎಂದು 21ನೇ ಕಾನೂನು ಆಯೋಗ ತನ್ನ ವರದಿಯಲ್ಲಿ ಹೇಳಿದೆ. ಆದರೆ, ತನ್ನ ಕಾರ್ಯಸೂಚಿಯನ್ನು ಮುಂದುವರಿಸುವ ಪ್ರಯತ್ನದ ಭಾಗವಾಗಿ ಮೋದಿ ನೇತೃತ್ವದ ಸರ್ಕಾರ ಯುಸಿಸಿ ಜಾರಿಗೆ ಯತ್ನಿಸುತ್ತಿದೆ’ ಎಂದಿದ್ದಾರೆ.

‘ಜಾರಿಗೆ ಬದ್ಧ’: ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವುದಕ್ಕೆ ಬಿಜೆಪಿ ಬದ್ಧವಾಗಿದೆ ಎಂದು ಪಕ್ಷದ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ.

‘ಸುಪ್ರೀಂ ಸೇರಿದಂತೆ ಹಲವಾರು ನ್ಯಾಯಾಲಯಗಳು ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವ ಬಗ್ಗೆ ಸಲಹೆ ನೀಡಿವೆ’ ಎಂದಿರುವ ಅವರು, ‘ಗೋವಾದಲ್ಲಿ ಯುಸಿಸಿಯನ್ನು ಉಳಿಸಿಕೊಂಡ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿತ್ತು’ ಎಂದು ಟೀಕಿಸಿದ್ದಾರೆ.

‘ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಹಾಗೂ ಕಾಂಗ್ರೆಸ್ ಪಕ್ಷದ ಸಂಸ್ಥಾಪಕರು ಯುಸಿಸಿಯನ್ನು ಬೆಂಬಲಿಸಿದ್ದರು. ಹೀಗಾಗಿ ಕಾಂಗ್ರೆಸ್ ಪಕ್ಷವೇ ಇದನ್ನು ಜಾರಿಗೊಳಿಸಬೇಕಿತ್ತು’ ಎಂದಿದ್ದಾರೆ.

‘ಮಹಿಳೆಯರ ಸಬಲೀಕರಣದಲ್ಲಿ ಯುಸಿಸಿ ಮಹತ್ವದ ಪಾತ್ರ ವಹಿಸುತ್ತದೆ. ಈ ವಿಷಯದಲ್ಲಿ ಯಾರೂ ರಾಜಕಾರಣ ಮಾಡಬಾರದು. ‘ಮೈ ಲಡಕಿ ಹ್ಞೂಂ, ಲಡ್ ಸಕ್ತಿ ಹ್ಞೂಂ’ ಎಂಬುದು ಕಾಂಗ್ರೆಸ್ ಪಾಲಿಗೆ ಟೊಳ್ಳು ಘೋಷಣೆಯಾಗಿದೆ. ಅವರಿಗೆ ಈ ಘೋಷಣೆಯಲ್ಲಿ ನಂಬಿಕೆಯೇ ಇಲ್ಲ. ಇಲ್ಲದೇ ಹೋದರೆ ಏಕರೂಪ ನಾಗರಿಕ ಸಂಹಿತೆಯನ್ನು ಬೆಂಬಲಿಸುತ್ತಿದ್ದರು’ ಎಂದು ಪೂನಾವಾಲಾ ಹೇಳಿದ್ದಾರೆ.

ಸಚಿವ ಸೆಂಥಿಲ್ ಬಾಲಾಜಿ ಬಂಧನ: ಬಿಜೆಪಿ ವಿರುದ್ಧ ಸ್ಟಾಲಿನ್ ವಾಗ್ದಾಳಿ

ಚೆನ್ನೈ (ಪಿಟಿಐ): ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ), ಇಂಧನ ಸಚಿವ ವಿ.ಸೆಂಥಿಲ್ ಬಾಲಾಜಿ ಅವರನ್ನು ಬಂಧಿಸಿರುವುದಕ್ಕೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಬಿಜೆಪಿ ವಿರುದ್ಧ ಕಿಡಿಕಾರಿದ್ದಾರೆ.

‘ಇ.ಡಿ ಅಧಿಕಾರಿಗಳು ಸಚಿವರನ್ನು ಬಂಧಿಸುವಾಗ ಕೆಟ್ಟದ್ದಾಗಿ ನಡೆಸಿಕೊಂಡಿದ್ದಾರೆ ಎಂದು ಮಾನವ ಹಕ್ಕುಗಳ ಆಯೋಗ ನೀಡಿರುವ ಹೇಳಿಕೆಯನ್ನು ಪರಿಶೀಲಿಸಲಾಗುವುದು’ ಎಂದಿದ್ದಾರೆ.

‘ಜನ ವಿರೋಧಿ ರಾಜಕಾರಣದಲ್ಲಿ ನಿರತವಾಗಿರುವ ಬಿಜೆಪಿ ಪಕ್ಷದ ನಾಯಕತ್ವವು, ಜಾರಿ ನಿರ್ದೇಶನಾಲಯದ (ಇ.ಡಿ) ಮೂಲಕ ರಾಜಕಾರಣ ಮಾಡುತ್ತಿದೆ’ ಎಂದು ಸ್ಟಾಲಿನ್ ಕಿಡಿಕಾರಿದ್ದಾರೆ.

ತಮ್ಮ ಟ್ವಿಟರ್ ಖಾತೆಯಲ್ಲಿ ಗುರುವಾರ ವಿಡಿಯೊವೊಂದನ್ನು ಪೋಸ್ಟ್ ಮಾಡಿರುವ ಮುಖ್ಯಮಂತ್ರಿ, ‘ಇ.ಡಿ ಅಧಿಕಾರಿಗಳು ಬಂಧಿಸುವಾಗಲೇ ಬಾಲಾಜಿ ಮಾನಸಿಕ ಒತ್ತಡಕ್ಕೊಳಗಾಗಿದ್ದರು. ಜೊತೆಗೆ ಅನಾರೋಗ್ಯ ಸಮಸ್ಯೆಯಿಂದಲೂ ಬಳಲುತ್ತಿದ್ದರು’ ಎಂದಿದ್ದಾರೆ.

‘ಸೆಂಥಿಲ್‌ಗೆ ಇ.ಡಿ ನೀಡುತ್ತಿರುವ ತೊಂದರೆ ನಿಮಗೆಲ್ಲರಿಗೂ ಗೊತ್ತಿದೆ. ಇದು ಸೇಡಿನ ರಾಜಕಾರಣವಲ್ಲದೆ ಮತ್ತೇನೂ ಅಲ್ಲ. ಐದು ಬಾರಿ ಶಾಸಕ, ಎರಡು ಬಾರಿ ಸಚಿವರಾದವರು ತಪ್ಪಿಸಿಕೊಂಡು ಪಲಾಯನ ಆಗುತ್ತಿದ್ದರೆ’ ಎಂದು ಸ್ಟಾಲಿನ್ ಪ್ರಶ್ನಿಸಿದ್ದಾರೆ.

‘ಭಯೋತ್ಪಾದಕರ ಹಾಗೆ ಬಂಧಿಸುವ ಅವಶ್ಯಕತೆ ಏನಿತ್ತು? 18 ತಾಸು ವಿಚಾರಣೆಗೆ ಸಹಕರಿಸಿದ್ದರೂ; ಯಾರೊಬ್ಬರ ಭೇಟಿಗೂ ಅವಕಾಶ ಕೊಟ್ಟಿಲ್ಲ. ಈ ವೇಳೆಯೇ ಬಾಲಾಜಿ ಎದೆನೋವಿನಿಂದ ಬಳಲಿದರು’ ಎಂದಿದ್ದಾರೆ.

ಅನುಮತಿ: ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಾಲಾಜಿ ಅವರನ್ನು ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲು ಮದ್ರಾಸ್ ಹೈಕೋರ್ಟ್ ಗುರುವಾರ ಅನುಮತಿ ನೀಡಿದೆ. ಬಾಲಾಜಿ ಪತ್ನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ವಿಭಾಗೀಯ ಪೀಠ ಮಧ್ಯಂತರ ಆದೇಶ ಹೊರಡಿಸಿದೆ.

‘ಕೆಟ್ಟದಾಗಿ ನಡೆಸಿಕೊಂಡಿರುವ ಇ.ಡಿ’

‘ಸೆಂಥಿಲ್ ಬಂಧಿಸುವಾಗ ಇ.ಡಿ ಅಧಿಕಾರಿಗಳು ಅವರನ್ನು ಕೆಟ್ಟದಾಗಿ ನಡೆಸಿಕೊಂಡಿದ್ದಾರೆ’ ಎಂದು ತಮಿಳುನಾಡು ಮಾನವ ಹಕ್ಕುಗಳ ಆಯೋಗದ ಸದಸ್ಯ ಕಣ್ಣದಾಸನ್ ತಿಳಿಸಿದರು.

ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಸಚಿವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಬಂಧನದ ವೇಳೆ ಬಾಲಾಜಿ ತಲೆಗೆ ಗಾಯವಾಗಿದೆ’ ಎಂದು ಹೇಳಿದರು.

‘ಸಚಿವರಿಗಾಗಿರುವ ಗಾಯದ ಬಗ್ಗೆ ವೈದ್ಯರು ದೃಢಪಡಿಸಬೇಕು. ಆಯೋಗ ಇದರ ಬಗ್ಗೆ ಪರಿಶೀಲಿಸಲಿದೆ’ ಎಂದರು.

ಕಣ್ಣದಾಸನ್, ಸೆಂಥಿಲ್ ಭೇಟಿಯಾಗಿದ್ದಕ್ಕೆ ಎಐಎಡಿಎಂಕೆಯ ಮಾಜಿ ಶಾಸಕ ಇನ್ಬದೊರೈ ವಿರೋಧ ವ್ಯಕ್ತಪಡಿಸಿದ್ದಾರೆ.

‘ಮಾನವ ಹಕ್ಕುಗಳ ಆಯೋಗದ ಸದಸ್ಯರ ಭೇಟಿಯನ್ನು ನಾವು ವಿರೋಧಿಸಲ್ಲ. ಆದರೆ ಇದಕ್ಕೆ ಕಣ್ಣದಾಸನ್ ನಿಯೋಜಿಸಿದ್ದು ತಪ್ಪು. ಡಿಎಂಕೆ ಪರ ಒಲವುಳ್ಳ ವ್ಯಕ್ತಿ ಇವರು. ವ್ಯಕ್ತಿಯೊಬ್ಬ ತನ್ನ ಪ್ರಕರಣದ ತೀರ್ಪನ್ನು ತಾನೇ ಕೊಟ್ಟುಕೊಂಡಂತಾಗಿದೆ. ಇದನ್ನು ಪ್ರತ್ಯೇಕವಾಗಿ ಪ್ರಶ್ನಿಸಲಿದ್ದೇವೆ’ ಎಂದಿದ್ದಾರೆ.


ಎನ್‌ಸಿಇಆರ್‌ಟಿಗೆ 33 ಶಿಕ್ಷಣ ತಜ್ಞರ ಪತ್ರ • ಪಠ್ಯಪರಿಷ್ಕರಣೆ ಕಸರತ್ತಿಗೆ ಅಸಮಾಧಾನ

‘ಪಠ್ಯಪುಸ್ತಕಗಳಿಂದ ನಮ್ಮ ಹೆಸರು ಕೈಬಿಡಿ’

ನವದೆಹಲಿ (ಪಿಟಿಐ): ‘ಸಮಷ್ಟಿಯಾಗಿ ಸೃಜನಶೀಲತೆಯಿಂದ ರೂಪಿಸಿದ್ದ ಪಠ್ಯಪುಸ್ತಕಗಳ ಸ್ವರೂಪವೇ ಬದಲಾಗಿದೆ. ಹೀಗಾಗಿ, ನಮ್ಮ ಹೆಸರುಗಳನ್ನು ಪಠ್ಯಪುಸ್ತಕಗಳಿಂದ ಕೈಬಿಡಬೇಕು’ ಎಂದು 33 ಮಂದಿ ಶಿಕ್ಷಣ ತಜ್ಞರು ಗುರುವಾರ ಎನ್‌ಸಿಇಆರ್‌ಟಿಗೆ ಪತ್ರ ಬರೆದಿದ್ದಾರೆ.

ರಾಜಕೀಯ ಚಿಂತಕರಾದ ಯೋಗೇಂದ್ರ ಯಾದವ್ ಮತ್ತು ಸುಹಾಸ್ ಫಾಲ್‌ಸಿಕರ್ ಅವರು ಇಂತಹುದೇ ಬೇಡಿಕೆಯನ್ನು ಈಗಾಗಲೇ ಇಟ್ಟಿದ್ದಾರೆ. ಈ ಎಲ್ಲರೂ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಪಠ್ಯಪುಸ್ತಕ ರಚನಾ ಸಮಿತಿ ಭಾಗವಾಗಿದ್ದರು.

ಹೆಸರು ಕೈಬಿಡಲು ಕೋರಿ ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಸಕ್ಲಾನಿ ಅವರಿಗೆ ಪತ್ರ ಬರೆದಿರುವ ಪ್ರಮುಖರು: ಮೈಸೂರು ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ್ ಪ್ರೊ. ಮುಜಾಫರ್ ಅಸ್ಸಾದಿ, ಜೆಎನ್‌ಯು ಮಾಜಿ ಪ್ರೊಫೆಸರ್ ಕಾಂತಿ ಪ್ರಸಾದ್ ಬಾಜಪೇಯಿ, ಅಶೋಕ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರತಾಪ್ ಭಾನು ಮೆಹ್ತಾ, ಸಿಎಸ್‌ಡಿಎಸ್‌ನ ಮಾಜಿ ನಿರ್ದೇಶಕ ರಾಜೀವ್ ಭಾರ್ಗವ, ಜೆಎನ್‌ಯು ಮಾಜಿ ಪ್ರೊಫೆಸರ್ ನೀರಜಾ ಗೋಪಾಲ್ ಜಯಲ್, ಜೆಎನ್‌ಯು ಪ್ರೊಫೆಸರ್ ನಿವೇದಿತಾ ಮೆನನ್, ಸಿವಿಲ್ ಸೊಸೈಟಿ ವಾಚ್‌ಡಾಗ್ ಕಾಮನ್ ಕಾಸ್ ಸಂಸ್ಥೆಯ ಮುಖ್ಯಸ್ಥ ವಿಪುಲ್ ಮುದ್ಗಲ್, ಹೈದರಾಬಾದ್ ವಿಶ್ವವಿದ್ಯಾಲಯದ ಮಾಜಿ ಪ್ರೊಫೆಸರ್ ಕೆ.ಸಿ.ಸೂರಿ, ಭಾರತೀಯ ಅಧ್ಯಯನ ಸಂಸ್ಥೆಯ ಮಾಜಿ ನಿರ್ದೇಶಕ ಪೀಟರ್ ರೊನಾಲ್ಡ್ ಡಿಸೋಜ ಮತ್ತು



‘ಎನ್‌ಸಿಇಆರ್‌ಟಿ ಪಠ್ಯಕ್ರಮದ ಪರಿಷ್ಕರಣೆಯನ್ನು ಏಕಪಕ್ಷೀಯವಾಗಿ ನಡೆಸಿದೆ. ಪಠ್ಯಪುಸ್ತಕಗಳಲ್ಲಿ ಕೆಲವು ವಾಕ್ಯ ಮತ್ತು ಅಧ್ಯಾಯಗಳನ್ನೂ ತೆಗೆದುಹಾಕಿದೆ. ಸ್ವೀಕಾರಾರ್ಹವಲ್ಲದ ವಿಷಯಗಳನ್ನು ಯಾರು ನಿರ್ಧರಿಸುತ್ತಾರೆಂಬುದೇ ಸ್ಪಷ್ಟವಿಲ್ಲ’ ಎಂದು ಈ ಚಿಂತಕರು ದೂರಿದ್ದಾರೆ.

‘ಮೂಲ ಪಠ್ಯಪುಸ್ತಕ ಸಾಕಷ್ಟು ಪರಿಷ್ಕರಣೆಗೊಂಡಿದೆ. ಈಗ ವಿಭಿನ್ನ ಪಠ್ಯಪುಸ್ತಕವಾಗಿಯೇ ರೂಪುಗೊಂಡಿದೆ. ಇದನ್ನು ನಾವು ರೂಪಿಸಿದ್ದು ಎಂದು ಹೇಳಿಕೊಳ್ಳುವುದೂ ಕಷ್ಟವಾಗುತ್ತದೆ. ಈ ಕಾರಣದಿಂದ ಪಠ್ಯಪುಸ್ತಕಗಳಿಂದ ನಮ್ಮ ಹೆಸರು ಕೈಬಿಡಬೇಕು. ನಾವು ಸಮಷ್ಟಿಯಾಗಿ, ಸೃಜನಶೀಲತೆಯಿಂದ ಮಾಡಿದ್ದ ಪ್ರಯತ್ನವೇ ಈಗ ಅಸ್ತವ್ಯಸ್ತಗೊಂಡಿದೆ ಎಂಬುದು ನಮ್ಮ ಅಭಿಪ್ರಾಯ’ ಎಂದು ಹೇಳಿದ್ದಾರೆ.

‘ವಿಸ್ತೃತ ಚರ್ಚೆ ಹಾಗೂ ವಿವಿಧ ಕ್ಷೇತ್ರಗಳ ಪ್ರಮುಖರು, ಚಿಂತಕರು, ಭಿನ್ನ ಸಿದ್ಧಾಂತಗಳ ಹಿನ್ನೆಲೆಯುಳ್ಳವರು, ಸ್ವಾತಂತ್ರ್ಯ ಹೋರಾಟ, ಸಂವಿಧಾನ ಚೌಕಟ್ಟು, ಪ್ರಜಾಪ್ರಭುತ್ವದ ಕಾರ್ಯವಿಧಾನ, ಭಾರತ ರಾಜಕಾರಣದ ಪ್ರಮುಖಾಂಶಗಳು, ಜಾಗತಿಕ ವಿದ್ಯಮಾನಗಳು ಕುರಿತ ಅರಿವನ್ನು ಹಂಚಿಕೊಂಡಿದ್ದವರ ಜೊತೆಗೆ, ಸಮಾಲೋಚನೆ ನಡೆಸಿದ್ದರ ಫಲವಾಗಿ ಈ ಪಠ್ಯಪುಸ್ತಕಗಳು ರಚನೆಯಾಗಿದ್ದವು’ ಎಂದು ಹೇಳಿದ್ದಾರೆ.

ಕಳೆದ ವಾರ ಎನ್‌ಸಿಇಆರ್‌ಟಿಗೆ ಪತ್ರ ಬರೆದಿದ್ದ ಯೋಗೇಂದ್ರ ಯಾದವ್ ಮತ್ತು ಫಾಲ್‌ಸಿಕರ್ ಅವರು, ‘ಪಠ್ಯಪರಿಷ್ಕರಣೆ ಕಸರತ್ತು ಪುಸ್ತಕಗಳನ್ನು ಗುರುತಿಸಲಾಗದಂತೆ ಮಾಡಿದೆ. ನಮಗೆ ಹೆಮ್ಮೆ ಎನಿಸುತ್ತಿದ್ದ ಪಠ್ಯಪುಸ್ತಕಗಳು ಈಗ ಇರಿಸುಮುರಿಸು ಮೂಡಿಸುತ್ತಿವೆ’ ಎಂದು ಹೇಳಿದ್ದರು.

ಆದರೆ, ‘ಪಠ್ಯಪುಸ್ತಕದ ಜೊತೆಗೆ ಗುರುತಿಸಲಾದ ಹೆಸರು ಕೈಬಿಡುವ ಪ್ರಶ್ನೆ ಇಲ್ಲ. ಪಠ್ಯಪುಸ್ತಕಗಳನ್ನು ಆ ವಿಷಯದ ಜ್ಞಾನ, ಅರಿವು ಆಧರಿಸಿ ರೂಪಿಸಲಾಗುತ್ತದೆ. ಯಾವುದೇ ಹಂತದಲ್ಲಿ ವ್ಯಕ್ತಿಗತವಾಗಿ ಒಬ್ಬರು ಕರ್ತೃ ಎಂದು ಹೇಳಿಕೊಳ್ಳಲಾಗದು’ ಎಂದು ಎನ್‌ಸಿಇಆರ್‌ಟಿ ಹೇಳಿದೆ.

ಕಳೆದ ತಿಂಗಳು ಕೆಲವು ಪಠ್ಯಗಳನ್ನು ಪುಸ್ತಕಗಳಿಂದ ಕೈಬಿಟ್ಟಿದ್ದ ಎನ್‌ಸಿಇಆರ್‌ಟಿ ಕ್ರಮ ವಿವಾದಕ್ಕೆ ಆಸ್ಪದವಾಗಿತ್ತು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪ್ರತೀಕಾರ ಮನೋಭಾವದಿಂದ ಈ ಕಸರತ್ತಿಗೆ ಕೈಹಾಕಿದೆ ಎಂದು ವಿರೋಧ ಪಕ್ಷಗಳು ತೀವ್ರ ತರಾಟೆ ತೆಗೆದುಕೊಂಡಿದ್ದವು.

ಆದರೆ, ಕೆಲ ಪಠ್ಯಗಳನ್ನು ಕಣ್ತಪ್ಪಿನಿಂದ ಕೈಬಿಟ್ಟಿರುವ ಸಾಧ್ಯತೆ ಇದೆ ಎಂದು ಎನ್‌ಸಿಇಆರ್‌ಟಿ ನಂತರ ಹೇಳಿದ್ದರೂ, ತಜ್ಞರ ಸಮಿತಿಯ ಶಿಫಾರಸು ಆಧರಿಸಿ ಇದನ್ನು ಮಾಡಲಾಗಿದೆ ಎಂದು ಸಮರ್ಥಿಸಿಕೊಳ್ಳುವ ಮೂಲಕ ಕೈಬಿಟ್ಟಿದ್ದ ಪಠ್ಯ ಮರುಸೇರಿಸಲು ನಿರಾಕರಿಸಿತ್ತು.

ಶಸ್ತ್ರಸಜ್ಜಿತ 30 ಡ್ರೋನ್ ಖರೀದಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪ್ರಿಡೇಟರ್’ ಎಂದು ಗುರುತಿಸುವ, ಕಡಲಗಡಿಯಲ್ಲಿ ಕಣ್ಗಾವಲು ಇಡುವ ಶಸ್ತ್ರಸಜ್ಜಿತ ‘ಎಂಕ್ಯೂ 9ಬಿ’ ಹೆಸರಿನ 30 ಡ್ರೋನ್ ಖರೀದಿಸುವ ಪ್ರಸ್ತಾವಕ್ಕೆ ರಕ್ಷಣಾ ಸಚಿವಾಲಯ ಗುರುವಾರ ಅನುಮೋದನೆ ನೀಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ನಡೆದ ರಕ್ಷಣಾ ಸ್ವಾದೀನ ಮಂಡಳಿ (ಡಿಎಸಿ) ಸಭೆ ಈ ಪ್ರಸ್ತಾವಕ್ಕೆ ಅನುಮೋದನೆ ನೀಡಿತು. ಇದು, ಈಗ ಪ್ರಧಾನಿ ಮೋದಿ ನೇತೃತ್ವದ ರಕ್ಷಣೆ ಕುರಿತ ಸಂಪುಟ ಸಮಿತಿ ಮುಂದೆ ಹೋಗಲಿದೆ. ಮೋದಿ ಅವರು ಮುಂದಿನ ವಾರ ಅಮೆರಿಕ ಪ್ರವಾಸಕ್ಕೆ ತೆರಳಲಿದ್ದಾರೆ.

ಅಮೆರಿಕದ ಜನರಲ್ ಅಟೊಮಿಕ್ಸ್ ಸಂಸ್ಥೆ ಜೊತೆಗಿನ ಈ ವಹಿವಾಟು ಕಾರ್ಯಗತಗೊಂಡರೆ, ನ್ಯಾಟೊ ಸಮೂಹ ಹೊರತುಪಡಿಸಿ ಅಮೆರಿಕದಿಂದ ಇಂತಹ ಶಸ್ತ್ರಾಸ್ತ್ರ ಪಡೆಯಲಿರುವ ಮೊದಲ ರಾಷ್ಟ್ರ ಭಾರತವಾಗಲಿದೆ. ಈ ವಹಿವಾಟಿನ ಮೊತ್ತ ಸುಮಾರು ₹ 24 ಸಾವಿರ ಕೋಟಿ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ಮೋದಿ ಅವರ ಅಮೆರಿಕ ಭೇಟಿ ಅವಧಿಯಲ್ಲಿ ಸೇನಾ ಒಪ್ಪಂದ ಏರ್ಪಡಲಿರುವ ಎರಡು ಮುಖ್ಯ ವಹಿವಾಟಿನಲ್ಲಿ ಪ್ರಿಡೇಟರ್ ಖರೀದಿಯೂ ಒಂದಾಗಿದೆ. ಮತ್ತೊಂದು ಭಾರತದಲ್ಲಿಯೇ ಎಫ್–414 ಎಂಜಿನ್‌ಗಳನ್ನು ತಯಾರಿಸುವ ಕುರಿತು ಜನರಲ್ ಎಲೆಕ್ಟ್ರಿಕ್ ಕಂಪನಿ ಜೊತೆಗೆ ಒಪ್ಪಂದಕ್ಕೆ ಬರುವುದಾಗಿದೆ.

ಗುರುವಾರ ಡಿಎಸಿಯ ಎರಡು ಉನ್ನತಾಧಿಕಾರ ಸಭೆಗಳು ನಡೆದವು. ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲಿವಾನ್, ಅಮೆರಿಕ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರೂ ಭಾಗವಹಿಸಿದ್ದರು.

ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ, ಪ್ರಧಾನಮಂತ್ರಿ ಕಚೇರಿಯ ಪ್ರಧಾನ ಕಾರ್ಯದರ್ಶಿ ಪಿ.ಕೆ. ಮಿಶ್ರಾ ಈ ಉದ್ದೇಶಿತ ವಹಿವಾಟುಗಳಿಗೆ ಅಂತಿಮ ರೂಪ ನೀಡಲು ಶೀಘ್ರದಲ್ಲಿಯೇ ವಾಷಿಂಗ್ಟನ್ ಡಿ.ಸಿ.ಗೆ ಭೇಟಿ ನೀಡಲಿದ್ದಾರೆ.

ಈ ಪ್ರಸ್ತಾವದ ಪ್ರಕಾರ, ನೌಕಾಪಡೆಗೆ ಇಂತಹ 14 ಶಸ್ತ್ರಸಜ್ಜಿತ ಡ್ರೋನ್, ವಾಯುಪಡೆ ಮತ್ತು ಸೇನೆಗೆ ತಲಾ 8 ಡ್ರೋನ್ ಪಡೆಯಲಿವೆ. ಭಾರತ ನೌಕಾಪಡೆಯು ಪ್ರಸ್ತುತ ಎರಡು ಶಸ್ತ್ರಾಸ್ತ್ರರಹಿತ ಕಡಲು ಕಣ್ಗಾವಲು ಡ್ರೋನ್‌ಗಳನ್ನು ಗಸ್ತು ಚಟುವಟಿಕೆಗೆ ಬಳಸುತ್ತಿದೆ. ಇವುಗಳನ್ನೂ ಜನರಲ್ ಆಟೊಮಿಕ್ಸ್ ಸಂಸ್ಥೆಯಿಂದ ಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದೆ.

ಈಗ ಖರೀದಿಸಲು ಉದ್ದೇಶಿಸಿರುವ ಶಸ್ತ್ರಾಸ್ತ್ರ ಸಜ್ಜಿತ ಡ್ರೋನ್‌ಗಳು ಹೆಚ್ಚಿನ ಸಾಮರ್ಥ್ಯ ಉಳ್ಳದ್ದಾಗಿದ್ದು, ಆಗಸದಲ್ಲಿಯೇ ಸತತ 35 ಗಂಟೆ ಕಾರ್ಯನಿರ್ವಹಿಸಬಲ್ಲದ್ದಾಗಿದೆ. ಸುಮಾರು 450 ಕೆ.ಜಿ. ತೂಕದ ನಾಲ್ಕು ಕ್ಷಿಪಣಿಗಳನ್ನು ಒಯ್ಯಬಹುದಾಗಿದೆ.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಭಾರತದ ಜೊತೆಗೆ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಾಣಿಜ್ಯ ವಹಿವಾಟು ನಡೆಸಲು ಹೆಚ್ಚಿನ ಒತ್ತು ನೀಡಿದ್ದಾರೆ. ಹಿಂದೂ ಮಹಾಸಾಗರ ವಲಯದಲ್ಲಿ ಚೀನಾದ ಪ್ರಾಬಲ್ಯ ಹೆಚ್ಚುತ್ತಿದೆ. ಎಂಬ ಹಿನ್ನೆಲೆಯಲ್ಲಿ ಇದು ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

ಅವತಾರ್ ಸಿಂಗ್ ನಿಧನ

ಲಂಡನ್ (ಪಿಟಿಐ): ಭಾರತೀಯ ಹೈಕಮಿಷನ್ ಮೇಲಿನ ದಾಳಿಯಲ್ಲಿ ಭಾಗಿಯಾಗಿದ್ದ ಪ್ರಮುಖ ಖಾಲಿಸ್ತಾನಿ ಪರ ಕಾರ್ಯಕರ್ತ ಅವತಾರ್ ಸಿಂಗ್ ಪುರ್ಬಾ ಅಲಿಯಾಸ್ ಖಂದಾ (35) ಬರ್ಮಿಂಗ್‌ಹ್ಯಾಮ್‌ನ ಆಸ್ಪತ್ರೆಯಲ್ಲಿ ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ ಎಂದು ಲಂಡನ್ ಮೂಲದ ಸಿಖ್ ಸಂಘಟನೆ ಹೇಳಿಕೆಯಲ್ಲಿ ತಿಳಿಸಿದೆ.

ಸಿಂಗ್ ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಕಳೆದ ಕೆಲವು ದಿನಗಳಿಂದ ಅವರಿಗೆ ಜೀವರಕ್ಷಕ ಕವಚ ಅಳವಡಿಸಲಾಗಿತ್ತು ಎಂದು ಸಂಘಟನೆ ನೀಡಿದೆ.

ಕೋವಿನ್ ದತ್ತಾಂಶ ಸೋರಿಕೆಗೆ ಕಳವಳ: ದೂರು

ನವದೆಹಲಿ: ಕೋವಿನ್ ಪೋರ್ಟಲ್‌ನ ದತ್ತಾಂಶ ಒಳಗೊಂಡಂತೆ ವಿವಿಧ ಹಂತಗಳಲ್ಲಿ ದತ್ತಾಂಶ ಸೋರಿಕೆಯ ಬೆಳವಣಿಗೆ ಕುರಿತು ವಿವಿಧ ಸಂಸದರು ಕಳವಳ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ದತ್ತಾಂಶಗಳ ರಕ್ಷಣೆಗೆ ಪೂರಕವಾದ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಸೈಬರ್ ಭದ್ರತೆ ವಿಭಾಗದ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಶಿವಸೇನೆ ಸಂಸದ ಪ್ರತಾಪರಾವ್ ಜಾಧವ್ ಅಧ್ಯಕ್ಷತೆಯ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕುರಿತ ಸ್ಥಾಯಿ ಸಮಿತಿ ಸಭೆಯಲ್ಲಿ ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಈ ಚರ್ಚೆ ಸಕಾರಾತ್ಮಕವಾಗಿತ್ತು. ಕಾಂಗ್ರೆಸ್‌ನ ಕಾರ್ತಿ ಚಿದಂಬರಂ, ತೃಣಮೂಲ ಕಾಂಗ್ರೆಸ್‌ನ ಜವಹರ್ ಸಿರ್ಕಾರ್ ಅವರು ಪ್ರಮುಖವಾಗಿ ಕೋವಿನ್ ದತ್ತಾಂಶ ಸೋರಿಕೆ ಕುರಿತು ಆತಂಕ ವ್ಯಕ್ತಪಡಿಸಿದ್ದು, ಬಿಜೆಪಿಯ ತೇಜಸ್ವಿ ಸೂರ್ಯ ಮತ್ತು ನಿಶಿಕಾಂತ್ ದುಬೆ ಅವರೂ ವಿಷಯ ಕುರಿತು ಮಾತನಾಡಿದರು ಎಂದು ಮೂಲಗಳು ತಿಳಿಸಿವೆ.

ಪೊಲೀಸರಿಗೆ ದೂರು: ದತ್ತಾಂಶ ಸೋರಿಕೆ ಕುರಿತಂತೆ ಸಂಸದರು ಚರ್ಚೆ ನಡೆಸಿರುವಂತೆಯೇ, ರಾಜ್ಯಸಭೆಯ ಸದಸ್ಯ ಡೆರೆಕ್ ಒ ಬ್ರಿಯಾನ್ ಅವರು, ಗೋಪ್ಯ ಮತ್ತು ಸೂಕ್ಷ್ಮವಾದ ದತ್ತಾಂಶಗಳನ್ನು ಅನಧಿಕೃತವಾಗಿ ಸೋರಿಕೆ ಮಾಡಲಾಗಿದೆ ಎಂದು ಕೋಲ್ಕತ್ತ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಈ ಕುರಿತು ಎಫ್‌ಐಆರ್ ದಾಖಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಜನ್ಮದಿನಾಂಕ, ಪಾಸ್‌ಪೋರ್ಟ್ ವಿವರ, ಮೊಬೈಲ್ ಸಂಖ್ಯೆ ಇನ್ನಿತರ ವಿವರಗಳು ಟೆಲಿಗ್ರಾಂ ಖಾತೆಯ ಮೂಲಕ ಲಭ್ಯವಿದೆ ಎಂಬ ಅಂಶ ಜೂನ್ 12ರಂದು ನನ್ನ ಅರಿವಿಗೆ ಬಂದಿದೆ ಎಂದು ತಿಳಿಸಿದ್ದಾರೆ.

ಮಣಿಪುರ: ಸಚಿವೆ ನಿವಾಸ ಸೇರಿ ಹಲವು ಮನೆಗಳಿಗೆ ಬೆಂಕಿ

ಇಂಫಾಲ್: ಮತ್ತೆ ಭುಗಿಲೆದ್ದ ಹಿಂಸಾಚಾರ

ಇಂಫಾಲ್ (ಪಿಟಿಐ): ಹಿಂಸಾಚಾರದಿಂದ ನಲುಗಿರುವ ಮಣಿಪುರದ ಇಂಫಾಲ್‌ನಲ್ಲಿ ಗುರುವಾರ ಗುಂಪೊಂದು ಹಲವು ಮನೆಗಳಿಗೆ ಬೆಂಕಿ ಹಚ್ಚಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖಾಮೆನ್‌ಲೋಕ್ ಪ್ರದೇಶದ ಗ್ರಾಮವೊಂದರಲ್ಲಿ ಶಂಕಿತ ಬಂಡುಕೋರರು ನಡೆಸಿದ ದಾಳಿಯಲ್ಲಿ 9 ಮಂದಿ ಮೃತಪಟ್ಟ ಮರುದಿನ ಮತ್ತೆ ಗಲಭೆ ಮರುಕಳಿಸಿದೆ ಎಂದೂ ಹೇಳಿದ್ದಾರೆ.

ಇಂಫಾಲ್‌ನ ಚೆಕೋನ್‌ನಲ್ಲಿ ಗಲಭೆಕೋರರನ್ನು ನಿಯಂತ್ರಿಸಲು ಭದ್ರತಾಪಡೆಗಳು ಅಶ್ರುವಾಯು ಷೆಲ್ ಸಿಡಿಸಿವೆ. ಅಸ್ಸಾಂ ರೈಫಲ್ಸ್ ಮತ್ತು ಸೇನೆಯು ಗಲಭೆಪೀಡಿತ ಪ್ರದೇಶಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕಾರ್ಯಾಚರಣೆ ತೀವ್ರಗೊಳಿಸಿರುವ ನಡುವೆಯೇ ಮತ್ತೆ ಹಿಂಸಾಚಾರ ನಡೆದಿದೆ ಎಂದೂ ವಿವರಿಸಿದ್ದಾರೆ.

‘ಹಿಂಸಾಚಾರ ನಡೆದಿರುವ ಪ್ರದೇಶಗಳಲ್ಲಿ ಸೇನೆ ಮತ್ತು ಅಸ್ಸಾಂ ರೈಫಲ್ಸ್‌ನ ಯೋಧರು ಕಟ್ಟೆಚ್ಚರ ವಹಿಸಿದ್ದಾರೆ’ ಎಂದು ಸೇನೆಯು ಟ್ವೀಟ್ ಮಾಡಿದೆ.

ಮೊಬೈಲ್ ಮತ್ತು ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸೇವೆಯನ್ನು ಜೂನ್ 20ರ ವರೆಗೆ ನಿರ್ಬಂಧಿಸಿ ರಾಜ್ಯ ಗೃಹ ಇಲಾಖೆಯು ಆದೇಶ ಹೊರಡಿಸಿದೆ.



ಮಣಿಪುರದ ಇಂಫಾಲ್‌ನಲ್ಲಿ ದುಷ್ಕರ್ಮಿಗಳು ಗುರುವಾರ ಬೆಂಕಿಹಚ್ಚಿದ ಪರಿಣಾಮ ಮನೆಗಳು ಹೊತ್ತಿ ಉರಿದವು –ಪಿಟಿಐ ಚಿತ್ರ

ಸಚಿವೆ ಮನೆಗೆ ಬೆಂಕಿ: ಇಂಫಾಲ್‌ನ ಪಶ್ಚಿಮ ಜಿಲ್ಲೆಯ ಲ್ಯಾಂಫೆಲ್ ಪ್ರದೇಶದಲ್ಲಿರುವ ಮಣಿಪುರದ ಸಚಿವೆ ನೆಮ್ಚಾ ಕಿಪ್ಗೆನ್ ಅವರ ಸರ್ಕಾರಿ ಬಂಗಲೆಗೆ ಬುಧವಾರ ರಾತ್ರಿ ದುಷ್ಕರ್ಮಿಗಳ ಗುಂಪೊಂದು ಬೆಂಕಿ ಹಚ್ಚಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವೇಳೆ ಬಂಗಲೆಯಲ್ಲಿ ಯಾರೂ ಇರಲಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ ಎಂದೂ ಹೇಳಿದ್ದಾರೆ. ಯಾವುದೇ ಗುಂಪುಗಳು ಈ ಕೃತ್ಯದ ಹೊಣೆ ಹೊತ್ತುಕೊಂಡಿಲ್ಲ.

ಎನ್‌ಐಎ ತನಿಖೆಗೆ ಕಾಂಗ್ರೆಸ್ ಆಗ್ರಹ: (ನವದೆಹಲಿ ವರದಿ): ಮಣಿಪುರದಲ್ಲಿ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿಯು ಭಯೋತ್ಪಾದಕರ ಜೊತೆ ಕೈಜೋಡಿಸಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಈ ಕುರಿತು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತನಿಖೆ ನಡೆಸಬೇಕು ಎಂದು ಗುರುವಾರ ಆಗ್ರಹಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಭೇಟಿ ನೀಡಬೇಕು ಮತ್ತು ಸರ್ವ ಪಕ್ಷಗಳ ನಿಯೋಗವನ್ನು ಕರೆದೊಯ್ಯಬೇಕು ಎಂದೂ ಒತ್ತಾಯಿಸಿದೆ.

ಬಿಜೆಪಿಯು ಯುನೈಟೆಡ್ ಕುಕಿ ಲಿಬರೇಷನ್ ಫ್ರಂಟ್‌ನ ಸಹಾಯ ಪಡೆದುಕೊಂಡಿದೆ ಎಂದು ಕಾಂಗ್ರೆಸ್ ಮುಖಂಡ ಅಜಯ್ ಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಚುನಾವಣೆ ವೇಳೆ ಬಿಜೆಪಿ ಅಭ್ಯರ್ಥಿಗಳಿಗೆ ಸಹಾಯ ಮಾಡುವುದಾಗಿ ಯುನೈಟೆಡ್ ಕುಕಿ ಲಿಬರೇಷನ್ ಫ್ರಂಟ್‌ನ ಮುಖ್ಯಸ್ಥ ಎಸ್.ಎಸ್. ಹಾಕಿಪ್ ಅವರು ಕೇಂದ್ರ ಗೃಹಸಚಿವ ಅಮಿತ್ ಶಾ ಅವರಿಗೆ ಬರೆದಿರುವ ಪತ್ರದ ಬಗ್ಗೆಯೂ ಅಜಯ್ ಕುಮಾರ್ ಅವರು ಉಲ್ಲೇಖಿಸಿದ್ದಾರೆ.

ಕರಾಳ ನೆನಪು ಮೆಲುಕು ಹಾಕಿದ ವಿದ್ಯಾರ್ಥಿನಿಯರು: ಗಲಭೆಪೀಡಿತ ಪ್ರದೇಶದಿಂದ ಪಾರಾಗಿ ಬಂದಿರುವ ಮಣಿಪುರ ವಿ.ವಿ ವಿದ್ಯಾರ್ಥಿನಿಯರು ತಾವು ಕಣ್ಣಾರೆ ಕಂಡಿರುವ ಘಟನೆಗಳನ್ನು ಮೆಲುಕು ಹಾಕಿದ್ದಾರೆ.

‘ಮೇ 3ರಂದು ಆಯುಧಧಾರಿಗಳಾದ ಸುಮಾರು 40 ಮಂದಿಯ ತಂಡ ವಿದ್ಯಾರ್ಥಿನಿಯರಿದ್ದ ವಸತಿನಿಲಯದೊಳಗೆ ಪ್ರವೇಶಿಸಿ ವಾಹನಗಳಿಗೆ ಬೆಂಕಿ ಹಚ್ಚಿ, ಕಲ್ಲೆಸೆದು ಕಟ್ಟಡದ ಕಿಟಕಿ ಗಾಜುಗಳಿಗೂ ಹಾನಿ ಎಸಗಿತ್ತು.

ಸುಪ್ರೀಂ ಕೋರ್ಟ್‌ಗೆ ಅರ್ಜಿ

ನವದೆಹಲಿ: ಕೇಂದ್ರ ಸರ್ಕಾರ ಮತ್ತು ಮಣಿಪುರದ ಮುಖ್ಯಮಂತ್ರಿ ಜಂಟಿಯಾಗಿ ಈಶಾನ್ಯ ರಾಜ್ಯದಲ್ಲಿ ಕುಕಿ ಸಮುದಾಯದವರ ‘ಜನಾಂಗೀಯ ಶುದ್ಧೀಕರಣ’ ಗುರಿಯನ್ನು ಹೊಂದಿರುವ ಕೋಮುವಾದಿ ಕಾರ್ಯಸೂಚಿಯನ್ನು ಆರಂಭಿಸಿದೆ ಎಂದು ‘ದಿ ಮಣಿಪುರ ಟ್ರೈಬಲ್ ಫೋರಂ’ ಸಂಘಟನೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಅಲ್ಪಸಂಖ್ಯಾತ ಕುಕಿ ಸಮುದಾಯದವರಿಗೆ ಸೇನೆಯ ಮೂಲಕ ರಕ್ಷಣೆ ನೀಡಬೇಕು ಎಂದೂ ಅರ್ಜಿಯಲ್ಲಿ ಕೋರಿದೆ.

ಹಿಂಸಾಚಾರ ತಕ್ಷಣ ನಿಲ್ಲಿಸಿ: ಮಣಿಪುರ ಹಿಂಸಾಚಾರದಿಂದ ಸಮಾಜಕ್ಕೆ ದೊಡ್ಡ ನಷ್ಟವಾಗಿದೆ ಎಂದಿರುವ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ರಾಜ್ಯದಲ್ಲಿ ಶಾಂತಿ ಕಾಪಾಡಬೇಕೆಂದು ಮನವಿ ಮಾಡಿದೆ. ನಾವು ಈಗಾಗಲೇ ಮಣಿಪುರದಲ್ಲಿ ಪರಿಹಾರ ಕಾರ್ಯದಲ್ಲಿ ಪಾಲ್ಗೊಂಡಿದ್ದೇವೆ ಮತ್ತು ಅದನ್ನು ಮುಂದುವರಿಸಲಿದ್ದೇವೆ ಎಂದು ವಿಎಚ್‌ಪಿ ಟ್ವೀಟ್ ಮಾಡಿದೆ.

ಸಂಕ್ಷಿಪ್ತ ಸುದ್ದಿ

ನಟಿ ಗ್ಲೆಂಡಾ ನಿಧನ



ಲಂಡನ್ (ಎಪಿ): ಎರಡು ಬಾರಿ ಆಸ್ಕರ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದ ಖ್ಯಾತ ಹಾಲಿವುಡ್ ನಟಿ ಮತ್ತು ಬ್ರಿಟನ್ ಮಾಜಿ ಸಂಸದೆ ಗ್ಲೆಂಡಾ ಜಾಕ್ಸನ್ (87) ಅಲ್ಪಕಾಲದ ಅನಾರೋಗ್ಯದಿಂದ ಅವರ ನಿವಾಸದಲ್ಲಿ ಗುರುವಾರ ನಿಧನರಾಗಿದ್ದಾರೆ.

‘ಇತ್ತೀಚೆಗಷ್ಟೇ ಅವರು ‘ದಿ ಗ್ರೇಟ್ ಎಸ್ಕೇಪರ್’ ಚಿತ್ರದ ಚಿತ್ರೀಕರಣ ಪೂರ್ಣಗೊಳಿಸಿದ್ದರು. ಈ ಚಿತ್ರದಲ್ಲಿ ಗ್ಲೆಂಡಾ ಅವರು ನಟ ಮೈಕಲ್ ಕೇನ್ ಅವರೊಂದಿಗೆ ಸಹ ನಟಿಯಾಗಿ ಅಭಿನಯಿಸಿದ್ದಾರೆ’ ಎಂದು ಗ್ಲೆಂಡಾ ಅವರ ಪ್ರತಿನಿಧಿ ಲಿಯೋನೆಲ್ ಲಾರ್ನರ್ ಹೇಳಿದರು.

ಭಾರತದ 5 ಶಾಲೆಗಳಿಗೆ ಪ್ರಶಸ್ತಿ

ಲಂಡನ್ (ಪಿಟಿಐ): ಬ್ರಿಟನ್ ನೀಡಲಿರುವ ವಿಶ್ವದ ಅತ್ಯುತ್ತಮ ಶಾಲಾ ಪ್ರಶಸ್ತಿಗಳ ವಿವಿಧ ವಿಭಾಗಗಳಲ್ಲಿ ಭಾರತದ ದೆಹಲಿ, ಗುಜರಾತ್ ಮತ್ತು ಮಹಾರಾಷ್ಟ್ರದ ಐದು ಶಾಲೆಗಳು ಆಯ್ಕೆಯಾಗಿವೆ.

2023ನೇ ಸಾಲಿನ ವಿಶ್ವದ ಅತ್ಯುತ್ತಮ ಶಾಲಾ ಪ್ರಶಸ್ತಿಗಳಿಗೆ ವಿವಿಧ ವಿಭಾಗಗಳಲ್ಲಿ ಅಗ್ರ ಹತ್ತರ ಪಟ್ಟಿಯನ್ನು ಗುರುವಾರ ಪ್ರಕಟಿಸಲಾಗಿದೆ. ಪ್ರಶಸ್ತಿಯು ₹2 ಕೋಟಿ ಮೊತ್ತ ಒಳಗೊಂಡಿದೆ.

ಸಮುದಾಯ ಸಹಯೋಗ ವಿಭಾಗದಲ್ಲಿ ದೆಹಲಿಯ ನಗರ್ ನಿಗಮ್ ಪ್ರತಿಭಾ ಬಾಲಿಕಾ ವಿದ್ಯಾಲಯ (ಎನ್‌ಪಿಬಿವಿ), ಮುಂಬೈನ ಸ್ವತಂತ್ರ ಅಂತರರಾಷ್ಟ್ರೀಯ ಶಾಲೆಯಾದ ಒಬೆರಾಯ್ ಇಂಟರ್ ನ್ಯಾಷನಲ್ ಸ್ಕೂಲ್, ಆವಿಷ್ಕಾರ ವಿಭಾಗದಲ್ಲಿ ಗುಜರಾತ್‌ನ ಅಹಮದಾಬಾದ್‌ನ ಸ್ವತಂತ್ರ ಅಂತರರಾಷ್ಟ್ರೀಯ ಶಾಲೆಯಾದ ದಿ ರಿವರ್ಸೈಡ್ ಸ್ಕೂಲ್, ಪ್ರತಿಕೂಲ ಪರಿಸ್ಥಿತಿ ತಗ್ಗಿಸುವಿಕೆ ವಿಭಾಗದಲ್ಲಿ ಮಹಾರಾಷ್ಟ್ರದ ಅಹಮದ್‌ನಗರದ ಸ್ನೇಹಾಲಯ ಇಂಗ್ಲಿಷ್ ಮೀಡಿಯಂ ಸ್ಕೂಲ್ ಹಾಗೂ ಆರೋಗ್ಯಯುತ ಜೀವನ ನಿರ್ವಹಣೆಗೆ ಬೆಂಬಲ ವಿಭಾಗದಲ್ಲಿ ಮುಂಬೈನ ಶಿಂದೆವಾಡಿ ಮುಂಬೈ ಪಬ್ಲಿಕ್ ಸ್ಕೂಲ್ (ದಿ ಆಕಾಂಕ್ಷಾ ಫೌಂಡೇಷನ್) ಸ್ಥಾನ ಪಡೆದಿವೆ.

‘ಜಾನ್ಸನ್‌ರಿಂದ ತಪ್ಪು ಮಾಹಿತಿ’

ಲಂಡನ್ (ಪಿಟಿಐ): ಕೋವಿಡ್–19 ಪಿಡುಗಿನ ಸಮಯದಲ್ಲಿನ ನಿರ್ಬಂಧಗಳನ್ನು ಉಲ್ಲಂಘಿಸಿ ಸಂತೋಷಕೂಟಗಳನ್ನು ಮಾಡಿದ್ದ ಬಗ್ಗೆ ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಉದ್ದೇಶಪೂರ್ವಕವಾಗಿ ಸಂಸತ್ತನ್ನು ತಪ್ಪು ದಾರಿಗೆಳೆದಿದ್ದರು ಎಂದು ಹಕ್ಕುಬಾಧ್ಯತಾ ಸಮಿತಿ ಗುರುವಾರ ಹೇಳಿದೆ.

ಸಮಿತಿಯು ಜಾನ್ಸನ್ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ನಡೆಸಿದ್ದ ತನಿಖೆಯ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಿದೆ. ಕೋವಿಡ್ ನಿರ್ಬಂಧಗಳನ್ನು ಉಲ್ಲಂಘಿಸಿ ತಮ್ಮ ಕಚೇರಿಯಲ್ಲಿ ಜಾನ್ಸನ್ ಅವರು ಸಂತೋಷಕೂಟ ನಡೆಸಿದ್ದು ಭಾರಿ ವಿವಾದಕ್ಕೆ ಕಾರಣವಾಗಿತ್ತು. ಇದನ್ನು ‘ಪಾರ್ಟಿಗೇಟ್ ಹಗರಣ’ ಎಂದೇ ಕರೆಯಲಾಗುತ್ತಿದೆ.

ಜಾನ್ಸನ್ ಅವರು ಸಂಸತ್ ಸ್ಥಾನಕ್ಕೆ ರಾಜೀನಾಮೆ ನೀಡಿದ ಕೆಲ ದಿನಗಳ ನಂತರ ಸಮಿತಿಯು ತನ್ನ ವರದಿಯನ್ನು ಬಿಡುಗಡೆ ಮಾಡಿದೆ. ಇನ್ನೊಂದೆಡೆ, ‘ಸಮಿತಿ ಸದಸ್ಯರು ನನ್ನ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ’ ಎಂದು ಜಾನ್ಸನ್ ಟೀಕಿಸಿದ್ದಾರೆ.

ಸಂಸದನ ಅಮಾನತು

ಸಿಡ್ನಿ (ಎಎಫ್‌ಪಿ): ಸಂಸತ್ ಭವನದಲ್ಲಿಯೇ ಸಹ ಸದಸ್ಯೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಆಸ್ಟ್ರೇಲಿಯಾದ ಲಿಬರಲ್ ಪಾರ್ಟಿ, ಪಕ್ಷದ ಸಂಸದನನ್ನು ಅಮಾನತುಪಡಿಸಿದೆ. ವಿರೋಧಪಕ್ಷ ಲಿಬರಲ್ ಪಾರ್ಟಿಯ ಸದಸ್ಯ, ಸಂಸದ ಡೇವಿಡ್ ವಾನ್ ಈ ಆರೋಪವನ್ನು ನಿರಾಕರಿಸಿದ್ದು, ಪಕ್ಷದ ಮುಖಂಡರ ನಡೆಯನ್ನು ‘ನಾಚಿಕೆಗೇಡಿನ ನಡವಳಿಕೆ’ ಎಂದು ಟೀಕಿಸಿದ್ದಾರೆ. ವಾನ್ ವಿರುದ್ಧ ಇನ್ನಷ್ಟು ಆರೋಪಗಳು ಕೇಳಿಬರುತ್ತಿವೆ ಎಂದು ಪಕ್ಷದ ಮುಖಂಡ ಹೇಳಿದ್ದಾರೆ.

ನಗರದಲ್ಲಿ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಿ: ರಾಕೇಶ್ ಸಿಂಗ್

ಮಳೆಗಾಲ: ಇಲಾಖೆಗಳ ಸಮನ್ವಯಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆಗಾಲದ ಸಂದರ್ಭದಲ್ಲಿ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಯಾವ ಸಮಸ್ಯೆಯೂ ಆಗದಂತೆ ನೋಡಿಕೊಳ್ಳಬೇಕು ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ, ಜಲಮಂಡಳಿ, ಪೊಲೀಸ್, ಬೆಸ್ಕಾಂ, ಅಗ್ನಿ ಶಾಮಕ ದಳ ಹಾಗೂ ಎಸ್.ಡಿ.ಆರ್.ಎಫ್ ಇಲಾಖೆಗಳ ಅಧಿಕಾರಿಗಳೊಂದಿಗೆ ಗುರುವಾರ ಸಮನ್ವಯ ಸಭೆ ನಡೆಸಿದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಮುಂಗಾರು ಮಳೆಯಿಂದ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಿದರು.

ಮಳೆಗಾಲದಲ್ಲಿ ಎಲ್ಲಿಯೂ ಜಲಾವೃತವಾಗದಂತೆ ರಾಜಕಾಲುವೆ, ಚರಂಡಿಗಳಲ್ಲಿ ಹೂಳನ್ನು ತೆರವುಗೊಳಿಸಬೇಕು. ಹೂಳೆತ್ತಿರುವ ಬಗ್ಗೆ ಲೊಕೇಷನ್ ಸಹಿತ ಛಾಯಾಚಿತ್ರಗಳನ್ನು ತೆಗೆದು ನಿಖರವಾದ ಮಾಹಿತಿಯನ್ನು ದಾಖಲಿಟ್ಟುಕೊಳ್ಳಬೇಕು ಎಂದು ಸೂಚಿಸಿದರು.

20 ಅಗ್ನಿ ಶಾಮಕ ಠಾಣೆ ಹಾಗೂ ಒಂದು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಇವೆ. ನಗರದಲ್ಲಿ ಹೆಚ್ಚು ಮಳೆಯಾದ ಸಂದರ್ಭದಲ್ಲಿ ಪಾಲಿಕೆ ಅಧಿಕಾರಿಗಳು ಜಲಾವೃತವಾಗಿರುವ ಪ್ರದೇಶದ ಮಾಹಿತಿ ನೀಡಿದ ತಕ್ಷಣ ಅಗ್ನಿ ಶಾಮಕ ದಳ ಹಾಗೂ ಎಸ್‌ಡಿಆರ್‌ಎಫ್ ತಂಡವು ತ್ವರಿತವಾಗಿ ಸ್ಪಂದಿಸಬೇಕು. ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗಳನ್ನು ಬಗೆಹರಿಸಬೇಕು. ಅಗ್ನಿ ಶಾಮಕ ಠಾಣೆ ಹಾಗೂ ಕಚೇರಿ ಮುಖ್ಯಸ್ಥರ ಮಾಹಿತಿ, ದೂರವಾಣಿ ಸಂಖ್ಯೆಯನ್ನು ಪಾಲಿಕೆ ನಿಯಂತ್ರಣ ಕೊಠಡಿಗಳಿಗೆ ನೀಡಿ ಸಮನ್ವಯದಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ನಮ್ಮ ಮೆಟ್ರೊ ಕಾಮಗಾರಿ ನಡೆಯುತ್ತಿರುವ ಪ್ರದೇಶಗಳಲ್ಲಿ ಮಳೆ ನೀರು ಹರಿಯಲು ಚರಂಡಿಗಳು ಸರಿಯಾಗಿಲ್ಲದಿದ್ದರೆ, ಅವುಗಳನ್ನು ದುರಸ್ತಿ ಮಾಡಬೇಕು. ಆಯಾ ವಲಯ ವ್ಯಾಪ್ತಿಯ ಪಾಲಿಕೆ ಹಿರಿಯ ಅಧಿಕಾರಿಗಳು, ಅಗ್ನಿ ಶಾಮಕ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿ ಹಾಗೂ ಸಂಬಂಧಪಟ್ಟ ಇಲಾಖೆಯ ಜೊತೆಗೆ 198 ಪ್ರವಾಹ ಪೀಡಿತ ಸೂಕ್ಷ್ಮ ಪ್ರದೇಶಗಳಿಗೆ ಜಂಟಿಯಾಗಿ ಖುದ್ದು ಭೇಟಿ ನೀಡಬೇಕು ಎಂದು ರಾಕೇಶ್ ಸಿಂಗ್ ಸೂಚಿಸಿದರು.

ಅರಣ್ಯ ವಿಭಾಗದಿಂದ ಡಿಪೋ: ಮರಗಳ ಕೊಂಬೆ ಹಾಗೂ ಸೌದೆಗಳ ಸಂಗ್ರಹಕ್ಕಾಗಿ ದಕ್ಷಿಣ ಹಾಗೂ ಆರ್.ಆರ್. ನಗರ ವಲಯಗಳನ್ನು ಹೊರತುಪಡಿಸಿ, ಉಳಿದ 6 ವಲಯಗಳಲ್ಲೂ ಡಿಪೋ ವ್ಯವಸ್ಥೆ ಮಾಡಲಾಗಿದೆ. ಉಳಿದೆರಡು ವಲಯದಲ್ಲೂ ತ್ವರಿತವಾಗಿ ಡಿಪೋ ತೆರೆಯಬೇಕು. ಮರದ ಎಲೆ, ರೆಂಬೆ-ಕೊಂಬೆಗಳ ತೆರವಿಗಾಗಿ ಆಯಾ ವಲಯಗಳಲ್ಲಿ ಡಂಪಿಂಗ್ ಯಾರ್ಡ್ ವ್ಯವಸ್ಥೆ ಮಾಡಬೇಕು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಹೇಳಿದರು.

ಮುನ್ಸೂಚನೆ ಪಾಲಿಸಿ: ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಹವಾಮಾನದ ಮುನ್ಸೂಚನೆ ನೀಡಲಿದೆ. ಅದನ್ನು ಅನುಸರಿಸಿ ಯಾವ ಭಾಗದಲ್ಲಿ ಮಳೆಯಾಗಲಿದೆ ಎಂಬುದನ್ನು ತಿಳಿದು ಎಲ್ಲಾ ಪಾಲಿಕೆ ಅಧಿಕಾರಿಗಳು, ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯನಿರತರಾಗಬೇಕು ಎಂದರು.

ಸೂಪರ್ ಸಕ್ಕಿಂಗ್ ಯಂತ್ರ ಹಸ್ತಾಂತರಿಸಿ: ಮಳೆಗಾಲದಲ್ಲಿ ಜಲಾವೃತವಾಗುವ ಪ್ರದೇಶಗಳಲ್ಲಿ ನೀರನ್ನು ತೆರವುಗೊಳಿಸಲು ಬಿಡಬ್ಲ್ಯುಎಸ್‌ಎಸ್‌ಬಿ ಬಳಿ ಇರುವ ಸೂಪರ್ ಸಕ್ಕಿಂಗ್ ಯಂತ್ರಗಳನ್ನು ಮಳೆಗಾಲ ಮುಗಿಯುವವರೆಗೆ ಪಾಲಿಕೆಗೆ ಹಸ್ತಾಂತರಿಸಬೇಕು ಎಂದೂ ಅಧಿಕಾರಿಗೆ ರಾಕೇಶ್ ಸಿಂಗ್ ಸೂಚಿಸಿದರು.

ರಾಜಕಾಲುವೆ ತೆರವಿಗೆ ಮತ್ತೆ 15 ದಿನದ ಗಡುವು



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಒತ್ತುವರಿ ತೆರವಿಗೆ ಮತ್ತೊಮ್ಮೆ 15 ದಿನಗಳ ಗಡುವು ನೀಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಒತ್ತುವರಿ ಮಾಡಿಕೊಂಡಿರುವ ಸ್ಥಳಗಳನ್ನು ಭೂಮಾಪಕರು ಗುರುತು ಮಾಡಿದ್ದು, ತಹಶೀಲ್ದಾರ್ ಅವರಿಂದ ತೆರವು ಆದೇಶ ಪಡೆದು ಇನ್ನು 15 ದಿನಗಳೊಳಗೆ ಒತ್ತುವರಿಗಳನ್ನು ತೆರವು ಮಾಡಬೇಕು ಎಂದು ಸೂಚಿಸಿದರು.

ಭೂ ಮಾಪನ ಕಾರ್ಯ ಮಾಡಿರುವ ಕಡೆ ಗ್ರಾಮ ನಕ್ಷೆ ಮತ್ತು ಟಿಪ್ಪಣಿಗಳ ಅನ್ವಯ ಒತ್ತುವರಿಯಾದ ವ್ಯಾಪ್ತಿ ಗುರುತಿಸಿ ಸಂಬಂಧಪಟ್ಟ ಭೂ ಮಾಪಕರು ನಕ್ಷೆಯನ್ನು ಸಿದ್ಧಪಡಿಸಿ ತಹಶೀಲ್ದಾರ್ ರವರ ಆದೇಶಗಳನ್ನು ಜಾರಿಮಾಡಬೇಕು. ಒತ್ತುವರಿ ತೆರವಿನ ವೇಳೆ ಯಾರಾದರೂ ತಡೆಯೊಡ್ಡಿದರೆ ಪೊಲೀಸ್ ಭದ್ರತೆಯೊಂದಿಗೆ ಕಾರ್ಯಾಚರಣೆ ಮಾಡಬೇಕು ಎಂದರು.

ಪಾಲಿಕೆಯ ಎಂಟೂ ವಲಯಗಳಲ್ಲಿ ಬಾಕಿಯಿರುವ ಒತ್ತುವರಿಗಳನ್ನು ತೆರವುಮಾಡಿ ಮಳೆ ನೀರುಗಾಲುವೆಗಳನ್ನು ನಿರ್ಮಾಣ ಮಾಡಬೇಕು. ಎಲ್ಲಿಯೂ ಜಲಾವೃತವಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ನಿಗಧಿತ ಸಮಯದಲ್ಲಿ ಇತ್ಯರ್ಥಪಡಿಸಿಕೊಂಡು ಒತ್ತುವರಿ ತೆರವು ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ವಲಯ ಆಯುಕ್ತರಾದ ಜಯರಾಮ್ ರಾಯಪುರ, ಡಾ. ತ್ರಿಲೋಕ್ ಚಂದ್ರ, ರವೀಂದ್ರ, ಡಾ. ಹರೀಶ್ ಕುಮಾರ್ , ಡಾ. ದೀಪಕ್, ಪ್ರೀತಿ ಗೆಹ್ಲೋಟ್ ಇದ್ದರು.

ಕಂಟ್ರೋಲ್ ರೂಂ ಮೇಲ್ವಿಚಾರಣೆ

ಬಿಬಿಎಂಪಿಯ 8 ವಲಯ ಹಾಗೂ ಕೇಂದ್ರ ಕಚೇರಿ ಸೇರಿದಂತೆ 9 ಶಾಶ್ವತ ನಿಯಂತ್ರಣ ಕೊಠಡಿಗಳು ಹಾಗೂ 63 ಉಪ ವಿಭಾಗ ನಿಯಂತ್ರಣ ಕೊಠಡಿಗಳಿವೆ. ಪಾಲಿಕೆ ಕೇಂದ್ರ ಕಚೇರಿಯಲ್ಲಿರುವ ಸೆಂಟ್ರಲ್ ಕಂಟ್ರೋಲ್ ರೂಂ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಜೊತೆಗೆ ಮೇಲ್ವಿಚಾರಣೆ ಮಾಡಲಿದೆ. ಪಾಲಿಕೆಯ ಸಹಾಯವಾಣಿ 1533 ಹಾಗೂ ಸಹಾಯ ತಂತ್ರಾಂಶದ ಮೂಲಕ ಬರುವಂತಹ ದೂರುಗಳನ್ನು ನಿಯಂತ್ರಣ ಕೊಠಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರಿನ ಬಗ್ಗೆ ಮಾಹಿತಿ ನೀಡಿ ಸಮಸ್ಯೆ ಬಗೆಹರಿಸಬೇಕು ಎಂದು ರಾಕೇಶ್ ಸಿಂಗ್ ಹೇಳಿದರು.

ಸಭೆಯಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ನಗರ ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಅನುಚೇತ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ್, ಬೆಸ್ಕಾಂ, ಜಲಮಂಡಳಿ, ಕೆಪಿಟಿಸಿಎಲ್, ಅಗ್ನಿಶಾಮಕ, ಎಸ್‌ಡಿಆರ್‌ಎಫ್ ಅಧಿಕಾರಿಗಳು ಇದ್ದರು.

ಸುದ್ದಿ 2 ನಿಮಿಷ

ಸಂಪುಟದಲ್ಲಿ ಕೊಡಗಿಗೆ ಪ್ರಾತಿನಿಧ್ಯ ಸಿಗಬೇಕಿತ್ತು: ಪೊನ್ನಣ್ಣ

ಬೆಂಗಳೂರು: 'ಕೊಡಗು ಜಿಲ್ಲೆಯ ಎರಡೂ ವಿಧಾನಸಭಾ ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದಿದ್ದು, ಈ ಜಿಲ್ಲೆಯ ಕೋಟಾದಿಂದ ಯಾರಿಗಾದರೂ ಒಬ್ಬರಿಗೆ ಸಂಪುಟದಲ್ಲಿ ಸಚಿವ ಸ್ಥಾನ ಸಿಗಬೇಕಿತ್ತು' ಎಂದು ವಿರಾಜಪೇಟೆಯ ಕಾಂಗ್ರೆಸ್ ಪಕ್ಷದ ಶಾಸಕ ಹಾಗೂ ಹೈಕೋರ್ಟ್‌ನ ಹಿರಿಯ ವಕೀಲರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಪ್ರತಿಪಾದಿಸಿದರು.

ಬೆಂಗಳೂರು ವಕೀಲರ ಸಂಘದ ವತಿಯಿಂದ ಗುರುವಾರ ಹೈಕೋರ್ಟ್‌ನ ಸಭಾಂಗಣದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ನಾನು ಇಲ್ಲಿಗೆ ವಕೀಲನಾಗಿ ಬಂದಿದ್ದೇನೆ. ನಾನೊಬ್ಬ ಶಾಸಕ ವಕೀಲ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರನಾಗಿ ನನಗೆ ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ' ಎಂದು ಭರವಸೆ ನೀಡಿದರು.

'ನೇಮಕಾತಿ ಪ್ರಕ್ರಿಯೆಯಲ್ಲಿ ಯಾರು ಯಾರನ್ನೂ ಅಂಗಲಾಚಬಾರದು. ಅದರಲ್ಲೂ ವಕೀಲರು ನ್ಯಾಯಾಧೀಶರಾಗಲು ಯಾವುದೇ ನ್ಯಾಯಮೂರ್ತಿಗಳ ಮನೆ ಬಾಗಿಲಿಗೆ ಎಡತಾಕಿ ಗೋಗರೆಯಬಾರದು. ಹುದ್ದೆಗಳು ಅರಸಿಕೊಂಡು ಬರುವಂತೆ ನಾವು ವೃತ್ತಿಯ ಘನತೆ, ಗೌರವ ಎತ್ತಿಹಿಡಿದು ನಿಷ್ಠೆಯಿಂದ ದುಡಿಯಬೇಕು' ಎಂದರು.

ಸನ್ಮಾನಿಸಿದ ನ್ಯಾಯಮೂರ್ತಿ ಜಿ.ನರೇಂದರ್ ಮಾತನಾಡಿ, 'ಪೊನ್ನಣ್ಣ ಬದ್ಧತೆಯುಳ್ಳ, ಶ್ರಮಜೀವಿ ಮತ್ತು ಬಿಚ್ಚುಮಾತು ಹೊಂದಿದ ವಕೀಲ. ಅವರಿಂದ ವಕೀಲ ವೃಂದ ಹೆಚ್ಚಿನ ಯಶಸ್ಸು ನಿರೀಕ್ಷಿಸುತ್ತದೆ' ಎಂದರು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮಾತನಾಡಿ, 'ಪೊನ್ನಣ್ಣ ಅವರ ಬಗ್ಗೆ ಅವರ ಸಾಧನೆಗಳೇ ಮಾತನಾಡುತ್ತವೆ' ಎಂದರು. ಅಧ್ಯಕ್ಷ ವಿವೇಕ್ ರೆಡ್ಡಿ ಮಾತನಾಡಿ, 'ರಾಜ್ಯದ ವಕೀಲರ ಸಂಘಗಳ ಸಂಕಷ್ಟಗಳಿಗೆ ಪೊನ್ನಣ್ಣ ಒತ್ತಾಸೆಯಾಗಿ ನಿಲ್ಲುತ್ತಾರೆ. ಅವರು ವಿಧಾನಸೌಧದಲ್ಲಿ ನಮ್ಮ ಕಷ್ಟಗಳನ್ನು ಬಗೆಹರಿಸಲಿದ್ದಾರೆ. ಆ ದಿಸೆಯಲ್ಲಿ ಅವರು ಕೆಲಸ ಮಾಡುತ್ತಾರೆ ಎಂಬ ವಿಶ್ವಾಸ ವಕೀಲರಿಗಿದೆ' ಎಂದು ಆಶಿಸಿದರು.



ಎನ್‌ಪಿಎಸ್ ರದ್ದತಿಗೆ ಕ್ರಮ: ಭರವಸೆ

ಬೆಂಗಳೂರು: ನೂತನ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ರದ್ದು ಮಾಡಿ, ಹಳೇ ಪಿಂಚಣಿ ವ್ಯವಸ್ಥೆಯನ್ನೇ ಜಾರಿ ಮಾಡುವ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸರ್ಕಾರ ಭರವಸೆ ನೀಡಿದೆ ಎಂದು ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಶಾಂತರಾಮ ತಿಳಿಸಿದರು.

ಈ ಬಗ್ಗೆ ಜೂನ್ 12ರಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜೂನ್ 13ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಸಂಘದ ಪದಾಧಿಕಾರಿಗಳ ಜತೆಗೆ ಸಭೆ ನಡೆಸಿದರು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿಯೇ ಈ ಬಗ್ಗೆ ಭರವಸೆ ನೀಡಿದ್ದು, ಈ ಭರವಸೆ ಈಡೇರಿಸಲು ಬದ್ಧ ಇರುವುದಾಗಿ ಸಭೆಯಲ್ಲಿ ತಿಳಿದ್ದಾರೆ. ಸಚಿವ ಸಂಪುಟದಲ್ಲಿ ಚರ್ಚಿಸಿ, ಮುಂಬರುವ ಅಧಿವೇಶನದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಶಾಂತರಾಮ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಎನ್‌ಪಿಎಸ್ ರದ್ದತಿಗಾಗಿ ನಿರಂತರ ಹೋರಾಟ ಮಾಡಿಕೊಂಡು ಬಂದಿದ್ದೆವು. ಎನ್‌ಪಿಎಸ್ ರದ್ದಾದರೆ ಮುಖ್ಯಮಂತ್ರಿ ಸಹಿತ ಎಲ್ಲ ಸಚಿವರನ್ನು ಅಭಿನಂದಿಸಲಾಗುವುದು. ಜುಲೈ ಅಥವಾ ಆಗಸ್ಟ್‌ನಲ್ಲಿ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರು, ನಿಗಮ ಮಂಡಳಿ, ಅನುದಾನಿತ ಸ್ವಾಯತ್ತ ಸಂಸ್ಥೆಗಳ ನೌಕರರು ಸೇರಿ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಸಾರಿಗೆ ಬಸ್‌ಗಳ ಸಂಖ್ಯೆ ಹೆಚ್ಚಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿಯೋಜನೆ ಜಾರಿಯಾಗಿದ್ದರಿಂದ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರ ಪ್ರಯಾಣ ಹೆಚ್ಚಾಗಿದೆ. ಅದಕ್ಕೆ ಅನುಗುಣವಾಗಿ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಆಗ್ರಹಿಸಿದೆ.

ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿ, ಬಸ್‌ಗಳ ಸಂಖ್ಯೆ ಕಡಿಮೆಯಾಗಿದೆ. ಚಾಲಕರು ಮತ್ತು ನಿರ್ವಾಹಕರು ಇಕ್ಕಟ್ಟಿನ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಬಸ್ ಸಂಖ್ಯೆ ಹೆಚ್ಚಿಸುವುದೇ ಇದಕ್ಕೆ ಪರಿಹಾರ ಎಂದು ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್, ಗೌರವಾಧ್ಯಕ್ಷ ಸಿದ್ದನಗೌಡ ಪಾಟೀಲ್, ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್ ಸಲಹೆ ನೀಡಿದ್ದಾರೆ.

ಕೆಲವು ಜಿಲ್ಲೆಗಳಲ್ಲಿ ಖಾಸಗಿ ಬಸ್‌ಗಳು ಸಾಕಷ್ಟು ಇವೆ. ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಸಿಕ್ಕಿರುವುದರಿಂದ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಸುವವರ ಪ್ರಮಾಣ ಕಡಿಮೆಯಾಗಿದೆ. ದೇವರಾಜ ಅರಸು ಕಾಲದಲ್ಲಿ ದಿ ಕಾಂಟ್ರ್ಯಾಕ್ಟ್ ಕ್ಯಾರೇಜಸ್ ಅಬಾಲಿಷನ್ ಆ್ಯಕ್ಟ್-1976 ಜಾರಿ ಮಾಡಿದ್ದರಿಂದ ಕೆಎಸ್‌ಆರ್‌ಟಿಸಿ ದೊಡ್ಡ ಸಂಸ್ಥೆಯಾಗಿ ಬೆಳೆಯಲು ಸಾಧ್ಯವಾಯಿತು. ಆಗ ಮಂಕಾಗಿದ್ದ ಖಾಸಗಿ ಬಸ್ ನೌಕರರಿಗೆ ಸಾರಿಗೆ ನಿಗಮದಲ್ಲಿ ಉದ್ಯೋಗ ನೀಡಲಾಗಿತ್ತು. ಈಗ ಖಾಸಗಿ ಬಸ್‌ಗಳನ್ನು ನಿಗಮಗಳಿಗೆ ತೆಗೆದುಕೊಂಡು ಸಮಗ್ರ ಪ್ರದೇಶ ಯೋಜನೆಯನ್ನು (ಕಾಂಪ್ರಹೆನ್ಸಿವ್ ಏರಿಯಾ ಸ್ಕೀಮ್) ಜಾರಿ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಗುಣಸಾಗರಿ, ಗೀತಾಗೆ ದತ್ತಿ ಪ್ರಶಸ್ತಿ



ಗುಣಸಾಗರಿ



ಡಿ.ಎನ್‌.ಗೀತಾ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಿಂದ (ಕಸಾಪ) ನೀಡುವ ಮನೋಹರಿ ಪಾರ್ಥಸಾರಥಿ ಮನುಶ್ರೀ ದತ್ತಿ ಪ್ರಶಸ್ತಿಗೆ ಗುಣಸಾಗರಿ ನಾಗರಾಜ್, ಡಿ.ಎನ್. ಗೀತಾ ಆಯ್ಕೆಯಾಗಿದ್ದಾರೆ.

'ದೇಶದ ವಿವಿಧ ಭಾಷೆಗಳಲ್ಲಿ ಸಮಗ್ರ ಸಾಹಿತ್ಯದಲ್ಲಿ ಸಾಧನೆ ಮಾಡಿದವರಿಗೆ ನೀಡುವ 2022ನೇ ಸಾಲಿನ ದತ್ತಿ ಪ್ರಶಸ್ತಿಗೆ ಮಂಡ್ಯದ ಗುಣಸಾಗರಿ ನಾಗರಾಜ್, 2023ನೇ ಸಾಲಿನ ಪ್ರಶಸ್ತಿಗೆ ಚಿಕ್ಕಮಗಳೂರಿನ ಡಿ.ಎನ್. ಗೀತಾ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಈ ದತ್ತಿ ನಿಧಿಯನ್ನು ಅತ್ತಿಮಬ್ಬೆ ಪ್ರತಿಷ್ಠಾನ ಟ್ರಸ್ಟ್ ಪರಿಷತ್ತಿನಲ್ಲಿ ಸ್ಥಾಪಿಸಿದೆ' ಎಂದು ಕಸಾಪ ಪ್ರಕಟಣೆಯಲ್ಲಿ ತಿಳಿಸಿದೆ.

ಮಕ್ಕಳಿಗೆ ರ‍್ಯಾಂಕ್, ಹೆತ್ತವರಿಗೆ ಸಂಭ್ರಮ

ಪ್ರಜಾವಾಣಿ ವಾರ್ತೆ



ಬಿ.ಎಸ್‌ಸಿ. ನರ್ಸಿಂಗ್ ಮತ್ತು ಬಿ.ವಿ. ಸೈನ್ಸ್‌ನಲ್ಲಿ (ವೆಟರ್ನರಿ) ಪ್ರಥಮ ರ‍್ಯಾಂಕ್ ಪಡೆದಿರುವ ಮಾಳವಿಕಾ ಕಪೂರ್ ಹೆತ್ತವರಾದ ಮೋಹಿತ್ ಕಪೂರ್–ನಿಶ್ಮಿತಾ ಕಪೂರ್ ಮತ್ತು ಸಹೋದರಿ ಮೊಹಿಮಿಕಾ ಕಪೂರ್ ಜೊತೆಗೆ ಸಂಭ್ರಮಪಟ್ಟರು

ಬೆಂಗಳೂರು: ಸಿಇಟಿಯಲ್ಲಿ ಮಕ್ಕಳಿಗೆ ರ‍್ಯಾಂಕ್ ಬಂದಿರುವುದನ್ನು ಕಂಡು ಅವರ ಹೆತ್ತವರು ಸಂಭ್ರಮಿಸಿದರು. ಸ್ನೇಹಿತರಿಗೆ, ಮನೆ ಸುತ್ತಮುತ್ತಲಿನವರಿಗೆ ಸಿಹಿ ಹಂಚಿ ಖುಷಿ ಪಟ್ಟರು.

ಪದ್ಮನಾಭನಗರದ ಕುಮಾರನ್ ಚಿಲ್ಡ್ರನ್ಸ್ ಹೋಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರತೀಕ್ಷಾ ಆರ್. ಅವರು ಬ್ಯಾಚುಲರ್ ಆಫ್ ನ್ಯಾಚುರೋಪತಿ ಆ್ಯಂಡ್ ಯೋಗ ಸೈನ್ಸ್, ಬಿ. ಫಾರ್ಮಾ, ಡಿ. ಫಾರ್ಮಾ ಹೀಗೆ ಮೂರು ವಿಭಾಗಗಳಲ್ಲಿ ಪ್ರಥಮ ರ‍್ಯಾಂಕ್ ಪಡೆದರೆ, ಬಿ.ವಿ.ಎಸ್‌ಸಿ (ವೆಟರ್ನರಿ), ಬಿ.ಎಸ್‌ಸಿ ನರ್ಸಿಂಗ್‌ನಲ್ಲಿ ಎರಡನೇ ರ‍್ಯಾಂಕ್ ಗಳಿಸಿರುವುದರಿಂದ ಯಾವ ವಿಷಯವನ್ನೂ ಆಯ್ಕೆ ಮಾಡಿಕೊಳ್ಳಬಹುದು ಎಂಬ ಹೆಮ್ಮೆ ಅವರ ಹೆತ್ತವರಾದ ರಮೇಶ್ ಎಲ್.-ವಾಗ್ದೇವಿ ಕೆ.ಎಲ್. ದಂಪತಿಯದ್ದಾಗಿದೆ.

ಈ ದಂಪತಿಯ ಇಬ್ಬರು ಮಕ್ಕಳಲ್ಲಿ ಮಗ ಪ್ರಜ್ವಲ್ ಐಐಟಿ ಮುಗಿಸಿ ಈಗ ಮುಂಬೈಯಲ್ಲಿ ಉದ್ಯೋಗದಲ್ಲಿದ್ದಾರೆ. ಈಗ ಮಗಳೂ ಅದೇ ಹಾದಿಯಲ್ಲಿ ಸಾಗುತ್ತಿರುವುದು ಅವರಿಗೆ ಹೆಮ್ಮೆ ತಂದಿದೆ. 'ಮಗಳು ರಾತ್ರಿ ಹೆಚ್ಚು ಹೊತ್ತು ಓದುತ್ತಿದ್ದಳು. ಬೆಳಿಗ್ಗೆ ತಡವಾಗಿ ಏಳುತ್ತಿದ್ದಳು. ಅದು ಅವಳಿಗೆ ಅಭ್ಯಾಸ. ಅವಳು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾಳೋ ಆ ವಿಷಯವನ್ನು ಓದಿಸುತ್ತೇವೆ' ಎಂದು ಪ್ರತೀಕ್ಷಾ ಬಗ್ಗೆ ಪ್ರೋತ್ಸಾಹಕ ಮಾತುಗಳನ್ನಾಡಿದರು.

'ನಾನು ನೀಟ್ ಅನ್ನೂ ಸಿಇಟಿ ಜೊತೆ ಜೊತೆಗೆ ಬರೆದಿದ್ದೆ. ನೀಟ್‌ನಲ್ಲಿ 103ನೇ ರ‍್ಯಾಂಕ್ ಬಂದಿದೆ. ಹಾಗಾಗಿ ಪಾಂಡಿಚೇರಿಯಲ್ಲಿರಯವ ಜವಾಹರಲಾಲ್ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್‌ಗ್ರಾಜುವೇಟ್ ಮೆಡಿಕಲ್ ಆ್ಯಂಡ್ ರಿಸರ್ಚ್‌ನಲ್ಲಿ (ಜೆಐಪಿಎಂಇಆರ್) ಎಂಬಿಬಿಎಸ್ ಮಾಡಬೇಕು' ಎಂದು ಪ್ರತೀಕ್ಷಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಚಾಮರಾಜಪೇಟೆಯ ಮಹೇಶ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಮಾಳವಿಕಾ ಕಪೂರ್ ಬಿ.ಎಸ್. ನರ್ಸಿಂಗ್ ಮತ್ತು ಬಿ.ವಿ. ಸೈನ್ಸ್‌ನಲ್ಲಿ (ವೆಟರ್ನರಿ) ಪ್ರಥಮ ರ‍್ಯಾಂಕ್ ಪಡೆದಿರುವ ಬಿ.ಫಾರ್ಮಾದಲ್ಲಿ 2ನೇ, ಫಾರ್ಮಾ ಡಿ.ಯಲ್ಲಿ 2ನೇ ಹಾಗೂ ಬಿಎನ್‌ವೈಸ್‌ನಲ್ಲಿ 5ನೇ ರ‍್ಯಾಂಕ್ ಗಳಿಸಿದ್ದಾರೆ. ಮಗಳನ್ನು ಹೃದಯ ತಜ್ಞರನ್ನಾಗಿ ಮಾಡಬೇಕು ಎಂಬ ಕನಸನ್ನು ಹೆತ್ತವರಾದ ಮೋಹಿತ್ ಕಪೂರ್–ನಿಶ್ಮಿತಾ ಕಪೂರ್ ಇಟ್ಟುಕೊಂಡಿದ್ದಾರೆ. ಮತ್ತೊಬ್ಬಳು ಮಗಳು ಮೊಹಿಮಿಕಾ ಕಪೂರ್ ಕಂಪ್ಯೂಟರ್ ಸೈನ್ಸ್ ಮಾಡುತ್ತಿದ್ದಾರೆ.

ಎಂಜಿನಿಯರಿಂಗ್‌ನಲ್ಲಿ ಪ್ರಥಮ ರ‍್ಯಾಂಕ್ ಪಡೆದಿರುವ ವಿಘ್ನೇಶ್ ಎನ್. ಕುಮಾರ್ ಅವರು ಬಿ.ಫಾರ್ಮಾ ಮತ್ತು ಫಾರ್ಮಾ ಡಿ.ಯಲ್ಲಿ ತಲಾ 8ನೇ ರ‍್ಯಾಂಕ್ ಗಳಿಸಿದ್ದಾರೆ. ಮಲ್ಲಸಂದ್ರದ ಕುಮಾರನ್ ಚಿಲ್ಡ್ರನ್ಸ್ ಹೋಂ ವಿದ್ಯಾರ್ಥಿಯಾಗಿರು ವಿಘ್ನೇಶ್‌ನನ್ನು ಒಳ್ಳೆಯ ಎಂಜಿನಿಯರಿಂಗ್ ಕಾಲೇಜಿಗೆ ಕಳುಹಿಸಬೇಕು ಎಂಬ ಗುರಿಯನ್ನು ಹೆತ್ತವರಾದ ನಟರಾಜ ಕುಮಾರ್–ಪ್ರಿಯಾ ದಂಪತಿ ಇಟ್ಟುಕೊಂಡಿದ್ದಾರೆ.

ಎನ್‌ಸಿಆರ್‌ಟಿ ಪುಸ್ತಕಗಳು, ಉಪನ್ಯಾಸಕರ ಪ್ರೋತ್ಸಾಹ, ಓದಬೇಕು ಎಂಬ ಛಲದಿಂದ ವಿಘ್ನೇಶ್‌ಗೆ ಈ ಸಾಧನೆ ಮಾಡಲು ಸಾಧ್ಯವಾಗಿದೆ. ಮುಂದೆ ನ್ಯೂರೊ ಡೈವರ್‌ಚೇಂಜ್ ಡಿಸಾರ್ಡರ್ ಟೆಕ್ನಾಲಜಿ ಮಾಡಿ ಅಂಗವಿಕಲರಿಗೆ ಉಪಯೋಗವಾಗುವ ಸಲಕರಣೆಗಳನ್ನು ಕಂಡು ಹಿಡಿಯಬೇಕು ಎಂಬ ಉದ್ದೇಶ ಅವನಿಗೆ ಎಂದು ನಟರಾಜ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.



'ರಾಜ್ಯದ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ (ಎಂ.ಆರ್.ಡಬ್ಲ್ಯು), ಗ್ರಾಮೀಣ ಪುನರ್ವಸತಿ ಕಾರ್ಯಕರ್ತ (ವಿ.ಆರ್.ಡಬ್ಲ್ಯು) ಹಾಗೂ ನಗರ ಪುನರ್ವಸತಿ ಕಾರ್ಯಕರ್ತರಾಗಿರುವ (ಯು.ಆರ್.ಡಬ್ಲ್ಯು) ಅಂಗವಿಕಲರ ಹುದ್ದೆಗಳನ್ನು ಕಾಯಂಗೊಳಿಸಬೇಕು. ಅಂಗವಿಕಲರಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು. ಕರ್ತವ್ಯದಲ್ಲಿ ಮರಣ ಹೊಂದಿದರೆ, ₹ 5 ಲಕ್ಷ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿ 'ನವಕರ್ನಾಟಕ – ಅಂಗವಿಕಲರ ಗೌರವಧನ ಕಾರ್ಯಕರ್ತರ ಸಂಘ'ದ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೇಡಿಕೆ ಮೂರು ಧ್ವನಿ ನೂರಾರು



ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಅವರು ವಿದ್ಯಾರ್ಥಿ ವೇತನ ವಿತರಿಸಿದರು. ಸಂಸದ ತೇಜಸ್ವಿ ಸೂರ್ಯ ಇದ್ದರು

ವಿದ್ಯಾರ್ಥಿ ವೇತನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿಸೂರ್ಯ ಆರಂಭಿಸಿರುವ ನಮೋ ವಿದ್ಯಾನಿಧಿ ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳಿಗೆ ತಲಾ ₹10 ಸಾವಿರ ಶಿಷ್ಯ ವೇತನವನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ವಿತರಿಸಿದರು.

ನಮೋ ವಿದ್ಯಾನಿಧಿ ಕಾರ್ಯಕ್ರಮದಡಿ ಆರ್ಥಿಕವಾಗಿ ಹಿಂದುಳಿದ ವರ್ಗದ 10 ಸಾವಿರ ಪ್ರತಿಭಾವಂತ ಮಕ್ಕಳಿಗೆ ತಲಾ ₹10 ಸಾವಿರ ವಿದ್ಯಾರ್ಥಿ ವೇತನ ನೀಡಲು ಗುರಿ ಹೊಂದಿದ್ದು, ನೇರವಾಗಿ ಮಕ್ಕಳು ವ್ಯಾಸಂಗ ಮಾಡುತ್ತಿರುವ ಆಯಾ ಶಾಲೆಗಳಿಗೆ ಪಾವತಿಸಲಾಗಿದೆ. ಪ್ರಸ್ತುತ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ 1,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಕಾರ್ಯಕ್ರಮದ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ತೇಜಸ್ವಿ ಸೂರ್ಯ ತಿಳಿಸಿದರು.

ತೇಜಸ್ವಿ ಸೂರ್ಯ ಅವರು ದೇವೇಗೌಡರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಆಟೋ ಚಾಲಕರ ಮಕ್ಕಳೂ ಸೇರಿದಂತೆ ಬಡ ವರ್ಗದ ಮಕ್ಕಳಿಗೆ ಚೆಕ್ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಕಳೆದ 9 ವರ್ಷಗಳಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ತಾವು ಕೈಗೊಂಡ ಕಾರ್ಯಗಳು ಮತ್ತು ಮೋದಿಯವರು ದೇಶ ವ್ಯಾಪಿ ಕೈಗೊಂಡ ಕಾರ್ಯಗಳ ವಿವರವನ್ನು ದೇವೇಗೌಡರಿಗೆ ವಿವರಿಸಿದರು.

ಅಖಿಲೇಶ್ ಭೇಟಿಯಾದ ನಿಖಿಲ್

ಪ್ರಜಾವಾಣಿ ವಾರ್ತೆ



ನಿಖಿಲ್ ಕುಮಾರಸ್ವಾಮಿ ಅವರು ಅಖಿಲೇಶ್ ಯಾದವ್ ಅವರನ್ನು ಗುರುವಾರ ಲಖನೌದಲ್ಲಿ ಭೇಟಿಯಾದರು

ರಾಮನಗರ: ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು, ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಸಮಾಜವಾದಿ ಪಕ್ಷದ ನಾಯಕರಾದ ಅಖಿಲೇಶ್ ಯಾದವ್ ಅವರನ್ನು ಗುರುವಾರ ಲಖನೌನಲ್ಲಿ ಭೇಟಿಯಾಗಿ ಸುದೀರ್ಘ ಮಾತುಕತೆ ನಡೆಸಿದರು.

ತಮ್ಮ ನಿವಾಸಕ್ಕೆ ಬಂದ ನಿಖಿಲ್ ಅವರನ್ನು ಬರಮಾಡಿಕೊಂಡ ಅಖಿಲೇಶ್ ಅವರು, ರಾಜಕೀಯ ಸೇರಿದಂತೆ ಮೈಸೂರಿನಲ್ಲಿ ತಾವು ಕಳೆದ ಕಾಲೇಜು ದಿನಗಳ ಕುರಿತು ಮೆಲುಕು ಹಾಕಿದರು.

ತಮ್ಮ ಈ ಭೇಟಿಯ ವಿಷಯವನ್ನು ಮಾಧ್ಯಮದೊಂದಿಗೆ ಹಂಚಿಕೊಂಡಿರುವ ನಿಖಿಲ್, 'ಅತ್ಯಂತ ವಿಶ್ವಾಸಪೂರ್ವಕ ಹಾಗೂ ಸಹೋದರ ವಾತ್ಸಲ್ಯದೊಂದಿಗೆ ಈ ಭೇಟಿ ನಡೆಯಿತು. ಲೋಕಸಭೆ ಚುನಾವಣೆ ಸೇರಿದಂತೆ ಭವಿಷ್ಯದ ರಾಜಕೀಯ ಬೆಳವಣಿಗೆಗಳ ಕುರಿತಂತೆ ಮಹತ್ವದ ಸಮಾಲೋಚನೆ ನಡೆಸಲಾಯಿತು' ಎಂದು ತಿಳಿಸಿದ್ದಾರೆ.

'ವಿದ್ಯುತ್ ದರ: ಉದ್ಯಮಿಗಳಿಗೆ ಹೊರೆಯಾಗದಂತೆ ಕ್ರಮ'

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಭರವಸೆ

ಪ್ರಜಾವಾಣಿ ವಾರ್ತೆ



ಪೀಣ್ಯ ಕೈಗಾರಿಕಾ ಸಂಘದಲ್ಲಿ ಉದ್ಯಮಿಗಳೊಂದಿಗೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಮಾತನಾಡಿದರು

ಪೀಣ್ಯದಾಸರಹಳ್ಳಿ: 'ಉದ್ಯಮಿಗಳಿಗೆ ಹೊರೆಯಾಗದ ರೀತಿಯಲ್ಲಿ ಹಾಗೂ ಸಂಸ್ಥೆಗೂ ನಷ್ಟವಾಗದ ರೀತಿಯಲ್ಲಿ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿ ಹಾಗೂ ಇಲಾಖಾ ಸಚಿವರ ಗಮನಕ್ಕೆ ತಂದು ಅನುಕೂಲ ಮಾಡಿಕೊಡುತ್ತೇವೆ' ಎಂದು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಭರವಸೆ ನೀಡಿದರು.

ಪೀಣ್ಯ ಕೈಗಾರಿಕಾ ಸಂಘದಲ್ಲಿ ಉದ್ಯಮಿಗಳ ಜೊತೆ ಸಂವಾದ ನಡೆಸಿ ಮಾತನಾಡಿದ ಅವರು, 'ಸದ್ಯ ಹೆಚ್ಚಳ ಮಾಡಿರುವ ವಿದ್ಯುತ್ ದರದಲ್ಲಿ ಯಾವುದೇ ಇಳಿಕೆ ಮಾಡುವ ಸಾಧ್ಯತೆ ಇಲ್ಲ. ವಿದ್ಯುತ್ ಲೋಡ್ ಶೆಡ್ಡಿಂಗ್ ಮಾಡುವ ಪ್ರಸಂಗವೂ ಬಂದಿಲ್ಲ, ಮುಂದೆಯೂ ಬರುವುದಿಲ್ಲ. ಉದ್ಯಮಿಗಳಿಗೆ ಹೊರೆಯಾಗದಂತೆ ಹಂತ ಹಂತವಾಗಿ ಹಣ ಕಟ್ಟಿಸುವ ಪ್ರಯತ್ನ ಮಾಡಲಾಗುವುದು' ಎಂದು ವಿವರಿಸಿದರು.

'ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಯಾವುದೇ ಕೈಗಾರಿಕೆಗಳಿಂದ ಎರಡು ತಿಂಗಳು ಬಿಲ್ ಕಟ್ಟುವುದು ತಡವಾದರೂ ಯಾವುದೇ ಕಾರಣಕ್ಕೂ ವಿದ್ಯುತ್ ಕಡಿತಗೊಳಿಸುವುದಿಲ್ಲ. ಅದನ್ನು ಹಂತಹಂತವಾಗಿ ಮುಂದಿನ ಬಿಲ್‌ಗಳ ಮುಖಾಂತರ ತೆಗೆದುಕೊಳ್ಳಲಾಗುವುದು' ಎಂದು ತಿಳಿಸಿದರು.

ನೆಲಮಂಗಲ ಕೈಗಾರಿಕಾ ಪ್ರದೇಶ ಹಾಗೂ ಮನೆಗಳಿಗೆ ಒಂದೇ ವಿದ್ಯುತ್ ಲೈನ್ ಇದ್ದು, ಪ್ರತಿದಿನ ಐದರಿಂದ ಆರು ಗಂಟೆ ವಿದ್ಯುತ್ ತೆಗೆಯುವುದರಿಂದ ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಹಾಗಾಗಿ ಪ್ರತ್ಯೇಕ ಲೈನ್ ಅಳವಡಿಸುವಂತೆ ಮನವಿ ಮಾಡಿದರು. ಅಧ್ಯಕ್ಷರ ಮನವಿಗೆ ಸ್ಪಂದಿಸಿದ ಮಹಾಂತೇಶ ಬಿಳಗಿ ಅವರು ಪ್ರತ್ಯೇಕ ವಿದ್ಯುತ್ ಲೈನ್ ಹಾಕಿಕೊಡುವಂತೆ ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿದರು.

ಬೆಸ್ಕಾಂ ತಾಂತ್ರಿಕ ನಿರ್ದೇಶಕ ಎಚ್.ಜಿ. ರಮೇಶ್, ಸಂಘದ ಅಧ್ಯಕ್ಷ ಮಂಜುನಾಥ್ ಎಚ್, ನಿಕಟಪೂರ್ವ ಅಧ್ಯಕ್ಷ ಮುರಳಿಕೃಷ್ಣ ಬಿ, ಉಪಾಧ್ಯಕ್ಷ ಆರೀಫ್ ಎಚ್.ಎಂ, ಉಪಾಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಚಂದ್ರಶೇಖರ್ ಎಂ, ಜಂಟಿ ಕಾರ್ಯದರ್ಶಿ ಮಲ್ಲೇಶ್ ಗೌಡ ಎಚ್.ಕೆ, ತಿಮ್ಮೇಗೌಡ ಭಾಗವಹಿಸಿದ್ದರು.

ಶಾಲಾ ಕಟ್ಟಡದ ಜಾಗ ಹರಾಜಿಗೆ ಮುಂದಾದ ಅಪೆಕ್ಸ್ ಬ್ಯಾಂಕ್

ತರಗತಿಯಲ್ಲಿ ಪಾಠಕ್ಕೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ



ಟೆಂಟ್ ಅಡಿ ವಿದ್ಯಾಭ್ಯಾಸ ಮಾಡುತ್ತಿರುವ ನೆಲಮಂಗಲದ ಕಣ್ವ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು

ಬೆಂಗಳೂರು: ಸಾಲ ಮರುಪಾವತಿಸಲು ವಿಫಲವಾಗಿರುವ ಹಿನ್ನೆಲೆಯಲ್ಲಿ ಶಾಲಾ ಕಟ್ಟಡ ಮತ್ತು ಅದಕ್ಕೆ ಸೇರಿದ ಜಾಗವನ್ನು ಹರಾಜು ಹಾಕಲು ಮುಂದಾದ ಪರಿಣಾಮ ತರಗತಿಯ ಹೊರಭಾಗಗಳಲ್ಲಿ ಟೆಂಟ್ ಅಡಿ ವಿದ್ಯಾಭ್ಯಾಸ ಮಾಡುತ್ತಿರುವ ನೆಲಮಂಗಲದ ಕಣ್ವ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಿಗೆ ಶಾಲಾ ಕಟ್ಟಡದ ಕೊಠಡಿಯೊಳಗೆ ಕುಳಿತು ತರಗತಿ ಮುಂದುವರಿಸಲು ಅನುಮತಿ ನೀಡುವಂತೆ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್‌ಗೆ ಹೈಕೋರ್ಟ್ ನಿರ್ದೇಶಿಸಿದೆ.

ನೆಲಮಂಗಲದಲ್ಲಿ ಕಣ್ವ ಎಜುಕೇಷನ್ ಟ್ರಸ್ಟ್ ನಡೆಸುತ್ತಿರುವ ಕಣ್ವ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳ ಪೋಷಕರಾದ ಎಂ.ಆರ್. ಹರೀಶ್, ಸಿದ್ದಪ್ಪ ಮತ್ತು ಮೊಹಮ್ಮದ್ ಹಸೀಬುಲ್ಲಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಈಗಾಗಲೇ ಮುಂಗಾರು ಆರಂಭವಾಗಿದೆ. ಅಬ್ಬರದ ಮಳೆಯ ಭೀತಿ ಇರುವ ಇಂದಿನ ದಿನಗಳಲ್ಲಿ ನೂರಾರು ಅಮಾಯಕ ಮಕ್ಕಳು ತೆರೆದ ಪ್ರದೇಶದಲ್ಲಿ ಕೂತಿರುವುದನ್ನು ಕಂಡು ನ್ಯಾಯಾಲಯ ಮೂಕ ಪ್ರೇಕ್ಷಕನಾಗಿರಲು ಸಾಧ್ಯವಿಲ್ಲ. ಮಕ್ಕಳು ಶಾಲಾ ತರಗತಿಯಲ್ಲಿ ಕೂತು ವಿದ್ಯಾಭ್ಯಾಸ ಮುಂದುವರಿಸಲು ಕೂಡಲೇ ಅನುಮತಿ ನೀಡಬೇಕು' ಎಂದು ಬ್ಯಾಂಕಿಗೆ ಮಧ್ಯಂತರ ನಿರ್ದೇಶನ ನೀಡಿದೆ.

'ಶಾಲಾ ಆಡಳಿತ ಮಂಡಳಿಯು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ನೀಡಬೇಕಿರುವ ಬಾಕಿ ವೇತನವನ್ನು ಪಾವತಿಸಬೇಕು. ಈ ಆದೇಶದ ಅನುಪಾಲನಾ ವರದಿಯನ್ನು ಕೋರ್ಟ್‌ಗೆ ಸಲ್ಲಿಸಬೇಕು. ಅಂತೆಯೇ, ಸಾಲ ವಸೂಲಾತಿ ನಿಟ್ಟಿನಲ್ಲಿ ಭದ್ರತಾ ಖಾತರಿಯಾಗಿ ಕಣ್ವ ಎಜುಕೇಷನ್ ಟ್ರಸ್ಟ್ ಮತ್ತು ಕಣ್ವ ಗಾರ್ಮೆಂಟ್ಸ್ ಒದಗಿಸಿರುವ ತುಮಕೂರಿನಲ್ಲಿರುವ ಸ್ಥಿರಾಸ್ತಿಯನ್ನು ಹರಾಜು ಹಾಗೂ ಮಾರಾಟ ಮಾಡಲು ಬ್ಯಾಂಕ್ ಅಗತ್ಯ ಕ್ರಮ ಜರುಗಿಸಬಹುದು. ಆಸ್ತಿಯನ್ನು ಹರಾಜು ಹಾಕಿ, ಅದರಿಂದ ಬರುವ ಹಣವನ್ನು ಸಾಲ ಮರುಪಾವತಿಗೆ ವಿನಿಯೋಗಿಸುವವರೆಗೆ ನೆಲಮಂಗಲದ ಕಟ್ಟಡದಿಂದಲೇ ಶಾಲೆ ಕಾರ್ಯನಿರ್ವಹಿಸಲು ಅನುಮತಿ ನೀಡಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್, 'ಪೂರ್ವ ಸೂಚನೆ ನೀಡದೇ 2023ರ ಏಪ್ರಿಲ್ 8ರಂದು ಶಾಲೆಯನ್ನು ಏಕಾಏಕಿ ಮುಚ್ಚಲಾಗಿದೆ. ಈ ಬಗ್ಗೆ ವಿಚಾರಿಸಿದಾಗ ಶಾಲಾ ಕಟ್ಟಡವನ್ನು ಸಾಲ ವಸೂಲಾತಿ ಕ್ರಮವಾಗಿ ಬ್ಯಾಂಕ್ ಸ್ವಾಧೀನಪಡಿಸಿಕೊಂಡಿದೆ ಎಂಬುದು ತಿಳಿಯಿತು. ಸಂಸ್ಥೆಗೆ ಸೇರಿದ ಎನ್. ನಂಜುಂಡಯ್ಯ, ಎನ್.ಪ್ರವೀಣ್ ಮತ್ತು ವಿಜಯ್ ಕುಮಾರ್ ಬ್ಯಾಂಕಿನಿಂದ ಸಾಲ ಪಡೆದಿದ್ದರು. ಆದರೆ, ಸಾಲ ಮರು ಪಾವತಿ ಮಾಡಲು ವಿಫಲವಾಗಿದ್ದರು' ಎಂದು ವಿವರಿಸಿದರು.

'ಶಾಲಾ ಕಟ್ಟಡದ ಜೊತೆಗೆ ತುಮಕೂರು ಜಿಲ್ಲೆಯ ಊಡಿಗೆರೆ ಗ್ರಾಮದ 10 ಎಕರೆಯನ್ನು ಸಾಲ ಮರುಪಾವತಿಗೆ ಭದ್ರತಾ ಖಾತರಿ ನೀಡಲಾಗಿದೆ. ಅರ್ಜಿದಾರರ ಪರ ಸಾಲದ ಮೊತ್ತ ₹ 9 ಕೋಟಿ ಆಗಿದೆ. ಬ್ಯಾಂಕಿನ ಪ್ರಕಾರ ₹ 10 ಕೋಟಿ ಸಾಲ ಮರು ಪಾವತಿ ಮಾಡಬೇಕಿದೆ. ತುಮಕೂರಿನ ಆಸ್ತಿಯು ಸುಮಾರು ₹ 15 ಕೋಟಿ ಬೆಲೆ ಬಾಳುತ್ತದೆ. ಆದರೆ, ಆ ಆಸ್ತಿಗೆ ಕಡಿಮೆ ಮೌಲ್ಯ ನಿಗದಿಪಡಿಸಲಾಗಿದೆ. ಆ ಸ್ಥಿರಾಸ್ತಿ ಮಾರಾಟ ಮಾಡಿ ಬಂದ ಹಣವನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಹರಾಜು ಪ್ರಕ್ರಿಯೆ ನಡೆಸಲು ಇದೇ 28ರಂದು ದಿನಾಂಕ ನಿಗದಿಪಡಿಸಲಾಗಿದೆ. ಹಾಗಾಗಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಲಾ ಕಾರ್ಯ ನಿರ್ವಹಣೆಗೆ ಅನುಮತಿ ನೀಡಬೇಕು' ಎಂದು ಕೋರಿದರು.

ಬ್ಯಾಂಕಿನ ಪರ ವಕೀಲರು, ನ್ಯಾಯಸಮ್ಮತ ಬೆಲೆಯನ್ನು ಅರಿಯಲು ಪೋಷಕರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ನ್ಯಾಯಪೀಠಕ್ಕೆ ವಿವರಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಧ್ಯಂತರ ಕ್ರಮಗಳನ್ನು ಸೂಚಿಸಿ ವಿಚಾರಣೆ ಮುಂದೂಡಿದೆ.

ವೃದ್ಧೆ ತಲೆಗೆ ಹೊಡೆದು ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆ ನೆಪದಲ್ಲಿ ಮನೆಯೊಂದಕ್ಕೆ ಹೋಗಿ ವೃದ್ಧೆ ತಲೆಗೆ ದೊಣ್ಣೆಯಿಂದ ಹೊಡೆದು ಚಿನ್ನಾಭರಣ ಸುಲಿಗೆ ಮಾಡಿದ್ದ ಆರೋಪಿ ಲಕ್ಷ್ಮಿ ಅಲಿಯಾಸ್ ಗಂಗಾ (38) ಅವರನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಲಕ್ಷ್ಮಿ, ಮೇ 25ರಂದು ಕೃತ್ಯ ಎಸಗಿ ಪರಾರಿಯಾಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಹಾಗೂ ಇತರೆ ತಾಂತ್ರಿಕ ಪುರಾವೆಗಳನ್ನು ಕಲೆಹಾಕಿ ಆರೋಪಿಯನ್ನು ಬಂಧಿಸಲಾಗಿದೆ. ₹ 80 ಸಾವಿರ ಮೌಲ್ಯದ 20 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಶಾಂತಮ್ಮ ಅವರು ಲಗ್ಗೆರೆ ಬಳಿಯ ಮನೆಯಲ್ಲಿ ಒಂಟಿಯಾಗಿ ವಾಸವಿದ್ದಾರೆ. ಬಾಡಿಗೆಗೆ ಕೆಲ ಮನೆಗಳನ್ನು ನೀಡಿದ್ದಾರೆ. ಅವರ ಮನೆಗೆ ಹೋಗಿದ್ದ ಆರೋಪಿ ಲಕ್ಷ್ಮಿ, 'ಬಾಡಿಗೆ ಮನೆ ಬೇಕಿದೆ' ಎಂದು ಮಾತನಾಡಿಸಿದ್ದರು. ಅದನ್ನು ನಂಬಿದ್ದ ಶಾಂತಮ್ಮ, ಮನೆಯೊಳಗೆ ಕರೆದೊಯ್ದು ಕೊಠಡಿಗಳನ್ನು ತೋರಿಸಿದ್ದರು.'

'ಮನೆ ಇಷ್ಟವಾಗಿದೆ. ಈಗಲೇ ಹಾಲು ಉಕ್ಕಿಸುತ್ತೇನೆ. ಠೇವಣಿ ಹಾಗೂ ಮುಂಗಡ ಬಾಡಿಗೆ ಕೊಡುತ್ತೇನೆ' ಎಂದಿದ್ದ ಲಕ್ಷ್ಮಿ, ಶಾಂತಮ್ಮ ಅವರನ್ನು ಮನೆಯ ಅಡುಗೆ ಕೋಣೆಗೆ ಕರೆದೊಯ್ದಿದ್ದರು. ಅಲ್ಲಿಯೇ ಶಾಂತಮ್ಮ ಅವರ ತಲೆಗೆ ದೊಣ್ಣೆಯಿಂದ ಹೊಡೆದಿದ್ದರು. ಕುಸಿದುಬಿದ್ದ ಶಾಂತಮ್ಮ ಅವರ ಚಿನ್ನದ ಸರವನ್ನು ಬಿಚ್ಚಿಕೊಂಡು ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು.

ವೃತ್ತಿಯಲ್ಲಿ ಶುಶ್ರೂಷಕಿ: 'ಬಂಧಿತ ಆರೋಪಿ ಲಕ್ಷ್ಮಿ, ಶುಶ್ರೂಷಕಿ ಎಂಬುದಾಗಿ ಗೊತ್ತಾಗಿದೆ. ಸಂಬಳ ಸಾಲದಿದ್ದರಿಂದ ಹೆಚ್ಚಿನ ಹಣ ಸಂಪಾದಿಸಲು ಆಸ್ಪತ್ರೆಗಳಲ್ಲಿ ರೋಗಿಗಳ ಆಭರಣ ಕದಿಯುತ್ತಿದ್ದರು. ಕಳ್ಳತನ ವೇಳೆ ಸಿಕ್ಕಿಬಿದ್ದಿದ್ದ ಲಕ್ಷ್ಮಿ ಅವರನ್ನು ಕೆಲಸದಿಂದ ತೆಗೆಯಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಒಂಟಿಯಾಗಿ ವಾಸವಿರುವ ವೃದ್ಧೆಯರು ಹಾಗೂ ಮಹಿಳೆಯರನ್ನು ಗುರಿಯಾಗಿಸಿಕೊಂಡು ಆರೋಪಿ ಕೃತ್ಯ ಎಸಗುತ್ತಿದ್ದರು. ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿ ಸುಲಿಗೆ ಮಾಡಿರುವ ಮಾಹಿತಿ ಇದೆ' ಎಂದರು.

ಪದಗಳ ಸೇರಿಸಿದರೆ ವಿಶ್ವಾಸಾರ್ಹತೆಗೆ ಕುಂದು: 'ಸುಪ್ರೀಂ'

ನವದೆಹಲಿ: 'ಕೊಲೆ ಪ್ರಕರಣದಲ್ಲಿ ಎಫ್‌ಐಆರ್ ಮಹತ್ವದ ದಾಖಲೆ. ಹೀಗಾಗಿ, ಎಫ್‌ಐಆರ್‌ನಲ್ಲಿ ಯಾವುದಾದರೂ ಪದ, ವಾಕ್ಯಗಳನ್ನು ಸೇರಿಸುವುದರಿಂದ ಅದು ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತದೆ ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ವಿ.ರಾಮಸುಬ್ರಮಣಿಯನ್ ಹಾಗೂ ರಾಜೇಶ್ ಬಿಂದಲ್ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

1995ರಲ್ಲಿ ಉತ್ತರಾಖಂಡದ ರೂರ್ಕಿಯಲ್ಲಿ ನಡೆದಿದ್ದ ಅಲ್ತಾಫ್ ಹುಸೇನ್ ಎಂಬುವವರ ಕೊಲೆ ಪ್ರಕರಣದಲ್ಲಿ ಮೊಹ್ಮದ್ ಮುಸ್ಲಿಂ ಅವರನ್ನು ಆರೋಪ ಮುಕ್ತಗೊಳಿಸಿ ನ್ಯಾಯಪೀಠ ಆದೇಶಿಸಿತು.

ಈ ಪ್ರಕರಣದಲ್ಲಿ, ಮೊಹ್ಮದ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದನ್ನು ಎತ್ತಿ ಹಿಡಿದು 2010ರ ಸೆಪ್ಟೆಂಬರ್‌ನಲ್ಲಿ ಹೈಕೋರ್ಟ್ ನೀಡಿದ್ದ ತೀರ್ಪನ್ನು ನ್ಯಾಯಪೀಠ ರದ್ದುಗೊಳಿಸಿತು.

ಮತಾಂತರ ನಿಷೇಧ ಕಾಯ್ದೆ ರದ್ದು: ಆರ್ಚ್ ಬಿಷಪ್ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು ಕಾಯ್ದೆ–2021 (ಮತಾಂತರ ನಿಷೇಧ ಕಾಯ್ದೆ) ರದ್ದುಗೊಳಿಸಿರುವ ರಾಜ್ಯ ಸರ್ಕಾರದ ತೀರ್ಮಾನವನ್ನು ಸ್ವಾಗತಿಸುವುದಾಗಿ ಬೆಂಗಳೂರಿನ ಆರ್ಚ್ ಬಿಷಪ್ ಪೀಟರ್ ಮಚಾದೊ ತಿಳಿಸಿದ್ದಾರೆ.

ವ್ಯಕ್ತಿಗಳ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವುದರ ಪ್ರಾಮುಖ್ಯದ ಕುರಿತು ಅನೇಕ ವ್ಯಕ್ತಿಗಳು ಹಾಗೂ ಪ್ರಗತಿಪರ ಸಂಘಟನೆಗಳು ವ್ಯಕ್ತಪಡಿಸಿದ್ದ ಅಭಿಪ್ರಾಯವನ್ನು ಸರ್ಕಾರ ಪರಿಗಣಿಸಿರುವುದು ಸ್ವಾಗತಾರ್ಹ ಹೆಜ್ಜೆ. ಈ ಕಾಯ್ದೆಯು ವ್ಯಕ್ತಿಗಳ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿತ್ತು ಎಂದು ಹೇಳಿದ್ದಾರೆ.

ಸಂವಿಧಾನದ 25ನೇ ಅನುಚ್ಛೇದದಲ್ಲಿ ನೀಡಿಲಾಗಿರುವ ಇಷ್ಟದ ಧರ್ಮವನ್ನು ಅನುಸರಿಸುವ ಹಾಗೂ ಅದನ್ನು ಪ್ರಚಾರ ಮಾಡುವ ಹಕ್ಕುಗಳ ವಿರುದ್ಧವೂ ಇತ್ತು. ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಜಾರಿಗೆ ತಂದಿದ್ದ ಈ ಕಾಯ್ದೆಯಿಂದಾಗಿ ದೇಶದ ವಿವಿಧ ಭಾಗಗಳಲ್ಲಿ ಕ್ರೈಸ್ತರ ಮೇಲೆ ದಾಳಿ ಮಾಡುವಂತೆ ಪ್ರೇರೇಪಿಸಿತ್ತು ಎಂದು ಕರ್ನಾಟಕ ಪ್ರಾಂತ್ಯ ಕಥೋಲಿಕ ಧರ್ಮಾಧ್ಯಕ್ಷರ ಮಂಡಳಿ, ಅಖಿಲ ಕರ್ನಾಟಕ ಕ್ರೈಸ್ತ ಮಾನವ ಹಕ್ಕುಗಳ ಒಕ್ಕೂಟ ವೇದಿಕೆ ಅಧ್ಯಕ್ಷರೂ ಆಗಿರುವ ಅವರು ತಿಳಿಸಿದ್ದಾರೆ.

ಜಿಹಾದಿ ಚಟುವಟಿಕೆಯಲ್ಲಿ ಭಾಗಿ

ಆರೋಪಿಗೆ ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರರ ಅಂಗಸಂಸ್ಥೆ ಎನಿಸಿದ ಅಲ್ ಹಿಂದ್ ಗುಂಪಿನ ಸದಸ್ಯನಾಗಿ 2015ರಿಂದಲೂ ದೇಶವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದ ಮತ್ತು ಬೆಂಗಳೂರು ನಗರದಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಹಣ ಸಂಗ್ರಹಿಸುತ್ತಿದ್ದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ನಗರದ ವ್ಯಕ್ತಿಯೊಬ್ಬರಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ಈ ಕುರಿತಂತೆ ನಗರದ ಜಬೀವುಲ್ಲಾ ಅಲಿಯಾಸ್ ಜಬೀವುಲ್ಲಾ ಎಂಬ ಸುದ್ದುಗುಂಟೆ ಪಾಳ್ಯದ ನಿವಾಸಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ತಿರಸ್ಕರಿಸಿದ್ದು, ಕಾಯ್ದಿರಿಸಿದ್ದ ಆದೇಶವನ್ನು ಗುರುವಾರ ಪ್ರಕಟಿಸಿದೆ.

ಎನ್‌ಐಎ ಪರ ವಾದ ಮಂಡಿಸಿದ್ದ ಪಿ.ಪ್ರಸನ್ನ ಕುಮಾರ್, 'ಆರೋಪಿಯು ಸುದ್ದುಗುಂಟೆ ಪಾಳ್ಯದಲ್ಲಿನ ತನ್ನ ಮನೆಯಲ್ಲಿ ತಡ ರಾತ್ರಿಗಳಲ್ಲಿ ಅಲ್ ಹಿಂದ್ ಗುಂಪಿನ ಸದಸ್ಯರಿಗೆ ಜಿಹಾದಿ ಚಟುವಟಿಕೆ ನಡೆಸುತ್ತಿದ್ದ. ಅವರಿಗಾಗಿ ಆಗಾಗ್ಗೆ ಸಮರ ಕಲೆಯ ತರಗತಿಗಳನ್ನು ಹಮ್ಮಿಕೊಳ್ಳುತ್ತಿದ್ದ. ಈತ ಪಿಸ್ತೂಲ್, ಬಿಲ್ಲು ಬಾಣಗಳ ಬಳಕೆಯ ವಿದ್ಯೆಯನ್ನೂ ಕಲಿತಿದ್ದ. ಪ್ರಕರಣದ ಮೊದಲ ಆರೋಪಿ ಮೊಹಮದ್ ಪಾಶಾಗೆ ಬೆಂಗಳೂರಿನಿಂದ ಹಣ ಸಂಗ್ರಹಿಸಿ ರವಾನಿಸುತ್ತಿದ್ದ. ಈತನ ವಿರುದ್ಧದ ಆರೋಪಗಳು ಗಂಭೀರವಾಗಿವೆ. ಹಾಗಾಗಿ, ಜಾಮೀನು ಮಂಜೂರು ಮಾಡಬಾರದು' ಎಂದು ಮನವಿ ಮಾಡಿದ್ದರು. ನ್ಯಾಯಪೀಠ ಎನ್‌ಐಎ ವಾದವನ್ನು ಎತ್ತಿ ಹಿಡಿದಿದೆ.

ಬೆಂಗಳೂರು ನಗರದಲ್ಲಿ ಐಎಸ್‌ನ ಅನೈತಿಕ ಚಟುವಟಿಕೆಗಳನ್ನು ವಿಸ್ತರಿಸುವ ಮತ್ತು ಇಲ್ಲಿನ ಹಿಂದೂ ನಾಯಕರನ್ನು ಹತ್ಯೆಮಾಡುವ, ಅಶಾಂತಿ ಉಂಟು ಮಾಡಿ ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸಲು ಸಂಚುಗಳನ್ನು ರೂಪಿಸುವ ಆರೋಪದಡಿ ದಾಖಲಿಸಲಾಗಿರುವ ಈ ಪ್ರಕರಣದಲ್ಲಿ ಜಬೀವುಲ್ಲಾ 16ನೇ ಆರೋಪಿ.

ಈ ಮೊದಲು ನಗರದ ಎನ್‌ಐಎ ವಿಶೇಷ ನ್ಯಾಯಾಲಯ ಆರೋಪಿಯ ಜಾಮೀನು ಅರ್ಜಿ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿತ್ತು. ಆರೋಪಿಯ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ-1967ರ (ಯುಎಪಿಎ) ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

82 ಕ್ಯಾಬ್‌ಗಳಿಗೆ ₹ 1.16 ಲಕ್ಷ ದಂಡ

ಪ್ರಜಾವಾಣಿ ವಾರ್ತೆ



ದಂಡ ಪಾವತಿಸಿದ ಯುರೋ ಕಂಪನಿ ಪ್ರತಿನಿಧಿಗೆ ಇನ್‌ಸ್ಪೆಕ್ಟರ್ ಅವರು ರಶೀದಿ ನೀಡಿದರು

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ್ದ 'ಯೂರೋ ಕ್ಯಾಬ್ಸ್' ಕಂಪನಿ ಜೋಡಣೆಯ 82 ಕ್ಯಾಬ್‌ಗಳಿಗೆ ₹ 1.16 ಲಕ್ಷ ದಂಡ ವಿಧಿಸಲಾಗಿದೆ.

ಹೆಣ್ಣೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದ ಕ್ಯಾಬ್‌ಗಳನ್ನು ತಪಾಸಣೆ ನಡೆಸಿದ್ದ ಪೊಲೀಸರು, ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಮಾಡಿದ್ದರು. ಇದಾದ ನಂತರ, ಕಂಪನಿಯ ಎಲ್ಲ ಕ್ಯಾಬ್‌ಗಳ ಮಾಹಿತಿ ಪಡೆದು ಪರಿಶೀಲಿಸಿದ್ದರು.

ಕಂಪನಿಯ 82 ಕ್ಯಾಬ್‌ಗಳ ಮೇಲೆ ಪ್ರಕರಣಗಳು ಬಾಕಿ ಇರುವುದು ಗೊತ್ತಾಗಿತ್ತು. ಹೀಗಾಗಿ, ಪೊಲೀಸರು ಕಂಪನಿಯ ಆಡಳಿತ ಮಂಡಳಿಗೆ ನೋಟಿಸ್ ನೀಡಿದ್ದರು. ನೋಟಿಸ್ ಸಮೇತ ಠಾಣೆಗೆ ಬಂದಿದ್ದ ಕಂಪನಿ ಪ್ರತಿನಿಧಿಗಳು, ₹ 1.16 ಲಕ್ಷ ದಂಡ ಪಾವತಿಸಿ ರಶೀದಿ ಪಡೆದುಕೊಂಡಿದ್ದಾರೆ.

ನೇಮಕಾತಿ: ಎಸ್‌ಐಟಿ ತನಿಖೆಗೆ ಸಚಿವರ ಒತ್ತಾಯ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಹಗರಣಗಳ ಬಗ್ಗೆ ಎಸ್‌ಐಟಿ ತನಿಖೆ ನಡೆಸುವಂತೆ ಸಚಿವ ಸಂಪುಟ ಸಭೆಯಲ್ಲಿ ಕೆಲವು ಸಚಿವರು ಒತ್ತಾಯಿಸಿದ್ದು, ಈ ಬಗ್ಗೆ ಮುಂದಿನ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

'ಚುನಾವಣೆಗೆ ಮುನ್ನ ಈ ವಿಷಯವನ್ನು ಪ್ರಸ್ತಾಪಿಸಿಕೊಂಡು ಬಂದಿದ್ದೇವೆ. ಈಗ ನಾವು ತನಿಖೆ ನಡೆಸದೇ ಇದ್ದರೆ ಹೊಂದಾಣಿಕೆ ರಾಜಕೀಯ ಮಾಡಿದ್ದೇವೆ ಎಂದು ಜನರು ಭಾವಿಸುತ್ತಾರೆ. ಆದ್ದರಿಂದ ಈ ಬಗ್ಗೆ ವಿಶೇಷ ತನಿಖಾ ತಂಡವನ್ನು ರಚಿಸಿ ತನಿಖೆ ನಡೆಸಬೇಕು' ಎಂದು ಹಲವು ಸಚಿವರು ಒತ್ತಾಯಿಸಿದರು.

ಈ ವಿಷಯದ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರೆಂದು ಮೂಲಗಳು ಹೇಳಿವೆ.

ಗುಂಡೇಟಿನಿಂದಾಗಿ ಮೂವರ ಸಾವು

ಕೋಲ್ಕತ್ತ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಪಶ್ಚಿಮ ಬಂಗಾಳ ಪಂಚಾಯಿತಿ ಚುನಾವಣೆಯ ನಾಮಪತ್ರ ಸಲ್ಲಿಕೆ ವೇಳೆ ವಿವಿಧೆಡೆ ಹಿಂಸಾಚಾರ ಭುಗಿಲೆದ್ದಿದ್ದು, ಗುಂಡೇಟಿಗೆ ಮೂವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗೋರ್‌ನಲ್ಲಿ ಇಬ್ಬರನ್ನು ಹಾಗೂ ಉತ್ತರ ದಿನಜ್‌ಪುರ ಜಿಲ್ಲೆಯ ಛೋಪ್ರಾದಲ್ಲಿ ಯುವಕರೊಬ್ಬರನ್ನು ದುಷ್ಕರ್ಮಿಗಳು ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ ಎಂದೂ ತಿಳಿಸಿದ್ದಾರೆ.

ರಾಜ್ಯದ ವಿವಿಧೆಡೆ ಹಿಂಸಾಚಾರ ನಡೆದಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಪೊಲೀಸರು ಹೇಳಿದ್ದಾರೆ.

ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುವ ಮೂಲಕ ವಿರೋಧ ಪಕ್ಷಗಳು ರಾಜ್ಯದಲ್ಲಿ ಶಾಂತಿ ಕದಡಲು ಪ್ರಯತ್ನಿಸುತ್ತಿವೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

'ಹೈಬ್ರಿಡ್' ಏಷ್ಯಾ ಕಪ್ ಆ. 31ರಿಂದ

ವೇಳಾಪಟ್ಟಿ ಪ್ರಕಟಿಸಿದ ಎಸಿಸಿ, ಪಾಕಿಸ್ತಾನದಲ್ಲಿ 4, ಶ್ರೀಲಂಕಾದಲ್ಲಿ 9 ಪಂದ್ಯಗಳು



ಮುಖ್ಯಾಂಶಗಳು

- ಪಾಕಿಸ್ತಾನ, ಶ್ರೀಲಂಕಾದಲ್ಲಿ ಪಂದ್ಯಗಳ ಆಯೋಜನೆ
- ತಟಸ್ಥ ತಾಣಗಳಲ್ಲಿ ಪಂದ್ಯ ಆಡಲಿರುವ ಭಾರತ ತಂಡ
- ಟೂರ್ನಿಯಲ್ಲಿ 13 ಏಕದಿನ ಪಂದ್ಯಗಳು ನಡೆಯಲಿವೆ

ನವದೆಹಲಿ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯನ್ನು ಆಗಸ್ಟ್ 31ರಿಂದ ಸೆಪ್ಟೆಂಬರ್ 17ರವರೆಗೆ 'ಹೈಬ್ರಿಡ್ ಮಾದರಿ'ಯಲ್ಲಿ ಆಯೋಜಿಸಲಾಗುವುದು.

ಏಷ್ಯಾ ಕ್ರಿಕೆಟ್ ಕೌನ್ಸಿಲ್ ಗುರುವಾರ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಇದರೊಂದಿಗೆ ಈ ಟೂರ್ನಿ ಆಯೋಜನೆಯ ಕುರಿತು ಕಳೆದ ಕೆಲವು ತಿಂಗಳುಗಳಿಂದ ನಡೆದಿದ್ದ ಚರ್ಚೆಗಳಿಗೆ ತೆರೆ ಬಿದ್ದಿದೆ. ಪಾಕಿಸ್ತಾನದ ಆತಿಥ್ಯದಲ್ಲಿ ಈ ಟೂರ್ನಿಯನ್ನು ಆಯೋಜಿಸಲು ಈ ಮೊದಲೇ ನಿರ್ಧರಿಸಲಾಗಿತ್ತು.

ಆದರೆ ರಾಜತಾಂತ್ರಿಕ ಬಿಕ್ಕಟ್ಟುಗಳಿಂದಾಗಿ ಭಾರತವು ಪಾಕಿಸ್ತಾನಕ್ಕೆ ಹೋಗಿ ಪಂದ್ಯಗಳನ್ನು ಆಡಲು ಸಾಧ್ಯವಿಲ್ಲವೆಂದು ಘೋಷಿಸಿತ್ತು. ಅದಕ್ಕೆ ಪ್ರತಿಯಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯೂ ಕೂಡ ಭಾರತದಲ್ಲಿ ಇದೇ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸುವುದಿಲ್ಲವೆಂದೂ ಹೇಳಿತ್ತು.

ನಂತರ ಪಿಸಿಬಿಯೇ ಹೈಬ್ರಿಡ್ ಮಾದರಿಯ ಪ್ರಸ್ತಾವ ಸಲ್ಲಿಸಿತ್ತು. ಅದರ ಪ್ರಕಾರ ಭಾರತವು ಏಷ್ಯಾಕಪ್ ಟೂರ್ನಿಯ ತನ್ನ ಪಾಲಿನ ಪಂದ್ಯಗಳನ್ನು ತಟಸ್ಥ ತಾಣದಲ್ಲಿ ಆಡಲಿದೆ.

'ಏಷ್ಯಾ ಕಪ್ ಟೂರ್ನಿಯು ಆ. 31ರಿಂದ ಸೆ 17ರವರೆಗೆ ನಡೆಯಲಿದೆ ಎಂದು ಘೋಷಿಸಲು ಹರ್ಷಿಸುತ್ತೇವೆ. ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ಅಫ್ಗಾನಿಸ್ತಾನ ಮತ್ತು ನೇಪಾಳ ತಂಡಗಳು ಸ್ಪರ್ಧಿಸಲಿವೆ. ಒಟ್ಟು 13 ಏಕದಿನ ಪಂದ್ಯಗಳು ನಡೆಯಲಿವೆ. ಟೂರ್ನಿಯ ನಾಲ್ಕು ಪಂದ್ಯಗಳು ಮಾತ್ರ ಪಾಕಿಸ್ತಾನದಲ್ಲಿ ನಡೆಯಲಿವೆ. ಉಳಿದ ಒಂಬತ್ತು ಪಂದ್ಯಗಳು ಶ್ರೀಲಂಕಾದಲ್ಲಿ ಆಯೋಜನೆಗೊಳ್ಳುತ್ತವೆ' ಎಂದು ಎಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಬಾರಿಯ ಆವೃತ್ತಿಯಲ್ಲಿ ಎರಡು ಗುಂಪುಗಳಲ್ಲಿ ಪಂದ್ಯಗಳು ನಡೆಯಲಿವೆ. ಪ್ರತಿ ಗುಂಪಿನಿಂದ ಎರಡು ತಂಡಗಳು ಸೂಪರ್ ಫೋರ್ ಹಂತಕ್ಕೆ ಪ್ರವೇಶಿಸಲಿವೆ. ಈ ಹಂತದಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳೂ ಫೈನಲ್‌ನಲ್ಲಿ ಮುಖಾಮುಖಿಯಾಗುತ್ತವೆ.

ಒಂದು ಗುಂಪಿನಲ್ಲಿ ಭಾರತ, ಪಾಕಿಸ್ತಾನ ಹಾಗೂ ನೇಪಾಳ ತಂಡಗಳಿವೆ. ಇನ್ನೊಂದರಲ್ಲಿ ಶ್ರೀಲಂಕಾ, ಬಾಂಗ್ಲಾ ಮತ್ತು ಅಫ್ಗಾನಿಸ್ತಾನ ಇವೆ.

ಪಾಕಿಸ್ತಾನದ ಲಾಹೋರ್, ಶ್ರೀಲಂಕಾದ ಕ್ಯಾಂಡಿ ಮತ್ತು ಪಲೆಕೆಲೆಯಲ್ಲಿ ಪಂದ್ಯಗಳನ್ನು ನಡೆಸಲಾಗುವುದು.

ಹೋದ ತಿಂಗಳು ಐಸಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೆಫ್ ಅಲಾರ್ಡಿಸ್ ಅವರು ಕರಾಚಿಯಲ್ಲಿ ಪಿಸಿಬಿ ಮುಖ್ಯಸ್ಥ ನಜಾಂ ಸೇಥಿ ಅವರೊಂದಿಗೆ ಮಾತುಕತೆ ನಡೆಸಿದ್ದರು. ಪಾಕಿಸ್ತಾನವು ಬೇಷರತ್ ಆಗಿ ಏಷ್ಯಾಕಪ್ ಆಯೋಜಿಸುವ ಭರವಸೆ ಪಡೆದಿದ್ದರು. ಇದರೊಂದಿಗೆ ಪಾಕ್ ತಂಡವು ಅಕ್ಟೋಬರ್ – ನವೆಂಬರ್‌ನಲ್ಲಿ ಭಾರತದಲ್ಲಿ ನಡೆಯುವ ವಿಶ್ವಕಪ್ ಟೂರ್ನಿಯಲ್ಲಿ ಆಡುವುದು ಖಚಿತವಾಗಿದೆ.

ಆ್ಯಶಸ್ ಟೆಸ್ಟ್ ಸರಣಿ ಇಂದಿನಿಂದ, ಕಮಿನ್ಸ್, ಸ್ಟೋಕ್ಸ್ ಮುಖಾಮುಖಿ

ಆಸ್ಟ್ರೇಲಿಯಾಕ್ಕೆ ಇಂಗ್ಲೆಂಡ್ ಸವಾಲು



ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಮತ್ತು ಕೋಚ್ ಬ್ರೆಂಡನ್ ಮೆಕ್ಲಮ್ ಸಮಾಲೋಚನೆ –ಎಎಫ್‌ಪಿ ಚಿತ್ರ

ಕಳೆದ ಐದು ಸರಣಿಗಳ ಫಲಿತಾಂಶ

ವರ್ಷ	ಆತಿಥ್ಯ	ವಿಜೇತ
2013-14	ಆಸ್ಟ್ರೇಲಿಯಾ	ಆಸ್ಟ್ರೇಲಿಯಾ
2015	ಇಂಗ್ಲೆಂಡ್	ಇಂಗ್ಲೆಂಡ್
2017-18	ಆಸ್ಟ್ರೇಲಿಯಾ	ಆಸ್ಟ್ರೇಲಿಯಾ
2019	ಇಂಗ್ಲೆಂಡ್	ಡ್ರಾ
2021-22	ಆಸ್ಟ್ರೇಲಿಯಾ	ಆಸ್ಟ್ರೇಲಿಯಾ

ಲಂಡನ್ (ಎಎಫ್‌ಪಿ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಕಿರೀಟ ಧರಿಸಿ ಬೀಗುತ್ತಿರುವ ಆಸ್ಟ್ರೇಲಿಯಾ ತಂಡವು ಶುಕ್ರವಾರದಿಂದ ಆರಂಭವಾಗಲಿರುವ ಆ್ಯಶಸ್ ಸರಣಿಯ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಹೋದ ವಾರವಷ್ಟೇ ದ ಓವಲ್ ಕ್ರೀಡಾಂಗಣದಲ್ಲಿ ನಡೆದಿದ್ದ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾ ತಂಡವು ಭಾರತ ತಂಡವನ್ನು ಮಣಿಸಿತ್ತು. ಇದೀಗ ಟೆಸ್ಟ್ ಕ್ರಿಕೆಟ್ ಇತಿಹಾಸದ ಅತ್ಯಂತ ಹಳೆಯ ಹಾಗೂ ಪ್ರತಿಷ್ಠಿತ ಟೂರ್ನಿಯಾಗಿರುವ ಆ್ಯಶಸ್ ಸರಣಿಯಲ್ಲಿ ಜಿದ್ದಾಜಿದ್ದಿ ನಡೆಸಲಿದೆ.

ಆಸ್ಟ್ರೇಲಿಯಾ ತಂಡವು ಹೋದ ವರ್ಷವೂ ಆ್ಯಶಸ್ ಗೆದ್ದಿತ್ತು. ಆದರೆ ಇಂಗ್ಲೆಂಡ್ ತಂಡವು 2015ರಲ್ಲಿ ಗೆದ್ದ ನಂತರ ಇದುವರೆಗೆ ಜಯಿಸಲು ಸಾಧ್ಯವಾಗಿಲ್ಲ. 2019ರಲ್ಲಿ ಸರಣಿ ಡ್ರಾ ಮಾಡಿಕೊಂಡಿತ್ತು.

ಈ ಬಾರಿ ಮುಖ್ಯ ಕೋಚ್ ಬ್ರೆಂಡನ್ ಮೆಕ್ಲಮ್ ಅವರ 'ಬೇಜ್‌ಬಾಲ್' ಶೈಲಿಯೊಂದಿಗೆ ಕಣಕ್ಕಿಳಿಯಲಿರುವ ಬೆನ್ ಸ್ಟೋಕ್ಸ್ ಬಳಗವು ಈ ಬಾರಿ ಟ್ರೋಫಿ ಜಯಿಸುವ ಛಲದಲ್ಲಿದೆ. ಮಧ್ಯಮ ಕ್ರಮಾಂಕದಲ್ಲಿ ಅಬ್ಬರಿಸುವ ಹ್ಯಾರಿ ಬ್ರೂಕ್ ತಮ್ಮ ಲಯಕ್ಕೆ ಮರಳಿದರೆ ಬ್ಯಾಟಿಂಗ್ ಬಲ ಇನ್ನಷ್ಟು ಹೆಚ್ಚಲಿದೆ. ಆಸ್ಟ್ರೇಲಿಯಾ ತಂಡದಲ್ಲಿ ಅಮೋಘ ಲಯದಲ್ಲಿರುವ ಸ್ಟೀವ್ ಸ್ಮಿತ್, ಟ್ರಾವಿಸ್ ಹೆಡ್, ಅಲೆಕ್ಸ್ ಕ್ಯಾರಿ ಅವರನ್ನು ಕಟ್ಟಿಹಾಕುವ ಸವಾಲು ಆತಿಥೇಯ ಬೌಲರ್‌ಗಳ ಮುಂದಿದೆ.

ಡೇವಿಡ್ ವಾರ್ನರ್ ಮತ್ತು ಉಸ್ಮಾನ್ ಖ್ವಾಜಾ ಅವರು ಲಯದಲ್ಲಿ ಇಲ್ಲದಿರುವುದು ಆಸ್ಟ್ರೇಲಿಯಾದ ಚಿಂತೆಯಾಗಿದೆ.

ಇಂಗ್ಲೆಂಡ್ ತಂಡದ ಅನುಭವಿ ಜಿಮ್ಮಿ ಆ್ಯಂಡರ್ಸನ್, ಸ್ಟುವರ್ಟ್ ಬ್ರಾಡ್ ಹಾಗೂ ಕ್ರಿಸ್ ವೋಕ್ಸ್ ಅವರು ಕಮಿನ್ಸ್ ಬಳಗದ ಬ್ಯಾಟಿಂಗ್ ಪಡೆಗೆ ಕಠಿಣ ಸವಾಲೊಡ್ಡುವ ಛಲದಲ್ಲಿದ್ದಾರೆ.

ತಂಡಗಳು: ಇಂಗ್ಲೆಂಡ್: ಬೆನ್ ಸ್ಟೋಕ್ಸ್ (ನಾಯಕ), ಜಾನಿ ಬೆಸ್ಟೊ (ವಿಕೆಟ್‌ಕೀಪರ್), ಬೆನ್ ಡಕೆಟ್, ಜ್ಯಾಕ್ ಕ್ರಾಲಿ, ಒಲೀ ಪೋಪ್, ಜೋ ರೂಟ್, ಹ್ಯಾರಿ ಬ್ರೂಕ್, ಮೋಯಿನ್ ಅಲಿ, ಸ್ಟುವರ್ಟ್ ಬ್ರಾಡ್, ಒಲೀ ರಾಬಿನ್ಸನ್, ಜೇಮ್ಸ್ ಆ್ಯಂಡರ್ಸನ್, ಡೇನಿಯಲ್ ಲಾರೆನ್ಸ್, ಜೋಶ್ ಟಂಗ್, ಮ್ಯಾಥ್ಯೂ ಪಾಟ್ಸ್, ಮಾರ್ಕ್ ವುಡ್, ಕ್ರಿಸ್ ವೋಕ್ಸ್.

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಡೇವಿಡ್ ವಾರ್ನರ್, ಉಸ್ಮಾನ್ ಖ್ವಾಜಾ, ಮಿಚೆಲ್ ಮಾರ್ಷ್, ಸ್ಟೀವನ್ ಸ್ಮಿತ್, ಟ್ರಾವಿಸ್ ಹೆಡ್, ಕ್ಯಾಮರಾನ್ ಗ್ರೀನ್, ಮಾರ್ನಸ್ ಲಾಬುಷೇನ್, ಅಲೆಕ್ಸ್ ಕ್ಯಾರಿ (ವಿಕೆಟ್‌ಕೀಪರ್), ಮಿಚೆಲ್ ಸ್ಟಾರ್ಕ್, ನೇಥನ್ ಲಯನ್, ಜೋಶ್ ಹ್ಯಾಜಲ್‌ವುಡ್, ಸ್ಕಾಟ್ ಬೋಲಾಂಡ್, ಟಾಡ್ ಮರ್ಫಿ, ಜೋಶ್ ಇಂಗ್ಲಿಸ್, ಮ್ಯಾಟ್ ರೆನ್‌ಷಾ ಮಾರ್ಕಸ್ ಹ್ಯಾರಿಸ್

ಪಂದ್ಯ ಆರಂಭ: ಮಧ್ಯಾಹ್ನ 3.30

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಟೆನಿಸ್: ಫೈನಲ್‌ಗೆ ಶ್ರೇಯಾಂತ್, ಆರುಷ್



ಕಶ್ವಿ ಸುನೀಲ್

ಮಂಡ್ಯ: ಕರ್ನಾಟಕದ ಶ್ರೇಯಾಂತ್ ಮತ್ತು ಆರುಷ್ ಕೋಟೆ, ಇಲ್ಲಿನ ಪಿಇಟಿ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಅಖಿಲ ಭಾರತ (16 ವರ್ಷದೊಳಗಿನವರ) ರ‍್ಯಾಂಕಿಂಗ್ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್ ಫೈನಲ್ ಪ್ರವೇಶಿಸಿದರು. ಬಾಲಕಿಯರ ವಿಭಾಗದ ಸಿಂಗಲ್ಸ್ ಪ್ರಶಸ್ತಿಗಾಗಿ ಕರ್ನಾಟಕದ ಕಶ್ವಿ ಸುನೀಲ್, ಕೇರಳದ ನೇಹಲ್ ಮರಿಯಾ ಮ್ಯಾಥ್ಯು ವಿರುದ್ಧ ಆಡಲಿದ್ದಾರೆ.

ಪಿಇಟಿ ಟೆನಿಸ್ ಕಪ್‌ಗಾಗಿ ಟಾಪ್ ಸರ್ವ್ ಟೆನಿಸ್ ಅಕಾಡೆಮಿ ಆಶ್ರಯದಲ್ಲಿ ನಡೆಯುತ್ತಿರುವ ಈ ಟೂರ್ನಿಯ ಫೈನಲ್ ಪಂದ್ಯಗಳು ಶುಕ್ರವಾರ ನಡೆಯಲಿವೆ.

ಬಾಲಕರ ಸಿಂಗಲ್ಸ್ ಸೆಮಿಫೈನಲ್ ಪಂದ್ಯಗಳಲ್ಲಿ ಗುರುವಾರ ಎರಡನೇ ಶ್ರೇಯಾಂಕದ ಶ್ರೇಯಾಂತ್ 7-6 (5), 7-5 ರಿಂದ ನಾಲ್ಕನೇ ಶ್ರೇಯಾಂಕದ ಶರಣ್ ಸೊಮಾಸಿ ವಿರುದ್ಧ, ಆರುಷ್ 6-3, 6-1 ರಿಂದ ನಿಹಾರ್ ಸುರೇಶ್ ಕುಮಾರ್ ವಿರುದ್ಧ ಗೆಲುವನ್ನು ದಾಖಲಿಸಿದರು.

ಬಾಲಕಿಯರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಶ್ರೇಯಾಂಕ ರಹಿತ ಆಟಗಾರ್ತಿ ಕಶ್ವಿ ಸುನೀಲ್ 6-0, 6-2 ರಿಂದ ಏಳನೇ ಶ್ರೇಯಾಂಕದ ಗೌರಿ ಎಲಿ ವಿರುದ್ಧ 6-0, 6-2 ರಿಂದ, ಎರಡನೇ ಶ್ರೇಯಾಂಕದ ನೇಹಲ್ 6-3, 6-4 ರಿಂದ ನಯನಾ ಪಾರ್ಥಸಾರಥಿ ವಿರುದ್ಧ ಜಯ ಗಳಿಸಿದರು.

ಶ್ರೇಯಾಂತ್ – ನಿಖಿತ್ ಜೋಡಿ ಬಾಲಕರ ಡಬಲ್ಸ್ ಫೈನಲ್‌ನಲ್ಲಿ ಚನ್ನಮಲ್ಲಿಕಾರ್ಜುನ– ಆರುಷ್ ಕೋಟೆ ಜೋಡಿಯನ್ನು ಎದುರಿಸಲಿದೆ. ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಕಶ್ವಿ ಸುನೀಲ್– ಉನ್ನತಿ ಜೋಡಿ, ಅದಿತಿ ಖಾನಾಪುರೆ– ತೀಕ್ಷ್ಣಾ ನಾಗೇಂದ್ರ ಜೋಡಿಯನ್ನು ಎದುರಿಸಲಿದೆ.



ರೊನಾಲ್ಡೊ ಸಿಂಗ್

ಸೈಕ್ಲಿಂಗ್: ರೊನಾಲ್ಡೊ ಸಿಂಗ್ ದಾಖಲೆ

ನವದೆಹಲಿ (ಪಿಟಿಐ): ಭಾರತದ ಸೈಕ್ಲಿಸ್ಟ್ ರೊನಾಲ್ಡೊ ಸಿಂಗ್ ಲೈತೊಂಜಾಮ್ ಅವರು ಮಲೇಷ್ಯಾದ ನಿಯಾಲಿಯಲ್ಲಿ ನಡೆಯುತ್ತಿರುವ ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ.

ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ (ಟಾಪ್ಸ್) ಯೋಜನೆಯಲ್ಲಿ ಸ್ಥಾನ ಪಡೆದಿರುವ ರೊನಾಲ್ಡೊ ಅವರು ಪುರುಷರ ಆರ್16 ಸ್ಪ್ರಿಂಟ್‌ನಲ್ಲಿ ಅವರು 9.877 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ ರಾಷ್ಟ್ರೀಯ ದಾಖಲೆ ಬರೆದರು.

'ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಸ್ಪ್ರಿಂಟ್ ಕ್ವಾಲಿಫಿಕೇಷನ್‌ನಲ್ಲಿ ರೊನಾಲ್ಡೊ ಅವರು ದಾಖಲೆ ಬರೆದಿದ್ದಾರೆ. ಇಲ್ಲಿ ಹತ್ತನೇ ಸ್ಥಾನ ಪಡೆದಿದ್ದಾರೆ' ಎಂದು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಟ್ವೀಟ್ ಮಾಡಿದೆ. ಮಣಿಪುರದ 21 ವರ್ಷದ ರೊನಾಲ್ಡೊ ಹೋದ ಆವೃತ್ತಿಯ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.



ಕರ್ನಾಟಕದ ಎನ್. ಏಕಾಂಶ್ ಕುಮಾರ್ (ಮಧ್ಯದಲ್ಲಿ ಇರುವವರು) ಭಾರತ ರೋಲರ್ ಸ್ಕೇಟಿಂಗ್ ಫೆಡರೇಷನ್ ಈಚೆಗೆ ರಾಂಚಿಯಲ್ಲಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್ ಷಿಪ್‌ನಲ್ಲಿ ಮೂರು ಚಿನ್ನ ಸೇರಿದಂತೆ ನಾಲ್ಕು ಪದಕ ಗೆದ್ದಿದ್ದಾರೆ.

ವರುಣ್ ತೋಮರ್‌ಗೆ ಚಿನ್ನ

ಭೋಪಾಲ್: ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಪದಕ ವಿಜೇತ ಶೂಟರ್ ವರುಣ್ ತೋಮರ್ ಇಲ್ಲಿ ನಡೆಯುತ್ತಿರುವ ಕುಮಾರ್ ಸುರೇಂದ್ರ ಸಿಂಗ್ ಸ್ಮಾರಕ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಗುರುವಾರ ಚಿನ್ನ ಗೆದ್ದರು.

ಫೈನಲ್ ಸುತ್ತಿನಲ್ಲಿ ಉತ್ತರಪ್ರದೇಶದ ವರುಣ್ 241.9 ಪಾಯಿಂಟ್ಸ್ ಸಂಪಾದಿಸಿ ಪ್ರಥಮರಾದರು. 0.7 ಪಾಯಿಂಟ್ಸ್ ಹಿನ್ನಡೆ ಅನುಭವಿಸಿದ ಆರ್ಮಿಯ ಶರವಣ ಕುಮಾರ್ (241.2 ಪಾ.) ಬೆಳ್ಳಿ ಪದಕ ಗೆದ್ದರು. ಆರ್ಮಿ ಮಾರ್ಕ್ಸ್‌ಮ್ಯಾನ್‌ಷಿಪ್ ಯುನಿಟ್‌ನ (ಎಎಂಯು) ಸಾಗರ್ ಡಾಂಗಿ (219.4 ಪಾ.) ಕಂಚು ಪಡೆದರು. ಅಂತಿಮ ಸುತ್ತಿನಲ್ಲಿ 6 ಮಂದಿ ಭಾಗವಹಿಸಿದ್ದರು.

ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ಭಾರತ



ಸುನಿಲ್ ಚೆಟ್ರಿ

ಭುವನೇಶ್ವರ್ (ಪಿಟಿಐ): ಇಂಟರ್ ಕಾಂಟಿನೆಂಟಲ್ ಕಪ್ ಫುಟ್ ಬಾಲ್ ಟೂರ್ನಿಯಲ್ಲಿ ಗುರುವಾರ ನಡೆದ ಭಾರತ ಹಾಗೂ ಲೆಬನಾನ್ ನಡುವಣ ಪಂದ್ಯವು ಗೋಲಿಲ್ಲದೇ ಡ್ರಾ ಆಯಿತು.

ಲಭಿಸಿದ ಅವಕಾಶಗಳನ್ನು ವ್ಯರ್ಥಗೊಳಿಸಿದ ಭಾರತ ತಂಡವು ಗೋಲು ದಾಖಲಿಸಲಿಲ್ಲ. ಆದರೆ ರಕ್ಷಣಾ ಆಟಗಾರರು ಎದುರಾಳಿ ಲೆಬನಾನ್ ತಂಡದ ಗೋಲು ಗಳಿಕೆಯನ್ನು ತಡೆದರು. ಈಗಾಗಲೇ ಟೂರ್ನಿಯ ಫೈನಲ್ ಪ್ರವೇಶಿಸಿರುವ ಉಭಯ ತಂಡಗಳಿಗೆ ಈ ಫಲಿತಾಂಶದಿಂದ ಯಾವುದೇ ಹಾನಿಯಿಲ್ಲ.

ಕಣಕ್ಕಿಳಿದ ಭಾರತದ ಹನ್ನೊಂದು ಆಟಗಾರರ ಬಳಗದಲ್ಲಿ ಕೆಲವು ಬದಲಾವಣೆಗಳನ್ನು ಮುಖ್ಯ ಕೋಚ್ ಇಗೋರ್ ಸ್ಟಿಮ್ಯಾಚ್ ಮಾಡಿದ್ದರು. ಅದರಿಂದಗಿ ಸ್ಟ್ರೈಕರ್ ಸುನಿಲ್ ಚೆಟ್ರಿ ಹಾಗೂ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಬೆಂಚ್‌ನಲ್ಲಿ ಕುಳಿತಿದ್ದರು. ಚೆಟ್ರಿ ಅವರ ಬದಲು ಸಂದೇಶ್ ಜಿಂಗಾನ್ ತಂಡವನ್ನು ಮುನ್ನಡೆಸಿದರು.

ಬದಲೀ ಆಟಗಾರನಾಗಿ 82ನೇ ನಿಮಿಷದಲ್ಲಿ ಅಂಗಳ ಪ್ರವೇ ಶಿಸಿದ ಚೆಟ್ರಿ, ಅನಿರುದ್ಧ ಥಾಪಾ ಅವರು ಕೊಟ್ಟ ನಿಖರ ಪಾಸ್ ಅನ್ನು ಗೋಲ್ ಆಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಲಿಲ್ಲ.

ಪಂದ್ಯದ ಮೊದಲ ಐದು ನಿಮಿಷಗಳಲ್ಲಿ ಭಾರತ ತಂಡಕ್ಕೆ 1–0 ಮುನ್ನಡೆ ಪಡೆಯುವ ಅವಕಾಶ ಇತ್ತು. ಲಾಲಿಯಂಜುವಾಲಾ ಚಾಂಗ್ಟೆ ಮತ್ತು ಅನಿರುದ್ಧ ಥಾಪಾ ಅವರ ಪ್ರಯತ್ನಗಳನ್ನು ಎದುರಾಳಿ ತಂಡದ ಗೋಲ್‌ಕೀಪರ್ ವಿಫಲಗೊಳಿಸಿದರು.

20ನೇ ನಿಮಿಷದ ಆಸುಪಾಸಿನಲ್ಲಿಯೂ ಒಂದು ಅವಕಾಶ ಕೈಚೆಲ್ಲಿತು. ಆಷಿಕ್ ಕುರುಣಿಯನ್ ತಮಗೆ ಲಭಿಸಿದ ಪಾಸ್‌ನಲ್ಲಿ ಚೆಂಡನ್ನು ನೇರವಾಗಿ ಕಿಕ್ ಮಾಡಿದರು. ಅದು ಲೆಬನಾನ್ ಗೋಲ್‌ಕೀಪರ್ ಕೈಸೇರಿತು. ಇಡೀ ಪಂದ್ಯದಲ್ಲಿ ಇಂತಹ ಕೆಲವು ಅವಕಾಶಗಳನ್ನು ತಂಡವು ಕೈಬಿಟ್ಟಿತು.

ಭಾರತ ತಂಡವು ಟೂರ್ನಿಯಲ್ಲಿ ಮಂಗೋಲಿಯಾ ಮತ್ತು ವನವಾಟು ತಂಡಗಳ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸಿತ್ತು.

ಹಾಕಿ: ಕರ್ನಾಟಕ ಜಯಭೇರಿ

ರೂರ್ಕೆಲಾ, ಒಡಿಶಾ: ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ 13ನೇ ಹಾಕಿ ಇಂಡಿಯಾ ಜೂನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 4–1 ಗೋಲುಗಳಿಂದ ರಾಜಸ್ಥಾನವನ್ನು ಸೋಲಿಸಿತು.

ಕರ್ನಾಟಕವು ಮಂಗಳವಾರ ಮಣಿಪುರ ತಂಡವನ್ನು 5–0ಯಿಂದ ಮಣಿಸಿತ್ತು. ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಎಂ.ಟಿ. ಆರ್ಯನ್ ಉತ್ತಪ್ಪ (27 ನಿ.), ಎಚ್.ಆರ್. ಹರ್ಷ (51 ನಿ.), ಪಿ.ಪಿ. ಸಪನ್ ಅಯ್ಯಪ್ಪ (59ನಿ.), ನಕುಲ್ ಮಲ್ನಾಡ್ (60 ನಿ) ಗೋಲು ದಾಖಲಿಸಿದರು.

ಮೈಸೂರು ರೇಸ್

ಶೀ ಕ್ಯಾನ್ ಗೆಲ್ಲುವ ನಿರೀಕ್ಷೆ

ಮೈಸೂರು ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶೀ ಕ್ಯಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಶಿವಾಲಿಕ್ ಸೌಂಡ್ 3, ಕಾನ್ಸ್ಪಿರೆಸಿ 7, ವೈಟ್ ಲೈಸ್ 1
2ನೇ ರೇಸ್: ಕಾಪರ್ ಸನ್‌ರೈಸ್ 1, ಕಮ್ ಅಲೈವ್ 3, ಮಿರಾಕ್ಯುಲಸ್ ಗರ್ಲ್ 7
3ನೇ ರೇಸ್: ಮಿಲೋಸ್ 3, ದಿ ಸ್ಟ್ರೀಕ್ಸ್ 13, ಸ್ಟೆಪ್ ಅಪ್ ಗರ್ಲ್ 8
4ನೇ ರೇಸ್: ಡಿ ಕರ್ಣ 7, ಕೆಟಾಲಿನ 9, ಇನ್ಫಿನೈಟ್ ಪಾಸಿಬಲಿಟಿ 1
5ನೇ ರೇಸ್: ಶೀ ಕ್ಯಾನ್ 1, ಅರೇಲಿನ 6, ರಾಯಲ್ ಐಕಾನ್ 5
6ನೇ ರೇಸ್: ಪವರ್ ಆಫ್ ಕಾಂತಾರ 6, ಪ್ರಿನ್ಸ್ ಕಾರ್ಪೊರೇಟ್ 1, ಡಿ ಗೋಲ್ಡ್ ಸ್ಟಾರ್ 7
7ನೇ ರೇಸ್: ಸ್ಪಾರ್ಕಲ್ಸ್ 10, ಪ್ರೌಡ್ 1, ಸ್ಮಾರ್ಟ್ ಕ್ಯಾಡಿಲ್ಯಾಕ್ 3

ಉತ್ತಮ ಬೆಟ್: ಮಿಲೋಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಏಷ್ಯನ್ ಗೇಮ್ಸ್‌ಗೆ ಕಾರ್ತಿಕ್, ಗುಲ್ವೀರ್

ಅಂತರ ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್; 400 ಮೀ. ಓಟದಲ್ಲಿ ಅರ್ಹತೆ ಪಡೆದ ಅಂಜಲಿದೇವಿ

ಭುವನೇಶ್ವರ (ಪಿಟಿಐ): ಉತ್ತರ ಪ್ರದೇಶದ ಅಥ್ಲೀಟುಗಳಾದ ಕಾರ್ತಿಕ್ ಕುಮಾರ್ ಮತ್ತು ಗುಲ್ವೀರ್ ಸಿಂಗ್ ಅವರು 10,000 ಮೀ. ಓಟದಲ್ಲಿ ಏಷ್ಯನ್ ಕ್ರೀಡಾಕೂಟಕ್ಕೆ ನಿಗದಿಪಡಿಸಿದ ಅರ್ಹತಾ ಗಡುವನ್ನು ಸುಲಭವಾಗಿ ದಾಟಿದರು. 62ನೇ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಗುರುವಾರ ಮೂವರು ತಮ್ಮ ತಮ್ಮ ಸ್ಪರ್ಧೆಗಳಲ್ಲಿ ಈ ಸಾಧನೆಗೆ ಪಾತ್ರರಾದರು.

24 ವರ್ಷದ ಕಾರ್ತಿಕ್ ಕುಮಾರ್, ಕಳಿಂಗ ಕ್ರೀಡಾಂಗಣದಲ್ಲಿ 29 ನಿಮಿಷ 01.84 ಸೆಕೆಂಡುಗಳಲ್ಲಿ ಓಟವನ್ನು ಪೂರೈಸಿದರು. ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆಯಲು ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿದ ಕಾಲ 29ನಿ.30.00 ಸೆ.

ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ಅವರ ಜೊತೆಗೆ ತರಬೇತಿ ಪಡೆಯುವ ಗುಲ್ವೀರ್ ಸಿಂಗ್ ಕೂಡ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದರು. ಅವರು 29ನಿ.03.78 ಸೆ.ಗಳಲ್ಲಿ ಓಟ ಪೂರೈಸಿದರು.

ಈ ಓಟದಲ್ಲಿ ಗೆಲ್ಲುವ ನೆಚ್ಚಿನ ಅಥ್ಲೀಟ್ ಆಗಿದ್ದ ಅಭಿಷೇಕ್ ಪಾಲ್ 9 ಸುತ್ತುಗಳ ನಂತರ ಹೊಟ್ಟೆಯ ಸ್ನಾಯುಸೆಳೆತದಿಂದ ಹಿಂದೆ ಸರಿದರು.

'ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆಯುವ ಅವಕಾಶ ಕಳೆದುಕೊಂಡೆ' ಎಂದು ಬೇಸರ ವ್ಯಕ್ತಪಡಿಸಿದರು.



ಕಾರ್ತಿಕ್ ಕುಮಾರ್



ಸೀಮಾ —ಎಎಫ್‌ಐ ಟ್ವಿಟರ್ ಚಿತ್ರ

ಕಾರ್ತಿಕ್ ಕುಮಾರ್ ಅವರಿಗೆ ಏಷ್ಯನ್ ಗೇಮ್ಸ್, ಸೀನಿಯರ್ ಮಟ್ಟದಲ್ಲಿ ಮೊದಲ ಅಂತರರಾಷ್ಟ್ರೀಯ ಸ್ಪರ್ಧೆಯಾಗಲಿದೆ. ಅವರು 2018ರಲ್ಲಿ ಏಷ್ಯಾ 20 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ 10,000 ಮೀ. ಓಟದಲ್ಲಿ ಕಂಚಿನ ಪದಕ ಗೆದ್ದಿದ್ದರು.

ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದ ದೆಹಲಿಯ ಪ್ರೀತಮ್ ಕುಮಾರ್ (29:22.36 ಸೆ) ಮತ್ತು ಮಧ್ಯಪ್ರದೇಶದ ಹರ್ಮನ್‌ಜೋತ್ ಸಿಂಗ್ (29:26.86 ಸೆ.) ಕೂಡ ಏಷ್ಯನ್ ಗೇಮ್ಸ್ ಅರ್ಹತಾ ಗಡುವಿನೊಳಗೇ ಗುರಿತಲುಪಿದರು. ಆದರೆ ಅವರಿಗೆ ಏಷ್ಯನ್ ಗೇಮ್ಸ್ ಅವಕಾಶ ಕೈತಪ್ಪಿತು. ನಿಯಮಗಳ ಪ್ರಕಾರ ಹಾಂಗ್ ಜೌ ಕೂಟದಲ್ಲಿ ಒಂದು ದೇಶದಿಂದ ಒಂದು ಸ್ಪರ್ಧೆಗೆ ಇಬ್ಬರು ಅಥ್ಲೀಟುಗಳು ಮಾತ್ರ ಭಾಗವಹಿಸಬಹುದು.

ಮಹಿಳೆಯರ ವಿಭಾಗದ 10,000 ಮೀ. ಓಟದಲ್ಲಿ ಹಿಮಾಚಲ ಪ್ರದೇಶದ ಸೀಮಾ ಅಗ್ರಸ್ಥಾನ ಪಡೆದರೂ ಏಷ್ಯನ್ ಗೇಮ್ಸ್‌ಗೆ ನಿಗದಿಪಡಿಸಿದ ಗಡುವಿನೊಳಗೆ ತಲುಪಲಾಗಲಿಲ್ಲ. ಆದರೆ ಹಾಲಿ ಚಾಂಪಿಯನ್, ಮಹಾರಾಷ್ಟ್ರದ ಸಂಜೀವನಿ ಜಾಧವ್ ಅವರನ್ನು ಹಿಂದೆಹಾಕಿ ಗಮನಸೆಳೆದರು.

ಸೀಮಾ ತೆಗೆದುಕೊಂಡ ಕಾಲ 34ನಿ.20.01 ಸೆ. ಅರ್ಹತೆ ಗಳಿಸಬೇಕಾದರೆ 32ನಿ.30.24 ಸೆ.ಗಳಲ್ಲಿ ಕ್ರಮಿಸಬೇಕಿತ್ತು. ಈ ಹಿಂದೆ ಸೀಮಾ, ಪ್ರಮುಖ ಕ್ರೀಡಾಕೂಟವೊಂದರಲ್ಲಿ ಒಮ್ಮೆ ಮಾತ್ರ (ಕಳೆದ ವರ್ಷ ಗುಜರಾತ್‌ನ ರಾಷ್ಟ್ರೀಯ ಕ್ರೀಡೆಗಳಲ್ಲಿ) ಗೆಲುವನ್ನು ಕಂಡಿದ್ದರು. ಎರಡನೇ ಸ್ಥಾನ ಪಡೆದ ಸಂಜೀವನಿ 34ನಿ.34.10 ಸೆ.ಗಳಲ್ಲಿ ಓಟ ಮುಗಿಸಿದರು.

ದಿನದ ಇನ್ನೆರಡು ಫೈನಲ್‌ಗಳಾದ ಪುರುಷರ 20 ಕಿ.ಮೀ. ರೇಸ್ ವಾಕ್‌ನಲ್ಲಿ ದಾಖಲೆಗಳು ಬರಲಿಲ್ಲ. ಮಹಿಳೆಯರ ವಿಭಾಗದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರಿಯಾಂಕಾ ಗೋಸ್ವಾಮಿ ಎರಡನೇ ಸ್ಥಾನ (1:40:33.00) ಪಡೆದರು. ರಾಜಸ್ಥಾನದ ಭಾವನಾ ಜಾಟ್ (1:27:12) ಮೊದಲ ಸ್ಥಾನ ಪಡೆದರು.

ಅಂಜಲಿ ಸಾಧನೆ: ಹರಿಯಾಣದ ಅಂಜಲಿ ದೇವಿ ಮಹಿಳೆಯರ 400 ಮೀ. ಓಟದ ಮೊದಲ ಹೀಟ್ಸ್‌ನಲ್ಲಿ 52.89 ಸೆ.ಗಳಲ್ಲಿ ಕ್ರಮಿಸಿ, ಏಷ್ಯನ್ ಗೇಮ್ಸ್‌ಗೆ ನಿಗದಿಪಡಿಸಿದ್ದ ಅರ್ಹತಾ ಗಡುವನ್ನು (52.96 ಸೆ.) ದಾಟಿದರು.

ಫಲಿತಾಂಶಗಳು ಇಂತಿವೆ

ಪುರುಷರ ವಿಭಾಗ: 10,000 ಮೀ. ರೇಸ್: ಕಾರ್ತಿಕ್ ಕುಮಾರ್ (ಉತ್ತರ ಪ್ರದೇಶ, ಕಾಲ: 29ನಿ.01.84 ಸೆ)–1, ಗುಲ್ವೀರ್ ಸಿಂಗ್ (ಉತ್ತರ ಪ್ರದೇಶ. ಕಾಲ: 29ನಿ.03.78 ಸೆ.)–2, ಪ್ರೀತಮ್ ಕುಮಾರ್ (ದೆಹಲಿ, ಕಾಲ: 29ನಿ.22.36 ಸೆ.)–3,

20 ಕಿ.ಮೀ. ರೇಸ್ ವಾಕ್: ಸಂದೀಪ್ ಕುಮಾರ್ (ಹರಿಯಾಣ, ಕಾಲ: 1ಗಂ, 27ನಿ.12 ಸೆ)–1, ಸರ್ವಿನ್ ಎಸ್. (ತಮಿಳುನಾಡು, ಕಾಲ: 1ಗಂ.28ನಿ.21 ಸೆ.)–2, ಹರ್ದೀಪ್ (ಹರಿಯಾಣ, ಕಾಲ: 1ಗಂ.28.57 ಸೆ.)–3.

ಮಹಿಳೆಯರ ವಿಭಾಗ: 10,000 ಮೀ. ರೇಸ್: ಸೀಮಾ (ಹಿಮಾಚಲ ಪ್ರದೇಶ, ಕಾಲ: 34ನಿ.20.01 ಸೆ.)–1, ಸಂಜೀವನಿ ಜಾಧವ್ (ಮಹಾರಾಷ್ಟ್ರ, ಕಾಲ: 34ನಿ.34.10 ಸೆ.)–2, ಪೂನಮ್ ದಿನಕರ್ (ಮಹಾರಾಷ್ಟ್ರ, ಕಾಲ: 34ನಿ.45.42 ಸೆ.)–3.

20 ಕಿ.ಮೀ. ರೇಸ್ ವಾಕ್: ಭಾವನಾ ಜಾಟ್ (ರಾಜಸ್ಥಾನ, ಕಾಲ: 1 ಗಂ.37ನಿ.03 ಸೆ.)–1, ಪ್ರಿಯಾಂಕಾ ಗೋಸ್ವಾಮಿ (ಉತ್ತರ ಪ್ರದೇಶ, ಕಾಲ: 1 ಗಂ.40ನಿ.33 ಸೆ.)–2, ವಂದನಾ (ಕರ್ನಾಟಕ, ಕಾಲ: 1ಗಂ. 41ನಿ.54 ಸೆ.)–3.

ಇಂಡೊನೇಷ್ಯಾ ಓಪನ್: ಸಿಂಧು ನಿರ್ಗಮನ

ಶ್ರೀಕಾಂತ್, ಪ್ರಣಯ್ ಮುನ್ನಡೆ

ಜಕಾರ್ತಾ (ಪಿಟಿಐ): ನೇರ ಸೆಟ್‌ಗಳ ಗೆಲುವನ್ನು ದಾಖಲಿಸಿದ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್, ಇಂಡೊನೇಷ್ಯಾ ಓಪನ್ ವಿಶ್ವ ಟೂರ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದರು. ಆದರೆ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ಸಿ. ಸಿಂಧು ಎರಡನೇ ಸುತ್ತಿನಲ್ಲಿ ನಿರ್ಗಮಿಸಿದರು.

ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಶ್ರೀಕಾಂತ್ 21–17, 22–20 ರಿಂದ ಸ್ವದೇಶದ ಲಕ್ಷ್ಯ ಸೇನ್ ಅವರನ್ನು ಸೋಲಿಸಲು ತಮ್ಮೆಲ್ಲಾ ಅನುಭವ ಬಳಸಬೇಕಾಯಿತು.

ಭಾರತದ ಆಟಗಾರರಿಬ್ಬರ ನಡುವೆ ತೀವ್ರ ಹೋರಾಟ ನಡೆಯಿತು. ಆದರೆ ನಿರ್ಣಾಯಕ ಸಂದರ್ಭಗಳಲ್ಲಿ ಶ್ರೀಕಾಂತ್ ಸಮಚಿತ್ತರಾಗಿ ಮತ್ತು ಅನುಭವ ಬಳಸಿಕೊಂಡು 45 ನಿಮಿಷಗಳಲ್ಲಿ ಜಯ ಗಳಿಸಿದರು. ಶ್ರೀಕಾಂತ್, ಲಕ್ಷ್ಯ ವಿರುದ್ಧ ಆಡಿರುವ ಮೂರೂ ಪಂದ್ಯಗಳಲ್ಲಿ ಗೆದ್ದಂತಾಗಿದೆ.

ಶ್ರೀಕಾಂತ್ ಅವರ ಮುಂದಿನ ಎದುರಾಳಿ ಚೀನಾದ ಲಿ ಶಿ ಫೆಂಗ್. ಇನ್ನೊಂದು ಪಂದ್ಯದಲ್ಲಿ ಫೆಂಗ್ 21–19, 21–14 ರಿಂದ ನಾಲ್ಕನೇ ಶ್ರೇಯಾಂಕದ ಲೊ ಕೀನ್ ಯು (ಸಿಂಗಪುರ) ಅವರಿಗೆ ಸೋಲಿನ ರುಚಿ ತೋರಿಸಿದರು.

ಏಳನೇ ಶ್ರೇಯಾಂಕದ ಪ್ರಣಯ್ 43 ನಿಮಿಷಗಳವರೆಗೆ ನಡೆದ ಇನ್ನೊಂದು ಪಂದ್ಯದಲ್ಲಿ ಹಾಂಗ್‌ಕಾಂಗ್‌ನ ಆ್ಯಂಗಸ್ ಲಾಂಗ್ ಅವರನ್ನು 21–18, 21–16 ರಿಂದ ಪರಾಭವಗೊಳಿಸಿದರು. ಪ್ರಣಯ್ ಮುಂದಿನ ಪಂದ್ಯದಲ್ಲಿ ಮೂರನೇ ಶ್ರೇಯಾಂಕ ಪಡೆದಿರುವ ಜಪಾನ್ ಆಟಗಾರ ಕೊಡೈ ನರವೊಕಾ ಅವರನ್ನು ಎದುರಿಸಲಿದ್ದಾರೆ.

ಸಿಂಧು ನಿರ್ಗಮನ: ಆದರೆ ವಿಶ್ವದ 14ನೇ ಕ್ರಮಾಂಕದ ಆಟಗಾರ್ತಿ, ಪಿ.ಸಿ. ಸಿಂಧು ನೇರ ಸೆಟ್‌ಗಳಲ್ಲಿ ಚೀನಾ ತೈಪೆಯ ತೈ ತ್ಸು ಯಿಂಗ್ ಅವರೆದುರು ಸೋಲನುಭವಿಸಿದರು. ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಯಿಂಗ್ 21–18, 21–16 ರಿಂದ ಜಯಗಳಿಸಿ ಎಂಟರ ಘಟ್ಟಕ್ಕೆ ಮುನ್ನಡೆದರು. ಇದರೊಂದಿಗೆ ಮಹಿಳೆಯರ ವಿಭಾಗದಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಚೀನಾ ತೈಪೆಯ ಈ ಎದುರಾಳಿ ವಿರುದ್ಧ ಸಿಂಧು ಈ ಹಿಂದಿನ ಪಂದ್ಯಗಳಲ್ಲೂ ಪರದಾಡಿದ್ದರು. ಈ ಗೆಲುವಿನ ಮೂಲಕ ಮೂರನೇ ಶ್ರೇಯಾಂಕದ ತೈ ತ್ಸು, ಸಿಂಧು ವಿರುದ್ಧ ತಮ್ಮ ಗೆಲುವಿನ ದಾಖಲೆಯನ್ನು 19–5ಕ್ಕೆ ಹೆಚ್ಚಿಸಿದರು. ಸಿಂಧು ಈ ಹಿಂದಿನ ಎರಡು ಟೂರ್ನಿಗಳಲ್ಲಿ ಮೊದಲ ಸುತ್ತಿನಲ್ಲಿ ಹೊರಬಿದ್ದಿದ್ದರು.

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಪುರುಷರ ಡಬಲ್ಸ್‌ನಲ್ಲಿ ಚೀನಾದ ಹೀ ಜಿ ಟಿಂಗ್ ಮತ್ತು ಜೌ ಹಾವೊ ಡಾಂಗ್ ಜೋಡಿಯನ್ನು 21–17, 21–15ರಿಂದ ಹಿಮ್ಮೆಟ್ಟಿಸಿತು.

ಕ್ರಿಕೆಟ್: ಆಯ್ಕೆ ಸಮಿತಿಗೆ ನಾಯ್ಡು

ನವದೆಹಲಿ (ಪಿಟಿಐ): ಕರ್ನಾಟಕದ ಕ್ರಿಕೆಟಿಗ ತಿಲಕ್ ನಾಯ್ಡು ಅವರನ್ನು ಬಿಸಿಸಿಐ ಜೂನಿಯರ್ ಆಯ್ಕೆ ಸಮಿತಿಗೆ ನೇಮಕ ಮಾಡಲಾಗಿದೆ.


ತಿಲಕ್ ನಾಯ್ಡು

ಈ ಮೊದಲು ಜೂನಿಯರ್ ಸಮಿತಿಗೆ ಮುಖ್ಯಸ್ಥರಾಗಿದ್ದ ಎಸ್. ಶರತ್ ಅವರು ಕಳೆದ ಜನವರಿಯಲ್ಲಿ ಸೀನಿಯರ್ ತಂಡದ ಆಯ್ಕೆ ಸಮಿತಿಗೆ ಬಡ್ತಿ ಹೊಂದಿದರು. ಅವರ ಸ್ಥಾನವನ್ನು 45 ವರ್ಷದ ನಾಯ್ಡು ಅವರಿಗೆ ನೀಡಲಾಗಿದೆ. ದಕ್ಷಿಣ ವಲಯವನ್ನು ಅವರು ಪ್ರತಿನಿಧಿಸಲಿದ್ದಾರೆ.

ಕರ್ನಾಟಕ ತಂಡದ ವಿಕೆಟ್‌ಕೀಪರ್–ಬ್ಯಾಟರ್ ನಾಯ್ಡು ಅವರು 93 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದಾರೆ. 53 ಲಿಸ್ಟ್ ಎ ಮತ್ತು ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. 2012ರಲ್ಲಿ ಅವರು ನಿವೃತ್ತಿ ಘೋಷಿಸಿದ್ದರು.

ಆರ್ಚರಿ ವಿಶ್ವಕಪ್: ಚೀನಾ ತಂಡದ ವಿರುದ್ಧ ಜಯ

ಭಾರತದ ರಿಕರ್ವ್ ತಂಡಕ್ಕೆ ಕಂಚು

ಮೆಡೆಲಿನ್ (ಕೊಲಂಬಿಯಾ), (ಪಿಟಿಐ): ಭಾರತದ ಬಿಲ್ಗಾರರು, ವಿಶ್ವಕಪ್ ಸ್ಟೇಜ್ 3 ಟೂರ್ನಿಯ ರಿಕರ್ವ್ ತಂಡ ವಿಭಾಗದಲ್ಲಿ ಗುರುವಾರ ಚೀನಾವನ್ನು ಸೋಲಿಸಿ ಕಂಚಿನ ಪದಕವನ್ನು ಗೆದ್ದುಕೊಂಡರು. ಇದು ಭಾರತಕ್ಕೆ ಮೂರನೇ ಕಂಚಿನ ಪದಕ.

ನಾಲ್ಕನೇ ಶ್ರೇಯಾಂಕ ಪಡೆದಿದ್ದ ಭಾರತ ತಂಡ (ತುಷಾರ್ ಶೆಲ್ಕೆ, ಮೃಣಾಲ್ ಚೌಹಾನ್ ಮತ್ತು ಧೀರಜ್ ಬೊಮ್ಮದೇವರ) 5–3 ರಿಂದ (58–54, 55–56, 54–53, 56–56) ಚೀನಾ ತಂಡವನ್ನು (ಯಾಂಗ್ ಕೆವಾಂಗ್, ಲಿ ಮೆಂಗುಯಿ ಮತ್ತು ವಾಂಗ್ ಯಾನ್) ಸೋಲಿಸಿತು.

ಆದರೆ, ಮಹಿಳೆಯರ ರಿಕರ್ವ್ ತಂಡ ವಿಭಾಗದಲ್ಲಿ ಏಳನೇ ಶ್ರೇಯಾಂಕದ ಪಡೆದಿದ್ದ ಭಾರತ (ಭಜನ್ ಕೌರ್, ಸಂಗೀತಾ ಮತ್ತು ತನಿಶಾ), ಎರಡನೇ ಸುತ್ತಿನಲ್ಲಿ ಫ್ರಾನ್ಸ್ ಎದುರು 3–5ರಲ್ಲಿ ಸೋತಿತು. ಭಾರತ, ಇದಕ್ಕೆ ಮೊದಲು ಪುರುಷರ ಮತ್ತು ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಕಂಚಿನ ಪದಕಗಳನ್ನು ಗೆದ್ದುಕೊಂಡಿತ್ತು.